ಶನಿವಾರ, ಜನವರಿ 22, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿದ್ಧತೆ

ಗಣರಾಜ್ಯೋತ್ಸವದ ಅಂಗವಾಗಿ ಹೈದರಾಬಾದ್‌ನ ಘಟಕವೊಂದರಲ್ಲಿ ರಾಷ್ಟ್ರಧ್ವಜ ಸಿದ್ಧಪಡಿಸುವುದರಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರು ತಲ್ಲೀನರಾಗಿದ್ದರು



ಶನಿವಾರ, ಜನವರಿ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 22 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ನೈಸರ್ಗಿಕ ಬಣ್ಣಗಳಿಂದ ವೈವಿಧ್ಯಮಯ ಉಡುಪುಗಳನ್ನು ತಯಾರಿಸುತ್ತಿರುವ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು, ಈ ಮೂಲಕ ಮನೆ ಬಾಗಿಲಿನಲ್ಲೇ ಸ್ವ ಉದ್ಯೋಗ ಕಂಡುಕೊಂಡಿದ್ದಾರೆ.



ಇಂಡಿಯಾ ಗೇಟ್‌ನಲ್ಲಿ ನೇತಾಜಿ ಪ್ರತಿಮೆ ಸ್ಥಾಪನೆ: ಮೋದಿ 3C

ಚರ್ಚೆ
ನಾಯಕತ್ವದಿಂದ ಕೊಹ್ಲಿ ನಿರ್ಗಮನ: ಬಿಸಿಸಿಐ ಜತೆಗಿನ ಸಂಘರ್ಷದ ಪರಿಣಾಮವೇ? 7

10 ಜಿಲ್ಲೆಗಳಲ್ಲಷ್ಟೇ ಮಕ್ಕಳಿಗೆ ಪ್ರತ್ಯೇಕ ವಾರ್ಡ್ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,037 ▼	17, 617 ▼	₹50,200 (ಬೆಂಗಳೂರು) ▼	₹66,600 (ಬೆಂಗಳೂರು) ▲	74.43 ▲


ರಾತ್ರಿ ಕರ್ಫ್ಯೂ ಮುಂದುವರಿಕೆ; ಹೋಟೆಲ್, ಮಾಲ್ ನಿರ್ಬಂಧ ಯಥಾಸ್ಥಿತಿ

ರಾಜ್ಯದಲ್ಲಿ ವಾರಾಂತ್ಯ ಕರ್ಫ್ಯೂ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು, ಸಚಿವರ ಒತ್ತಡ ಮತ್ತು ವಾಣಿಜ್ಯೋದ್ಯಮ ಸಮುದಾಯದ ಬೇಡಿಕೆಗೆ ಮಣಿದಿರುವ ರಾಜ್ಯ ಸರ್ಕಾರ ವಾರಾಂತ್ಯ ಕರ್ಫ್ಯೂವನ್ನು ಕೈಬಿಡುವ ನಿರ್ಧಾರ ಕೈಗೊಂಡಿದೆ. ಆದರೆ, ರಾತ್ರಿ ಕರ್ಫ್ಯೂ ಸೇರಿ ಉಳಿದ ಎಲ್ಲಾ ನಿಯಮಗಳೂ ಈಗಿರುವಂತೆ ಮುಂದುವರೆಯಲಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.



ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ ಅವರು, ತಜ್ಞರ ಸಲಹೆಯ ಮೇರೆಗೆ ವಾರಾಂತ್ಯ ಕರ್ಫ್ಯೂ ಕೈಬಿಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಿವರಿಸಿದರು.

‘ರಾಜ್ಯದಲ್ಲಿ ಕೋವಿಡ್‌ನಿಂದ ಆಸ್ಪತ್ರೆಗೆ ಸೇರುವವರ ಸಂಖ್ಯೆ ಶೇ 5 ಇದ್ದು, ಒಂದು ವೇಳೆ ಆ ಪ್ರಮಾಣ ಶೇ 5 ಕ್ಕಿಂತ ಹೆಚ್ಚಾದರೆ ಮತ್ತೆ ವಾರಾಂತ್ಯ ಕರ್ಫ್ಯೂ ಜಾರಿ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರು ಕೋವಿಡ್ ನಿಯಮಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕು’ ಎಂದೂ ಅವರು ಮನವಿ ಮಾಡಿದರು.

8ನೇ ಪುಟ ನೋಡಿ

ಬೆಂಗಳೂರಲ್ಲಿ ಮಾತ್ರ ಶಾಲೆಗೆ ರಜೆ


ಬೆಂಗಳೂರು ಬಿಟ್ಟು ಉಳಿದ ಜಿಲ್ಲೆಗಳಲ್ಲಿ 1 ರಿಂದ 9 ನೇ ತರಗತಿವರೆಗೆ ಶಾಲೆಗಳಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಚ್ಚುವ ನಿರ್ಧಾರವನ್ನು ಜಿಲ್ಲಾಡಳಿತ ಕೈಗೊಳ್ಳಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಬೆಂಗಳೂರಿನಲ್ಲಿ ಪ್ರಕರಣಗಳು ಅತಿ ಹೆಚ್ಚು ಇರುವುದರಿಂದ ಮುಂದಿನ ಶನಿವಾರದವರೆಗೆ (ಜ.29) ರಜೆ ಮುಂದುವರೆಯಲಿದೆ. ಮುಂದಿನ ಶುಕ್ರವಾರ ಮತ್ತೊಮ್ಮೆ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಬೇರೆ ಜಿಲ್ಲೆಗಳಲ್ಲಿ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಲಾಗುವುದು. ಯಾವುದೇ ಶಾಲೆಯಲ್ಲಿ 4 ರಿಂದ 5 ಕೋವಿಡ್ ಪ್ರಕರಣಗಳು ಬಂದರೆ 3 ದಿನ, 20–25 ಪ್ರಕರಣಗಳು ದೃಢ ಪ್ರಕರಣಗಳು ವರದಿಯಾದರೆ 7 ದಿನ ರಜೆ ನೀಡಲಾಗುವುದು. ಇದನ್ನು ಅಲ್ಲಿನ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಆರೋಗ್ಯಾಧಿಕಾರಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ ಸೇರಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅವಧಿ ಮುಗಿಯುತ್ತಿದ್ದಂತೆ ತರಗತಿಗಳು ಯಥಾ ಪ್ರಕಾರ ಆರಂಭವಾಗುತ್ತವೆ ಎಂದು ನಾಗೇಶ್ ಹೇಳಿದರು.

ಬೆಂಗಳೂರಿನಲ್ಲಿ 1 ರಿಂದ 9 ನೇ ತರಗತಿಗಳು ಅಲ್ಲದೇ ಕಾಲೇಜುಗಳು ಮತ್ತು ಇತರ ಉನ್ನತ ಶಿಕ್ಷಣದ (ವೈದ್ಯಕೀಯ, ನರ್ಸಿಂಗ್, ದಂತ ವೈದ್ಯಕೀಯ ಬಿಟ್ಟು) ವಿದ್ಯಾರ್ಥಿಗಳಿಗೆ ರಜೆ ನೀಡಲಾಗಿದೆ. 10,11 ಮತ್ತು 12 ತರಗತಿಗಳು ಮಾತ್ರ ನಡೆಯುತ್ತಿವೆ.

ಜನರ ಹೊಣೆಗಾರಿಕೆ ಜಾಸ್ತಿ: ಆರಗ



‘ವಾರಾಂತ್ಯ ಕರ್ಫ್ಯೂ ರದ್ದು ಮಾಡಿದ್ದರಿಂದ ಜನರ ಹೊಣೆಗಾರಿಕೆ ಹೆಚ್ಚಾಗಿದೆ. ನಮ್ಮ ಪ್ರಾಣ, ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ ಎಂಬ ಜವಾಬ್ದಾರಿಯಿಂದ, ಜನ ಸಹಕರಿಸಬೇಕು. ಹೇಗೆ ಬೇಕೊ ಹಾಗೆ ಇರುತ್ತೇವೆ ಎಂದು ಓಡಾಡಿದರೆ ಆಗದು. ಬೇಕಾಬಿಟ್ಟಿ ವರ್ತನೆಯಿಂದ ಆಸ್ಪತ್ರೆ ಸೇರುವವರ ಸಂಖ್ಯೆ ಜಾಸ್ತಿಯಾದರೆ ಏನೂ ಮಾಡಲು ಆಗುವುದಿಲ್ಲ. ಲಾಕ್ ಡೌನ್ ಕೂಡಾ ಆಗಬಹುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಎಚ್ಚರಿಸಿದರು.

‘ಬೀದಿ ಬದಿ ವ್ಯಾಪಾರಿಗಳು, ಹೂವಿನ ವ್ಯಾಪಾರಿಗಳು, ತರಕಾರಿ ವ್ಯಾಪಾರಿಗಳು, ಆಟೋ ಚಾಲಕರಿಗೆ ವಾರಾಂತ್ಯ ಕರ್ಫ್ಯೂವಿನಿಂದ ದೊಡ್ಡ ಹೊಡೆತ ಆಗುತ್ತದೆ ಎಂಬ ಕಾರಣಕ್ಕೆ ತೆಗೆದಿದ್ದೇವೆ. ಜನ ಹೊಣೆಗಾರಿಕೆ ಸ್ವೀಕಾರ ಮಾಡಿದ್ದಾರೆ ಎಂದು ಭಾವಿಸುತ್ತೇವೆ’ ಎಂದು ಹೇಳಿದರು.

ಮುಂದುವರಿಯುವ ನಿಯಮಗಳು

- ಮದುವೆ ಒಳಾಂಗಣ 100 ಜನ, ಹೊರಾಂಗಣ 200 ಮಂದಿಗೆ ಅವಕಾಶ
- ಮೆರವಣಿಗೆ, ಜಾತ್ರೆ, ರ‍್ಯಾಲಿ, ಪ್ರತಿಭಟನೆ, ಧರಣಿಗಳಿಗೆ ಅವಕಾಶ ಇಲ್ಲ
- ಹೋಟೆಲ್, ಬಾರ್, ಕ್ಲಬ್, ಪಬ್ ಗಳು ಶೇ 50 ಆಸನ ಸಾಮರ್ಥ್ಯದೊಂದಿಗೆ ತೆರೆಯಬಹುದು. ಪ್ರವೇಶಕ್ಕೆ ಎರಡೂ ಲಸಿಕೆ ಪಡೆಯುವುದು ಕಡ್ಡಾಯ
- ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರಗಳಲ್ಲಿ ಈಗಿರುವ ನಿರ್ಬಂಧ ಮುಂದುವರಿಯಲಿದೆ

ಪದವಿ ಇದ್ದರಷ್ಟೇ ಶಿಕ್ಷಕ ಹುದ್ದೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 6ರಿಂದ 8ನೇ ತರಗತಿಯವರೆಗೆ ಬೋಧನೆ ಮಾಡಲು 15 ಸಾವಿರ ಪದವೀಧರ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿದೆ. 3

‘ವಿದ್ಯುತ್ ದರ ಏರಿಕೆ ಅನಿವಾರ್ಯ’

ಬೆಂಗಳೂರು: ‘ವಿದ್ಯುತ್ ಮಾರ್ಗಗಳ ಬದಲಾವಣೆ, ಹೊಸ ಉಪ ವಿಭಾಗಗಳ ಸ್ಥಾಪನೆಯಂತಹ ಅಭಿವೃದ್ಧಿ ಕಾಮಗಾರಿಗಳಿಂದಾಗಿ ವಿದ್ಯುತ್ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ’ ಎಂದು ಇಂಧನ ಸಚಿವ ವಿ. ಸುನೀಲ್‌ಕುಮಾರ್ ಹೇಳಿದರು. 3C

ಚಿನಕುರಳಿ
ಪ್ರಕಾಶ್ ಶೆಟ್ಟಿ





ಹೆಚ್ಚಿದ ಬೇಡಿಕೆ, ರಾಜ್ಯದ ವಿವಿಧೆಡೆ 600 ಘಟಕಗಳ ಸ್ಥಾಪನೆ: ಬೆಸ್ಕಾಂ ನೋಡಲ್ ಏಜೆನ್ಸಿ

ಸ್ಮಾರ್ಟ್ ಸಿಟಿಗಳಲ್ಲಿ ಇವಿ ಚಾರ್ಜಿಂಗ್ ಘಟಕ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ವಿದ್ಯುತ್ ವಾಹನಗಳಿಗೆ ಹೆಚ್ಚುತ್ತಿರುವ ಬೇಡಿಕೆಯಿಂದಾಗಿ ರಾಜ್ಯದ ವಿವಿಧೆಡೆ 600 ಚಾರ್ಜಿಂಗ್ ಘಟಕಗಳನ್ನು ಸ್ಥಾಪಿಸಲು ಎಸ್ಕಾಂಗಳು ಮುಂದಾಗಿವೆ.

ಎರಡು ವರ್ಷಗಳ ಹಿಂದೆ ಬೆಸ್ಕಾಂ ಆರಂಭಿಸಿರುವ ಎಲೆಕ್ಟ್ರಿಕ್ ವಾಹನ (ಇವಿ) ಚಾರ್ಜಿಂಗ್ ಘಟಕಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇದು ವಿದ್ಯುತ್ ವಾಹನಗಳಿಗೆ ಕ್ರಮೇಣ ಹೆಚ್ಚುತ್ತಿರುವ ಬೇಡಿಕೆಯನ್ನು ಬಿಂಬಿಸುತ್ತದೆ ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಚಾರ್ಜಿಂಗ್ ಘಟಕಗಳನ್ನು ಸ್ಥಾಪಿಸಲು ಬೆಸ್ಕಾಂ ಅನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಲಾಗಿದೆ. ಯಾವ ರೀತಿಯಲ್ಲಿ ಘಟಕಗಳನ್ನು ಸ್ಥಾಪಿಸಬೇಕು ಎನ್ನುವ ಬಗ್ಗೆ ಇತರ ಎಸ್ಕಾಂಗಳಿಗೆ ಮಾರ್ಗದರ್ಶನ ಮತ್ತು ನೆರವು ನೀಡುತ್ತಿದೆ.

600 ಚಾರ್ಜಿಂಗ್ ಘಟಕಗಳಲ್ಲಿ 455 ಘಟಕಗಳನ್ನು ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲೇ ಸ್ಥಾಪಿಸಲು ಉದ್ದೇಶಿಸಲಾಗಿದೆ. ಜತೆಗೆ, 75 ಚಾರ್ಜಿಂಗ್ ಘಟಕಗಳನ್ನು 'ಸ್ಮಾರ್ಟ್ ಸಿಟಿ'ಗೆ ಆಯ್ಕೆಯಾದ ನಗರಗಳಲ್ಲಿ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ನಂತರ, ಎರಡನೇ ಹಂತದಲ್ಲಿ ಉಳಿದ ಪ್ರಮುಖ ನಗರಗಳಲ್ಲಿ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾಪವಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ಸರ್ಕಾರ, ಖಾಸಗಿ ಸಹಭಾಗಿತ್ವದಲ್ಲಿ 1000 ಇವಿ ಚಾರ್ಜಿಂಗ್ ಘಟಕಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗುವುದು ಎಂದು ಪ್ರಕಟಿಸಿತ್ತು.

ಬೆಂಗಳೂರು ನಗರದಲ್ಲಿ ಸದ್ಯ 136 ಎಲೆಕ್ಟ್ರಿಕ್ ಚಾರ್ಜಿಂಗ್ ಘಟಕಗಳಿವೆ. ಈ ಘಟಕಗಳಲ್ಲಿ ಪ್ರತಿ ತಿಂಗಳು ಸರಾಸರಿ 30 ಸಾವಿರದಿಂದ 35 ಸಾವಿರ ಯೂನಿಟ್‌ಗಳ ಬಳಕೆಯಾಗುತ್ತಿದ್ದು, 5 ಸಾವಿರ 'ಸೆಷನ್ಸ್'ಗಳಷ್ಟು ಚಾರ್ಜಿಂಗ್ ನಡೆಯುತ್ತಿದೆ (ಒಂದು ವಾಹನದ ಚಾರ್ಜಿಂಗ್ ಅನ್ನು ಒಂದು ಸೆಷನ್ ಎಂದು ಪರಿಗಣಿಸಲಾಗುತ್ತದೆ). ಸಾಮಾನ್ಯವಾಗಿ ಒಂದು ಘಟಕದಲ್ಲಿ ಆರು ವಾಹನಗಳ ಚಾರ್ಜಿಂಗ್ ಮಾಡಬಹುದಾಗಿದೆ.

ಒಂದು ಬೈಕ್‌ಗೆ ಒಂದು ಬಾರಿ ಸರಾಸರಿ 1.5ರಿಂದ 2 ಯೂನಿಟ್‌ಗಳು ಬೇಕಾಗುತ್ತದೆ. ಕಾರುಗಳಿಗೆ 15ರಿಂದ 40 ಯೂನಿಟ್‌ಗಳವರೆಗೆ ಬೇಕಾಗುತ್ತದೆ.



ಬೆಂಗಳೂರಿನ ಬೆಸ್ಕಾಂನ ಕೇಂದ್ರ ಕಚೇರಿಯ ಕಟ್ಟಡದ ಆವರಣದಲ್ಲಿನ ಎಲೆಕ್ಟ್ರಾನಿಕ್ ಚಾರ್ಜಿಂಗ್ ಕೇಂದ್ರ ಪ್ರಜಾವಾಣಿ ಚಿತ್ರ/ ರಂಜು ಪಿ

ಇದು ಆಯಾ ಬ್ಯಾಟರಿ ಸಾಮರ್ಥ್ಯ ಮತ್ತು ಬಳಕೆ ಮೇಲೆ ಅವಲಂಬನೆಯಾಗಿರುತ್ತದೆ. ಮನೆಗಳಲ್ಲೂ ಬ್ಯಾಟರಿಗಳನ್ನು ಚಾರ್ಜ್ ಮಾಡಿಕೊಳ್ಳಬಹುದು. ಒಂದು ಬಾರಿ ಚಾರ್ಜ್ ಮಾಡಿ ಅದನ್ನು ಬಳಸಿದ ಬಳಿಕ ಅಡುಗೆ ಸಿಲಿಂಡರ್‌ಗಳನ್ನು ಬದಲಿಸಿದ ರೀತಿಯಲ್ಲೂ ಬ್ಯಾಟರಿಗಳನ್ನು ಬಳಸಬಹುದಾಗಿದೆ. ಹೀಗಾಗಿ, ಕೆಲವು ಖಾಸಗಿ ಕಂಪನಿಗಳು ಬ್ಯಾಟರಿ ಬದಲಿಸುವ ಕೇಂದ್ರಗಳನ್ನು ಸಹ ಆರಂಭಿಸಿವೆ.

'ಸರ್ಕಾರಿ ಕಚೇರಿಗಳ ಆವರಣದಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಆದ್ಯತೆ ನೀಡಲಾಗುತ್ತಿದೆ. ಈಗ ಹೆಚ್ಚಿನ ಜನರು ಎಲೆಕ್ಟ್ರಿಕಲ್ ವಾಹನಗಳನ್ನು ಬಳಸಲು ಆರಂಭಿಸುತ್ತಿದ್ದಾರೆ. ಎಲೆಕ್ಟ್ರಿಕಲ್ ವಾಹನಗಳ ನಿರ್ವಹಣೆ ವೆಚ್ಚ ಕಡಿಮೆ. ಜತೆಗೆ, ಮಾರುಕಟ್ಟೆಯಲ್ಲಿ ಈಗ ಎಲೆಕ್ಟ್ರಿಕ್ ವಾಹನಗಳ ತಯಾರಕರ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ, ಗ್ರಾಹಕರಿಗೂ ಆಯ್ಕೆಗಳು ಹೆಚ್ಚಾಗಿವೆ. ಎಲೆಕ್ಟ್ರಾನಿಕ್ ಚಾರ್ಜಿಂಗ್ ಘಟಕಗಳನ್ನು ಲಾಭದ ದೃಷ್ಟಿಯಿಂದ ಸ್ಥಾಪಿಸುತ್ತಿಲ್ಲ. ಹೆಚ್ಚಿನ ಅನುಕೂಲಗಳ ಬಗ್ಗೆ ಗಮನಹರಿಸಲಾಗುತ್ತಿದೆ' ಎಂದು ಬೆಸ್ಕಾಂನ ಸ್ಮಾರ್ಟ್‌ಗ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನ ವಿಭಾಗದ ಉಪಪ್ರಧಾನ ವ್ಯವಸ್ಥಾಪಕ ಸಿ.ಕೆ. ಶ್ರೀನಾಥ್ ತಿಳಿಸಿದರು.

ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ಇಲ್ಲ

ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ನೀಡಬೇಕು ಎನ್ನುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ, ಈ ಪ್ರಸ್ತಾವಕ್ಕೆ ಸಚಿವ ಸಂಪುಟ ಅನುಮೋದನೆ ನೀಡಬೇಕಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ದೆಹಲಿ ಸರ್ಕಾರ ಸ್ವಿಗ್ಗಿ ಸೇರಿದಂತೆ ವಿವಿಧ ಕಂಪನಿಗಳ ಡೆಲಿವರಿ ಬಾಯ್ಸ್ ಬಳಸುವ ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ನೀಡುತ್ತಿದೆ. ಇದರಿಂದ, ಅವರಿಗೆ ತಿಂಗಳಿಗೆ ಕನಿಷ್ಠ ₹5 ಸಾವಿರ ಉಳಿತಾಯವಾಗುತ್ತಿದೆ. ಇದೇ ರೀತಿಯ ಮಾದರಿಗಳನ್ನು ರಾಜ್ಯದಲ್ಲಿ ಅನುಸರಿಸಬಹುದು' ಎಂದು ಬೌನ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಹ–ಸಂಸ್ಥಾಪಕ ವಿವೇಕಾನಂದ ಹಳ್ಳೆಕೆರೆ ಅಭಿಪ್ರಾಯಪಟ್ಟಿದ್ದಾರೆ.

'ಹಳೆಯ ವಾಹನಗಳನ್ನೇ ಎಲೆಕ್ಟ್ರಿಕ್ ವಾಹನಗಳನ್ನಾಗಿ ಪರಿವರ್ತಿಸುವುದಕ್ಕೂ ಉತ್ತೇಜನ ನೀಡಬೇಕಾಗಿದೆ. ಇದರಿಂದ, ಹಳೆಯ ವಾಹನಗಳನ್ನು ಗುಜರಿಗೆ ಹಾಕುವುದು ತಪ್ಪುತ್ತದೆ' ಎಂದು ವಿವರಿಸಿದ್ದಾರೆ.

'ಖಾಸಗಿಯವರಿಗೂ ಅವಕಾಶ'

'ಚಾರ್ಜಿಂಗ್ ಘಟಕಗಳನ್ನು ಸ್ಥಾಪಿಸಲು ಖಾಸಗಿಯವರಿಗೂ ಅವಕಾಶ ಇದೆ. ಇದಕ್ಕೆ ಲೈಸೆನ್ಸ್ ಬೇಕಾಗಿಲ್ಲ. ಇದರಿಂದ, ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಆದರೆ, ವಾಣಿಜ್ಯ ಚಟುವಟಿಕೆ ರೂಪದಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಿದರೆ ಒಂದು ಯೂನಿಟ್‌ಗೆ ₹5 ಪಡೆಯಲಾಗುವುದು' ಎಂದು ಶ್ರೀನಾಥ್ ಅವರು ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ


ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	34.44 ಕೋಟಿ ▲	3.85 ಕೋಟಿ ▲
ಸಕ್ರಿಯ ಪ್ರಕರಣ	6.31 ಕೋಟಿ ▲	20.18 ಲಕ್ಷ ▼
ಗುಣಮುಖ	27.56 ಕೋಟಿ ▲	3.60 ಕೋಟಿ ▲
ಸಾವು	55.97 ಲಕ್ಷ ▲	4.88 ಲಕ್ಷ ▲


ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	35.78 ಲಕ್ಷ	3.47 ಲಕ್ಷ ▲
ಗುಣಮುಖ	18.71 ಲಕ್ಷ ▲	2.51 ಲಕ್ಷ ▲
ಸಾವು	9,225 ▲	703 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು



ಎಲ್ಲಿ ಹೆಚ್ಚು ಸಾವು (ಒಟ್ಟು)

1.41 ಲಕ್ಷ ಮಹಾರಾಷ್ಟ್ರ
51,501 ಕೇರಳ ▲
37,112 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

73.71 ಮಹಾರಾಷ್ಟ್ರ ▲
55.10 ಕೇರಳ ▲
30.42 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶುಕ್ರವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

15,42,092 ▲ ಒಟ್ಟು ಸೋಂಕಿತರು (14,82,484 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,23,580 ▲	13,02,027 ▲	16,484 ▲

ದಿನದ ಏರಿಕೆ

ಹೊಸ ಪ್ರಕರಣ	29,068 ▼
ಗುಣಮುಖ	7,196 ▼
ಸಾವು	06 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಕನ್ನಡದಲ್ಲಿ ಸದಸ್ಯತ್ವ ಅರ್ಜಿ ನೀಡಿ'

ಬೆಂಗಳೂರು: 'ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆಯು ವೈದ್ಯರಿಗೆ ನೀಡುವ ಸದಸ್ಯತ್ವ ಅರ್ಜಿ ಪ್ರತಿಗಳು ಆಂಗ್ಲ ಭಾಷೆಯಲ್ಲಿವೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಅವರು ಆರೋಗ್ಯ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. 'ಕನ್ನಡ ಇಲ್ಲಿ ಆಡಳಿತ ಭಾಷೆಯಾಗಿದೆ. ಐಎಂಎ ಕರ್ನಾಟಕ ಶಾಖೆಯಡಿ ಇಲ್ಲಿನ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಯ ವೈದ್ಯರು ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಹೀಗಾಗಿ, ಅರ್ಜಿಯ ಪ್ರತಿಗಳನ್ನು ಕನ್ನಡದಲ್ಲಿ ಒದಗಿಸಬೇಕು. ಈ ಬಗ್ಗೆ ಶಿಸ್ತುಕ್ರಮ ಜಾರಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ನಿಧನ ವಾರ್ತೆ

ಸರೋಜಮ್ಮ



ಬೆಂಗಳೂರು: ಮಂಡ್ಯ ಜಿಲ್ಲೆ ಕಿಕ್ಕೇರಿ ಹೋಬಳಿಯ ಮಾದಾಪುರ ಗ್ರಾಮದ ಸರೋಜಮ್ಮ (80) ಗುರುವಾರ ನಿಧನರಾದರು. ಮಾದಾಪುರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಇವರಿಗೆ ನಾಲ್ವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.

ಪದವಿ ಇದ್ದರಷ್ಟೇ ಶಿಕ್ಷಕ ಹುದ್ದೆ

6ರಿಂದ 8ನೇ ತರಗತಿ: 15 ಸಾವಿರ ಹುದ್ದೆಗಳಿಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 6ರಿಂದ 8ನೇ ತರಗತಿಯವರೆಗೆ ಬೋಧನೆ ಮಾಡಲು 15 ಸಾವಿರ ಪದವೀಧರ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿದೆ.

ಶೈಕ್ಷಣಿಕ ಅರ್ಹತೆ, ವಯೋಮಾನದ ವಿವರಗಳನ್ನು ಇದು ಒಳಗೊಂಡಿದೆ. ಈ ಬಾರಿ ಶಿಕ್ಷಕರ ನೇಮಕಾತಿಗೆ ಪದವಿಯನ್ನು ಕಡ್ಡಾಯಗೊಳಿಸಲಾಗಿದೆ. ಜತೆಗೆ, ಎಂಜಿನಿಯರಿಂಗ್ ಪದವೀಧರರಿಗೂ ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳಿಗೆ ಹಲವು ಆಯ್ಕೆಗಳನ್ನು ನೀಡಲಾಗಿದೆ.

ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ಬಳಿಕ ಈ ನಿಯಮಗಳು ಜಾರಿಗೆ ಬರಲಿವೆ.

ಅಧಿಸೂಚನೆಗೆ ಸಂಬಂಧಿಸಿದ ಆಕ್ಷೇಪಗಳು ಮತ್ತು ಸಲಹೆಗಳನ್ನು ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ಬೀದಿ, ಬೆಂಗಳೂರು–560001 ಇವರಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಅಭ್ಯರ್ಥಿಗಳಿಗೆ ಕನಿಷ್ಠ ಅರ್ಹತೆ:

- ಅಭ್ಯರ್ಥಿಗಳು ಪದವಿಯಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು ಮತ್ತು ಎರಡು ವರ್ಷದ ಡಿ.ಇಡಿ. ಮಾಡಿರಬೇಕು ಅಥವಾ ಪದವಿಯಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು ಮತ್ತು ಬಿ.ಇಡಿ. ಪಡೆದಿರಬೇಕು.
- ಪಿಯುಸಿಯಲ್ಲಿ ಕನಿಷ್ಠ 50ರಷ್ಟು ಅಂಕಗಳೊಂದಿಗೆ (ಮೀಸಲಾತಿಗೆ ಅರ್ಹರಾಗಿರುವವರಿಗೆ ಶೇ 45) ನಾಲ್ಕು ವರ್ಷದ ಬಿ.ಇಡಿ. ಮತ್ತು ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ಉತ್ತೀರ್ಣರಾಗಿರಬೇಕು.
- ಭಾಷಾ ವಿಷಯದ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪದವಿಯಲ್ಲಿ ಸಂಬಂಧಪಟ್ಟ ಭಾಷೆಯನ್ನು ಅಧ್ಯಯನ ಮಾಡಿರಬೇಕು.
- ಸಂಬಂಧಪಟ್ಟ ಭಾಷಾ ವಿಷಯದಲ್ಲಿ ಮತ್ತು ಇತರ ವಿಷಯದಲ್ಲಿ ಶೇಕಡ 50ರಷ್ಟು ಅಂಕಗಳನ್ನು ಪಡೆದಿರಬೇಕು.
- ಪ್ರಾಥಮಿಕ ಶಿಕ್ಷಕರ (ಪಿಜಿಟಿ–ಗಣಿತ ಮತ್ತು ವಿಜ್ಞಾನ) ಹುದ್ದೆಗಳಿಗೆ ಅರ್ಹತೆಗಳು ಪದವಿಯಲ್ಲಿ ಕಡ್ಡಾಯವಾಗಿ ಗಣಿತ ಮತ್ತು ಭೌತ ವಿಜ್ಞಾನ ಅಧ್ಯಯನ ಮಾಡಿರಬೇಕು. ಜತೆಗೆ, ರಸಾಯನ ವಿಜ್ಞಾನ ಅಥವಾ ಕಂಪ್ಯೂಟರ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಅಥವಾ ಸಂಖ್ಯಾಶಾಸ್ತ್ರ ಅಥವಾ ಭೂವಿಜ್ಞಾನ ಅಥವಾ ಜೈವಿಕ ತಂತ್ರಜ್ಞಾನ ಅಥವಾ ಭೂಗೋಳ ವಿಷಯ ಅಧ್ಯಯನ ಮಾಡಿರಬೇಕು. ಜತೆಗೆ, ಮೊದಲ ಮೂರು ಅಥವಾ ನಾಲ್ಕು ಸೆಮಿಸ್ಟರ್‌ಗಳಲ್ಲಿ ಹಾಗೂ ಉಳಿದ ಸೆಮಿಸ್ಟರ್‌ಗಳಲ್ಲಿ ಅಪ್ಲೈಡ್ ಗಣಿತ ಅಧ್ಯಯನ ಮಾಡಿರುವ ಎಂಜಿನಿಯರಿಂಗ್ ಪದವೀಧರರು ಅರ್ಹರು.
- ಪದವೀಧರ ಪ್ರಾಥಮಿಕ ಶಿಕ್ಷಕರ (ಜೀವ ವಿಜ್ಞಾನ) ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು, ಕಡ್ಡಾಯವಾಗಿ ಪದವಿಯಲ್ಲಿ ರಸಾಯನ ವಿಜ್ಞಾನ ಅಧ್ಯಯನ ಮಾಡಿರಬೇಕು. ಜತೆಗೆ, ಸಸ್ಯ ವಿಜ್ಞಾನ ಅಥವಾ ಪ್ರಾಣಿ ವಿಜ್ಞಾನ ಅಥವಾ ರೇಷ್ಮೆ ಅಥವಾ ಪರಿಸರ ವಿಜ್ಞಾನ ಅಥವಾ ಗಣಿತ ವಿಷಯವನ್ನು ಪದವಿಯಲ್ಲಿ ಮೂರು ವರ್ಷಗಳ ಕಾಲ ಅಧ್ಯಯನ ಮಾಡಿರಬೇಕು.
- ಪದವೀಧರ ಪ್ರಾಥಮಿಕ ಶಿಕ್ಷಕರ (ಸಮಾಜ ವಿಜ್ಞಾನ) ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪದವಿಯಲ್ಲಿ ಮೂರು ವರ್ಷಗಳ ಕಾಲ ಇತಿಹಾಸ ಅಥವಾ ಅರ್ಥಶಾಸ್ತ್ರ ಅಥವಾ ರಾಜ್ಯಶಾಸ್ತ್ರ ಅಥವಾ ಭೂಗೋಳ ವಿಷಯಗಳ ಪೈಕಿ ಎರಡು ವಿಷಯಗಳನ್ನು ಐಚ್ಛಿಕವಾಗಿ ಅಧ್ಯಯನ ಮಾಡಿರಬೇಕು.

'ರಾಜ್ಯಗಳ ಆಡಳಿತ ವಶಕ್ಕೆ ಕೇಂದ್ರದ ಯತ್ನ'

ಬೆಂಗಳೂರು: ಭಾರತೀಯ ಆಡಳಿತ ಸೇವೆಯ ಸಿಬ್ಬಂದಿ ನಿಯಮ–1954ಕ್ಕೆ ತಿದ್ದುಪಡಿ ತರುವ ಮೂಲಕ ರಾಜ್ಯಗಳ ಆಡಳಿತದ ಮೇಲೆ ನಿಯಂತ್ರಣ ಸಾಧಿಸಲು ಕೇಂದ್ರ ಸರ್ಕಾರ ಹೊರಟಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.



ಸಿದ್ದರಾಮಯ್ಯ

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಗುರುವಾರ ಪತ್ರ ಬರೆದಿರುವ ಅವರು, 'ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವ ತಿದ್ದುಪಡಿಗಳು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿವೆ. ಅದನ್ನು ರಾಜ್ಯ ಸರ್ಕಾರ ವಿರೋಧಿಸಬೇಕು. ಪ್ರತಿಪಕ್ಷಗಳ ಜತೆ ಚರ್ಚಿಸಿ ಕೇಂದ್ರ ಸರ್ಕಾರದ ನಿಲುವಿಗೆ ವಿರೋಧ ವ್ಯಕ್ತಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಕಾಯ್ದೆ ತಿದ್ದುಪಡಿ ಪ್ರಸ್ತಾವ ಕುರಿತು ಇದೇ 12ರಂದು ರಾಜ್ಯ ಸರ್ಕಾರಗಳಿಗೆ ಪತ್ರ ಬರೆಯಲಾಗಿದೆ. ಇದೇ 25ರೊಳಗೆ ಅಭಿಪ್ರಾಯವನ್ನು ನೀಡುವಂತೆಯೂ ಕೋರಲಾಗಿದೆ. ಕೇಂದ್ರ ಸರ್ಕಾರವು ಮೂರು ತಿದ್ದುಪಡಿಗಳನ್ನು ಪ್ರಸ್ತಾಪಿಸಿದ್ದು, ಅವು ರಾಜ್ಯಗಳ ಆಡಳಿತದಲ್ಲಿ ಕೇಂದ್ರದ ಹಸ್ತಕ್ಷೇಪಕ್ಕೆ ಎಡೆಮಾಡಲಿವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಕೇಂದ್ರ ಸರ್ಕಾರವು ಬೇಕೆಂದಾಗ ತನ್ನ ಸೇವೆಗೆ ಕರೆಸಿಕೊಳ್ಳುವ ಮತ್ತು ಬೇಡ ಎಂದಾಗ ರಾಜ್ಯಗಳಿಗೆ ವಾಪಸ್ ಕಳುಹಿಸುವುದಕ್ಕೆ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸುವ ಪ್ರಸ್ತಾವವಿದೆ. ಕೇಂದ್ರ ಸರ್ಕಾರದ ಸೂಚನೆಯನ್ನು ರಾಜ್ಯಗಳು ಪಾಲಿಸದಿದ್ದರೆ ಕೇಂದ್ರವು ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುವ ಅಧಿಕಾರ ನೀಡುವ ಪ್ರಸ್ತಾವವೂ ಇದೆ. ರಾಜ್ಯ ಸರ್ಕಾರಗಳ ಅಧಿಕಾರಿಗಳ ಮೇಲೆ ಕೇಂದ್ರವು ಹಿಡಿತ ಸಾಧಿಸುವುದು ಆಡಳಿತ ವ್ಯವಸ್ಥೆಯ ನಿಯಂತ್ರಣಕ್ಕೂ ದಾರಿಯಾಗುತ್ತದೆ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

'ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ರಾಜ್ಯಗಳ ಅಧಿಕಾರಗಳನ್ನು ಮೊಟಕುಗೊಳಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಮೋದಿಯವರ ಈ ಸರ್ವಾಧಿಕಾರಿ ಧೋರಣೆ ಒಕ್ಕೂಟ ವ್ಯವಸ್ಥೆಗೆ ವಿರೋಧವಾದುದು. ಈಗಾಗಲೇ ಆರು ರಾಜ್ಯಗಳು ಈ ಪ್ರಸ್ತಾವವನ್ನು ವಿರೋಧಿಸಿವೆ. ರಾಜ್ಯ ಸರ್ಕಾರವೂ ಈ ವಿಚಾರದಲ್ಲಿ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ತಿಳಿ ಹೇಳಬೇಕು. ವಿರೋಧ ಪಕ್ಷಗಳ ಮುಖಂಡರ ಸಭೆ ಕರೆದು, ಚರ್ಚಿಸಿದ ಬಳಿಕ ರಾಜ್ಯದ ವಿರೋಧವನ್ನು ದಾಖಲಿಸಿ' ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಎಫ್.ಎಂ.ರೈನ್ ಬೋ ಕನ್ನಡ ವಾಹಿನಿ ವಿಲೀನ: ವಿರೋಧ

ಬೆಂಗಳೂರು: '101.3 ಎಫ್.ಎಂ.ರೈನ್ ಬೋ ಕನ್ನಡ ಕಾಮನಬಿಲ್ಲು ವಾಹಿನಿಯನ್ನು ಬೆಂಗಳೂರು ಆಕಾಶವಾಣಿ ಜೊತೆ ವಿಲೀನಗೊಳಿಸಲು ನಿರ್ಧರಿಸಲಾಗಿದೆ. ವಾಹಿನಿಯನ್ನು ಶಾಶ್ವತವಾಗಿ ಮುಚ್ಚುವ ಹುನ್ನಾರ ಇದರ ಹಿಂದೆ ಅಡಗಿದೆ' ಎಂದು ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಆರೋಪಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದಾರೆ.

'101.3 ಎಫ್.ಎಂ.ರೈನ್ ಬೋ ಕನ್ನಡ ಕಾಮನಬಿಲ್ಲು ವಾಹಿನಿಯು 20 ವರ್ಷಗಳಿಂದ ರಾಜ್ಯದ ಜನರಿಗೆ ಮಾಹಿತಿ ಹಾಗೂ ಮನೋರಂಜನೆ ಒದಗಿಸುತ್ತಿದೆ. ವಿಲೀನ ನಿರ್ಧಾರಕ್ಕೆ ಆಕಾಶವಾಣಿಯ ಅಧಿಕಾರಿಗಳು ವಿರೋಧ ವ್ಯಕ್ತಪಡಿಸದಿರುವುದು ಅಚ್ಚರಿ ಮೂಡಿಸಿದೆ. ವಿಲೀನದ ಮೂಲಕ ವಾಹಿನಿಯನ್ನು ಹಂತ ಹಂತವಾಗಿ ನಿರ್ನಾಮ ಮಾಡುವುದು ಈ ನಿರ್ಧಾರದ ಹಿಂದಿನ ಉದ್ದೇಶ. ಹೊರರಾಜ್ಯದ ಕೆಲವು ಅಧಿಕಾರಿಗಳ ಹುನ್ನಾರ ಇದು' ಎಂದು ತಿಳಿಸಿದ್ದಾರೆ.

'ಗೃಹಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮುಖ್ಯಮಂತ್ರಿಯವರು ಈ ವಿಷಯವನ್ನು ಕೇಂದ್ರದ ಗಮನಕ್ಕೆ ತರಬೇಕು' ಎಂದು ಒತ್ತಾಯಿಸಿದ್ದಾರೆ.



ಬಾಗಲಗುಂಟೆ ವಾರ್ಡ್‌ನ ಸೌಂದರ್ಯ ಬಡಾವಣೆ ಹಾಗೂ ಸಿದ್ದೇಶ್ವರ ಬಡಾವಣೆಗಳಲ್ಲಿ ಡಾಂಬರೀಕರಣ ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಶುಕ್ರವಾರ ಚಾಲನೆ ನೀಡಿದರು. ಜೆಡಿಎಸ್ ಮುಖಂಡರಾದ ಕೆ.ಸಿ.ವೆಂಕಟೇಶ್, ಜಗದೀಶ್, ಹನುಮಂತ ರಾಜು, ಸೀತಾ ಮರಿಗೌಡ, ಸಿದ್ಧರಾಜು, ಜಯಣ್ಣ, ಪಾಪಣ್ಣ, ಕುಮಾರ್, ಬಸವರಾಜು, ಸೌಂದರ್ಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮೂರ್ತಿ ಹಾಗೂ ಇತರರು ಇದ್ದಾರೆ

ಮಾಧ್ಯಮ ತರಬೇತಿ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಮಹಿಳಾ ಅಭ್ಯರ್ಥಿಗಳಿಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಸಂಸ್ಥೆಗಳಲ್ಲಿ ಎರಡು ತಿಂಗಳ ವೃತ್ತಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ.

ಗರಿಷ್ಠ ಅಂಕಗಳ ಆಧಾರದ ಮೇಲೆ ಹಾಗೂ ಸಂದರ್ಶನದ ಮೂಲಕ 15 ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಕನ್ನಡ ಭಾಷಾ ಜ್ಞಾನ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ಆಯ್ಕೆಯಾದವರಿಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಸಂಸ್ಥೆಗಳಲ್ಲಿ ತರಬೇತಿ ನೀಡಿ, ತಿಂಗಳಿಗೆ ₹15 ಸಾವಿರ ಸ್ಟೈಫಂಡ್ ನೀಡಲಾಗುವುದು.

ಅರ್ಜಿ ಜೊತೆಗೆ ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳು, ಭಾವಚಿತ್ರ ಸೇರಿದಂತೆ ಸ್ವವಿವರ ಹಾಗೂ ಪೂರಕ ದಾಖಲೆಗಳನ್ನು ಇಮೇಲ್ wbkma2022@gmail.com ಮೂಲಕ ಅಥವಾ ಅಂಚೆ ಮೂಲಕ ಕಳುಹಿಸಬೇಕು. ಅರ್ಜಿ ಸಲ್ಲಿಸಲು ಜನವರಿ 29 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರದಿಂದ ಈಗಾಗಲೇ ಸೌಲಭ್ಯ ಪಡೆದ ಅಭ್ಯರ್ಥಿಗಳು ಸುಳ್ಳು ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಿದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಎಚ್ಚರಿಸಿದೆ.

ವಿಳಾಸ: ಕಾರ್ಯದರ್ಶಿಗಳು, ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಅಂಬೇಡ್ಕರ್ ವೀದಿ, ಬೆಂಗಳೂರು-560001

ಮೂರು ತಿಂಗಳೊಳಗೆ ಬಿಬಿಎಂಪಿ ಚುನಾವಣೆ: ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಮೂರು ತಿಂಗಳೊಳಗೆ ಬಿಬಿಎಂಪಿ ಚುನಾವಣೆ ನಡೆಸಲು ಸರ್ಕಾರ ಬದ್ಧವಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಲಾಗಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮೂಡಲಪಾಳ್ಯ ವಾರ್ಡ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶಿವಕುಮಾರ ಸ್ವಾಮೀಜಿಯವರು ನಾಗರಿಕ ಸಮಾಜದಲ್ಲಿನ ಅಂಧಕಾರವನ್ನು ತೊಲಗಿಸಿ ವಿದ್ಯೆಯೆಂಬ ಬೆಳಕು ನೀಡಿದವರು. ಇಡೀ ವಿಶ್ವಕ್ಕೆ ದಾಸೋಹದ ಮಹತ್ವ ಸಾರಿದ್ದವರು. ಶಿವಕುಮಾರ ಸ್ವಾಮೀಜಿ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಯವರ ಆಶೀರ್ವಾದದಿಂದಾಗಿ ನಾನು ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನಗಳನ್ನು ಅಲಂಕರಿಸಲು ಸಾಧ್ಯವಾಯಿತು. ಅವರಿಬ್ಬರು ಮಹಾನ್ ತಪಸ್ವಿಗಳು. ಶಿವಕುಮಾರ ಸ್ವಾಮೀಜಿಯವರ ಆದರ್ಶವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರ ಪ್ರೀತಿ ಮತ್ತು ವಿಶ್ವಾಸ ಗಳಿಸಬೇಕು' ಎಂದು ಹೇಳಿದರು.

'ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅರುಂಧತಿನಗರದಲ್ಲಿ ಕನಕಭವನ ನಿರ್ಮಾಣ ಮಾಡಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಐಎಎಸ್ ಹಾಗೂ ಐಪಿಎಸ್ ತರಬೇತಿ ಕೇಂದ್ರ ಆರಂಭಿಸಲಾಗುತ್ತಿದೆ. ಮಾನಸನಗರದಲ್ಲಿ 295 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಿಸಲಾಗುತ್ತಿದೆ' ಎಂದು ಅವರು ತಿಳಿಸಿದರು.



ಸಚಿವ ವಿ.ಸೋಮಣ್ಣ ಹಾಗೂ ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಅವರು ಶಿವಕುಮಾರ ಸ್ವಾಮೀಜಿಯವರ ಪುಣ್ಯಸ್ಮರಣೆ ಪ್ರಯುಕ್ತ ಮಕ್ಕಳಿಗೆ ಅನ್ನಸಂತರ್ಪಣೆ ಮಾಡಿದರು. ಗೋವಿಂದರಾಜನಗರ ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಮುಖಂಡರಾದ ದಾಸೇಗೌಡ, ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ಪಾಲನೇತ್ರ, ಕೊಳಚೆ ನಿರ್ಮೂಲನ ಮಂಡಳಿ ನಿರ್ದೇಶಕ ಕ್ರಾಂತಿರಾಜು, ರಾಜಪ್ಪ ಇದ್ದರು.

ರಾಮನ್ ಇನ್ಸ್‌ಟಿಟ್ಯೂಟ್‌ಗೆ ತರುಣ್ ನಿರ್ದೇಶಕ

ಬೆಂಗಳೂರು: ಪ್ರತಿಷ್ಠಿತ 'ರಾಮನ್ ರೀಸರ್ಚ್ ಇನ್ಸ್‌ಟಿಟ್ಯೂಟ್'ನ ನೂತನ ನಿರ್ದೇಶಕರಾಗಿ ಭೌತಶಾಸ್ತ್ರಜ್ಞ ಪ್ರೊ.ತರುಣ್ ಸೌರದೀಪ್ ಅಧಿಕಾರ ವಹಿಸಿಕೊಂಡಿದ್ದಾರೆ.


ತರುಣ್ ಸೌರದೀಪ್

ಇದಕ್ಕೂ ಮೊದಲು ಅವರು ಪುಣೆಯ ಐಸೆರ್ (ಐಐಎಸ್‌ಇಆರ್)ನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಇವರು ಪುಣೆಯ 'ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರಾನಮಿ ಮತ್ತು ಆಸ್ಟ್ರೋ-ಫಿಸಿಕ್ಸ್'(ಐಯುಸಿಎಎ) ಸಂಸ್ಥೆಯಲ್ಲಿ ಪಿಎಚ್‌ಡಿ ಮಾಡಿದ್ದರು. ವಿಶ್ವವಿಜ್ಞಾನ (ಕಾಸ್ಮಾಲಜಿ) ಮತ್ತು ಗುರುತ್ವಅಲೆ ಭೌತವಿಜ್ಞಾನ (ಗ್ರಾವಿಟೇಷನಲ್ ವೇವ್ ಫಿಸಿಕ್ಸ್) ನಲ್ಲಿ ಇವರ ಪರಿಣತಿ. ಆರಂಭದ ವರ್ಷದಲ್ಲಿ ಐಯುಸಿಎಎದಲ್ಲಿ ಎರಡು ದಶಕ ಕಾರ್ಯನಿರ್ವಹಿಸಿದ್ದರು. ಬಳಿಕ ಐಸೆರ್‌ಗೆ ನಿಯೋಜನೆ ಮೇಲೆ ಹೋದರು.

ಗುರುತ್ವ ಅಲೆ ವಿಷಯದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆಯಲ್ಲಿ ಇವರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ವಿಶ್ವ ವಿದ್ಯುತ್ಕಾಂತ ಅಲೆ ಮತ್ತು ಗುರುತ್ವ ಅಲೆ, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಅಂತರ ರಾಷ್ಟ್ರೀಯ ಸಂಶೋಧನೆಗಳಲ್ಲಿ ಭಾರತೀಯ ತಂಡದ ನೇತೃತ್ವವನ್ನು ತರುಣ್ ವಹಿಸಿದ್ದರು. 2011 ರಲ್ಲಿ ಲಿಗೊ ಇಂಡಿಯಾ ಮತ್ತು ಇಂಡಿಯಾ ಸೈಂಟಿಫಿಕ್ ಮ್ಯಾನೇಜ್‌ಮೆಂಟ್ ಬೋರ್ಡ್–ಲಿಗೊದ ಕಾರ್ಯದರ್ಶಿ ಸದಸ್ಯ ಮತ್ತು ವಕ್ತಾರರಾಗಿಯೂ (ವಿಜ್ಞಾನ) ಕಾರ್ಯನಿರ್ವಹಿಸಿದ್ದರು.


ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ಈ ವರ್ಷದ ಕ್ಯಾಲೆಂಡರ್ ಅನ್ನು ತೋಟಗಾರಿಕೆ ಸಚಿವ ಮುನಿರತ್ನ ವಿಧಾನಸೌಧದಲ್ಲಿ ಬಿಡುಗಡೆ ಮಾಡಿದರು. ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್, ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಇದ್ದಾರೆ

ಮಿದುಳು ನಿಷ್ಕ್ರಿಯ: ಚೆನ್ನೈಗೆ ಹೃದಯ ರವಾನೆ

ಮೈಸೂರು: ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ತಾಲ್ಲೂಕಿನ ಸೋಮನಹಳ್ಳಿಯ ದರ್ಶನ್ (24) ಅವರ ಅಂಗಾಂಗಗಳನ್ನು ಕುಟುಂಬದವರು ದಾನ ಮಾಡಿ ಇತರರ ಬಾಳಿನಲ್ಲಿ ಬೆಳಕು ಮೂಡಿಸಿದ್ದಾರೆ.


ದರ್ಶನ್

ಅವರ ಹೃದಯವನ್ನು ಶುಕ್ರವಾರ ಮೈಸೂರಿನಿಂದ ವಿಮಾನದಲ್ಲಿ ಚೆನ್ನೈನ ಎಂಜಿಎಂ ಹೆಲ್ತ್‌ಕೇರ್ ಆಸ್ಪತ್ರೆಗೆ ಸಾಗಿಸಲಾಯಿತು. ಹೃದಯ ಹೊತ್ತ ಆಂಬುಲೆನ್ಸ್ ಅಪೋಲೊ–ಬಿಜಿಎಸ್ ಆಸ್ಪತ್ರೆಯಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಲು 'ಗ್ರೀನ್ ಕಾರಿಡಾರ್' (ಸಿಗ್ನಲ್ ಮುಕ್ತ ಸಂಚಾರ ವ್ಯವಸ್ಥೆ) ನಿರ್ಮಿಸಲಾಗಿತ್ತು.

ಒಂದು ಕಿಡ್ನಿಯನ್ನು ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಗೆ ಸಾಗಿಸಲಾಗಿದೆ. ಮತ್ತೊಂದು ಕಿಡ್ನಿ ಮತ್ತು ಯಕೃತ್ ಅನ್ನು ಅಪೋಲೊ–ಬಿಜಿಎಸ್ ಆಸ್ಪತ್ರೆಯಲ್ಲೇ ರೋಗಿಗಳಿಗೆ ಕಸಿ ಮಾಡಲಾಗಿದೆ.

ಗಗನಯಾನ ಎಂಜಿನ್ ಪರೀಕ್ಷೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಗನಯಾನ ಯೋಜನೆಗಾಗಿ ಸಿದ್ಧ ಪಡಿಸಿರುವ ಅಧಿಕ ನೂಕುಬಲ (ಹೈ ಥರ್ಸ್ಟ್) ಹೊಂದಿರುವ 'ವಿಕಾಸ್' ಎಂಜಿನ್‌ನ ಅರ್ಹತಾ ಪರೀಕ್ಷೆ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಇಸ್ರೊ ತಿಳಿಸಿದೆ.

ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಪ್ರೊಪೆಲ್ಷನ್ ಕೇಂದ್ರದಲ್ಲಿ ಈ ಪರೀಕ್ಷೆ ನಡೆದಿದೆ. ಸುಮಾರು 25 ಸೆಕೆಂಡ್‌ಗಳ ಅರ್ಹತಾ ಪರೀಕ್ಷೆ ನಡೆದಿದೆ. ಗಗನಯಾನ ಯೋಜನೆಗೆ ಸಂಬಂಧಿಸಿದಂತೆ ಎರಡು ಎಂಜಿನ್‌ಗಳ ಪರೀಕ್ಷೆ ಈವರೆಗೆ ಒಟ್ಟು 480 ಸೆಕೆಂಡ್‌ಗಳಷ್ಟು ಅವಧಿ ನಡೆಸಲಾಗಿದೆ ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

'ಸಾಂಕೇತಿಕ ಕಾರ್ಯಾಚರಣೆಯ ಸ್ಥಿತಿಗಿಂತ ಮಿಗಿಲಾದ ಸನ್ನಿವೇಶದಲ್ಲಿ(ಇಂಧನದ ಆಕ್ಸಿಡೈಸರ್ ಅನುಪಾತ ಮತ್ತು ಚೇಂಬರ್ ಒತ್ತಡ) ಎಂಜಿನ್‌ನ ದೃಢತೆಯನ್ನು ಪರೀಕ್ಷಿಸುವ ಉದ್ದೇಶದಿಂದ ಗುರುವಾರ ಈ ಪ್ರಯೋಗ ನಡೆಸಲಾಯಿತು. ಎಂಜಿನ್‌ನ ನಿರ್ವಹಣೆಯು ಪರೀಕ್ಷೆ ಉದ್ದೇಶಗಳಿಗೆ ಮತ್ತು ಎಂಜಿನ್‌ನ ಮಾನದಂಡವೂ ನಮ್ಮ ನಿರೀಕ್ಷೆಗೆ ಅನುಗುಣವಾಗಿತ್ತು' ಎಂದು ಪ್ರಕಟಣೆ ತಿಳಿಸಿದೆ.

ತಿಮ್ಮಾಪುರಗೆ ಕಾರ್ಯಾಧ್ಯಕ್ಷ ಸ್ಥಾನ: ಆಗ್ರಹ

ಬೆಂಗಳೂರು: 'ವಿಧಾನ ಪರಿಷತ್ ಸದಸ್ಯ ಆರ್.ಬಿ.ತಿಮ್ಮಾಪುರ ಅವರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಬೇಕು' ಎಂದು ಜಾಂಬವ ಜಾಗೃತಿ ವೇದಿಕೆ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಎನ್. ಕೃಷ್ಣಮೂರ್ತಿ, 'ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮಾದಿಗ ಸಮುದಾಯದ ಕೊಡುಗೆ ಹೆಚ್ಚು. ಆದರೆ, ಇತ್ತೀಚಿನ ವರ್ಷಗಳಲ್ಲಿ ಮಾದಿಗ ಸಮುದಾಯವನ್ನು ಕಾಂಗ್ರೆಸ್ ಕಡೆಗಣಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕೆಪಿಸಿಸಿ ಸ್ಥಾನಗಳಲ್ಲಿ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಸಮುದಾಯದ ನಾಯಕರಿಗೆ ಪ್ರಾತಿನಿಧ್ಯ ನೀಡಬೇಕು. ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿರುವ ಆರ್.ಬಿ.ತಿಮ್ಮಾಪುರ ಅವರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಬೇಕು. ಈ ಮೂಲಕ ಮಾದಿಗ ಸಮುದಾಯದ ಅಭಿವೃದ್ಧಿಗೆ ಸಹಕರಿಸಬೇಕು' ಎಂದು ಒತ್ತಾಯಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Buying

General Motors/ Chevrolet

WANTED CHEVROLET Cruz LTZ Diesel Any Colour Low Mileage Contact: 9448356598

PUBLIC NOTICE

PUBLIC NOTICE

This is to inform the general public that our client **Mr. Karan R Shroff, s/o Mr. Rajesh Shroff,** Residing at Flat No.1171, 17th Floor, Tower-1, Prestige Misty Water, Anjaneya Temple Steet, Hebbal Kempapura, Bangaloe North, Bangalore - 560 024, had lost in transit the Sale Deed dated 27.05.2016, registered as document No.DNH-1-01757/2016-17, stored in CD No.DNHD598, at the office of the Sub-Registrar, Devanahalli Bangalore through which he had purchased all that property bearing plot No. 126, situated at the layout known as **Esteem Misty Hills,** Dasarahalli Village, Kasaba Hobli, Devanahalli Taluk, Karahalli Panchayath Khatha No. 260/126, Property ID No. 150300200600420066, in all measuring 152.46 Sq. Mtrs. and bounded on the, East by : Road, West by: Sy. No.57, North by: Plot bearing No. 127, South by: Plot bearing No. 125. If anybody finds the same, the same shall be handed over to the undersigned forthwith. The General Public is also cautioned that if anybody misuses the said document or enters into any agreements/ arrangements and/or attempts to anyway encumber the above said site/plot, the same shall not bind our client.

Sd/-
NAGESH A, Advocate
No.G10, Mazzanine Floor, SNS Chambers, No.239, Sankey Road, Sadashivanagar, Bangalore - 560 080

PUBLIC NOTICE

This is to inform the general public that our client Sri. V. Nagaraj, S/o Late Venkate Gowda, Aged about 55 years, Residing at No.145, 5th Main, Chamrajpet, Bangalore – 560 018 is intending to purchase all that piece and parcel of immovable property bearing Old No.10, then No. 18, Now Presently bearing BBMP No.12 and 13, BBMP PID No.46-37-12 and 46-37-13, Door No.29, consisting of House, 9 Commercial and Open space, situated at 3rd Cross, Chamrajpet, Bangalore, measuring North to South 112 Feet and East to West 35 feet, in all measuring 3920 square feet and bounded on East by : Yagnavalkya Ashrama, West by : 3rd Cross (Bazaar Street), North by : 3rd Main Road, South by : Conservancy Lane from Sri. R.S. Mani & others. If any person has got any claim or right over the aforesaid property, the same may be conveyed to the undersigned with documentary proof within 10 days from the date of publication of this notice.

B.C. AVINASH, Advocate,
For M/s The Firm,
No.A/30, Ranga Rao Road,
Opposite Ashok Shishuvihar,
Shankarpuram,
Bangalore – 560 004
Phone: +91 98860 57709

JOB OPPORTUNITIES

Manager

OPERATIONS MANAGER wanted for company making educational kits. 4+ years experience in manufacturing assemblyline QC team management required. Location: Mahadevapura Bangalore. Salary 20Kpm. Email CV to PRAYOGALABS @GMAIL.COM

Part-Time Jobs

REPUTED MNC Company Provide Work From Home to 30 to 35K at Malleswaram: 7019215243/ 9886641282

HRD & Admin

BUNTS' SANGHA BANGALORE
No. 324, Bunts' Sangha Complex, Vijayanagar, Bangalore - 560040
Tel: 23399323 / 23399635 / 7022119739
Email : info@buntsanghablr.com
Invites applications for the post of
Admn. Assistant
Diploma / Graduates with min 3 years experience in office management & computer knowledge may send their CV on or before 28/01/2022
Hon.Secretary

Teachers/ Professors

ST SOPHIA Convent School (CBSE) Nagarabhavi requires trained experienced Female Academic Coordinators and Teachers for the academic year 2022-23 to subjects Mathematics, Science, Social Science, English, Kannada and Hindi for primary and High school. Walk-in interview scheduled on Saturday 5th February 2022 principal@stsophiaconvent.org Contact: 9243031872

MATRIMONIAL

Brides Wanted

English

HANDSOME PUNJABI 33yr 6' 40L+ seeks alliance from tall educated girl of reputed families: bride480@gmail.com

EDUCATIONAL

Training

PHOENIX INSTITUTE of Aviation & Hospitality. Course: Diploma in Airhostess, Jobs Place: Airports /Airlines, Age: 18-26 Qualification: PUC /Degree, Gender: Boys /Girls, Address: Mandur (V), Budigere Cross, Bangalore. CONTACT: 9740044668 9880768048 9902865643

BUSINESS

Business Offers

Dealers And Stockists

WANTED STOCKIST, Promoters Sales Staff for Fast moving Consumer/ Herbal products all over Karnataka. Phone No. 9448041257

Finance

WANTED INVESTER
Hi We Are Manufacturer of Pure Silk Sareeswe Want Invester u Get Good Profit in our Business, Call:7899356649

PERSONAL

Announcements

SHRI N.R.RAMAKRISHNA, Retired Principal Vidyamandir ITI reached heavenly abode on 20.01.2022. Deeply mourned by family members

Change of Name

I, MAMATHA B.R. R/a #956, 21st Main Road, 8th Cross, Jnana Bharathi 2nd Block, Mariyappanapalya, Bengaluru- 560056 Declare That MAMATHA BYATRAYANPURA RAJU and MAMATHA B.R. Names One and The Same Person, i.e. Myself Only, Henceforth, Known as MAMATHA BYATRAYANPURA RAJU Vide Affidavit Dated: 23.12.2017 Before Notary Ambujakshi, Bangalore-79.

I, ASHA. B wife of Rahmathullah Khan have changed my name as AYESHA FATHIMA as I embraced Islam vide affidavit dated 18th September 2000 Notary G.R Rajanna, Bangalore.

I, SNEH JAIN, Wife of Shubham Bhuwalka aged 26 years, residing at No. 214, Double Road, Indiranagar, Bengaluru- 560038 have changed my name to SNEH JAIN BHUWALKA vide affidavit dated 20/01/2022 before notary N.Kanchivaradaraju Bangalore- 72

I, UMMAY Haney D/o Fasi Baig, R/a Khwaja Mansion, #198/1, Dass Compound, R.V Road Cross, Basavangudi, Bengaluru-560004, have changed my name to Hani Fasi, Vide Affidavit Dated 20-01-2022, Before Notary Meer Hassan, Bangalore.

Lost

DOCUMENTS LOST
I, ASHVINI C.S, W/o Sri Late BALAKRISHNA C. Residing at No.60, 13th "C" Cross, Venkatapur, Bengaluru City, Bengaluru - 560 034 have LOST Original Registered Sale Deed bearing No. **BNG(U)-BLR (S) 6781/1999-2000 stored in CD No.54/99-2000, Book -I,** dated 15.12.1999, : while Transit. **Finders Please Contact: 97425 99183**

PUBLIC NOTICE

NOTICE IS HEREBY GIVEN THAT, SRI. P. C. MALLAPPA, S/o Chikkamunishamappa is the absolute owner of the property described in the Schedule hereunder.

It is brought to the notice of the general public that, our clients have negotiated and decided to purchase the Schedule Property from the above said owner/attorney. Any persons having claim of any nature against or to the Schedule Property or any part thereof by way of inheritance, mortgage, sale, conveyance, MOU, Agreement to Sell, G.P.A, transfer, lease deed, tenancy, license, lien, charge, trust, maintenance, easement, gift, exchange, possession, adverse possession or otherwise howsoever are hereby required to submit the same in writing along with documentary proof to the undersigned at their office **within 10 days from the date of publication hereof**, failing which our client shall proceed without any reference to such claim and the same, if any, will be considered as waived.

SCHEDULE PROPERTY

ITEM NO. 1: All that piece and parcel of the undeveloped converted land bearing **Sy.No. 102/1,** measuring to an extent of **1 Acre 18 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 200/1; West By : Land bearing Sy.No. 120/2;
North By : Halla; South By : Land bearing Sy.No. 102/2;

ITEM NO. 2: All that piece and parcel of the undeveloped converted land bearing **Sy.No. 102/2,** measuring to an extent of **0-25 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 198; West By : Land bearing Sy.No. 120/6;
North By : Land bearing Sy.No. 102/1; South By : Land bearing Sy.No. 102/3;

ITEM NO. 3: All that piece and parcel of the undeveloped converted land bearing **Sy.No. 102/3,** measuring to an extent of **1 Acre 20 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By: Land bearing Sy.No. 198; West By: Land bearing Sy.No. 120/6 & 114/2;
North By : Land bearing Sy.No. 102/2; South By : Land bearing Sy.No. 102/4;

ITEM NO. 4: All that piece and parcel of the undeveloped converted land bearing **Sy.No. 113/1,** measuring to an extent of **1 Acre 02 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 103/1; West By : Land bearing Sy.No. 116;
North By : Land bearing Sy.No. 114/6; South By : Land bearing Sy.No. 113/2;

ITEM NO. 5: All that piece and parcel of the undeveloped converted land bearing **Sy.No. 114/1,** measuring to an extent of **0-39 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 102/4; West By: Land bearing Sy.No. 114/3 & 114/4;
North By : Land bearing Sy.No. 114/2; South By : Land bearing Sy.No. 114/6;

ITEM NO. 6: All that piece and parcel of the undeveloped converted land bearing **Sy.No. 114/2,** measuring to an extent of **2 Acres 03 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 102/3 & 102/4; West By : Land bearing Sy.No. 119 & 114/3;
North By : Land bearing Sy.No. 120/4, 120/5, 120/6; South By : Land bearing Sy.No. 114/1;

ITEM NO. 7: All that piece and parcel of the undeveloped converted land bearing **Sy.No. 114/6,** measuring to an extent of **0-39 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 103/1; West By : Land bearing Sy.No. 115;
North By : Land bearing Sy.No. 114/1; South By : Land bearing Sy.No. 113/1;

ITEM NO. 8: All that piece and parcel of the undeveloped converted land bearing **Sy.No. 120/4,** measuring to an extent of **0-27 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 120/5; West By : Land bearing Sy.No. 119;
North By : Land bearing Sy.No. 120/3; South By : Land bearing Sy.No. 114/2;

ITEM NO. 9: All that piece and parcel of the undeveloped converted land bearing **Sy.No. 120/5,** measuring to an extent of **0-27.08 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 120/6; West By : Land bearing Sy.No. 120/4;
North By : Land bearing Sy.No. 120/1; South By : Land bearing Sy.No. 114/2;

ITEM NO. 10: All that piece and parcel of the undeveloped converted land bearing **Sy.No. 120/6,** measuring to an extent of **0-30 Guntas**, situated at Shivapura Village, Kasaba Taluk, Doddaballapura Taluk, Bangalore Rural District and bounded on the,
East By : Land bearing Sy.No. 102/2 & 102/3; West By : Land bearing Sy.No. 120/5;
North By : Land bearing Sy. No. 120/2; South By : Land bearing Sy.No. 114/2;

M/S. LEGAL NEXUS
ADVOCATES & CONSULTANTS
No. 428, First Floor, 25th Cross, 24th Main, HSR Layout, Sector 2,
Bangalore - 560 102. Phone: 080-65555914 Mobile: 9945688974, 9164150690
Dated this 21st day of January 2022 at Bangalore

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್
ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55** ಇವರಲ್ಲಿ ಪಡೆಯಬಹುದು. **ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9449842016.**

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ.ಪ್ರೇಮಚಂದ್ರ ಕೆ ಇವರು ಮರಣಹೊಂದಿದ್ದು, ಇವರ ಕಾನೂನುವಾರಸುದಾರರಾದ 1(ಎ) ಶ್ರೀಮತಿ. ದೇವಿ.ಕೆ, ಕೋಂ.ಲೇಟ್.ಶ್ರೀ.ಪ್ರೇಮಚಂದ್ರ ಕೆ, 1(ಬಿ) ಶ್ರೀ. ಕಾಂತರಾಜು.ಡಿ, ಶ್ರೀ. ಪ್ರೇಮಚಂದ್ರ ಕೆ, ಇವರ ತಂದೆ 1(ಸಿ) ಶ್ರೀಮತಿ.ದೇವಿ.ಎಮ್, ಶ್ರೀ. ಪ್ರೇಮಚಂದ್ರ ಕೆ ಇವರ ತಾಯಿ 	ಎ.ಆರ್.ಇ/ಯು.ಬಿ.ಎಫ್/54/ 2021–22	ನಂ.450/87/2, ಹಳೆ ನಂ.87/2, ಖಾತಾ ನಂ.964/87/2, ಎ ನಾರಾಯಣಪುರ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೋಕು, ಬಿ.ಬಿ.ಎಮ್.ಪಿ ವಾರ್ಡ್ ನಂ.81, (ಮಹಾದೇವಪುರ) ಹೊಸ ಪಿ.ಐ.ಡಿ.ನಂ.W081–0169–1–1. ಇಲ್ಲಿರುವ ಪೂರ್ವ ಪಶ್ಚಿಮ 40 ಅಡಿಗಳು ಮತ್ತು ಉತ್ತರ ದಕ್ಷಿಣ 40 ಅಡಿಗಳ ಈ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ ಪಶ್ಚಿಮಕ್ಕೆ–ಮುನಿಸ್ವಾಮಿನವರ ಮನೆ ಉತ್ತರಕ್ಕೆ–ಅಶ್ವತ್ ಕಟ್ಟೆ ದಕ್ಷಿಣಕ್ಕೆ– ನಾಸಲಪ್ಪನವರ ಮನೆ	ನಂ.450/87/2, ಹಳೆ ನಂ.87/2, ಖಾತಾ ನಂ.964/87/2, ಎ ನಾರಾಯಣಪುರ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೋಕು, ಬಿ.ಬಿ.ಎಮ್.ಪಿ ವಾರ್ಡ್ ನಂ.81, (ಮಹಾದೇವಪುರ) ದಿನಾಂಕ:ಛ28.01.2022 ರ ಶುಕ್ರವಾರ ಬೆಳಿಗ್ಗೆ 11–30 ಘಂಟೆ ರೂ.51,50,000/– (ದಿನಾಂಕ. 30.11.2021 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದ್ದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/– ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/– ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದ್ದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತಾರೆ.
7. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ.5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತು ಅದರ ಮೇಲೆ ಶೇ.5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 27.12.2021
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

ತಮಿಳುನಾಡಿನಿಂದ ₹4,600 ಕೋಟಿ ವೆಚ್ಚದ ಸಮಗ್ರ ಯೋಜನಾ ವರದಿ • ಆಕ್ಷೇಪ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧಾರ

‘ಹೊಗೇನಕಲ್ ಯೋಜನೆ –2’ಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡು ಮುಖ್ಯಮಂತ್ರಿ ಹೊಗೇನಕಲ್ ಯೋಜನೆ 2ನೇ ಹಂತವನ್ನು ಕೈಗೆತ್ತಿಕೊಳ್ಳಲು ₹4,600 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿರುವುದನ್ನು ರಾಜ್ಯ ಸರ್ಕಾರ ತೀವ್ರವಾಗಿ ವಿರೋಧಿಸಿದ್ದು, ಕಾನೂನು ರೀತಿಯಲ್ಲಿ ಇದಕ್ಕೆ ಆಕ್ಷೇಪ ಸಲ್ಲಿಸಲು ತೀರ್ಮಾನಿಸಿದೆ.

ಈ ಸಂಬಂಧ ಶುಕ್ರವಾರ ತುರ್ತು ಸುದ್ದಿಗೋಷ್ಠಿ ನಡೆಸಿದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು, ಅಲ್ಲಿನ ತಮಿಳುನಾಡು ಸರ್ಕಾರ ಡಿಪಿಆರ್ ಸಿದ್ಧಪಡಿಸಿರುವ ವಿಚಾರ ಪ್ರತಿಕಾ ವರದಿಗಳ ಮೂಲಕ ಗಮನಕ್ಕೆ ಬಂದಿದೆ ಎಂದು ಹೇಳಿದರು.

‘ತಮಿಳುನಾಡು ಈ ಯೋಜನೆಯ ವಿವರಗಳನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಅಥವಾ ಸುಪ್ರೀಂಕೋರ್ಟ್ ಮುಂದೆ ಮಂಡಿಸಿಲ್ಲ. ಹೀಗಾಗಿ ತಮಿಳುನಾಡಿನ ಯಾವುದೇ ಯೋಜನೆಯನ್ನು ನಾವು ವಿರೋಧಿಸುತ್ತೇವೆ’ ಎಂದು ತಿಳಿಸಿದರು.



ಗೋವಿಂದ ಕಾರಜೋಳ

ಕಾವೇರಿ ಕಣಿವೆಗೆ ಸಂಬಂಧಿಸಿದಂತೆ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ಉಲ್ಲೇಖಿಸಿರುವ ನೀರಿನ ಹಂಚಿಕೆಗೆ ಅನುಗುಣವಾಗಿಯೇ ತಮಿಳುನಾಡು ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

‘ಹೊಗೇನಕಲ್– 2 ಯೋಜನೆಗೆ ಕಾನೂನಾತ್ಮಕ ಕ್ರಮಗಳ ಮೂಲಕ ಆಕ್ಷೇಪ ಸಲ್ಲಿಸುತ್ತೇವೆ. ತಮಿಳುನಾಡು ಪ್ರಕಟಿಸಿರುವ ಉದ್ದೇಶಿತ ಯೋಜನೆ ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳ ಭೌಗೋಳಿಕ ವ್ಯಾಪ್ತಿಯಲ್ಲಿದೆ. ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ವಿವಿಧ ಆಯಾಮಗಳಲ್ಲಿ ಮತ್ತು ಕಾನೂನಿನ ಅನ್ವಯ ಪರಿಶೀಲನೆಗೆ ಒಳಪಡಬೇಕಾಗುತ್ತದೆ’ ಎಂದು ಕಾರಜೋಳ ತಿಳಿಸಿದರು.

ತಮಿಳುನಾಡು ಏಕಪಕ್ಷೀಯವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಹೊಗೇನಕಲ್ ಪ್ರದೇಶವು ಕರ್ನಾಟಕ ಮತ್ತು ತಮಿಳುನಾಡಿನ ಜಂಟಿ ಗಡಿ ಪ್ರದೇಶದಲ್ಲಿ 64 ಕಿ.ಮೀ ಉದ್ದದ ಭೂಪ್ರದೇಶದ ವ್ಯಾಪ್ತಿಯನ್ನು ಹೊಂದಿದೆ. ಕಾವೇರಿ ನ್ಯಾಯಮಂಡಳಿ ಐತೀರ್ಪಿನ ಕಲಂ 13 ರ ಅನ್ವಯ ಈ ಯೋಜನೆಯನ್ನು ರಾಷ್ಟ್ರೀಯ ಜಲ ವಿದ್ಯುತ್ ಕಂಪನಿ (ಎನ್‌ಎಚ್‌ಪಿಸಿ) ಮೂಲಕ ಕೈಗೆತ್ತಿಕೊಳ್ಳಬೇಕಾಗುವುದು ಎಂದು ಹೇಳಿದರು.

ಕರ್ನಾಟಕ ಮತ್ತು ತಮಿಳುನಾಡಿನ ಹೊಗೇನಕಲ್ ಜಂಟಿ ಗಡಿ ರೇಖೆಯನ್ನು ಸರ್ವೇ ಆಫ್ ಇಂಡಿಯಾ ಮೂಲಕ ಇನ್ನೂ ಅಂತಿಮಗೊಳಿಸಿಲ್ಲ ಎಂದೂ ಕಾರಜೋಳ ತಿಳಿಸಿದರು.

‘ಪಾದಯಾತ್ರೆ ನಿಲ್ಲಿಸಲು ನಕಲಿ ಅಂಕಿ ಅಂಶ’

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಆರಂಭಿಸಿದ್ದ ಪಾದಯಾತ್ರೆ ನಿಲ್ಲಿಸಲು ರಾಜ್ಯ ಸರ್ಕಾರ ಕೋವಿಡ್ ಹೆಸರಿನಲ್ಲಿ ನಕಲಿ ಅಂಕಿಅಂಶಗಳನ್ನು ಸೃಷ್ಟಿಸಿತ್ತು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

‘ಕಾಂಗ್ರೆಸ್ ಪಾದಯಾತ್ರೆಯ ಸಂದರ್ಭದಲ್ಲಿ ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ 85 ಪೊಲೀಸರಿಗೆ ಕೋವಿಡ್ ತಗುಲಿದೆ’ ಎಂಬ ಬಿಜೆಪಿ ಆರೋಪಕ್ಕೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಎಲ್ಲವೂ ಬೋಗಸ್ ಅಂಕಿಅಂಶ. ಸರ್ಕಾರ ನಿರ್ಬಂಧ ಹೇರಿದಾಗ ಕೋವಿಡ್ ಪ್ರಕರಣಗಳ ಸಂಖ್ಯೆ ಎಷ್ಟಿತ್ತು? ಈಗ ಎಷ್ಟಿದೆ ಎನ್ನುವುದನ್ನು ನೋಡಿ’ ಎಂದರು.



ಡಿ.ಕೆ. ಶಿವಕುಮಾರ್

‘ಪಾದಯಾತ್ರೆ ನಿಲ್ಲಿಸುವುದಕ್ಕಾಗಿಯೇ ನಕಲಿ ಅಂಕಿಅಂಶ ಸೃಷ್ಟಿಸಲಾಗಿತ್ತು. ಸಚಿವರು ಈಗ ಏಕೆ ಮಾತನಾಡುತ್ತಿದ್ದಾರೆ? ಪಾದಯಾತ್ರೆ ಸಂದರ್ಭದಲ್ಲಿ ಭದ್ರತೆಗೆ ಪೊಲೀಸರೇ ಇರಲಿಲ್ಲ. ಸಂಚಾರ ನಿಯಂತ್ರಣಕ್ಕೂ ಪೊಲೀಸರು ಇರಲಿಲ್ಲ. ನನ್ನ ಮೇಲೆ ಕಾರ್ಯಕರ್ತರು ಬೀಳುವಾಗಲೂ ತಡೆಯಲಿಲ್ಲ’ ಎಂದು ಹೇಳಿದರು.

ನವದೆಹಲಿಯ ಅಮರ್ ಜವಾನ್ ಜ್ಯೋತಿ ಮತ್ತು ರಾಷ್ಟ್ರೀಯ ಯುದ್ಧ ಸ್ಮಾರಕಗಳಲ್ಲಿನ ಜ್ಯೋತಿಗಳನ್ನು ವಿಲೀನಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರ ಕುರಿತು ಪ್ರತಿಕ್ರಿಯಿಸಿದ ಅವರು, ‘ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವರನ್ನು ಗೌರವಿಸಬೇಕಿತ್ತು. ಸ್ಥಳಾಂತರ ಮಾಡುವುದು ನೈತಿಕ ಮೌಲ್ಯವಲ್ಲ. ಇದನ್ನು ಕಾಂಗ್ರೆಸ್ ಪಕ್ಷ ಖಂಡಿಸುತ್ತದೆ’ ಎಂದರು.

ಬಿಎಂಟಿಸಿ ಬಸ್‌ಗೆ ಬೆಂಕಿ ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಿಂದ ದೀಪಾಂಜಲಿನಗರಕ್ಕೆ ಶುಕ್ರವಾರ ಬೆಳಿಗ್ಗೆ ಹೊರಟಿದ್ದ ಬಿಎಂಟಿಸಿ ಬಸ್ಸಿನಲ್ಲಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದ್ದು, ಈ ಬಗ್ಗೆ ತನಿಖೆಗೆ ಸೂಚನೆ ನೀಡಲಾಗಿದೆ.

‘ಚಾಮರಾಜಪೇಟೆ ಬಳಿಯ ಮಕ್ಕಳಕೂಟ ಸಮೀಪದ ರಸ್ತೆಯಲ್ಲಿ ಬಸ್ಸಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದನ್ನು ಗಮನಿಸಿದ್ದ ಪ್ರಯಾಣಿಕರು ಕಿರುಚಾಡಿದ್ದರು. ಚಾಲಕ ಬಸ್ ನಿಲ್ಲಿಸುತ್ತಿದ್ದಂತೆ, 25 ಪ್ರಯಾಣಿಕರನ್ನು ಕೆಳಗೆ ಇಳಿದಿದ್ದರು. ನಂತರ, ಬೆಂಕಿ ಕೆನ್ನಾಲಗೆ ಹೆಚ್ಚಾಗಿತ್ತು’ ಎಂದು ಪೊಲೀಸರು ಹೇಳಿದರು.

‘ರಸ್ತೆಯಲ್ಲಿ ಬಸ್ ಹೊತ್ತಿ ಉರಿಯಿತು. ರಸ್ತೆಯಲ್ಲಿ ಇತರೆ ವಾಹನಗಳ ಓಡಾಟ ಸ್ಥಗಿತಗೊಂಡಿತ್ತು. ಬಸ್ಸಿನ ಭಾಗಶಃ ಭಾಗಗಳು ಸುಟ್ಟು ಕರಕಲಾದವು. ಸ್ಥಳಕ್ಕೆ ಬಂದಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ಬೆಂಕಿ ನಂದಿಸಿದರು’ ಎಂದೂ ಅವರು ತಿಳಿಸಿದರು.

ಘಟನೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಬಿಎಂಟಿಸಿ, ‘ಚಾಲಕನ ಮುಂಜಾಗ್ರತೆಯಿಂದ ಯಾವುದೇ ಪ್ರಯಾಣಿಕರಿಗೆ ಗಾಯಗಳಾಗಿಲ್ಲ. ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಮುಖ್ಯ ಮೆಕ್ಯಾನಿಕಲ್ ಎಂಜಿನಿಯರ್ ತಂಡಕ್ಕೆ ಸೂಚಿಸಲಾಗಿದೆ‘ ಎಂದು ಹೇಳಿದೆ.

ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿಕೆ

ಹೆದ್ದಾರಿಯ ದುರಸ್ತಿ ಮತ್ತು ಚತುಷ್ಪಥ ನಿರ್ಮಾಣ ಯೋಜನೆಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ

ಶಿರಾಡಿ ಘಾಟ್ ರಸ್ತೆ ಮೇಲ್ದರ್ಜೆಗೆ: ಸಮಸ್ಯೆಗೆ ಮುಕ್ತಿ

ಬೆಂಗಳೂರು: ರಾಜ್ಯದ ಬಹುದಿನಗಳ ಬೇಡಿಕೆಯಾಗಿದ್ದ ಶಿರಾಡಿ ಘಾಟ್ ಹೆದ್ದಾರಿಯ ದುರಸ್ತಿ ಮತ್ತು ಚತುಷ್ಪಥ ನಿರ್ಮಾಣ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವುದರಿಂದಾಗಿ ಈ ದಾರಿಯಲ್ಲಿ ಓಡಾಡುವವರ ಬಹುಕಾಲದ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದ್ದಾರೆ.

₹1,200 ಕೋಟಿ ಮೊತ್ತದ ಈ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹಸಿರು ನಿಶಾನೆ ತೋರಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಡಿಕೊಂಡ ಮನವಿಗೆ ಕಡಿಮೆ ಅವಧಿಯಲ್ಲಿ ಗಡ್ಕರಿ ಸ್ಪಂದಿಸಿರುವುದು ಜನಪರ ಕಾಳಜಿಗೆ ನಿದರ್ಶನವಾಗಿದೆ ಎಂದು ಅವರು ಬಣ್ಣಿಸಿದ್ದಾರೆ.



ಸಿ.ಸಿ. ಪಾಟೀಲ

ವಾಣಿಜ್ಯ ನಗರಿಯಾದ ಮಂಗಳೂರು ಮತ್ತು ಬೆಂಗಳೂರು ಮಧ್ಯದ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ಶಿರಾಡಿ ಘಾಟ್ ರಸ್ತೆ ಪ್ರತಿವರ್ಷ ಮಳೆಗಾಲದಲ್ಲಿ ಭೂಕುಸಿತ ಮತ್ತಿತರ ಕಾರಣಗಳಿಂದ ಹಾನಿಗೊಂಡು ಜನ ಸಂಚಾರ ಮತ್ತು ಸರಕು ಸಾಗಾಟಕ್ಕೆ ತೀರಾ ತೊಂದರೆಯಾಗುತ್ತಿತ್ತು. ಮೇಲ್ದರ್ಜೆಗೆ ಏರಿಸಲು ಅನುಮೋದನೆ ಸಿಕ್ಕಿರುವುದರಿಂದ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಕೇಂದ್ರದಿಂದ ಅನುಮೋದನೆಗೊಂಡ ಈ ಯೋಜನೆಯನ್ನು ಉತ್ತಮ ಗುಣಮಟ್ಟದೊಂದಿಗೆ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವ ಉದ್ದೇಶ ನಮ್ಮದಾಗಿದೆ. ಯೋಜನೆಯಿಂದ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ವರದಾನವಾಗಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಬಜೆಟ್: ಕಳ್ಳಸಾಗಣೆ ತಡೆಯಲು ಕ್ರಮ

ಚಿನ್ನದ ಆಮದು ಸುಂಕ ಇಳಿಕೆ ಸಾಧ್ಯತೆ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಚಿನ್ನದ ಕಳ್ಳಸಾಗಣೆ ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಚಿನ್ನದ ಮೇಲಿನ ಆಮದು ಸುಂಕವನ್ನು ಶೇ 4 ರಿಂದ ಶೇ 5ರವರೆಗೆ ತಗ್ಗಿಸುವ ಸಾಧ್ಯತೆ ಇದೆ. ಸದ್ಯ ಆಮದು ಸುಂಕವು ಶೇ 7.5ರಷ್ಟಿದೆ.

ಕಳೆದ ಬಾರಿಯ ಬಜೆಟ್‌ನಲ್ಲಿ ಆಮದು ಸುಂಕವನ್ನು ಶೇ 12.5 ರಿಂದ ಶೇ 7.5ಕ್ಕೆ ಇಳಿಕೆ ಮಾಡಲಾಗಿತ್ತು. ಇದಕ್ಕೆ ವಿವಿಧ ರೀತಿಯ ಸೆಸ್ ಮತ್ತು ಶೇ 3ರಷ್ಟು ಜಿಎಸ್‌ಟಿ ಸೇರಿಸಿದರೆ ಆಮದು ಸುಂಕವು ಶೇ 10.75ರಷ್ಟು ಆಗುತ್ತದೆ.

ಚಿನ್ನದ ಮೇಲಿನ ಗರಿಷ್ಠ ಸುಂಕದಿಂದ ಸರ್ಕಾರಕ್ಕೆ ಯಾವುದೇ ರೀತಿಯ ಅಪೇಕ್ಷಿತ ವರಮಾನ ತಂದುಕೊಟ್ಟಿಲ್ಲ. ಹೀಗಾಗಿ ಈ ಕುರಿತು ಈ ಬಾರಿಯ ಬಜೆಟ್‌ನಲ್ಲಿ ಸರ್ಕಾರ ಒಂದು ನಿರ್ಧಾರಕ್ಕೆ ಬರುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.



2004ರಲ್ಲಿ ಚಿನ್ನದ ಮೇಲಿನ ಆಮದು ಸುಂಕವು ಶೇ 2ರಷ್ಟು ಇತ್ತು. 2013ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಆಮದು ಸುಂಕವನ್ನು ಶೇ 10ಕ್ಕೆ ಏರಿಕೆ ಮಾಡಿತು. ಆ ಬಳಿಕ 2019ರಲ್ಲಿ ಮೋದಿ ನೇತೃತ್ವದ ಸರ್ಕಾರ ಸುಂಕವನ್ನು ಶೇ 12.5ಕ್ಕೆ ಹೆಚ್ಚಿಸಿತ್ತು.

ಭಾರತವು ಪ್ರತಿ ವರ್ಷವೂ 1,000 ಟನ್ ಚಿನ್ನವನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಲ್ಲಿ ಹೆಚ್ಚಿನ ಪಾಲು ಅನಧಿಕೃತ ಮತ್ತು ಕಾಳಸಂತೆಯಿಂದಲೇ ಬರುತ್ತಿದೆ. ಉದ್ಯಮದ ಅಂದಾಜಿನ ಪ್ರಕಾರ, ಭಾರತದ ಚಿನ್ನದ ಬೇಡಿಕೆಯ ನಾಲ್ಕನೇ ಮೂರು ಭಾಗದಷ್ಟನ್ನು ಕಾಳಸಂತೆಯೇ ಈಡೇರಿಸುತ್ತಿದೆ.

ಈಚಿನ ಅಧಿಕೃತ ವರದಿಗಳ ಪ್ರಕಾರ, ಹೆಚ್ಚಿನ ಸುಂಕ ವಿಧಿಸುವುದರಿಂದ ಕಳ್ಳಸಾಗಣೆ ಹೆಚ್ಚಾಗುವುದಲ್ಲದೇ ಚಿನ್ನದ ಆಭರಣಗಳ ರಫ್ತು ವಹಿವಾಟಿನ ಮೇಲೆಯೂ ಪರಿಣಾಮ ಉಂಟಾಗಲಿದೆ.



ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲೇಟ್ ಜನರಲ್ ಜೊನಾಥನ್ ಝಡ್ಕ ಅವರು ತ್ಯಾಜ್ಯ ನೀರು ನಿರ್ವಹಣೆ ಪರಿಹಾರ ಯೋಜನೆಗೆ ಚಾಲನೆ ನೀಡಿದರು. ವಿಶ್ವವಿದ್ಯಾಲಯದ ಸಿಇಒ ಕೌಶಿಕ್ ರಾಜು, ಆಯಾಲಾ ಸಂಸ್ಥೆಯ ಸಿಂಧು ಚೆರಿಯನ್ ಹಾಗೂ ಸಿಬ್ಬಂದಿ ಇದ್ದರು.

ಏಟ್ರಿಯಾ ವಿ.ವಿ.ಯಿಂದ ತ್ಯಾಜ್ಯ ನೀರು ಸಂಸ್ಕರಣೆ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಟ್ರಿಯಾ ವಿಶ್ವವಿದ್ಯಾಲಯವು ಇಸ್ರೇಲ್ ಕಾನ್ಸುಲೇಟ್ ಜನರಲ್ ಹಾಗೂ ಇಸ್ರೇಲ್ ಮೂಲದ ಅಯಾಲಾ ಸಂಸ್ಥೆ ಸಹಯೋಗದಲ್ಲಿ ತ್ಯಾಜ್ಯ ನೀರು ನಿರ್ವಹಣೆ ಪರಿಹಾರ ಯೋಜನೆ ಅನುಷ್ಠಾನಗೊಳಿಸಲು ಮುಂದಾಗಿದೆ.

‘ಹೆಬ್ಬಾಳ ಸಮೀಪದ ಆನಂದನಗರದಲ್ಲಿ ವಿಶ್ವವಿದ್ಯಾಲಯ ಇದೆ. ಇಲ್ಲಿನ ವಸತಿ ನಿಲಯಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರು ಸಂಗ್ರಹಿಸಿ, ಮರುಬಳಕೆಗಾಗಿ ಅದನ್ನು ನೈಸರ್ಗಿಕ ಸಂಪನ್ಮೂಲಗಳ ಮೂಲಕವೇ ಪ್ರತ್ಯೇಕವಾಗಿ ಸಂಸ್ಕರಿಸುವುದು ಯೋಜನೆಯ ಗುರಿ. ಸಂಸ್ಕರಿಸಿದ ನೀರನ್ನು ವಿಶ್ವವಿದ್ಯಾಲಯದ ಕ್ಯಾಂಪಸ್, ಕ್ಯಾಂಟೀನ್ ಹಾಗೂ ಉದ್ಯಾನಕ್ಕೆ ಬಳಸಲಾಗುತ್ತದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಸುಸ್ಥಿರತೆ ಸ್ಥಾಪಿಸಲು ಈ ಯೋಜನೆ ಜಾರಿಗೊಳಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ಹಸಿರು ಉಪಕ್ರಮಗಳೊಂದಿಗೆ ಹೊಸ ಹಾದಿಯತ್ತ ಹೆಜ್ಜೆ ಇಟ್ಟಿರುವ ಏಟ್ರಿಯಾ ವಿಶ್ವವಿದ್ಯಾಲಯದೊಂದಿಗೆ ನಿಕಟವಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ಸಂತೋಷವಾಗುತ್ತಿದೆ. ಇದು ದೇಶದ ಮತ್ತು ಇಡೀ ಪ್ರಪಂಚದ ಹವಾಮಾನ ಗುರಿಯನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ’ ಎಂದು ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲೇಟ್ ಜನರಲ್ ಜೊನಾಥನ್ ಝಡ್ಕ ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಸಾಪ ಅಧ್ಯಕ್ಷರ ನೇಮಕ

ನೆಲಮಂಗಲ: ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಬೋಳಮಾರನಹಳ್ಳಿ ಪ್ರದೀಪ್ ಅವರನ್ನು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಎನ್.ಕೃಷ್ಣಪ್ಪ ನೇಮಕ ಮಾಡಿದ್ದಾರೆ.



ಬೋಳಮಾರನಹಳ್ಳಿ ಪ್ರದೀಪ್

ಅವರೆಕಾಯಿ ಮೇಳ 24ರಿಂದ

ಬೆಂಗಳೂರು: ನಗರದ ವಿ.ವಿ.ಪುರದ ಸಜ್ಜನ್‌ರಾವ್ ವೃತ್ತದಲ್ಲಿರುವ ವಾಸವಿ ಕಾಂಡಿಮೆಂಟ್ಸ್‌ನಲ್ಲಿ ಜ.24ರಿಂದ 30ರವರೆಗೆ ‘ಅವರೆಕಾಯಿ ಮೇಳ’ ನಡೆಯಲಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಾಸವಿ ಕಾಂಡಿಮೆಂಟ್ಸ್‌ನ ಮಾಲೀಕರಾದ ಗೀತಾ ಶಿವಕುಮಾರ್,‘ಬೆಳಿಗ್ಗೆ 11ರಿಂದ ರಾತ್ರಿ 10 ಗಂಟೆಯವರೆಗೆ ಮೇಳ ನಡೆಯಲಿದೆ. ಅವರೇಕಾಯಿಯಿಂದ ತಯಾರಿಸಿದ ಇಡ್ಲಿ, ದೋಸೆ, ಪಾಯಸ, ಚಕ್ಕುಲಿ, ನಿಪ್ಪಟ್ಟು, ಸಿಹಿ ಮತ್ತು ಖಾರದ ಪದಾರ್ಥಗಳು ಸೇರಿದಂತೆ 100ಕ್ಕೂ ಹೆಚ್ಚು ಬಗೆಯ ರುಚಿಯನ್ನು ಮೇಳದಲ್ಲಿ ಸವಿಯಬಹುದು’ ಎಂದರು.

ಅನ್ಯೈತಿಕ ಸಂಬಂಧ ಶಂಕೆ: ಪತ್ನಿ ಕೊಲೆ

ಚೀಲಾಪುರ (ಸಾಸ್ವೆಹಳ್ಳಿ): ಪತ್ನಿ ಅನೈತಿಕ ಸಂಬಂಧ ಹೊಂದಿರುವ ಶಂಕೆಯಿಂದ ಪತಿಯೇ ಆಕೆಯನ್ನು ಕೊಲೆ ಮಾಡಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಚೀಲಾಪುರ ಗ್ರಾಮದ ಮಹಿಳೆ ರಮೀಜಾಬಿ (45) ಹತ್ಯೆಯಾದವರು. ಮಹಿಳೆ ಬಹಿರ್ದೆಸೆಗೆಂದು ಹೊರವಲಯದ ಜಮೀನಿಗೆ ತೆರಳಿದ್ದಾಗ ಪತಿ ಶಫೀವುಲ್ಲಾ ಚಾಕುವಿನಿಂದ ಇರಿದು ಹತ್ಯೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಈ ಸಂಬಂಧ ರಮೀಜಾಬಿ ಪುತ್ರ ಅತಾವುಲ್ಲಾ ಹೊನ್ನಾಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕೊಲೆ ನಡೆದ ಮೂರು ತಾಸಿನಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಚನ್ನಗಿರಿ ವಲಯದ ಡಿವೈಎಸ್‌ಪಿ ಡಾ.ಸಂತೋಷ್ ಅವರ ನೇತೃತ್ವದಲ್ಲಿ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಸಿಪಿಐ ಟಿ.ವಿ. ದೇವರಾಜ್ ತಿಳಿಸಿದ್ದಾರೆ.

ಮಹಿಳೆ ಕೊಲೆ: ಚಿನ್ನಾಭರಣಕ್ಕಾಗಿ ಕೃತ್ಯ

ಬೆಂಗಳೂರು: ಯಲಹಂಕ ಬಳಿಯ ಕಟ್ಟಿಗೇನಹಳ್ಳಿಯ ಮನೆಯೊಂದರಲ್ಲಿ ಸಿದ್ದಮ್ಮ (55) ಎಂಬುವರನ್ನು ಕೊಲೆ ಮಾಡಲಾಗಿದ್ದು, ಚಿನ್ನಾಭರಣ ದೋಚಲು ಆರೋಪಿ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

‘ಸ್ಥಳೀಯ ನಿವಾಸಿ ಸಿದ್ದಮ್ಮ, ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದರು. ಆಯುರ್ವೇದದ ಔಷಧಿ ಪಡೆಯಲೆಂದು ಸಲೀಂ ಎಂಬಾತನ ಬಳಿ ಆಗಾಗ ಹೋಗುತ್ತಿದ್ದರು. ಅದೇ ಸಲೀಂ, ಸಿದ್ದಮ್ಮ ಅವರನ್ನು ಕೊಂದು ಪರಾರಿಯಾಗಿರುವ ಅನುಮಾನವಿದೆ’ ಎಂದು ಯಲಹಂಕ ಪೊಲೀಸ್ ಮೂಲಗಳು ಹೇಳಿವೆ.

‘ಬಿಹಾರದ ಸಲೀಂ, ಕಟ್ಟಿಗೇನಹಳ್ಳಿಯಲ್ಲಿ ವಾಸವಿದ್ದ. ಸಕ್ಕರೆ ಕಾಯಿಲೆ ಹಾಗೂ ಇತರೆ ಕಾಯಿಲೆಗಳಿಗೆ ಆಯುರ್ವೇದ ಔಷಧಿ ನೀಡುವುದಾಗಿ ಹೇಳಿಕೊಳ್ಳುತ್ತಿದ್ದ. ಇದೀಗ ಆತ, ಪತ್ನಿ ಸಮೇತ ನಗರ ತೊರೆದಿದ್ದಾನೆ’ ಎಂದೂ ತಿಳಿಸಿವೆ.

‘ಸಿದ್ಧಮ್ಮ ಅವರ ಚಿನ್ನದ ಸರ ಹಾಗೂ ಓಲೆಗಳೂ ಕಳುವಾಗಿವೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ‘ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ವಂಚನೆ: ಇ.ಡಿ. ವಶಕ್ಕೆ ಅನಾಸ್ ಅಹ್ಮದ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರತಿದಿನ, ವಾರಕ್ಕೊಮ್ಮೆ ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಪವರ್ ಬ್ಯಾಂಕ್ ಮತ್ತಿತರ ಮೊಬೈಲ್ ಅಪ್ಲಿಕೇಷನ್‌ಗಳ ಮೂಲಕ ₹ 80 ಕೋಟಿಗೂ ಹೆಚ್ಚು ಮೊತ್ತವನ್ನು ಸಾರ್ವಜನಿಕರಿಂದ ಸಂಗ್ರಹಿಸಿ, ವಂಚಿಸಿರುವ ಆರೋಪ ಎದುರಿಸುತ್ತಿರುವ ಉದ್ಯಮಿ ಅನಾಸ್ ಅಹ್ಮದ್ ಎಂಬುವವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ವಿಚಾರಣೆಗಾಗಿ ಆರು ದಿನಗಳ ಕಾಲ ವಶಕ್ಕೆ ಪಡೆದಿದ್ದಾರೆ.

ಚೆನ್ನೈನ ಸಿಬಿ–ಸಿಐಡಿ ಪೊಲೀಸರು ಅನಾಸ್ ಅಹ್ಮದ್ ಅವರನ್ನು ವಂಚನೆ ಪ್ರಕರಣವೊಂದರಲ್ಲಿ ಬಂಧಿಸಿದ್ದರು. ಅಲ್ಲಿನ ಪುಳ್ಳಾಲ್ ಕೇಂದ್ರ ಕಾರಾಗೃಹದಲ್ಲಿ ಆರೋಪಿಯನ್ನು ಇರಿಸಲಾಗಿತ್ತು. ₹80 ಕೋಟಿ ವಂಚಿಸಿರುವ ಪ್ರಕರಣದಲ್ಲಿ ವಿಚಾರಣೆಗಾಗಿ ಆರೋಪಿಯನ್ನು ವಶಕ್ಕೆ ಪಡೆಯಲು ಅನುಮತಿ ನೀಡುವಂತೆ ಕೋರಿ ಇ.ಡಿ ಅಧಿಕಾರಿಗಳು ಬೆಂಗಳೂರಿನ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಆರು ದಿನಗಳ ಕಾಲ ಆರೋಪಿಯನ್ನು ವಶದಲ್ಲಿರಿಸಿಕೊಂಡು ವಿಚಾರಣೆ ನಡೆಸಲು ಇ.ಡಿ ಅಧಿಕಾರಿಗಳಿಗೆ ಅನುಮತಿ ನೀಡಿ ಪಿಎಂಎಲ್‌ಎ ವಿಶೇಷ ನ್ಯಾಯಾಲಯ ಗುರುವಾರ ಆದೇಶ ಹೊರಡಿಸಿತ್ತು. ತಕ್ಷಣವೇ ಚೆನ್ನೈಗೆ ತೆರಳಿದ ತನಿಖಾ ತಂಡ ಕೇಂದ್ರ ಕಾರಾಗೃಹದಲ್ಲಿ ಆರೋಪಿಯನ್ನು ಬಂಧಿಸಿ, ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಹೂಡಿಕೆದಾರರಿಗೆ ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಠೇವಣಿ ಸಂಗ್ರಹಿಸಿ ವಂಚಿಸಿರುವ ಪ್ರಕರಣದಲ್ಲಿ ಅನಾಸ್ ಅಹ್ಮದ್ ಪಾಲುದಾರಿಕೆಯ ಎಚ್ ಅಂಡ್ ಎಸ್ ವೆಂಚರ್ಸ್ ಇಂಕ್ ಮತ್ತು ಕ್ಲಿಫರ್ಡ್ ವೆಂಚರ್ಸ್ ಕಂಪನಿಗಳ ಪಾತ್ರವಿದೆ ಎಂದು ಇ.ಡಿ ಆರೋಪಿಸಿದೆ. ಅಲ್ಲದೇ ಆರೋಪಿಯು ಚೀನಾ ಮೂಲದ ಆರೋಪಿಗಳ ಜತೆಗೂ ನಂಟು ಹೊಂದಿರುವ ಶಂಕೆ ಇದೆ ಎಂದು ಹೇಳಿದೆ.

ತಮಿಳುನಾಡು ರಣಜಿ ತಂಡದ ಆಟಗಾರನಿಗೆ ₹ 40 ಲಕ್ಷದ ಆಮಿಷ

ಮ್ಯಾಚ್‌ಫಿಕ್ಸಿಂಗ್ ಸಂದೇಶ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗುವಂತೆ ಆಟಗಾರರೊಬ್ಬರಿಗೆ ₹ 40 ಲಕ್ಷ ಆಮಿಷವೊಡ್ಡಿ ಸಂದೇಶ ಕಳುಹಿಸಿದ್ದ ಆರೋಪಿ ಆನಂದ್‌ಕುಮಾರ್ ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡು ರಣಜಿ ತಂಡದ ಆಟಗಾರ ಸತೀಶ್ ರಾಜಗೋಪಾಲ್ ಎಂಬುವರಿಗೆ ಹಣದ ಆಮಿಷವೊಡ್ಡಲಾಗಿತ್ತು. ಈ ಬಗ್ಗೆ ಲೋಕೇಶ್ ಎಂಬುವರು ದೂರು ನೀಡಿದ್ದರು. ‘ಬನ್ನಿ ಆನಂದ್’ ಹೆಸರಿನಲ್ಲಿ ಕೃತ್ಯ ಎಸಗಿದ್ದ ಆರೋಪಿ ಆನಂದ್‌ಕುಮಾರ್‌ನನ್ನು ಬಂಧಿಸಲಾಗಿದೆ‘ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಗೇಪಲ್ಲಿಯ ಆನಂದ್ ಕುಮಾರ್, ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಐಷಾರಾಮಿ ಜೀವನ ನಡೆಸುತ್ತಿದ್ದ ಆತ, ಸಾಕಷ್ಟು ಸಾಲವನ್ನೂ ಮಾಡಿಕೊಂಡಿದ್ದ. ಅದನ್ನು ತೀರಿಸಲು ಆತನಿಂದ ಸಾಧ್ಯವಾಗಿರಲಿಲ್ಲ.’

‘ಕ್ರಿಕೆಟ್ ಆಟಗಾರರನ್ನೇ ಬ್ಲ್ಯಾಕ್‌ಮೇಲ್ ಮಾಡಿ, ಹಣ ಸಂಪಾದಿಸಲು ಆರೋಪಿ ಸಂಚು ರೂಪಿಸಿದ್ದ. ಅದಕ್ಕಾಗಿ ಯೂಟ್ಯೂಬ್‌ನಲ್ಲಿ ಹಲವು ಆಟಗಾರರ ವಿಡಿಯೊ ನೋಡಿದ್ದ. ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಖಾತೆ ಹೊಂದಿದ್ದ ಆರೋಪಿ, ಅದರ ಮೂಲಕವೇ ಆಟಗಾರರಿಗೆ ಸಂದೇಶ ಕಳುಹಿಸುತ್ತಿದ್ದ. ಅದಕ್ಕೆ ಯಾರಾದರೂ ಪ್ರತಿಕ್ರಿಯಿಸಿದರೆ, ಅದರ ಸ್ಕ್ರೀನ್ ಶಾರ್ಟ್ ತೆಗೆದಿಟ್ಟುಕೊಳ್ಳುತ್ತಿದ್ದ. ಅದನ್ನೇ ಆಟಗಾರರಿಗೆ ವಾಪಸು ಕಳುಹಿಸಿ ಹಣಕ್ಕಾಗಿ ಒತ್ತಾಯಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ’ ಎಂದೂ ಮೂಲಗಳು ತಿಳಿಸಿವೆ.

ಬಿಸಿಸಿಐಗೆ ದೂರು: ‘ಆಲ್‌ರೌಂಡರ್ ಆಟಗಾರ ಸತೀಶ್ ರಾಜಗೋಪಾಲ್ ಅವರ ಇನ್‌ಸ್ಟಾಗ್ರಾಂ ಖಾತೆಗೆ ಸಂದೇಶ ಕಳುಹಿಸಿದ್ದ ಆರೋಪಿ, ‘ಟಿಎನ್‌ಪಿಎಲ್ ಪಂದ್ಯಾವಳಿ ಸಂದರ್ಭದಲ್ಲಿ ಮ್ಯಾಚ್ ಫಿಕ್ಸಿಂಗ್ ಮಾಡುತ್ತೇನೆ. ನೀವೂ ಅದರಲ್ಲಿ ಭಾಗಿಯಾಗಬೇಕು. ಅದಕ್ಕಾಗಿ ನಿಮಗೆ ₹ 40 ಲಕ್ಷ ನೀಡುತ್ತೇನೆ’ ಎಂದಿದ್ದ. ಅದಕ್ಕೆ ಒಪ್ಪದ ಸತೀಶ್, ಬಿಸಿಸಿಐ ಭ್ರಷ್ಟಾಚಾರ ನಿಗ್ರಹ ಘಟಕಕ್ಕೆ ಇತ್ತೀಚೆಗಷ್ಟೇ ದೂರು ನೀಡಿದ್ದರು’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಸತೀಶ್ ಅವರಿಗೆ ಸಂದೇಶ ರವಾನೆಯಾಗಿದ್ದ ಇನ್‌ಸ್ಟಾಗ್ರಾಂ ಖಾತೆ ಬೆಂಗಳೂರಿನಿಂದ ನಿರ್ವಹಣೆ ಆಗುತ್ತಿರುವುದು ಗೊತ್ತಾಗಿತ್ತು. ಬಿಸಿಸಿಐ ಸೂಚನೆಯಂತೆ ಸತೀಶ್ ಪರವಾಗಿ ಲೋಕೇಶ್ ಅವರು ಜಯನಗರ ಠಾಣೆಗೆ ದೂರು ನೀಡಿದ್ದರು.’ ಎಂದೂ ಹೇಳಿವೆ.

ಅಪಘಾತ; ಹುಟ್ಟುಹಬ್ಬದ ದಿನವೇ ಯುವತಿ ಸಾವು

ಬೆಂಗಳೂರು: ಹೆಬ್ಬಾಳ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಮಹಶ್ರೀ ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ಸ್ಥಳೀಯ ಭದ್ರಪ್ಪ ಬಡಾವಣೆ ನಿವಾಸಿ ಮಹಶ್ರೀ, ಮಲ್ಲೇಶ್ವರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅರೆಕಾಲಿಕ ಕೆಲಸಕ್ಕೂ ಹೋಗುತ್ತಿದ್ದರು. ಸ್ನೇಹಿತನೊಂದಿಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಶ್ರೀ ಅವರ ಹುಟ್ಟುಹಬ್ಬ ಶುಕ್ರವಾರವಿತ್ತು. ಮನೆಯವರೆಲ್ಲ ಬೆಳಿಗ್ಗೆಯೇ ಶುಭಾಶಯ ತಿಳಿಸಿದ್ದರು. ಹುಟ್ಟುಹಬ್ಬವಿದ್ದಿದ್ದರಿಂದ ಮನೆಯಲ್ಲೇ ಇರುವಂತೆ ಪೋಷಕರು ಹೇಳಿದ್ದರು. ಅದಕ್ಕೆ ಒಪ್ಪದ ಮಹಶ್ರೀ, ಕೆಲಸಕ್ಕೆ ಹೋಗಬೇಕೆಂದು ಹೇಳಿ ಮನೆಯಿಂದ ಹೊರಟಿದ್ದರು’ ಎಂದೂ ತಿಳಿಸಿವೆ.

‘ಸ್ನೇಹಿತನ ಬೈಕ್‌ನ ಹಿಂಬದಿಯಲ್ಲಿ ಕುಳಿತು ಮಹಶ್ರೀ ಹೊರಟಿದ್ದರು. ಹೆಬ್ಬಾಳ ಮೇಲ್ಸೇತುವೆ ಮೇಲೆ ಬೈಕ್‌ನಿಂದ ಆಯತಪ್ಪಿ ಬಿದ್ದಿದ್ದರು. ಹಿಂದಿನಿಂದ ಬಂದ ಕ್ಯಾಂಟರ್ ವಾಹನದ ಚಕ್ರ, ಅವರ ತಲೆ ಮೇಲೆಯೇ ಹರಿದು ಹೋಗಿತ್ತು. ಇದರಿಂದಾಗಿ ಮಹಶ್ರೀ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕ್ಯಾಂಟರ್ ಚಾಲಕ ಹಾಗೂ ಯುವತಿಯ ಸ್ನೇಹಿತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ಹೇಳಿವೆ.

ಅಲ್ ಅಮೀನ್ ಕಾಲೇಜು ಪ್ರಾಂಶುಪಾಲರ ವಿರುದ್ಧ ಪ್ರಕರಣ

ಬೆಂಗಳೂರು: ಆಯೇಷಾ ಅಮೀನಾ ಟ್ರಸ್ಟ್‌ನ ಕಚೇರಿಯಿಂದ ಮಹತ್ವದ ದಾಖಲೆಗಳನ್ನು ಕಳವು ಮಾಡಿರುವ ಆರೋಪದ ಸಂಬಂಧ ಅಲ್ ಅಮೀನ್ ಪದವಿ ಕಾಲೇಜಿನ ಪ್ರಾಂಶುಪಾಲ ಬಿ.ಎಂ.ಝೂಕೀರ್ ಹಾಗೂ ಟ್ರಸ್ಟಿ ಸುಭಾನ್ ಶರೀಫ್ ವಿರುದ್ಧ ಎಸ್.ಜೆ.ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಟ್ರಸ್ಟ್‌ನ ಕಾರ್ಯದರ್ಶಿ ಅಹ್ಮದ್ ಶರೀಫ್ ಸಿರಾಜ್ ನೀಡಿರುವ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

‘ಸುಭಾನ್ ಶರೀಫ್ ಹಾಗೂ ಝೂಕೀರ್ ಅವರು ಟ್ರಸ್ಟ್‌ನ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಓಟಿಸಿ ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡಾದಲ್ಲಿ ಟ್ರಸ್ಟ್‌ಗೆ ಸಂಬಂಧಿಸಿದ ಖಾತೆ ಇದೆ. ಅದರ ಮೂಲಕ ನಿಯಮ ಬಾಹಿರವಾಗಿ ವ್ಯವಹಾರ ನಡೆಸಿದ್ದಾರೆ. ಟ್ರಸ್ಟ್‌ನ ಕಚೇರಿಯಿಂದ ದಾಖಲೆಗಳನ್ನು ಕಳವು ಮಾಡಿರುವ ಅವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಎಂದು ದೂರಿನಲ್ಲಿವಿವರಿಸಲಾಗಿದೆ’ಎಂದರು.

ಬೀದಿಬದಿ ಅಂಗಡಿಗಳತ್ತ ಸುಳಿಯದ ಜನ • ಕೆಟ್ಟು ಹೋಗುವ ಪದಾರ್ಥಗಳು

‘ಪಾನಿಪುರಿ’ ವ್ಯಾಪಾರಿಗಳಿಗೆ ‘ಕಹಿ’ಯಾದ ಕೋವಿಡ್

• ಸಂತೋಷ ಜಿಗಳಿಕೊಪ್ಪ

ಕೋವಿಡ್ ಬದುಕು ಪ್ರಯಾಸ

ಬೆಂಗಳೂರು: ಹಲವರ ನಾಲಿಗೆಗೆ ರುಚಿಯಾಗಿದ್ದ ಪಾನಿಪುರಿ, ಇತ್ತೀಚಿನ ದಿನಗಳಲ್ಲಿ ತನ್ನ ರುಚಿಯನ್ನೇ ಕಳೆದುಕೊಂಡಿದೆ. ಕೊರೊನಾ ಸೋಂಕು ಹರಡುವ ಭೀತಿಯಿಂದಾಗಿ ಪಾನಿಪುರಿ ತಿನ್ನುವವರ ಸಂಖ್ಯೆ ಕಡಿಮೆಯಾಗಿದ್ದು, ಅದೇ ವ್ಯಾಪಾರ ನಂಬಿಕೊಂಡಿರುವ ಜನ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಶಾಲಾ–ಕಾಲೇಜು, ಉದ್ಯಾನ, ಮಾರುಕಟ್ಟೆ, ಚಿತ್ರಮಂದಿರ, ಮಾಲ್, ನಿಲ್ದಾಣ, ತಂಗುದಾಣ, ಪ್ರಮುಖ ರಸ್ತೆ... ಹೀಗೆ ಜನಸಂದಣಿ ಇರುವ ಜಾಗದಲ್ಲಿ ಪುಟ್ಟದೊಂದು ಪಾನಿಪುರಿ ಅಂಗಡಿ ಇಟ್ಟುಕೊಂಡು ಜೀವನ ಕಟ್ಟಿಕೊಂಡಿದ್ದ ಜನ ಇಂದು ಊರು ಬಿಡುತ್ತಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಉಂಟಾಗುತ್ತಿದ್ದಂತೆ, ಪಾನಿಪುರಿ ಅಂಗಡಿಗಳತ್ತ ಜನ ಮುಖ ಹಾಕುತ್ತಿಲ್ಲ. ‘ಪೂರಿ’ ಪೊಟ್ಟಣ ಹಾಗೂ ಪಾತ್ರೆಗಳಲ್ಲಿ ಪಾನೀಯ ಸಿದ್ಧಪಡಿಸಿಟ್ಟುಕೊಂಡ ವ್ಯಾಪಾರಿ, ಗ್ರಾಹಕರಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ಸ್ಥಳೀಯರ ಜೊತೆಯಲ್ಲಿ ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ, ಗುಜರಾತ್ ಹಾಗೂ ಇತರೆ ರಾಜ್ಯಗಳ ಯುವಕರೂ ಪಾನಿಪುರಿ ಅಂಗಡಿ ನಡೆಸುತ್ತಿದ್ದಾರೆ. ಬಹುತೇಕರು, ಹೂಡಿದ್ದ ಬಂಡವಾಳ ವಾಪಸು ತೆಗೆಯಲು ಪರದಾಡುತ್ತಿದ್ದಾರೆ.

ವಿಜಯನಗರ, ರಾಜಾಜಿನಗರ, ಮಾಗಡಿ ರಸ್ತೆ, ಜಯನಗರ, ಹನುಮಂತನಗರ, ಬಸವನಗುಡಿ, ಕುಮಾರಸ್ವಾಮಿ ಲೇಔಟ್, ಕೆಂಗೇರಿ, ರಾಜರಾಜೇಶ್ವರಿನಗರ, ಅಶೋಕನಗರ, ಇಂದಿರಾನಗರ, ಚರ್ಚ್‌ಸ್ಟ್ರೀಟ್, ಕೋರಮಂಗಲ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಪಾನಿಪುರಿ ವ್ಯಾಪಾರಿಗಳ ಸಂಖ್ಯೆಯೂ ಕಡಿಮೆ ಆಗಿದೆ. ಅಲ್ಲಲ್ಲಿ ಒಂದೊಂದು ಅಂಗಡಿಗಳಿದ್ದರೂ ಅಲ್ಲಿ ಗ್ರಾಹಕರ ಸುಳಿವಿಲ್ಲ.



ಹಲಸೂರಿನ ರಸ್ತೆ ಬದಿಯಲ್ಲಿ ಪಾನಿಪುರಿ ಅಂಗಡಿ ತೆರೆದಿರುವ ವ್ಯಾಪಾರಿ, ಗ್ರಾಹಕರಿಗಾಗಿ ಕಾಯುತ್ತ ಕುಳಿತಿರುವುದು ಪ್ರಜಾವಾಣಿ ಚಿತ್ರ

‘ಬೆಂಗಳೂರಿಗೆ ಬಂದು 10 ವರ್ಷವಾಗಿದ್ದು, ಪಾನಿಪುರಿ ವ್ಯಾಪಾರದಿಂದ ಬದುಕು ಕಟ್ಟಿಕೊಂಡಿದ್ದೇನೆ. ಕೋವಿಡ್‌ಗೂ ಮುನ್ನ ದಿನಕ್ಕೆ 2 ಸಾವಿರದಿಂದ 5 ಸಾವಿರ ವ್ಯಾಪಾರ ಆಗುತ್ತಿತ್ತು. ಕೋವಿಡ್ ಅಲೆಗಳು ಶುರುವಾದಾಗಿನಿಂದ ₹ 500 ವ್ಯಾಪಾರವೂ ಕಷ್ಟವಾಗಿದೆ’ ಎಂದು ವಿಜಯನಗರದ ಪಾನಿಪುರಿ ವ್ಯಾಪಾರಿ ಅಕ್ಷಯ್‌ಕುಮಾರ್ ಹೇಳಿದರು.

ರಾಜಾಜಿನಗರದ ರಾಜಕುಮಾರ್ ರಸ್ತೆಯಲ್ಲಿ ಪಾನಿಪುರಿ ಮಾರುವ ಚರಣ್ ಸಿಂಗ್, ‘ಪಾನಿಪುರಿ ತಿನ್ನಲು ಜನರ ದಂಡೇ ಬರುತ್ತಿತ್ತು. ಅದರಲ್ಲೂ ಮಹಿಳೆಯರೇ ಹೆಚ್ಚು ಪಾನಿಪುರಿ ತಿನ್ನುತ್ತಿದ್ದರು. ಇದೀಗ ಶೇ 90ರಷ್ಟು ಗ್ರಾಹಕರು ಅಂಗಡಿಗೆ ಬರುತ್ತಿಲ್ಲ’ ಎಂದರು.

’ಶಾಲೆ, ಕಾಲೇಜು, ಟ್ಯೂಶನ್, ಶಿಕ್ಷಣ ಸಂಸ್ಥೆಗಳು, ಪರೀಕ್ಷಾ ತರಬೇತಿ ಕೇಂದ್ರಗಳು ಎಲ್ಲವೂ ಆಗಾಗ ಬಂದ್ ಆಗುತ್ತವೆ. ರಸ್ತೆಯಲ್ಲೂ ಜನರಿಲ್ಲ. ಪೂರಿ ತಂದರೂ ವ್ಯಾಪಾರವಿಲ್ಲ‘ ಎಂದು ತಿಳಿಸಿದರು.

ಸುಬ್ರಹ್ಮಣ್ಯನಗರದ ಪಾನಿಪುರಿ ವ್ಯಾಪಾರಿ ಬಲರಾಮ್, ‘ನಾನು ರಾಜಸ್ಥಾನದವನು. ಈ ವ್ಯಾಪಾರ, ಕುಟುಂಬದ 7 ಮಂದಿಯನ್ನು ಸಾಕುವ ಶಕ್ತಿ ನೀಡಿತ್ತು. ಈಗ ಒಬ್ಬನ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾಗಿದೆ’ ಎಂದು ಬೇಸರಗೊಂಡರು.

‘ಪಾನಿಪುರಿ ತಿನ್ನುವುದರಿಂದ ಸೋಂಕು ಹರಡುವುದಾಗಿ ಕೆಲವರು ಸುದ್ದಿ ಹಬ್ಬಿಸಿದರು. ಅಂದಿನಿಂದ ವ್ಯಾಪಾರವಿಲ್ಲ. ಹಲವು ವ್ಯಾಪಾರಿಗಳು, ಅಂಗಡಿ ಮುಚ್ಚಿ ಊರಿಗೆ ಹೋಗಿದ್ದಾರೆ. ಕೆಲವೇ ದಿನಗಳಲ್ಲಿ ನಾನೂ ಹೋಗಲಿದ್ದೇನೆ’ ಎಂದೂ ಹೇಳಿದರು.

ಸುದ್ದಿ 2 ನಿಮಿಷ

ವಾರಾಂತ್ಯ ಕರ್ಫ್ಯೂ ವಾಪಸ್: ಹೋಟೆಲ್ ಮಾಲೀಕರ ಸ್ವಾಗತ

ಬೆಂಗಳೂರು: ‘ವಾರಾಂತ್ಯ ಕರ್ಫ್ಯೂ ಹಿಂಪಡೆದ ರಾಜ್ಯ ಸರ್ಕಾರದ ನಿರ್ಣಯ ಸ್ವಾಗತಾರ್ಹ. ಹೋಟೆಲ್‌ಗಳಲ್ಲಿ ವಾರಾಂತ್ಯದಲ್ಲೂ ಸೇವೆಗೆ ಅವಕಾಶ ನೀಡಿದೆ’ ಎಂದು ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ತಿಳಿಸಿದರು.

‘ಸರ್ಕಾರ ಜಾರಿ ಮಾಡಿದ್ದ ವಾರಾಂತ್ಯ ಕರ್ಫ್ಯೂ ನಿರ್ಬಂಧಗಳಿಂದ ಹೋಟೆಲ್ ಉದ್ಯಮಕ್ಕೆ ಭಾರಿ ಹೊಡೆತ ಬಿದ್ದಿತ್ತು. ವಾರಾಂತ್ಯದಲ್ಲೇ ಹೆಚ್ಚು ವ್ಯಾಪಾರ ನಡೆಯುತ್ತಿದ್ದ ಹೋಟೆಲ್‌ಗಳಲ್ಲಿ ಕೇವಲ ಪಾರ್ಸೆಲ್ ಸೇವೆಗೆ ಅವಕಾಶ ನೀಡಿದ್ದರಿಂದ ವ್ಯಾಪಾರ ನೆಲಕಚ್ಚಿತ್ತು’ ಎಂದರು.

ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್,‘ ‘ವಾರಾಂತ್ಯದಲ್ಲಿ ಹೋಟೆಲ್‌ಗಳಲ್ಲಿ ಕನಿಷ್ಠ ಶೇ 50ರಷ್ಟು ಸಾಮರ್ಥ್ಯದಲ್ಲಿ ಸೇವೆ ನೀಡಲು ಅವಕಾಶ ಕೋರಿ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಅದಕ್ಕೆ ಸ್ಪಂದಿಸಿ ಸರ್ಕಾರ ನಿರ್ಬಂಧಗಳನ್ನು ಸಡಿಲಗೊಳಿಸಿದೆ. ಇದರಿಂದ ಹೋಟೆಲ್ ಮಾಲೀಕರು ನಿಟ್ಟುಸಿರು ಬಿಡುವಂತಾಗಿದೆ. ಕೋವಿಡ್ ತಡೆಗೆ ಹೋಟೆಲ್‌ಗಳಲ್ಲಿ ಎಲ್ಲ ಸುರಕ್ಷತಾ ಕ್ರಮಗಳನ್ನು ಪಾಲಿಸಲಾಗುವುದು’ ಎಂದು ಹೇಳಿದರು.

ಸಚಿವರಿಂದ ಕೋವಿಡ್ ನಿಯಮ ಉಲ್ಲಂಘನೆ



ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಜ್ಞಾನಭಾರತಿ ವಾರ್ಡ್‌ನ ಈರಣ್ಣ ಪಾಳ್ಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಹಾಯ ಧನ ವಿತರಿಸುವ ಕಾರ್ಯಕ್ರಮದಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸಲಿಲ್ಲ.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದ ವತಿಯಿಂದ ಸುಮಾರು 80 ಫಲಾನುಭವಿಗಳಿಗೆ ಸಹಾಯಧನ ವಿತರಣೆಯ ಕಾರ್ಯಕ್ರಮದಲ್ಲಿ ಸಚಿವ ಮುನಿರತ್ನ ಅವರು ಸೇರಿದಂತೆ ನೂರಾರು ಜನ ಸೇರಿದ್ದರು. ಬಹುತೇಕ ಮಂದಿ ಮಾಸ್ಕ್ ಹಾಕಿರಲಿಲ್ಲ ಮತ್ತು ಸುರಕ್ಷಿತ ಅಂತರ ಕಾಪಾಡಲಿಲ್ಲ.

‘ಸಂಕ್ರಾಂತಿ ಹಬ್ಬದ ಉಡುಗೊರೆಯಾಗಿ ಸೀರೆ ಕೊಡುತ್ತಾರೆ ಬನ್ನಿ ಎಂದು ಬಿಜೆಪಿ ಕಾರ್ಯಕರ್ತರು ನಮ್ಮನ್ನು ಕಾರ್ಯಕ್ರಮಕ್ಕೆ ಕರೆತಂದರು. ಎರಡು ಗಂಟೆ ಕಾದರೂ ಸೀರೆ ಕೊಡಲಿಲ್ಲ. ಕಾರ್ಯಕರ್ತರನ್ನು ಕೇಳಿದರೆ, ಮುಂದಿನ ವಾರ ನಿಮ್ಮ ಮನೆಗೆ ಬಂದು ಹಂಚುವುದಾಗಿ ಸಬೂಬು ಹೇಳಿದರು’ ಎಂದು ಸ್ಥಳೀಯ ಮಹಿಳೆಯೊಬ್ಬರು ಹೇಳಿದರು.

ಫಲಾನುಭವಿ ಒಬ್ಬರಿಗೆ ಮಾತ್ರ ಮಂಜೂರಾಗಿದ್ದ ಮಾರುತಿ ಕಂಪನಿ ಕಾರನ್ನು ಸಚಿವ ಮುನಿರತ್ನ ಅವರು ವಿತರಿಸಿದರು.

ವಿದ್ಯುತ್ ದರ ಏರಿಕೆ ಅನಿವಾರ್ಯ: ಸಚಿವ ವಿ. ಸುನೀಲ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯುತ್ ಮಾರ್ಗಗಳ ಬದಲಾವಣೆ, ಹೊಸ ಉಪ ವಿಭಾಗಗಳ ಸ್ಥಾಪನೆಯಂತಹ ಅಭಿವೃದ್ಧಿ ಕಾಮಗಾರಿಗಳಿಂದಾಗಿ ವಿದ್ಯುತ್ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ’ ಎಂದು ಇಂಧನ ಸಚಿವ ವಿ. ಸುನೀಲ್‌ಕುಮಾರ್ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಭಿವೃದ್ಧಿ ಕಾಮಗಾರಿಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳುತ್ತಿದೆ. ಅದನ್ನು ಸರಿದೂಗಿಸಲು ವಿದ್ಯುತ್ ದರ ಹೆಚ್ಚಳ ಮಾಡಲೇಬೇಕಾಗಿದೆ. ಆ ಮೂಲಕ ಆರ್ಥಿಕ ಹೊರೆಯನ್ನು ಗ್ರಾಹಕರ ಮೇಲೆ ವರ್ಗಾಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಹೇಳಿದರು.

‘ದರ ಏರಿಕೆಗೆ ಅವಕಾಶ ಕೋರಿ ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿವೆ. ಆಯೋಗವು ಒಪ್ಪಿಗೆ ನೀಡಿದರೆ ದರ ಪರಿಷ್ಕರಣೆ ಜಾರಿಗೆ ಬರುತ್ತದೆ’ ಎಂದು ತಿಳಿಸಿದರು.

ಬಾಕಿ ವಸೂಲಿಗೆ ಕ್ರಮ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಜಲಮಂಡಳಿ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಎಸ್ಕಾಂಗಳಿಗೆ ₹ 12,000 ಕೋಟಿ ವಿದ್ಯುತ್ ಬಿಲ್ ಬಾಕಿ ಇದೆ. ಅದನ್ನು ವಸೂಲಿ ಮಾಡಲು ಇಲಾಖಾವಾರು ಸಭೆ ನಡೆಸಲಾಗಿದೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು’ ಎಂದು ಸಚಿವರು ಹೇಳಿದರು.



ವಿ. ಸುನೀಲ್ ಕುಮಾರ್

1,872 ಕಿರಿಯ ‘ಪವರ್ ಮ್ಯಾನ್’ ಮತ್ತು ಕಿರಿಯ ಪರಿಚಾರಕರ ಹುದ್ದೆಗಳ ಭರ್ತಿಗೆ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. 15 ದಿನಗಳಲ್ಲಿ ನೇಮಕಾತಿ ಆದೇಶ ನೀಡಲಾಗುವುದು ಎಂದರು.

ಆರ್ಥಿಕ ಸಂಕಷ್ಟ ಪರಿಹಾರಕ್ಕೆ ಯೋಜನೆ ರೂಪಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಿಂದ ಬರಬೇಕಿರುವ ಬಾಕಿ, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ವೆಚ್ಚ ಮತ್ತಿತರ ಕಾರಣಗಳಿಂದ ಇಂಧನ ಇಲಾಖೆ ಎದುರಿಸುತ್ತಿರುವ ಆರ್ಥಿಕ ಸಂಕಷ್ಟವನ್ನು ಪರಿಹರಿಸಲು ಅಗತ್ಯ ಯೋಜನೆ ರೂಪಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಇಂಧನ ಇಲಾಖೆಯ ಆರ್ಥಿಕ ಸ್ಥಿತಿ ಕುರಿತು ಪರಿಶೀಲನೆ ನಡೆಯಿತು. ಇಂಧನ ಸಚಿವ ವಿ. ಸುನೀಲ್ ಕುಮಾರ್ ಅವರ ಕೋರಿಕೆಯಂತೆ ಇಲಾಖೆಯನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡಲು ತುರ್ತಾಗಿ ಪ್ರಸ್ತಾವಗಳನ್ನು ಸಿದ್ಧಪಡಿಸುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ₹ 12,000 ಕೋಟಿಗೂ ಹೆಚ್ಚು ವಿದ್ಯುತ್ ಬಿಲ್ ಬಾಕಿ ಇರುವುದು, ಕೃಷಿ ಪಂಪ್‌ಸೆಟ್‌ಗಳಿಗೆ ನೀಡುತ್ತಿರುವ ವಿದ್ಯುತ್ ಬಾಬ್ತು ಸಹಾಯಧನ ಬಾಕಿ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಬರಬೇಕಿರುವ ಬಾಕಿ ಮತ್ತು ಈ ಕಂಪನಿಗಳಿಂದ ಕರ್ನಾಟಕ ವಿದ್ಯುತ್ ಪ್ರಸರಣ (ಕೆಪಿಟಿಸಿಎಲ್) ನಿಗಮಕ್ಕೆ ಪಾವತಿಸಬೇಕಿರುವ ಬಾಕಿ ಮೊತ್ತದ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆದಿದೆ.

‘ಇಂಧನ ಮತ್ತು ಹಣಕಾಸು ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು. ಇಂಧನ ಇಲಾಖೆಯನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡಲು ಅಲ್ಪಾವಧಿ ಮತ್ತು ದೀರ್ಘಾವಧಿಯ ಕ್ರಮಗಳನ್ನು ಸೂಚಿಸುವ ಪ್ರತ್ಯೇಕ ಪ್ರಸ್ತಾವಗಳನ್ನು ಸಲ್ಲಿಸುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು. ಇಂಧನ ಇಲಾಖೆ ಈಗಾಗಲೇ ಸಿದ್ಧಪಡಿಸಿರುವ ಸಂಕಷ್ಟ ಪರಿಹಾರ ಯೋಜನೆ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು’ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ವಿವಿಧ ಇಲಾಖೆಗಳಿಂದ ಹಂತ ಹಂತವಾಗಿ ಬಾಕಿ ವಸೂಲಿ ಮಾಡುವುದು ಮತ್ತು ಪ್ರಸಕ್ತ ವರ್ಷದ ಬಿಲ್ ಮೊತ್ತವನ್ನು ಒಂದೇ ಬಾರಿಗೆ ವಸೂಲಿ ಮಾಡುವ ಕುರಿತು ಚರ್ಚಿಸಲಾಗಿದೆ. ಸಾಲ ಪಡೆಯುವ ಬಗ್ಗೆಯೂ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯ್ಕ್ ಮತ್ತು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಸಭೆಯಲ್ಲಿದ್ದರು.

ಕೆಎಸ್‌ಆರ್‌ಟಿಸಿಗೂ ಬರಲಿವೆ ಎಲೆಕ್ಟ್ರಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಮಾತ್ರ ಇರುವ ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಕೆಲವೇ ದಿನಗಳಲ್ಲಿ ಅಕ್ಕ–ಪಕ್ಕದ ನಗರಗಳಿಗೂ ವಿಸ್ತರಣೆ ಆಗುವ ಕಾಲ ಹತ್ತಿರವಾಗುತ್ತಿದೆ. ಮುಂದಿನ ಮೂರು ತಿಂಗಳಲ್ಲಿ ಕೆಎಸ್‌ಆರ್‌ಟಿಸಿಗೆ ಮೊದಲ ಎಲೆಕ್ಟ್ರಿಕ್ ಬರಲಿದೆ.

ಗುತ್ತಿಗೆ (ಜಿಸಿಸಿ) ಆಧಾರದಲ್ಲಿ 50 ಬಸ್‌ಗಳನ್ನು ಪಡೆಯುವ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಹೈದರಾಬಾದ್‌ನ ಇವಿ ಟ್ರಾನ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ಕೆಎಸ್‌ಆರ್‌ಟಿಸಿ ಕಾರ್ಯಾದೇಶ ನೀಡಲಾಗಿದೆ.

‘ಬಹುತೇಕ ಏಪ್ರಿಲ್‌ನಲ್ಲಿ ಮೊದಲ ಎಲೆಕ್ಟ್ರಿಕ್ ಬಸ್ ಬರಲಿದೆ. ಅದರ ಕಾರ್ಯಕ್ಷಮತೆ ಪರಿಶೀಲಿಸಿ ಒಪ್ಪಿಗೆ ಸೂಚಿಸಿದರೆ ಮುಂದಿನ ಮೂರು ತಿಂಗಳಲ್ಲಿ ಉಳಿದ ಬಸ್‌ಗಳು ನಿಗಮಕ್ಕೆ ಸೇರ್ಪಡೆಯಾಗಲಿವೆ’ ಎಂದು ಕೆಎಸ್‌ಆರ್‌ಟಿಸಿ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಬಸ್‌ಗಳ ನಿರ್ವಹಣೆ, ಚಾರ್ಜಿಂಗ್ ವ್ಯವಸ್ಥೆ ಎಲ್ಲವನ್ನೂ ಗುತ್ತಿಗೆ ಪಡೆದಿರುವ ಕಂಪನಿಯೇ ನೋಡಿಕೊಳ್ಳಲಿದೆ. ಚಾಲಕರನ್ನು ಅದೇ ಕಂಪನಿ ಒದಗಿಸಲಿದ್ದು, ಕೆಎಸ್‌ಆರ್‌ಟಿಸಿಯಿಂದ ನಿರ್ವಾಹಕರನ್ನು ನಿಯೋಜಿಸಲಾಗುವುದು. ಪ್ರತಿ ಕಿಲೋ ಮೀಟರ್‌ಗೆ ₹55 ಮೊತ್ತವನ್ನು ಕಂಪನಿಗೆ ಕೆಎಸ್‌ಆರ್‌ಟಿಸಿ ಪಾವತಿಸಲಿದೆ’ ಎಂದು ಹೇಳಿದರು.



ಎಲೆಕ್ಟ್ರಿಕ್ ಬಸ್

ದಿನಕ್ಕೆ ಕನಿಷ್ಠ 450 ಕಿಲೋ ಮೀಟರ್ ಸಂಚರಿಸಲು ವ್ಯವಸ್ಥೆಯನ್ನು ನಿಗಮ ಮಾಡಿಕೊಡಬೇಕಾಗುತ್ತದೆ. ಅಂದರೆ ದಿನಕ್ಕೆ ₹24,750 ಮೊತ್ತ ಪಾವತಿಸಬೇಕಾಗುತ್ತದೆ. ದಿನಕ್ಕೆ ನಿಗದಿತ ದೂರ ಸಂಚರಿಸದಿದ್ದರೂ, ಅಷ್ಟೊ ಮೊತ್ತ ಪಾವತಿಸಬೇಕಾಗುತ್ತದೆ. 450 ಕಿಲೋ ಮೀಟರ್‌ಗಿಂತ ಹೆಚ್ಚು ದೂರ ಕ್ರಮಿಸಿದರೆ ಕಿಲೋ ಮೀಟರ್‌ಗೆ ₹55 ರಂತೆ ಹೆಚ್ಚುವರಿ ಮೊತ್ತ ನೀಡಬೇಕಾಗುತ್ತದೆ.

ಆದ್ದರಿಂದ ಕನಿಷ್ಠ 450 ಕಿಲೋ ಮೀಟರ್ ಕ್ರಮಿಸಬಹುದಾದ ಮಾರ್ಗಗಳನ್ನೇ ಕೆಎಸ್‌ಆರ್‌ಟಿಸಿ ಗುರುತು ಮಾಡಿಕೊಂಡಿದೆ. ಬೆಂಗಳೂರಿನಿಂದ ದಾವಣಗೆರೆ, ಮಡಿಕೇರಿ, ಮೈಸೂರು, ವಿರಾಜಪೇಟೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರಿಗೆ ಹೋಗಿ ಬರಲು ಎಲೆಕ್ಟ್ರಿಕ್ ಬಸ್‌ಗಳನ್ನು ನಿಯೋಜಿಸಲು ಸಿದ್ಧತೆ ಮಾಡಿಕೊಂಡಿದೆ.

‘ಈ ಎಲೆಕ್ಟ್ರಿಕ್ ಬಸ್‌ಗಳು 43 ಸೀಟುಗಳನ್ನು ಹೊಂದಿದ್ದು, ಹವಾನಿಯಂತ್ರಿತ ವ್ಯವಸ್ಥೆ ಇರಲಿದೆ. ಕೆಎಸ್‌ಆರ್‌ಟಿಸಿಯಲ್ಲಿ ಸದ್ಯ ಇರುವ ಡೀಸೆಲ್ ಹವಾನಿಯಂತ್ರಿತ ಬಸ್‌ಗಳಲ್ಲಿನ ಪ್ರಯಾಣ ದರವನ್ನೇ ಎಲೆಕ್ಟ್ರಿಕ್ ಬಸ್‌ಗಳಿಗೂ ನಿಗದಿ ಮಾಡುವ ಸಾಧ್ಯತೆ ಇದೆ. ಡೀಸೆಲ್ ವೋಲ್ವೊ ಬಸ್ ಪ್ರತಿ ಕಿಲೋ ಮೀಟರ್ ಕ್ರಮಿಸಲು ಸದ್ಯ ₹56 ವೆಚ್ಚ ತಗುಲುತ್ತಿದೆ’ ಎಂದು ಮತ್ತೊಬ್ಬ ಅಧಿಕಾರಿ ವಿವರಿಸಿದರು.

ಅಂಕಿ-ಅಂಶಗಳು

50 ಕೆಎಸ್‌ಆರ್‌ಟಿಸಿಗೆ ಬರಲಿರುವ ಇ–ಬಸ್‌ಗಳ ಸಂಖ್ಯೆ

₹55 ಪ್ರತಿ ಕಿಲೋ ಮೀಟರ್‌ಗೆ ತಗುಲುವ ವೆಚ್ಚ

450 ಕಿ.ಮೀ ದಿನಕ್ಕೆ ಕ್ರಮಿಸಬೇಕಾದ ಕನಿಷ್ಠ ದೂರ

ಬಿಎಂಟಿಸಿ ಬಸ್, ಮೆಟ್ರೊ ರೈಲು ಎಂದಿನಂತೆ

ಬೆಂಗಳೂರು: ವಾರಾಂತ್ಯದ ಕರ್ಫ್ಯೂ ರದ್ದುಗೊಳಿಸಿರುವುದರಿಂದ ಬಿಎಂಟಿಸಿ ಬಸ್ ಸಂಚಾರ ಮತ್ತು ಮೆಟ್ರೊ ರೈಲು ಸಂಚಾರ ಎಂದಿನಂತೆ ಇರಲಿವೆ.

ವಾರಾಂತ್ಯದ ಕರ್ಫ್ಯೂ ದಿನಗಳಲ್ಲಿ ಬಿಎಂಟಿಸಿ ಬಸ್‌ಗಳನ್ನು ಅಗತ್ಯ ಸೇವೆಗಳನ್ನು ಒದಗಿಸುವ ಸಿಬ್ಬಂದಿಗಳ ಸಂಚಾರಕ್ಕೆ ಮಾತ್ರ ಕಲ್ಪಿಸಲಾಗಿತ್ತು. ಕರ್ಫ್ಯೂ ತೆರವುಗೊಳಿಸಿರುವುದರಿಂದ ಶನಿವಾರ ಮತ್ತು ಭಾನುವಾರ ಬಸ್‌ಗಳ ಸಂಚಾರ ಎಂದಿನಂತೆ ಇರಲಿದೆ ಎಂದು ಬಿಎಂಟಿಸಿ ತಿಳಿಸಿದೆ.


ಮೆಟ್ರೊ ರೈಲು ಸಂಚಾರವನ್ನೂ ಕರ್ಫ್ಯೂ ಸಂದರ್ಭದಲ್ಲಿ ಕಡಿಮೆ ಮಾಡಲಾಗಿತ್ತು. ಈಗ ಎಂದಿನಂತೆ ಬೆಳಿಗ್ಗೆ 5ರಿಂದ ರಾತ್ರಿ 11 ಗಂಟೆ ತನಕ ರೈಲುಗಳು ಸಂಚರಿಸಲಿವೆ. ಭಾನುವಾರ ಬೆಳಿಗ್ಗೆ 7ರಿಂದ ಮೆಟ್ರೊ ರೈಲುಗಳ ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಸ್ಪಷ್ಟಪಡಿಸಿದೆ.

ಇಂಡಿಯಾ ಗೇಟ್‌ನಲ್ಲಿ ನೇತಾಜಿ ಪ್ರತಿಮೆ ಸ್ಥಾಪನೆ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮದಿನದ ಅಂಗವಾಗಿ, ಅವರ ಪ್ರತಿಮೆಯನ್ನು ಇಂಡಿಯಾ ಗೇಟ್ ಬಳಿ ಸ್ಥಾಪಿಸಲಾಗುವುದು. ಇದು ನೇತಾಜಿ ಅವರಿಗೆ ಭಾರತ ಋಣಿಯಾಗಿರುವ ಸಂಕೇತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

‘ಗ್ರಾನೈಟ್‌ನಿಂದ ಕೆತ್ತಲಾಗುತ್ತಿರುವ ಪ್ರತಿಮೆ ಪೂರ್ಣಗೊಳ್ಳುವವರೆಗೆ ಅಲ್ಲಿ ನೇತಾಜಿ ಅವರ ಹೋಲೋಗ್ರಾಂ ಪ್ರತಿಮೆ ಇರಲಿದೆ. ಇದನ್ನು ನೇತಾಜಿ ಅವರ ಜನ್ಮದಿನವಾದ ಜನವರಿ 23ರಂದು (ಭಾನುವಾರ) ಅನಾವರಣಗೊಳಿಸಲಿದ್ದೇನೆ’ ಎಂದೂ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಈ ನಿರ್ಧಾರವನ್ನು ಬಹುತೇಕ ವಿರೋಧ ಪಕ್ಷಗಳು ಸ್ವಾಗತಿಸಿವೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘ಇದು ಗಣರಾಜೋತ್ಸವದ ಪರೇಡ್‌ನಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಪ್ರದರ್ಶಿಸಲು ಉದ್ದೇಶಿಸಿದ್ದ ಸ್ತಬ್ಧ ಚಿತ್ರ ತಿರಸ್ಕರಿಸಿದ್ದಕ್ಕೆ ವ್ಯಕ್ತವಾದ ಟೀಕೆಯನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಕ್ರಮ’ ಎಂದು ಟೀಕಿಸಿದ್ದಾರೆ.



ಇಂಡಿಯಾ ಗೇಟ್‌ನಲ್ಲಿ ಸ್ಥಾಪನೆಯಾಗಲಿರುವ ನೇತಾಜಿ ಪ್ರತಿಮೆ

25 ಅಡಿ ಎತ್ತರದ ಪ್ರತಿಮೆ (ಭುವನೇಶ್ವರ ವರದಿ): ರಾಜಧಾನಿಯ ಇಂಡಿಯಾ ಗೇಟ್‌ನಲ್ಲಿ ಸ್ಥಾಪಿಸಲಿರುವ ನೇತಾಜಿ ಅವರ ಪ್ರತಿಮೆ 25 ಅಡಿ ಎತ್ತರ ಇರಲಿದೆ ಎಂದು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ (ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ) ವ್ಯವಸ್ಥಾಪಕ ನಿರ್ದೇಶಕ ಅದ್ವೈತ ಗದನಾಯಕ ಅವರು ತಿಳಿಸಿದ್ದಾರೆ.

‘ಪ್ರತಿಮೆ ರೂಪಿಸುವ ಜವಾಬ್ದಾರಿಯನ್ನು ಪ್ರಧಾನಿ ಮೋದಿ ಅವರು ನನಗೆ ನೀಡಿದ್ದಾರೆ. ಒಬ್ಬ ಶಿಲ್ಪಿಯಾಗಿ ಇದು ನನಗೆ ಬಹಳ ಗೌರವದ ಸಂಗತಿ’ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

‘ರೈಸಿನಾ ಹಿಲ್ಸ್‌ನಿಂದ ಈ ಪ್ರತಿಮೆಯನ್ನು ಕಾಣುವಂತೆ ಅಳವಡಿಸಲಾಗುತ್ತದೆ. ನೇತಾಜಿ ಪ್ರತಿಮೆ ರೂಪಿಸಲು ಬಳಸುವ ಶಿಲೆಯನ್ನು ತೆಲಂಗಾಣದಿಂದ ತರಲಾಗುವುದು. ಪ್ರತಿಮೆಯ ವಿನ್ಯಾಸವನ್ನು ಸಂಸ್ಕೃತಿ ಸಚಿವಾಲಯ ಸಿದ್ಧಪಡಿಸಿದೆ. ಪ್ರತಿಮೆ ಸಿದ್ಧಪಡಿಸುವ ಕೆಲಸ ಈಗಾಗಲೇ ಆರಂಭವಾಗಿದೆ’ ಎಂದೂ ಅವರು ತಿಳಿಸಿದ್ದಾರೆ.

‘ಯೂಟ್ಯೂಬ್‌ನ 35 ಚಾನಲ್‌ಗಳ ಪ್ರಸಾರಕ್ಕೆ ತಡೆ’

ನವದೆಹಲಿ (ಪಿಟಿಐ): ದೇಶ ವಿರೋಧಿ ಮಾಹಿತಿ, ನಕಲಿ ಸುದ್ದಿಗಳನ್ನು ಪ್ರಸಾರ ಮಾಡುತ್ತಿದ್ದ ಆರೋಪದಡಿ ಯೂಟ್ಯೂಬ್‌ನ 35 ಚಾನಲ್‌ಗಳು ಮತ್ತು ಎರಡು ವೆಬ್‌ಸೈಟ್‌ಗಳ ಪ್ರಸಾರಕ್ಕೆ ಕೇಂದ್ರ ಸರ್ಕಾರ ತಡೆಯೊಡ್ಡಿದೆ.

ಜೊತೆಗೆ ಇದೇ ಆರೋಪದಡಿ ಟ್ವಿಟರ್‌ನ ಎರಡು ಖಾತೆಗಳು, ಇನ್‌ಸ್ಟಾಗ್ರಾಂನ ಎರಡು ಖಾತೆಗಳು ಮತ್ತು ಫೇಸ್‌ಬುಕ್‌ನ ಒಂದು ಖಾತೆಯನ್ನು ಬ್ಲಾಕ್ ಮಾಡಲು ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಆದೇಶಿಸಿದೆ.

ಯೂಟ್ಯೂಬ್‌ನ ಈ ಎಲ್ಲ ಚಾನಲ್‌ಗಳು, ವೆಬ್‌ಸೈಟ್‌ಗಳು, ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಪಾಕಿಸ್ತಾನ ನೆಲದಿಂದ ನಿರ್ವಹಣೆ ಮಾಡಲಾಗುತ್ತಿತ್ತು. ದೇಶ ವಿರೋಧಿಯಾದ ನಕಲಿ ಸುದ್ದಿಗಳು ಹಾಗೂ ಸೂಕ್ಷ್ಮವಾದ ಅಡಕಗಳನ್ನು ಈ ಖಾತೆಗಳ ಮೂಲಕ ಪ್ರಸಾರ ಮಾಡಲಾಗುತ್ತಿತ್ತು ಎಂದು ಸಚಿವಾಲಯವು ತಿಳಿಸಿದೆ.

ಶಾಶ್ವತ ಜ್ಯೋತಿ ‘ವಿಲೀನ’: ಸರ್ಕಾರ–ವಿಪಕ್ಷ ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶಕ್ಕಾಗಿ ಹುತಾತ್ಮರಾದ ಯೋಧರ ಸ್ಮರಣೆಗೆ ಸ್ಥಾಪಿಸಲಾಗಿರುವ ‘ಅಮರ ಜವಾನ್ ಜ್ಯೋತಿ’ಯಲ್ಲಿದ್ದ ಶಾಶ್ವತ ಜ್ಯೋತಿಯನ್ನು ನಂದಿಸಿ, ಅದನ್ನು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಇದ್ದ ಜ್ಯೋತಿಯ ಜತೆಗೆ ಶುಕ್ರವಾರ ವಿಲೀನ ಮಾಡಲಾಗಿದೆ. ಇದು ವಿರೋಧ ಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ‘ಇತಿಹಾಸವನ್ನು ಹೊಸದಾಗಿ ಬರೆಯಲು ಯತ್ನಿಸುತ್ತಿದೆ’ ಮತ್ತು ‘ನೆನಪುಗಳನ್ನು ಅಳಿಸುವ ಕಾರ್ಯತಂತ್ರ’ ಅನುಸರಿಸುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಸರ್ಕಾರವು ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ಟೀಕಾಕಾರರಿಗೆ ಸರಿಯಾದ ಮಾಹಿತಿ ಇಲ್ಲ ಎಂದು ಹೇಳಿದೆ. ಏಳು ದಶಕಗಳಲ್ಲಿ ರಾಷ್ಟ್ರೀಯ ಯುದ್ಧ ಸ್ಮಾರಕ ನಿರ್ಮಿಸಲು ವಿಫಲವಾಗಿದ್ದ ಜನರು, ಹುತಾತ್ಮರಿಗೆ ತಕ್ಕದಾದ ಕಾಯಂ ನಮನ ಸಲ್ಲಿಸಿದಾಗ ದೊಡ್ಡ ಹುಯಿಲು ಎಬ್ಬಿಸಿದ್ದಾರೆ ಎಂದು ಸರ್ಕಾರ ಹೇಳಿದೆ.

ಇಂಡಿಯಾ ಗೇಟ್‌ನಲ್ಲಿ ಇದ್ದ ಶಾಶ್ವತ ಜ್ಯೋತಿಯನ್ನು ನಂದಿಸಿಲ್ಲ. ಅದನ್ನು ರಾಷ್ಟ್ರೀಯ ಯುದ್ಧ ಸ್ಮಾರಕದ ಜ್ಯೋತಿಯಲ್ಲಿ ವಿಲೀನ ಮಾಡಲಾಗಿದೆ. 1971ರ ಯುದ್ಧದ ಹುತಾತ್ಮರ ನೆನಪಿಗೆ ಹಚ್ಚಲಾದ ಜ್ಯೋತಿಯ ಜತೆಗೆ ಒಂದೇ ಒಂದು ಹೆಸರು ಕೆತ್ತಲಾಗಿಲ್ಲ ಎಂಬುದು ಎಂತಹ ವಿಚಿತ್ರ ಎಂದೂ ಸರ್ಕಾರ ಟೀಕೆ ಮಾಡಿದೆ.

‘ಒಂದನೇ ಮಹಾ ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಹೋರಾಡಿ ಮಡಿದವರು, ಆಂಗ್ಲೊ–ಅಫ್ಘನ್ ಯುದ್ಧದಲ್ಲಿ ಹೋರಾಡಿ ಹುತಾತ್ಮರಾದವರ ಹೆಸರು ಮಾತ್ರ ಇಂಡಿಯಾ ಗೇಟ್‌ನಲ್ಲಿ ಇದೆ. ಇದು ನಮ್ಮ ವಸಾಹತುಶಾಹಿ ಇತಿಹಾಸದ ಸಂಕೇತ’ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಆದರೆ, ಎಲ್ಲ ಯುದ್ಧಗಳಲ್ಲಿ ಹುತಾತ್ಮರಾದ ಎಲ್ಲರ ಹೆಸರನ್ನೂ ಯುದ್ಧ ಸ್ಮಾರಕದಲ್ಲಿ ಕೆತ್ತಲಾಗಿದೆ ಎಂದು ಹೇಳಲಾಗಿದೆ.

ಯುದ್ಧ ಸ್ಮಾರಕದಲ್ಲಿ ಹೊಸತೊಂದು ಜ್ಯೋತಿ ಬೆಳಗಲಾಗುವುದು. ಆದರೆ, ಅಮರ ಜವಾನ್ ಜ್ಯೋತಿಯಲ್ಲಿ ಇರುವ ಜ್ಯೋತಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗುವುದು. ಈ ಜ್ಯೋತಿಯು ನಮಗೆ ಪರಂಪರೆಯಿಂದ ಬಂದಿದ್ದು ಎಂದು ರಾಷ್ಟ್ರೀಯ ಯುದ್ಧ ಸ್ಮಾರಕದ ಬಗ್ಗೆ 2019ರಲ್ಲಿ ಮಾಹಿತಿ ನೀಡಿದ್ದ ಸೇನಾಧಿಕಾರಿ ಲೆ. ಜ. ಪಿ.ಎಸ್. ರಾಜೇಶ್ವರ್ ಹೇಳಿದ್ದರು.

‘ನಮ್ಮ ದಿಟ್ಟ ಯೋಧರಿಗಾಗಿ ಹಚ್ಚಲಾಗಿದ್ದ ಶಾಶ್ವತ ಜ್ಯೋತಿಯನ್ನು ನಂದಿಸಿದ್ದು ಬಹಳ ದುಃಖದ ಸಂಗತಿ. ಕೆಲವು ಜನರಿಗೆ ದೇಶಭಕ್ತಿ ಮತ್ತು ತ್ಯಾಗವು ಅರ್ಥವೇ ಆಗುವುದಿಲ್ಲ. ಅದೇನೇ ಇರಲಿ, ನಮ್ಮ ಯೋಧರಿಗಾಗಿ ನಾವು ಅಮರ ಜವಾನ್ ಜ್ಯೋತಿಯನ್ನು ಇನ್ನೊಮ್ಮೆ ಹಚ್ಚೋಣ’ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಐಟಿಐ ಕಾರ್ಮಿಕರ ಕೂಗು ಕೇಳಿಸಿಕೊಳ್ಳದ ಸರ್ಕಾರ: ಸಿದ್ದರಾಮಯ್ಯ ಟೀಕೆ

ಬೆಂಗಳೂರು: ‘ತಮ್ಮನ್ನು ಸೇವೆಯಿಂದ ವಜಾಗೊಳಿಸಿರುವುದನ್ನು ಪ್ರಶ್ನಿಸಿ ಐಟಿಐ ಕಾರ್ಮಿಕರು ಸತತ 50 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಹೀಗಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಕಾರ್ಮಿಕರ ಕೂಗು ಕೇಳಿಸಿಕೊಳ್ಳದಿರುವುದು ವಿಪರ್ಯಾಸ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸರಣಿ ಟ್ವೀಟ್‌ಗಳ ಮೂಲಕ ಅವರು ಕೇಂದ್ರ ಸರ್ಕಾರದ ವಿರುದ್ಧ ಶುಕ್ರವಾರ ಹರಿಹಾಯ್ದಿದ್ದಾರೆ.

‘ನಿಖರ ಕಾರಣ ನೀಡದೆ 80 ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ. ಈ ಪೈಕಿ ಕೆಲವರು 30 ವರ್ಷಕ್ಕೂ ಅಧಿಕ ಕಾಲ ಕರ್ತವ್ಯ ನಿರ್ವಹಿಸಿದ್ದಾರೆ. ಪ್ರತಿಷ್ಠಿತ ಸಾರ್ವಜನಿಕ ಉದ್ದಿಮೆಯೊಂದರಿಂದ ಇಷ್ಟೊಂದು ಮಂದಿಯನ್ನು ವಜಾಗೊಳಿಸಿರುವುದು ಅಲ್ಲಿ ಹೂಡಿಕೆಯ ಕೊರತೆಯಾಗಿರುವುದಕ್ಕೆ ನಿದರ್ಶನ. ಸಾರ್ವಜನಿಕ ಉದ್ದಿಮೆಗಳಲ್ಲಿನ ವೆಚ್ಚ ಕಡಿತಕ್ಕೆ ಮುಂದಾಗಿರುವ ನರೇಂದ್ರ ಮೋದಿ ಸರ್ಕಾರವು ಅದಕ್ಕಾಗಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವ ತಂತ್ರ ಅನುಸರಿಸುತ್ತಿದೆ’ ಎಂದು ಆರೋಪಿಸಿದ್ದಾರೆ.

‘ದುಡಿಯುವ ವರ್ಗದ ಹಕ್ಕುಗಳನ್ನು ರಕ್ಷಿಸುವುದು ಸರ್ಕಾರದ ಕೆಲಸ. ಅದು ಪ್ರಜಾಪ್ರಭುತ್ವದ ದ್ಯೋತಕ. ಪ್ರಬುದ್ಧ ಸಮಾಜವೊಂದರ ಸಂಕೇತ. ಐಟಿಐ ಆಡಳಿತ ಮಂಡಳಿ ಕೂಡಲೇ ತನ್ನ ನಿರ್ಧಾರ ಹಿಂಪಡೆಯಬೇಕು. 80 ಕಾರ್ಮಿಕರನ್ನೂ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಲಂಚ ಪಡೆದ ಗ್ರಾಮ ಸಹಾಯಕನಿಗೆ ಶಿಕ್ಷೆ

ತುಮಕೂರು: ಭೂ ಪರಿವರ್ತನೆ ಮಾಡಿಸಿಕೊಡುವುದಾಗಿ ಹೇಳಿ ಲಂಚಕ್ಕೆ ಬೇಡಿಕೆ ಇಟ್ಟು, ಹಣದ ಸಹಿತ ಸಿಕ್ಕಿಬಿದ್ದ ಗ್ರಾಮ ಸಹಾಯಕ ಎಂ.ಎಚ್. ಕೆಂಪರಾಜು ಎಂಬುವವರಿಗೆ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯವು 4 ವರ್ಷ ಸಾಮಾನ್ಯ ಸಜೆ ಮತ್ತು ₹20 ಸಾವಿರ ದಂಡ ವಿಧಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಎಸ್.ಸುಧಿಂದ್ರನಾಥ್ ಆರೋಪಿಗೆ ಶಿಕ್ಷೆ ವಿಧಿಸಿದ್ದಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಅಭಿಯೋಜಕರಾಗಿ ಎನ್.ಬಸವರಾಜು ವಾದ ಮಂಡಿಸಿದ್ದರು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ • ಕಾಂಗ್ರೆಸ್‌ಗೆ ಬೆಮೆಲ್ ಕಾಂತರಾಜು ಸೇರ್ಪಡೆ

‘ಬಿಜೆಪಿಯ ಬಾಲಂಗೋಚಿ ಜೆಡಿಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ ಬಿಜೆಪಿಯ ಕೆಟ್ಟ ಸರ್ಕಾರಕ್ಕೆ ಬಾಲಂಗೋಚಿಯಂತೆ ಜೆಡಿಎಸ್ ಪಕ್ಷ ಕೆಲಸ ಮಾಡುತ್ತಿದೆ. ಜೆಡಿಎಸ್‌ನಿಂದ ಏನೂ ಆಗುವುದಿಲ್ಲ. ಬೇಕಾದಾಗ ಬಿಜೆಪಿ ಜತೆ ಇರುತ್ತಾರೆ, ಆಮೇಲೆ ಕಾಂಗ್ರೆಸ್ ಜತೆ ಬರುತ್ತಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ವಿಧಾನ ಪರಿಷತ್‌ನ ಮಾಜಿ ಸದಸ್ಯ ಕಾಂತರಾಜು (ಬೆಮೆಲ್ ಕಾಂತರಾಜು) ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿದ ಅವರು, ‘ಜೆಡಿಎಸ್‌ನವರು ಕೇವಲ ಜಾತಿಯ ಹೆಸರು ಹೇಳಿಕೊಂಡು ರಾಜಕಾರಣ ಮಾಡುತ್ತಾರೆ. ಅವರಿಗೆ ಸಿದ್ಧಾಂತವಿಲ್ಲ. ಅದು ರಾಜಕೀಯ ಪಕ್ಷವೇ ಅಲ್ಲ. ಅವಕಾಶವಾದಿ ರಾಜಕಾರಣ ಮಾಡುವ ಜೆಡಿಎಸ್ ಪಕ್ಷವನ್ನು ತುಮಕೂರಿನಿಂದ ಓಡಿಸಿ’ ಎಂದರು.

ದೇಶದಲ್ಲಿ ಕಾಂಗ್ರೆಸ್ ಪಕ್ಷ ಮಾತ್ರ ಸಿದ್ಧಾಂತದ ಮೇಲೆ ರಾಜಕೀಯ ಮಾಡುತ್ತಿದೆ. ಬಿಜೆಪಿಯು ಆರ್‌ಎಸ್‌ಎಸ್‌ನ ಮುಖವಾಡ ಮಾತ್ರ. ಅದಕ್ಕೆ ರಾಜಕೀಯ ಸಿದ್ಧಾಂತ ಇಲ್ಲ. ದೇವರು, ಧರ್ಮ, ಜಾತಿಯಂತಹ ವಿಚಾರಗಳನ್ನು ಮುಂದಿಟ್ಟುಕೊಂಡು ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಸಾಲ ಮಾಡಿದ್ದೇ ಸಾಧನೆ: ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ವರ್ಷಗಳಾಗಿವೆ. ನರೇಂದ್ರ ಮೋದಿ ಪ್ರಧಾನಿಯಾಗುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸಾಲ ₹ 53.11 ಲಕ್ಷ ಕೋಟಿ ಇತ್ತು. ಈಗ 135.78 ಲಕ್ಷ ಕೋಟಿಗೆ ಏರಿಕೆಯಾಗಿದೆ. ಸಾಲ ಮಾಡಿದ್ದೇ ಮೋದಿ ಸರ್ಕಾರದ ಸಾಧನೆ ಎಂದು ಸಿದ್ದರಾಮಯ್ಯ ಟೀಕಿಸಿದರು.

‘ಕೇಂದ್ರ ಸರ್ಕಾರ ರೂಪಿಸಿದ ಕೃಷಿ ವಿರೋಧಿ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ರೈತರು ಒಂದು ವರ್ಷ ನಿರಂತರ ಪ್ರತಿಭಟನೆ ನಡೆಸಿದರು. 702 ರೈತರು ಪ್ರತಿಭಟನೆ ಸಂದರ್ಭದಲ್ಲೇ ಮೃತಪಟ್ಟರು. ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ಈ ಕಾಯ್ದೆಗಳನ್ನು ಹಿಂಪಡೆದಿದೆ. ಮೋದಿ ಅವರಿಗೆ ಮಾನ, ಮರ್ಯಾದೆ ಇದ್ದಿದ್ದರೆ ಈ ವೇಳೆಗೆ ರಾಜೀನಾಮೆ ನೀಡಿರುತ್ತಿದ್ದರು’ ಎಂದರು.

ಬೇಷರತ್ ಬರುವವರಿಗೆ ಪ್ರವೇಶ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ವಿವಿಧ ಪಕ್ಷಗಳ ಹಲವು ಮುಖಂಡರು ಕಾಂಗ್ರೆಸ್ ಸೇರಲು ಆಸಕ್ತಿ ತೋರಿದ್ದಾರೆ. ನನ್ನ ಮತ್ತು ಪಕ್ಷದ ಸಮಿತಿಯ ಮುಂದೆ ಹಲವು ಅರ್ಜಿಗಳಿವೆ. ಪಕ್ಷದ ನಾಯಕತ್ವ ಮತ್ತು ಸಿದ್ಧಾಂತ ಒಪ್ಪಿಕೊಂಡು ಬೇಷರತ್ ಆಗಿ ಬರುವವರಿಗೆ ಪಕ್ಷಕ್ಕೆ ಪ್ರವೇಶ ನೀಡಲಾಗುವುದು’ ಎಂದು ತಿಳಿಸಿದರು.

ಕಾಂತರಾಜು ಮಾತನಾಡಿ, ‘ಕಾಂಗ್ರೆಸ್‌ನ ನಾಯಕತ್ವ ಮತ್ತು ಸಿದ್ಧಾಂತವನ್ನು ಒಪ್ಪಿಕೊಂಡು ಪಕ್ಷ ಸೇರಿದ್ದೇನೆ. ಪಕ್ಷದ ನಾಯಕರು ಇಟ್ಟಿರುವ ನಂಬಿಕೆಗೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತೇನೆ’ ಎಂದರು.

ಶಾಸಕ ಡಾ.ಜಿ. ಪರಮೇಶ್ವರ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಆರ್. ಧ್ರುವ ನಾರಾಯಣ, ಮಾಜಿ ಸಚಿವ ಟಿ.ಬಿ. ಜಯಚಂದ್ರ, ವಿಧಾನ ಪರಿಷತ್ ಸದಸ್ಯ ಎಸ್. ರವಿ ಇದ್ದರು.



ಕಾಂತರಾಜುಗೆ ಕಾಂಗ್ರೆಸ್ ಬಾವುಟ ನೀಡಿ ಪಕ್ಷಕ್ಕೆ ಸ್ವಾಗತಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕ ಜಿ.ಪರಮೇಶ್ವರ ಇದ್ದಾರೆ ಪ್ರಜಾವಾಣಿ ಚಿತ್ರ

‘ಲಂಚ ಪಡೆದಿದ್ದು ಹೇಳಿದರೆ ನಿವೃತ್ತಿ’

‘ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಇಷ್ಟೊಂದು ಭ್ರಷ್ಟ ಸರ್ಕಾರವನ್ನು ಎಂದೂ ನೋಡಿಲ್ಲ. ರಾಜ್ಯದ ಬಿಜೆಪಿ ಸರ್ಕಾರದಲ್ಲಿ ಗುತ್ತಿಗೆದಾರರಿಂದ ಶೇಕಡ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪಿಸಿದ್ದಾರೆ. ನಾನು 13 ಬಜೆಟ್ ಮಂಡಿಸಿದ್ದೇನೆ. ಎಲ್‌ಒಸಿ ಅಥವಾ ಇತರೆ ಕೆಲಸಕ್ಕೆ ಒಂದು ರೂಪಾಯಿ ಲಂಚ ಕೊಟ್ಟಿದ್ದೇನೆ ಎಂದು ಒಬ್ಬ ಗುತ್ತಿಗೆದಾರ ಹೇಳಿದರೂ ರಾಜಕೀಯ ನಿವೃತ್ತಿ ಪಡೆಯುವೆ’ ಎಂದು ಸಿದ್ದರಾಮಯ್ಯ ಅವರು ಸವಾಲು ಹಾಕಿದರು.

‘ಇಡಬ್ಲ್ಯುಎಸ್‌ಗೆ ಪಂಚಮಸಾಲಿ ಲಿಂಗಾಯತರ ಸೇರಿಸಿ’

ಪ್ರಜಾವಾಣಿ ವಾರ್ತೆ


ಹುಣಸೂರು: ‘ಪಂಚಮಸಾಲಿ ಲಿಂಗಾಯತರನ್ನು ಕೇಂದ್ರದ ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಗೆ ರಾಜ್ಯ ಕಾಯಕ ಸಮುದಾಯಗಳ ಒಕ್ಕೂಟ ಮನವಿ ಮಾಡಿದೆ’ ಎಂದು ಒಕ್ಕೂಟದ ಅಧ್ಯಕ್ಷ ಪುಟ್ಟಸಿದ್ದಶೆಟ್ಟಿ ಹೇಳಿದರು.

‘ರಾಜ್ಯದ ಪ್ರವರ್ಗ 1 ಮತ್ತು 2(ಎ) ಗಳಿಗೆ ನೀಡಿರುವ ಮೀಸಲಾತಿಯಲ್ಲಿ ಪಂಚಮಸಾಲಿ ಲಿಂಗಾಯತರನ್ನು ಸೇರಿಸದಂತೆ ಒಕ್ಕೂಟವು ಕಳೆದ 4 ವರ್ಷಗಳಿಂದ ಒತ್ತಡ ಹಾಕಿದೆ. ಪಂಚಮಸಾಲಿ ಲಿಂಗಾಯತರು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ್ದು, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಹೀಗಾಗಿ, ಆರ್ಥಿಕ ಸದೃಢಕ್ಕಾಗಿ ಇವರನ್ನು ಇಡಬ್ಲ್ಯುಎಸ್ ಪಟ್ಟಿಗೆ ಸೇರಿಸಲಿ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಪಂಚಮಸಾಲಿ ಲಿಂಗಾಯತರು ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹೋರಾಟ ನಡೆಸಿ ವಿಫಲರಾಗಿದ್ದು, ಈಗ ಸಚಿವ ಮುರುಗೇಶ ನಿರಾಣಿ ನೇತೃತ್ವದಲ್ಲಿ ಹೋರಾಟಕ್ಕೆ ಸಜ್ಜಾಗಿದ್ದಾರೆ. ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು’ ಎಂದು ಆಗ್ರಹಿಸಿದರು.

‘ಕೇಂದ್ರ ಸರ್ಕಾರದ ಮಂಡಲ್ ವರದಿ, ಹಾವನೂರು ವರದಿ ಮತ್ತು ನಾಗನಗೌಡ ವರದಿಗಳಲ್ಲಿ ಪಂಚಮಸಾಲಿ ಲಿಂಗಾಯತ ಸಮುದಾಯವನ್ನು ಇಡಬ್ಲ್ಯುಎಸ್ ಪಟ್ಟಿಗೆ ಸೇರಿಸಿರುವ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ’ ಎಂದರು.

‘ರಾಜ್ಯದಲ್ಲಿ ಕಾಯಕ ಸಮುದಾಯಕ್ಕೆ ಸೇರಿದ 197 ಜಾತಿಗಳಿದ್ದು, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದ್ದು, ಈ ಸಮುದಾಯಕ್ಕೆ ಮೀಸಲಾತಿ ಅನಿವಾರ್ಯವಾಗಿದೆ’ ಎಂದು ಹೇಳಿದರು.



ಕಾಯಕ ಸಮುದಾಯಗಳ ಪ್ರಾಧಿಕಾರ ಸ್ಥಾಪಿಸಿ ₹1 ಸಾವಿರ ಕೋಟಿ ಅನುದಾನ ನೀಡಬೇಕು. ಅಸಂಘಟಿತ ವರ್ಗವನ್ನು ಮುಖ್ಯವಾಹಿನಿಗೆ ತರಬೇಕು.

ಪುಟ್ಟಸಿದ್ದಶೆಟ್ಟಿ
ರಾಜ್ಯ ಕಾಯಕ ಸಮುದಾಯಗಳ ಅಧ್ಯಕ್ಷ

ಹುಲಿಗಣತಿಗೆ ಸಕಲ ಸಿದ್ಧತೆ

ಪ್ರಜಾವಾಣಿ ವಾರ್ತೆ

ಹುಲಿಗಳ ಸಂಖ್ಯೆ (2018ರ ಗಣತಿ)

ರಕ್ಷಿತಾರಣ್ಯ	ಹುಲಿಗಳು
ನಾಗರಹೊಳೆ	125
ಬಂಡೀಪುರ	173
ಬಿಆರ್‌ಟಿ	52ರಿಂದ 80

ಮುಖ್ಯಾಂಶಗಳು

- ನಾಗರಹೊಳೆಯಲ್ಲಿ ಜ.23 ರಿಂದ ಆರಂಭ
- ಈ ಬಾರಿ ಪೂರ್ಣ ಪ್ರಮಾಣದಲ್ಲಿ ಎಂ–ಸ್ಟ್ರೈಪ್ಸ್ ಆ್ಯಪ್ ಬಳಕೆ
- ಹುಲಿಗಳ ಜತೆ ಇತರ ಪ್ರಾಣಿಗಳ ಗಣತಿ

ಚಾಮರಾಜನಗರ/ ಮೈಸೂರು: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ದೇಶದಾದ್ಯಂತ ನಡೆಸಲಿರುವ ಹುಲಿಗಣತಿ ಕಾರ್ಯಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲೂ ಸಕಲ ಸಿದ್ಧತೆ ನಡೆದಿದೆ.

ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಶನಿವಾರದಿಂದ (ಜ.22) ಗಣತಿ ಆರಂಭವಾಗಲಿದ್ದು, ಬಿಳಿಗಿರಿರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದಲ್ಲಿ ಇದೇ 27ರಿಂದ ಶುರುವಾಗಲಿದೆ. ಮೈಸೂರು ಜಿಲ್ಲೆಯ ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಜ.23 ರಿಂದ ಗಣತಿ ನಡೆಯಲಿದೆ.

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಗಣತಿ ನಡೆಯುತ್ತದೆ. 2018ರ ಗಣತಿ ಪ್ರಕಾರ, ಬಂಡೀಪುರದಲ್ಲಿ 173 ಹುಲಿಗಳಿವೆ. ಬಿಆರ್‌ಟಿಯಲ್ಲಿ 52ರಿಂದ 80ರವರೆಗೂ ಹುಲಿಗಳಿವೆ ಎಂದು ವರದಿ ಹೇಳಿದೆ.

‘ಈ ಬಾರಿ ಕೋವಿಡ್ ಭೀತಿಯಿಂದ ಸ್ವಯಂಸೇವಕರು ಭಾಗವಹಿಸುತ್ತಿಲ್ಲ, ಇಲಾಖೆಯ 300 ಸಿಬ್ಬಂದಿ ಭಾಗವಹಿಸುತ್ತಾರೆ. ಫೆ.8ರವರೆಗೆ ಮೂರು ಹಂತಗಳಲ್ಲಿ ಗಣತಿ ನಡೆಯಲಿದೆ’ ಎಂದು ಬಂಡೀಪುರ ಹುಲಿ ಯೋಜನೆ ಪ್ರಭಾರ ನಿರ್ದೇಶಕ ಕರಿಕಾಳನ್ ತಿಳಿಸಿದರು.

ನಾಗರಹೊಳೆಯಲ್ಲಿ ನಾಳೆಯಿಂದ: ‘ನಾಗರಹೊಳೆಯಲ್ಲಿ ಜ.23 ರಿಂದ ಫೆ.5ರ ವರೆಗೆ ಗಣತಿ ನಡೆಯಲಿದೆ. ಅಖಿಲ ಭಾರತ ಮಟ್ಟದಲ್ಲಿ ಕೊನೆಯದಾಗಿ 2018 ರಲ್ಲಿ ಹುಲಿ ಗಣತಿ ಕಾರ್ಯ ನಡೆದಿತ್ತು. ಆಗ ನಾಗರಹೊಳೆ ಅರಣ್ಯದಲ್ಲಿ ಒಟ್ಟು 125 ಹುಲಿಗಳು ಪತ್ತೆಯಾಗಿದ್ದವು. ಪ್ರತಿ ನೂರು ಚದರ ಕಿ.ಮೀ.ಗೆ 12 ಹುಲಿಗಳು ವಾಸವಿರುವುದು ದೃಢಪಟ್ಟಿದೆ. ಹುಲಿಗಳ ಸಾಂದ್ರತೆಯಲ್ಲಿ ನಾಗರಹೊಳೆ, ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ’ ಎಂದು ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಹುಲಿ ಯೋಜನಾ ನಿರ್ದೇಶಕ ಮಹೇಶ್ ಕುಮಾರ್ ತಿಳಿಸಿದರು.

ಆ್ಯಪ್ ಮೂಲಕ ಗಣತಿ: ಈ ಬಾರಿ ಪೂರ್ಣ ಪ್ರಮಾಣದಲ್ಲಿ ಎಂ–ಸ್ಟ್ರೈಪ್ಸ್ (M-STrIPES–ಮಾನಿಟರಿಂಗ್ ಸಿಸ್ಟಮ್ ಫಾರ್ ಟೈಗರ್ಸ್: ಇಂಟೆನ್ಸಿವ್ ಪ್ರೊಟೆಕ್ಷನ್ ಆ್ಯಂಡ್ ಇಕಾಲಾಜಿಕಲ್ ಸ್ಟೇಟಸ್’) ಎಂಬ ಆ್ಯಪ್ ಮೂಲಕ ಗಣತಿ ನಡೆಯಲಿದೆ. ಆ್ಯಪ್ ಬಳಕೆ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಈ ಬಾರಿ ಹುಲಿಗಳ ಜತೆಯಲ್ಲೇ ಇತರ ಮಾಂಸಾಹಾರಿ ಪ್ರಾಣಿಗಳು, ಆನೆ ಸೇರಿದಂತೆ ದೊಡ್ಡ ಸಸ್ಯಾಹಾರಿ ಪ್ರಾಣಿಗಳ ಗಣತಿಯೂ ನಡೆಯಲಿದೆ.

ಹುಲಿ ಗಣತಿ: ಸಫಾರಿ ವೇಳಾಪಟ್ಟಿ ಬದಲು

ಹುಣಸೂರು: ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಜ.23ರಿಂದ ಫೆ.5ರವರೆಗೆ ಹುಲಿ ಗಣತಿ ಕಾರ್ಯ ನಡೆಯುತ್ತಿರುವುದರಿಂದ ಪ್ರವಾಸಿಗರಿಗೆ ಸಫಾರಿ ವೇಳಾಪಟ್ಟಿ ಬದಲಾಯಿಸಲಾಗಿದೆ.

ಕಾಕನಕೋಟೆ: ಜ.23ರಿಂದ 25ರವರೆಗೆ ಪ್ರವಾಸಿಗರಿಗೆ ಬೆಳಗಿನ ಸಫಾರಿ ಮತ್ತು ದೋಣಿ ಸಫಾರಿ ರದ್ದುಗೊಳಿಸಿದ್ದು, ಮಧ್ಯಾಹ್ನದ ಸಫಾರಿ ಇರಲಿದೆ. ಜ.26ರಿಂದ 29ರವರೆಗೆ ಸಫಾರಿಯಲ್ಲಿ ಬದಲಾವಣೆ ಇಲ್ಲ. ಜ.30ರಿಂದ ಫೆ.1ರವರೆಗೆ ಬೆಳಗಿನ ಸಫಾರಿ ರದ್ದುಗೊಳಿಸಿದ್ದು, ದೋಣಿ ಸಫಾರಿ, ಮಧ್ಯಾಹ್ನದ ಸಫಾರಿಯಲ್ಲಿ ಬದಲಾವಣೆ ಇಲ್ಲ.

ನಾಗರಹೊಳೆ: ಜ.23ರಿಂದ 25ರವರೆಗೆ ಬೆಳಗಿನ ಸಫಾರಿ ರದ್ದುಗೊಳಿಸಿದ್ದು, ಮಧ್ಯಾಹ್ನದ ಸಫಾರಿ ನಡೆಯಲಿದೆ. ಜ.26ರಂದು ಸಫಾರಿ ನಡೆಯಲಿದ್ದು, ಜ.27ರಿಂದ ಫೆ.1ರವರೆಗೆ ಬೆಳಗಿನ ಸಫಾರಿ ರದ್ದುಗೊಳಿಸಿದೆ.

ಮಾಹಿತಿಗೆ ಕಾಕನಕೋಟೆ–7795348593, ನಾಗರಹೊಳೆ–8970414433, ವೀರನಹೊಸಹಳ್ಳಿ– 9945419300, ಕಬಿನಿ ಜಂಗಲ್ ಲಾಡ್ಜ್– 9482808658, ವೀರನ ಹೊಸಹಳ್ಳಿ ಜಂಗಲ್ ಲಾಡ್ಜ್–7899236332 ಸಂಪರ್ಕಿಸಬಹುದು ಎಂದು ಹುಲಿ ಯೋಜನಾ ನಿರ್ದೇಶಕ ಮಹೇಶ್ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿಂಗಟಾಲೂರು ಯೋಜನೆ: ಸಿ.ಎಂ. ಸೂಚನೆ

ಬೆಂಗಳೂರು: ಸಿಂಗಟಾಲೂರು ಏತ ನೀರಾವರಿ ಯೋಜನೆಯ ಪ್ಯಾಕೇಜ್ 6 ರ ಟೆಂಡರ್ ಅನ್ನು ಮಾರ್ಚ್ 31 ರೊಳಗೆ ಕರೆದು ಯೋಜನೆಯನ್ನು ಡಿಸೆಂಬರ್ ಒಳಗೆ ಪೂರ್ಣಗೊಳಿಸಲು ಸಿ.ಎಂ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಶುಕ್ರವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಶಿವಸೇನಾ ಕಾರ್ಯಕರ್ತರಿಂದ ಮುತ್ತಿಗೆ’

ಬೆಳಗಾವಿ: ‘ಬೆಳಗಾವಿ, ಬೆಂಗಳೂರಿನಲ್ಲಿ ಶಿವಸೇನಾ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರ ಮೇಲೆ ದಾಖಲಿಸಿರುವ ಪ್ರಕರಣ ವಾಪಸ್ ಪಡೆಯಲು ಆಗ್ರಹಿಸಿ ಜ.22ರಂದು ಬೆಳಗಾವಿಗೆ ಮುತ್ತಿಗೆ ಹಾಕಲಾಗುವುದು’ ಎಂದು ಆ ಸಂಘಟನೆಗಳವರು ತಿಳಿಸಿರುವುದಾಗಿ ಮರಾಠಿ ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಹಾರಾಷ್ಟ್ರದ ಕೊಲ್ಹಾಪುರದಿಂದ ಹೊರಟು ಬೆಳಗಾವಿಗೆ ಮುತ್ತಿಗೆ ಹಾಕಲು ತಯಾರಿ ನಡೆಸಿದ್ದಾರೆ. ಅಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಅಭಿಷೇಕ ಮಾಡಿ ಪಾದ ಯಾತ್ರೆಗೆ ಚಾಲನೆ ಆರಂಭಿಸಲಿದ್ದಾರೆ. ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ವಿವಿಧ ನದಿಗಳ ನೀರಿನಿಂದ ಅಭಿಷೇಕ ಮಾಡುತ್ತಾ ಬೆಳಗಾವಿ ಕಡೆಗೆ ತೆರಳುತ್ತೇವೆ ಎಂದು ಅವರು ಬೆದರಿಕೆ ಹಾಕಿರುವುದು ವರದಿಯಾಗಿದೆ.

ಇಲ್ಲಿ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನ ಬಹಿಷ್ಕರಿಸಿ ಎಂಇಎಸ್‌ನವರು ವ್ಯಾಕ್ಸಿನ್ ಡಿಪೊದಲ್ಲಿ ನಡೆಸಿದ್ದ ಮಹಾಮೇಳಾವ ವೇಳೆ ಎಂಇಎಸ್ ಅಧ್ಯಕ್ಷ ದೀಪಕ ದಳವಿ ಮುಖಕ್ಕೆ ಕನ್ನಡ ಹೋರಾಟಗಾರರು ಮಸಿ ಬಳಿದಿದ್ದರು. ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ, ಪ್ರತಿಯಾಗಿ ಮಹಾರಾಷ್ಟ್ರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡ ಧ್ವಜಕ್ಕೆ ಬೆಂಕಿ ಹಚ್ಚಿದ್ದರು.

ಶಿವಾಜಿಗೆ ಅವಮಾನ ಖಂಡಿಸಿ ನಡೆದಿದ್ದ ಪ್ರತಿಭಟನೆ ನಂತರ ನಗರದ ವಿವಿಧೆಡೆ ಕಲ್ಲುತೂರಾಟ ನಡೆಸಿದ್ದ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿದ ಆರೋಪದ ಮೇಲೆ 38 ಮಂದಿ ಎಂಇಎಸ್ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಹಾಯಕ್ಕೆ ಬರುವಂತೆ ಆ ಸಮಿತಿಯ ಮುಖಂಡರು ಮಹಾರಾಷ್ಟ್ರದ ಹೋರಾಟಗಾರರ ಮೊರೆ ಹೋಗಿದ್ದಾರೆ ಎನ್ನಲಾಗಿದೆ.

‘ರೈತರಿಗೆ ನ್ಯಾಯ ಕೊಡದ ಖಾಸಗಿ ವಿಮಾ ಕಂಪನಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ವಿಮಾ ಕಂಪನಿಗಳು ಸರಿಯಾದ ಸಮಯಕ್ಕೆ ರೈತರಿಗೆ ಬೆಳೆನಷ್ಟದ ವಿಮಾ ಹಣ ತಲುಪಿಸುತ್ತಿಲ್ಲ. ಕೇವಲ ಅಂಕಿ ಸಂಖ್ಯೆಗಳನ್ನಷ್ಟೇ ಅಧಿಕಾರಿಗಳಿಗೆ ತೋರಿಸುತ್ತಿವೆ. ಇಂತಹ ಕಂಪನಿಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಿ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ಕೇಂದ್ರ ರಸಗೊಬ್ಬರ ಹಾಗೂ ರಾಸಾಯನಿಕ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಸಮ್ಮುಖದಲ್ಲಿ ಶುಕ್ರವಾರ ಇಲ್ಲಿ ನಡೆದ ಸಭೆಯಲ್ಲಿ, ಖಾಸಗಿ ವಿಮಾ ಕಂಪನಿಗಳ ಧೋರಣೆ ಬಗ್ಗೆ ಪಾಟೀಲ ಕಿಡಿ ಕಾರಿದರು.

ಅಂಕಿಸಂಖ್ಯೆಗಳಿಂದ ರೈತರಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಸರ್ಕಾರಿ ವಿಮಾ ಕಂಪನಿಗಳು ರೈತರಿಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತಿವೆ. ಖಾಸಗಿ ಕಂಪನಿಗಳಿಗೆ ಇದು ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದ ಪಾಟೀಲ, ರೈತ ಸಂಪರ್ಕ ಕೇಂದ್ರಗಳಲ್ಲಿ ವಿಮಾ ಕಂಪನಿಗಳ ಕಚೇರಿ ತೆರೆಯಬೇಕೆಂದು ಹಿಂದೆಯೇ ಸೂಚಿಸಿದ್ದರೂ ಅದು ಜಾರಿಯಾಗಿಲ್ಲ. ಹದಿನೈದು ದಿನದೊಳಗೆ ಎಲ್ಲ ಖಾಸಗಿ ವಿಮಾ ಕಂಪನಿಗಳ ಪ್ರತಿನಿಧಿಗಳನ್ನು ಕರೆದು ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಿ ಎಂದು ಹೇಳಿದರು.



ಬಿ.ಸಿ. ಪಾಟೀಲ

‘ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ವಿಮಾ ಪರಿಹಾರ ಅಥವಾ ರಸಗೊಬ್ಬರದ ವಿಚಾರದಲ್ಲಾಗಲಿ ರಾಜೀ ಬೇಕಾಗಿಲ್ಲ. ಯಾವ ಮುಲಾಜೂ ಇಟ್ಟುಕೊಳ್ಳಬೇಡಿ’ ಎಂದು ಭಗವಂತ ಖೂಬಾ ಅಧಿಕಾರಿಗಳಿಗೆ ಸೂಚಿಸಿದರು.

ರೈತರ ಪರವಾಗಿ ಅಧಿಕಾರಿಗಳು ಕೆಲಸ ಮಾಡಬೇಕು. ಅಧಿಕಾರಿಗಳಲ್ಲಿ ಪರಸ್ಪರ ಸಮನ್ವಯ ಇರಬೇಕು. ಬೆಳೆ ವಿಮೆಗೆ ನೋಂದಣಿಯಾಗಿರುವ ಜಿಲ್ಲಾವಾರು ಪ್ರದೇಶ, ಬೆಳೆಗಳ ಬಗ್ಗೆ ರೈತರ ಮಾಹಿತಿ ಪಡೆದು ಸಾಂಖ್ಯಿಕ ಇಲಾಖೆ ಅಂಕಿಅಂಶಗಳ ಜತೆ ಪರಿಶೀಲನೆ ಮಾಡಿ ಒಂದು ವಾರದೊಳಗೆ ವರದಿ ನೀಡಬೇಕು ಎಂದು ಕೃಷಿ ಆಯುಕ್ತರಿಗೆ ಖೂಬಾ ಸೂಚಿಸಿದರು.

ಕಸಾಪ: ವಿದ್ಯಾರ್ಥಿಗಳಿಗೆ ನೆರವು


ಬೆಂಗಳೂರು: ‘ಕೇರಳದ ಕಾಸರಗೋಡಿನಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಆರ್ಥಿಕ ನೆರವು ನೀಡಲಿದೆ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಘೋಷಿಸಿದ್ದಾರೆ.

‘ಫೆ.2, 3ರಂದು ಕನ್ನಡ ಸ್ನಾತಕೋತ್ತರ ಪ್ರವೇಶಕ್ಕಾಗಿ ಸ್ಥಳದಲ್ಲೇ ಪ್ರವೇಶಾತಿ ನೀಡಲು ವಿಶ್ವವಿದ್ಯಾಲಯ ನಿರ್ಧರಿಸಿದೆ. ಕಾಸರಗೋಡು ಕೈಯ್ಯಾರ ಕಿಞ್ಞಣ್ಣ ರೈ ಹಾಗೂ ರಾಷ್ಟ್ರಕವಿ ಗೋವಿಂದ ಪೈ ಅವರ ಕಾರ್ಯಕ್ಷೇತ್ರವಾಗಿದೆ. ಉಡುಪಿ, ದಕ್ಷಿಣಕನ್ನಡ, ಸೇರಿ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಕನ್ನಡ ಎಂ.ಎ ಪದವಿಗೆ ಪ್ರವೇಶ ಪಡೆದಿರಬೇಕು. ಕನಿಷ್ಠ 25 ವಿದ್ಯಾರ್ಥಿಗಳು ಸೇರಿಕೊಂಡರೆ ಕನ್ನಡ ವಿಭಾಗ ಉಳಿಯುತ್ತದೆ’ ಎಂದಿದ್ದಾರೆ.

‘ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈಗಾಗಲೇ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೆ ವಾರ್ಷಿಕ ₹ 25 ಸಾವಿರ ನೆರವು ನೀಡುತ್ತಿದೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ ಹಣ ಸಂಗ್ರಹಿಸಿ, ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಪರಿಷತ್ತಿನ ವತಿಯಿಂದಲೂ ನೆರವು ನೀಡಲಾಗುವುದು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ರಂಗಕರ್ಮಿ ಸೀತಾರಾಮಾಚಾರ್



ಸೀತಾರಾಮಾಚಾರ್

ತೀರ್ಥಹಳ್ಳಿ: ರಂಗಕರ್ಮಿ ಯು. ಸೀತಾರಾಮಾಚಾರ್ (84) ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ತೀರ್ಥಹಳ್ಳಿ ಪಟ್ಟಣದ ರುದ್ರಭೂಮಿ ಯಲ್ಲಿ ಅಂತ್ಯಕ್ರಿಯೆ ನೆರವೇರಿತು.

2012ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದರು. ರಂಗ ನಿರ್ದೇಶಕರಾಗಿದ್ದ ಅವರು ‘ತಬರನಕಥೆ’, ‘ಕುಬಿ ಮತ್ತು ಇಯಾಲ’, ‘ಮೈಸೂರು ಮಲ್ಲಿಗೆ’ ಚಲನಚಿತ್ರಗಳಲ್ಲಿ ನಟಿಸಿದ್ದರು. ಧಾರಾವಾಹಿಗಳಲ್ಲೂ ಅವರು ಅಭಿನಯಿಸಿದ್ದರು.

'ನಿಗಮ–ಮಂಡಳಿಗೆ ನೇಮಕ ಶೀಘ್ರ'

ಬೆಂಗಳೂರು: ನಿಗಮ– ಮಂಡಳಿಗಳಲ್ಲಿ ಖಾಲಿ ಇರುವ ಅಧ್ಯಕ್ಷ ಹುದ್ದೆಗಳನ್ನು ಭರ್ತಿ ಮಾಡುವುದರ ಜತೆಗೆ ವಿವಿಧ ನಿಗಮ ಮಂಡಳಿಗಳಲ್ಲಿ ಒಂದೂವರೆ ವರ್ಷ ಪೂರ್ಣಗೊಳಿಸಿರುವ ಅಧ್ಯಕ್ಷರನ್ನು ಬದಲಾವಣೆ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಮುಂದಿನ ವಾರ ಆದೇಶ ಹೊರಬೀಳುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಪಕ್ಷದ ಸಂಘಟನಾ ಕಾರ್ಯದರ್ಶಿ ಅರುಣ್‌ಕುಮಾರ್ ಜತೆ ಶುಕ್ರವಾರ ರಾತ್ರಿ ಈ ಸಂಬಂಧ ಚರ್ಚೆ ನಡೆಸಿದ್ದಾರೆ. ಈ ವೇಳೆ ಪಕ್ಷ ನೀಡಿರುವ ಪಟ್ಟಿಯನ್ನು ಅಂತಿಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುಮಾರು 25 ನಿಗಮ–ಮಂಡಳಿಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಲು ಒಪ್ಪಿರುವ ಮುಖ್ಯಮಂತ್ರಿಯವರು, ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿದ್ದಾರೆ. ಕೆಲವೇ ದಿನಗಳಲ್ಲಿ ಆದೇಶ ಹೊರಬೀಳಲಿದೆ. ಈ ಬಾರಿ ಪಕ್ಷದ ನಿಷ್ಠಾವಂತರು, ಬಹಳ ಕಾಲದಿಂದ ಕೆಲಸ ಮಾಡಿದವರಿಗೆ ಆದ್ಯತೆ ಸಿಗಲಿದೆ ಎಂದು ತಿಳಿಸಿವೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಸಂ.033/ಪಿಬಿ/ಗುತ್ತಿಗೆ/ಎಸ್‌ಸಿಪಿ–ಟಿಎಸ್‌ಪಿ/2021–22/5040 ದಿನಾಂಕ : 19–01–2022

ಮುಂದೂಡಿದ ಪ್ರಕಟಣೆ ನಂ.01

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/ಎಸ್‌ಸಿಪಿ–ಟಿಎಸ್‌ಪಿ/2021–22/4952/ದಿನಾಂಕ : 14–01–2022ರಲ್ಲಿನ ಕಾಮಗಾರಿ ಕ್ರಸಂ.20 (ನಂ.146414), ಕ್ರಸಂ.24 (ನಂ.146500), ಕ್ರಸಂ.25 (ನಂ.146539) & ಕ್ರಸಂ.29 (ನಂ.146418)ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ.
(1) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ವೇಳೆ : **29–01–2022** ರ ಸಾಯಂಕಾಲ 04–00 ಗಂಟೆಯವರೆಗೆ (2) ಗುತ್ತಿಗೆ ಪತ್ರಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : **31–01–2022**ರ ಸಾಯಂಕಾಲ 04–30 ಗಂಟೆಗೆ (3) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ವೇಳೆ : **03–02–2022** ಬೆಳ್ಳಿಗ್ಗೆ 11.00 ಗಂಟೆಗೆ

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಎಂಸಿಎ/384/2021–22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ

ಸಂಖ್ಯೆಃಕಾ.ಇಂ/ಲೋ.ಇ.ವಿ/ಹಾಸನ/ಕಿ.ಇಂ.1/2021–22 ದಿನಾಂಕಃ– 20.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಪ್ರಕಟಣೆ ಸಂಖ್ಯೆ: 35/2021–22 ದಿನಾಂಕ:20.01.2022 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3&4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹಾಸನ ತಾಲ್ಲೂಕಿನ 7 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಕನಿಷ್ಠ ಟೆಂಡರ್ ಮೊತ್ತ ರೂ.100.00 ಲಕ್ಷ ಹಾಗೂ ಗರಿಷ್ಠ ಟೆಂಡರ್ ಮೊತ್ತ ರೂ.400.00 ಲಕ್ಷ .ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 31.01.2022–16.00ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ ಹಾಸನ ವಿಭಾಗ, ಹಾಸನ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು

ಸಂಖ್ಯೆ: ಕರಾಸಾ/ಕೇಕ/ಸಾಸಂಅ/0745/2021–22 ದಿನಾಂಕ: 21.01.2022

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಸೇವೆಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ / ಸಲಹೆಗಳಿಗಾಗಿ ಮನವಿ

ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ವರದಿ ನೀಡಲು ಕರ್ನಾಟಕ ರಾಜ್ಯ ಸರ್ಕಾರವು ಶ್ರೀ. ಎಂ.ಆರ್. ಶ್ರೀನಿವಾಸ ಮೂರ್ತಿ, ಐಎಎಸ್ (ನಿವೃತ್ತ) ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ಸದರಿ ಸಂಸ್ಥೆಗಳ ಸೇವೆಗಳ ಬಗ್ಗೆ ಸಾರ್ವಜನಿಕರು ಮತ್ತು ಪ್ರಯಾಣಿಕರಿಂದ ಸಲಹೆ / ಅಭಿಪ್ರಾಯಗಳನ್ನು ಕೋರಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC) ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (KKRTC) ಗಳ ಸೇವೆಗೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ಮತ್ತು ಸೇವೆಗಳನ್ನು ಉತ್ತಮಪಡಿಸುವ ಬಗ್ಗೆ ಸಲಹೆಗಳನ್ನು ದಿನಾಂಕ 31ನೇ ಜನವರಿ 2022ರೊಳಗಾಗಿ ಇ–ಮೇಲ್ cpro@ksrtc.org ಮೂಲಕ ಅಥವಾ ಅಂಚೆಯ ಮೂಲಕ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಕೆ.ಎಸ್.ಆರ್.ಟಿ.ಸಿ, ಕೇಂದ್ರ ಕಚೇರಿ, ಕೆ.ಹೆಚ್. ರಸ್ತೆ, ಬೆಂಗಳೂರು – 560027 ರವರಿಗೆ ಕಳುಹಿಸಲು ಕೋರಿದೆ.

ಸಹಿ/–
ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/2985/ಆಕಾರ್/2021–22

KSRTC_Journeys KSRTC.Karnataka ksrtc.karnataka.gov.in 080-26252625 KarnatakaKSRTC

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಕಾಲ ಮಿಷನ್

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ)
ಬಹುಮಹಡಿ ಕಟ್ಟಡ, ಬೆಂಗಳೂರು–560 001

ಅಧಿಸೂಚನೆ

ಸಕಾಲ ಮಿಷನ್ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಇ–ಆಡಳಿತ ಯೋಜನೆಯಾಗಿದ್ದು, ಹೆಚ್ಚಿನ ವಿವರಗಳು **www.sakala.kar.nic.in** ನಲ್ಲಿ ಲಭ್ಯವಿದೆ. ಸಕಾಲ ಮಿಷನ್ ಮತ್ತು ಕರ್ನಾಟಕ ಸರ್ಕಾರದ ಇ–ಆಡಳಿತ ಉಪಕ್ರಮಗಳನ್ನು ನಿರ್ವಹಿಸಲು 1 ವರ್ಷದ (ವಿಸ್ತರಿಸಬಹುದಾದ) ಅವಧಿಯವರೆಗೆ ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ನೇಮಕಾತಿ ವಿಧಾನ: **ಹೊರಗುತ್ತಿಗೆ**. ಹುದ್ದೆಯ ಹೆಸರು: **ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು**. ಗುತ್ತಿಗೆ ಅವಧಿ: **1 ವರ್ಷ**. ಸಂಭಾವನೆ: **ರೂ. 1,40,937/– ಪ್ರತಿ ತಿಂಗಳು**. ವಿದ್ಯಾರ್ಹತೆ: **B.E in Computer Science M.Tech** (optional). ಸೇವೆಯ ಅನುಭವ: **5 ವರ್ಷ**. ವಯಸ್ಸು: **ಗರಿಷ್ಠ 40 ವರ್ಷ**. ಅಗತ್ಯ ಕೌಶಲ್ಯಗಳು: Knowledge of different development languages and processes knowledge of project management tools, experience in scheduling / planning and tracking methods, ability to handle multiple assignments, Interpersonal skills, presentation skills, high proficiency in speaking and reading English and Kannada, working experience in Government sector is a plus.
ಸಂದರ್ಶನ: **07.02.2022. ಬೆಳಿಗ್ಗೆ 11:00 ಗಂಟೆಗೆ**. ಸ್ಥಳ: **ಕೊಠಡಿ 104, ಗೇಟ್–1, ಬಹುಮಹಡಿ ಕಟ್ಟಡ, ಬೆಂಗಳೂರು–560 001**. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **01.02.2022**. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ **aosakala@karnataka.gov.in** ಗೆ ಇ–ಮೇಲ್ ಮೂಲಕ ಕಳುಸಹಿಸುವುದು. ವಿವರವಾದ ಅಧಿಸೂಚನೆಗೆ: **www.sakala.kar.nic.in** ಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಗಾಗಿ ಸಕಾಲ ಮಿಷನ್ ದೂ. ಸಂ: 080–2203 2857 ನ್ನು ಸಂಪರ್ಕಿಸಬಹುದು.

ವಾಸಾಸಂಇ/ಬೆಂನ/ಜಿಎ/2963/2021–22 ಸಹಿ/– ಆಡಳಿತಾಧಿಕಾರಿಗಳು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್

ನೋಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ ಶಿವಮೊಗ್ಗ–577201
Email : shimogasmartcity@gmail.com P.No: 08182-279951

ಟೆಂಡರ್ ಪ್ರಕಟಣೆ

ಸಂಖ್ಯೆ:SSCL/2018-19/NS(2)/ ದಿನಾಂಕ : 19.01.2022

ಶಿವಮೊಗ್ಗ ಸ್ಮಾರ್ಟಸಿಟಿ ಕಛೇರಿಯ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ ಕೆಪಿಡಬ್ಲೂಡಿ/ರಾಹೆ ಅಥವಾ ಇತರೆ ಪ್ರಾದಿಕಾರದಲ್ಲಿ ನೊಂದಾಯಿತ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಮೊಹರು ಮಾಡಿದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಂತೆ ದ್ವಿ ಲಕೋಟೆ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತದೆ.
ಕ್ರಮ.ಸಂಖ್ಯೆ: 1. ಕಾಮಗಾರಿ ಹೆಸರು : **"ನೆಹರೂ ಸ್ಟೇಡಿಯಂ ಕ್ರೀಡಾ ಸೌಲಭ್ಯಗಳ ಉನ್ನತೀಕರಣ ಹಂತ–2"**. DPR ಮೊತ್ತ ರೂ. ಕೋಟಿ ಲಕ್ಷಗಳಲ್ಲಿ : **10.35** ಇ.ಎಂ.ಡಿ. ಮೊತ್ತ ರೂ. ಲಕ್ಷಗಳಲ್ಲಿ : **10.35** ಗುತ್ತಿಗೆದಾರರ ನೊಂದಣಿ : **Civil Contract or Class-1 grade**.
(1) ಇ–ಪ್ರಕ್ಯೂರ್‌ಮೆಂಟ್ ಮೂಲಕ ಖಾಲಿ ಟೆಂಡರ್ ಪಾರಂಗಳನ್ನು ದಿನಾಂಕ : **24.01.2022 @ 4.00 (ಸಂಜೆ 4.00ರಿಂದ) ಪಡೆಯಬಹುದು**. (2) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 31.01.2022 @ ಬೆಳಿಗ್ಗೆ 11.00**. (3) ಪೂರ್ವಭಾವಿ **ಸಭೆ: 02.02.2022 @ ಸಂಜೆ 4.00**. (4) ಭರ್ತಿ ಮಾಡಿದ ಟೆಂಡರ್ ಪಾರಂಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 09.02.2022 (ಸಂಜೆ 4.00 ರವರೆಗೆ)**. (5) ಇ–ಪ್ರಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 11.02.2022 (ಸಂಜೆ 4.30 ಕ್ಕೆ)**. (6) ಇ–ಪ್ರಕ್ಯೂರ್ ಮೆಂಟ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ : **ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ**. (7) ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ ಸ್ಮಾರ್ಟ ಸಿಟಿ ಲಿಮಿಟೆಡ್, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.131–01 ಝೋಂಕಾರ್/2021–22

ಭಾರತೀಯ ರಿಸರ್ವ್ ಬ್ಯಾಂಕ್ / RESERVE BANK OF INDIA

www.rbi.org.in
Azadi Ka Amrit Mahotsav

16 ಮತ್ತು 17 ವರ್ಷ ಪರಿಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹5,000 **ಕೋಟಿ** ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹು ದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಷನ್ **(ಈ–ಕುಬೇರ್)** ವ್ಯವಸ್ಥೆಯ ಮೂಲಕ **24 ಜನವರಿ 2022 (ಸೋಮವಾರ)** ರಂದು ನಡೆಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ **(https://rbiretaildirect.org.in)** ನಾನ್–ಕಾಂಪಿಟೆಟಿವ್ ಸ್ಕೀಮ್ ಅನುಸಾರ ವೈ ಯಕ್ತಿಕ ವಿನಿಯೋಜಕರು ಕೂಡಾ ಬಿಡ್ ಮಾಡಬಲ್ಲರು.

ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **20 ಜನವರಿ 2022 (ಗುರುವಾರ)** ದಿನಾಂಕದ ಪತ್ರಿಕಾ ಪ್ರಕಟಣೆ ಆರ್‌ಬಿಐ ವೆಬ್ ತಾಣ **(www.rbi.org.in)** ವನ್ನು ನೋಡಿ.

"ಹಣ ನೀಡುವ ಭರವಸೆ ಕೊಡುವ ಇ–ಮೇಲ್/ಎಸ್ ಎಂ ಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

An ISO-9001:2008 & 14001:2004 Company

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.27, ಕೈಗಾರಿಕಾ ಪ್ರದೇಶ, ಅ.ಪೆ.ಸಂಖ್ಯೆ: 5531, ಬೆಂಗಳೂರು–ಪುಣೆ ಹೆದ್ದಾರಿ, ರಾಜಾಜಿನಗರ, ಬೆಂಗಳೂರು–55

ಸಂಖ್ಯೆ: ಕಸಾಮಾನಿ: ಪ್ರ.ವ್ಯ(ಆಡಳಿತ)2021–22 ದಿನಾಂಕ: 21.01.2022

ಕಾಲಾವಕಾಶ ವಿಸ್ತರಣೆ

ಆಡಳಿತವರ್ಗವು ದಿನಾಂಕ: 18.12.2021 ರಂದು ಪ್ರಮುಖ ದಿನಪತ್ರಿಕೆಗಳಲ್ಲಿ ರಿಟೈನರ್ ಶಿಪ್ ಆಧಾರದ ಮೇಲೆ ಸಿವಿಲ್ ಇಂಜಿನಿಯರ್, ಕಾನೂನು ಸಲಹೆಗಾರರು ಹಾಗೂ ಕಂಪನಿ ಪ್ಯಾನಲ್ ಅಡ್ವೋಕೇಟ್ ಹುದ್ದೆಗಳ ನೇಮಕಾತಿಗಾಗಿ ಪ್ರಕಟಿಸಿದ್ದ ಜಾಹೀರಾತು ಅನ್ವಯ ಅರ್ಜಿ ಸಲ್ಲಿಸಲು ದಿನಾಂಕ: **07.02.2022** ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಜಾಲತಾಣ **www.mysoresandal.org** ಅನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಉಪನಿರ್ದೇಶಕರ ಕಛೇರಿ

ಸಾರ್ವಜನಿಕ ಶಿಕ್ಷಣ ಇಲಾಖೆ

02ನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬಿ.ಎಂ. ರಸ್ತೆ, ರಾಮನಗರ ಜಿಲ್ಲೆ, ರಾಮನಗರ 562159
ಇ–ಮೇಲ್: **ddpi.rmgm@gmail.com, ddpi.edu.karrmn@nic.in** ದೂರವಾಣಿ: **080–27273708**

ಸಂಖ್ಯೆ: ಲೇಪ2/ಪ್ರೊಜೆಕ್ಟರ್/09/2021–22 ದಿನಾಂಕ: 20.01.2022

ಟೆಂಡರ್ ಅಧಿಸೂಚನೆ

ರಾಮನಗರ ಜಿಲ್ಲೆಯ ಆಯ್ದ 08 ಸರ್ಕಾರಿ ಪ್ರೌಢಶಾಲೆಗಳಿಗೆ ಮತ್ತು ಆಯ್ದ 69 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ, ಕರ್ನಾಟಕ ರಾಜ್ಯ ಡಿ.ಎಸ್.ಇ.ಆರ್.ಟಿ. ಅನುಮೋದಿತ ಪಠ್ಯಕ್ರಮ ಹೊಂದಿರುವ ಸ್ಮಾರ್ಟ್ ಕ್ಲಾಸ್ ಪ್ರೊಜೆಕ್ಟರ್‌ಗಳನ್ನು ಖರೀದಿಸಲು ಉದ್ದೇಶಿಸಿದ್ದು, ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ **ದಿನಾಂಕ: 20.01.2022** ರಿಂದ **03.02.2022**. ಟೆಂಡರ್‌ನ ಅಂದಾಜು ಮೊತ್ತ **ರೂ. 1,02,10,000.00 (ಒಂದು ಕೋಟಿ ಎರಡು ಲಕ್ಷದ ಹತ್ತು ಸಾವಿರ ರೂ.ಗಳು ಮಾತ್ರ)** ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಇ.ಎಂ.ಡಿ ಮೊತ್ತ **ರೂ. 2,55,000/– (ಎರಡು ಲಕ್ಷದ ಐವತ್ತೈದು ಸಾವಿರ ರೂ.ಗಳು ಮಾತ್ರ)**. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 03.02.2022ರ ಸಂಜೆ 5:00 ಗಂಟೆ**. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.02.2022ರ ಬೆಳಿಗ್ಗೆ 11:00 ಗಂಟೆಗೆ**.
ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ಜಿಲ್ಲೆ ಇವರನ್ನು ಸಂಪರ್ಕಿಸಬಹುದು. ಪೂರ್ಣ ವಿವರಗಳು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ದೊರೆಯುತ್ತವೆ.

ಸಹಿ/–
ಟೆಂಡರ್ ಕರೆಯುವ ಪ್ರಾಧಿಕಾರಿ ಹಾಗೂ ಉಪನಿರ್ದೇಶಕರು [ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ.

ವಾಸಾಸಂಇ/ರಾನ/ಪ್ರಾಂಜ್/442/2021–22

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು–560002
ದೂರವಾಣಿ: 080–22213530/22241325 ಫ್ಯಾಕ್ಸ್: 080–22214370
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in www.kanaja.in

No.: DKC11031/18/2021 ದಿನಾಂಕ: 19.01.2022

ಟೆಂಡರ್ ಪ್ರಕಟಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕೊಡ ಮಾಡುವ 2020–21 ಮತ್ತು 2021–22ನೇ ಸಾಲಿನ ವಿವಿಧ ಪ್ರಶಸ್ತಿ ಪುರಸ್ಕೃತರಿಗೆ ಹಿತ್ತಾಳೆ ಪುತ್ಥಳಿ ಹಾಗೂ ಪ್ರಶಸ್ತಿ ಫಲಕಗಳನ್ನು ಒದಗಿಸಲು ಅರ್ಹ ಏಜೆನ್ಸಿಗಳಿಂದ/ಟೆಂಡರ್‌ದಾರರಿಂದ ನಿಗದಿತ ನಮೂನೆಯಲ್ಲಿ 2 ಬಿಡ್ ವಿಧಾನದಲ್ಲಿ ಮ್ಯಾನ್ಯುಯಲ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 31.01.2022 ಸಂಜೆ 5.00 ಗಂಟೆ.

1) ಟೆಂಡರ್‌ನ ಅಂದಾಜು ಮೊತ್ತ : ರೂ.5,00,000/–. 2) ಇಎಂಡಿ ಮೊತ್ತ: ರೂ.12,500/–. 3) ಟೆಂಡರ್ ಡಾಕ್ಯುಮೆಂಟ್ ವಿತರಣೆಯ ಪ್ರಾರಂಭದ ದಿನಾಂಕ: 21.01.2022. 4) ಟೆಂಡರ್ ಡಾಕ್ಯುಮೆಂಟ್ ಪಡೆಯುವ ಸ್ಥಳ ಹಾಗೂ ಹೆಚ್ಚಿನ ವಿಚಾರಣೆ ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆ : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002. ದೂ: 080–22213530, ಮೊ: 9900337738. 5) ಟೆಂಡರ್ ಡಾಕ್ಯುಮೆಂಟ್ ಪಡೆಯಲು ಕೊನೆಯ ದಿನಾಂಕ : 28.01.2022, ಸಂಜೆ 5.00 ಗಂಟೆಯವರೆಗೆ. 6) ಟೆಂಡರ್ ಡಾಕ್ಯುಮೆಂಟ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 31.01.2022, ಸಂಜೆ 5.00 ಗಂಟೆಯವರೆಗೆ. 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 01.02.2022, ಮಧ್ಯಾಹ್ನ 12.00 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 02.02.2022, ಮಧ್ಯಾಹ್ನ 12.00 ಗಂಟೆಗೆ.

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಾ.ಸಾ.ಸಂ.ಇ/ಬೆಂ.ನಗರ/2941/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560023. ದೂರವಾಣಿ: 080–23295625
ಇ–ಮೇಲ್: ddehospital-hfws@karnataka.gov.in

No: e-H/Annual Action Plan/03/2019-20 Date: 21-01-2022

ಟೆಂಡರ್ ಅಧಿಸೂಚನೆ

ಕೆಳಕಂಡ ಟೆಂಡರ್ ಅಧಿಸೂಚನೆ ಸಂಖ್ಯೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಇ–ಆಸ್ಪತ್ರೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಐ.ಸಿ.ಟಿ ಸಲಕರಣೆಗಳನ್ನು ಖರೀದಿಸಲು ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ರಾಷ್ಟ್ರಮಟ್ಟದ ಟೆಂಡರ್ ಕರೆಯಲಾಗಿದೆ.
ತಾಂತ್ರಿಕ ವಿವರಣೆ, ಇ.ಎಂ.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಲ್ಲಿನ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಈ ಕೆಳಕಂಡ ಟೆಂಡರ್‌ಗಳ ದಸ್ತಾವೇಜುಗಳನ್ನು ಡೌನ್‌ಲೋಡ್ ಹಾಗೂ ಅಪ್‌ಲೋಡ್ ಮಾಡಬಹುದು.
1) ಟೆಂಡರ್ ಅಧಿಸೂಚನೆ ಸಂಖ್ಯೆ: **NRHM/2021-22/IND270 ದಿನಾಂಕ: 21–01–2022**
2) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡುವ ದಿನಾಂಕ: **21–01–2022**
3) ಟೆಂಡರ್‌ಗಳ ದಸ್ತಾವೇಜನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **07–03–2022ರಂದು ಸಂಜೆ 5.30 ಗಂಟೆವರೆಗೆ**. ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಪಡೆಯಬಹುದಾಗಿದೆ, ಹೆಚ್ಚಿನ ವಿವರಣೆಗಳನ್ನು ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಉಪ ನಿರ್ದೇಶಕರು (ಇ–ಆರೋಗ್ಯ)

ವಾಸಾಸಂಇ/ಬೆಂ.ನ/ಅಡ್ವರ್ಟೋರ್/2981/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಧಾರವಾಡ
ಫೋ:–(0836)2213838 Email : eedharwad@gmail.com

ನಂ.ಎಚ್.ಡಿಎಂಸಿ/67/07/2020–21 ದಿನಾಂಕ : 21–01–2022

ಇ–ಟೆಂಡರ ಅಧಿಸೂಚನೆ

ಸನ್ 2019–20, 2020–21 ನೇ ಸಾಲಿನ ಪಾಲಿಕೆ ಅನುದಾನದ, ಸನ್ 2016–17, 2018–19 ನೇ ಸಾಲಿನ 14 ನೇ ಹಣಕಾಸು ಯೋಜನೆ (ಜಿಬಿಜಿ) ಅನುದಾನ, ಸನ್ 2021–22 ನೇ ಸಾಲಿನ 15 ನೇ ಹಣಕಾಸು ಯೋಜನೆ (ಜಿಬಿಜಿ) ಅನುದಾನದ ಅನುದಾನದಡಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/CPWD/HDMC/ ಇತರೆ ಸರ್ಕಾರಿ ಇಲಾಖೆಯಲ್ಲಿ 1ನೇ ದರ್ಜೆ, 2ನೇ ದರ್ಜೆ, 3ನೇ ದರ್ಜೆ ಮತ್ತು 4ನೇ ದರ್ಜೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರನಲ್ಲಿ ಭಾಗವಹಿಸಬಹುದು.
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳು ಇ.ನಂ : **1) 114531(Gen), 2) 121805(ST), 3) 120469(SC), 4) 120471(Gen), 5) 1204739Gen), 6) 122948 (Gen), 7) 125916(Gen) 8) 122949(Gen), 9) 122952(Gen), 10) 125432(Gen), 11) 125814(Gen).**
ಒಟ್ಟು **10** ಕಾಮಗಾರಿಗಳು ಮೊತ್ತ ರೂ. **752.42** ಲಕ್ಷಗಳಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯುರಮೆಂಟನಲ್ಲಿ ಅ.ನಂ **01** ರಿಂದ **09** ರ ಕಾಮಗಾರಿಗಳಿಗೆ ದಿನಾಂಕ : **24/01/2022** ರಿಂದ ಹಾಗೂ ಅ.ನಂ **10** ರಿಂದ **11** ರ ಕಾಮಗಾರಿಗಳಿಗೆ ದಿನಾಂಕ: **28/01/2022** ರಿಂದ ಪಡೆಯಬಹುದಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರ ಟೆಂಡರ್‌ಗಳಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರ ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836–2213838 ರಿಂದ ಮಾಹಿತಿ ಪಡೆಯಬಹುದು ಅಥವಾ ಅಂತರ್ಜಾಲ ಮೂಲಕ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು.
ಕ್ರ. ಸಂ **01** ರಿಂದ **09** ರ ಕಾಮಗಾರಿಗಳಿಗೆ (1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **10/02/2022** ಸಂಜೆ 5.30 ಗಂಟೆವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11/02/2022** ಸಂಜೆ 5.35 ಗಂಟೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **15/02/2022** ಸಂಜೆ 4.35 ಗಂಟೆ ಕ್ರ. ಸಂ **10** & **11** ರ ಕಾಮಗಾರಿಗಳಿಗೆ (1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **07/03/2022** ಸಂಜೆ 5.30 ಗಂಟೆವರೆಗೆ (2) ಟೆಂಡರ್ ತೆರೆಯುವ ದಿನಾಂಕ : **08/03/2022** ಸಂಜೆ 5.35 ಗಂಟೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14/03/2022** ಸಂಜೆ 4.35 ಗಂಟೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಧಾರವಾಡ

ವಾಸಾಸಂಇ/ಧಾ/ಎಂಸಿಎ/919/2021–22

ಪುರಸಭೆ ಕಾರ್ಯಾಲಯ ಚಿಂಚೋಳಿ

ಗಡಿ ಏರಿಯಾ ಸಮೀಪ, ಹಳೆ ಪೋಲಿಸ್ ಸ್ಟೇಷನ್, ಚಿಂಚೋಳಿ–585307, ಜಿ. ಕಲಬುರಗಿ
Website: www.chincholitown.mrc.gov.in Phone:08475:273058

No: TMC-Chincholi/ANNP/ /2021-22 Date:19.01.2022

:: ಅಲ್ಪಾವಧಿ ಟೆಂಡರ ಪ್ರಕಟಣೆ ::

ಚಿಂಚೋಳಿ ಪುರಸಭೆಯ ಅಮೃತ ನಿರ್ಮಲ ನಗರ ಯೋಜನೆ 2021–22ನೇ ಸಾಲಿನಲ್ಲಿ ಹಂಚಿಕೆಯಾದ ರೂ. 100.00ಲಕ್ಷಕ್ಕೆ ತೆಗೆದುಕೊಂಡ ಒಂದು ಕಾಮಗಾರಿಯ ಟೆಂಡರ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–3 ನಿಯಮಗಳು ಹಾಗೂ 1999 ಹಾಗೂ 2000ರ ಪಾರದರ್ಶಕ ನಿಯಮಗಳನ್ವಯ ಅಲ್ಪಾವಧಿ ಟೆಂಡರ ದ್ವಿಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ, ಮಂಜೂರಾದ ಕಾಮಗಾರಿಗೆ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. http://eproc.karnataka.gov.in ಆನ್ ಲೈನ್ ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ 28.01.2022 ರ ಸಾಯಂಕಾಲ 5.30 ಗಂಟೆಯವರೆಗೆ
1) ಕಾಮಗಾರಿ/ಸರಕು/ಸೇವೆಯ ವಿವರ: DMA/2021-22/OW/WORK_INDENT 126765, 2) ಅನುದಾನ ವಿವರ : **ಅಮೃತ ನಿರ್ಮಲ ನಗರ ಯೋಜನೆ 2021–22,** 3) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : **ಕನಿಷ್ಠ ರೂ. 100.00 ಲಕ್ಷ,** 4) ಗುತ್ತಿಗೆದಾರರ / ಉತ್ಪಾದಕರು/ ಅಧಿಕೃತ ಸರಬರಾಜುದಾರರ ಅರ್ಹತೆ ವಿವರ : ಲೋಕೋಪಯೋಗಿ ಇಲಾಖೆಯಿಂದ ನೊಂದಾ ಯಿತ/ನವೀಕರಿಸಿದ ಅರ್ಹ 1ನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು 5) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ : ಕನಿಷ್ಠ ರೂ. 100.00 ಲಕ್ಷ, 6) ಟೆಂಡರ ಫಾರಂಗಾಗಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 28.01.2022 ಸಾಯಂಕಾಲ 5.30 ಗಂಟೆಯವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 31.01.2022 ಮುಂಜಾನೆ 11.30 ಗಂಟೆಯವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07.02.2022 ಮುಂಜಾನೆ 11.00 ಗಂಟೆಯವರೆಗೆ, 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸ ಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂಖ್ಯೆ: ಪುರಸಭೆ ಕಾರ್ಯಾಲಯ ಚಿಂಚೋಳಿ, Phone:08475:273058 10) ಅಂತರ್ಜಾಲ ತಾಣದ ವಿಳಾಸ : www.chincholitown/mrc/.gov.in

ಸಹಿ/– ಮುಖ್ಯಾಧಿಕಾರಿ
ಪುರಸಭೆ ಚಿಂಚೋಳಿ

ವಾ.ಸಾ.ಸಂ.ಇ/ಕಲಬುರಗಿ/986/ಎಂ.ಸಿ&ಎ/2021–22

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:825:2021 –22 ದಿನಾಂಕ: 20–01–2022.

ಇ–ಪ್ರಕ್ಯೂರ್‌ಮೆಂಟ್ ಟೆಂಡರ ಪ್ರಕಟಣೆ ಸಂಖ್ಯೆ: 17, 18 & 19/2021–22

e-proc ಪದ್ಧತಿಯಲ್ಲಿ ಕೆ.ಪಿ.ಡಬ್ಲೂ.ಡಿ/ಸಿ.ಪಿ.ಡಬ್ಲೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ **e-proc** ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ **e-proc** ನಲ್ಲಿ ಬಿಡುಗಡೆಯಾಗುವ ದಿನಾಂಕದಂದು ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://eproc.karnataka.gov.in** ನಲ್ಲಿ ಪ್ರಕಟಿಸಿದಂತೆ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)	ಕೆಲಸ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಹೊರತುಪಡಿಸಿ)	ಅರ್ಹತೆಯುಳ್ಳ ದರ್ಜೆ ಗುತ್ತಿಗೆದಾರರು
1	ಶಿರಸಿಯಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡವನ್ನು ನಿರ್ಮಿಸುವುದು (17/2021–22)	441.00	6,61,500=00	12 ತಿಂಗಳು	ದರ್ಜೆ 1
2	ದಾಂಡೇಲಿ ಬಸ್ ಘಟಕದಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು (18/2021–22)	13.40	33,500=00	03 ತಿಂಗಳು	ದರ್ಜೆ 3 & ಮೇಲ್ಪಟ್ಟು
3	ಯಲ್ಲಾಪುರ ಬಸ್ ಘಟಕದಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು (19/2021–22)	13.40	33,500=00	03 ತಿಂಗಳು	ದರ್ಜೆ 3 & ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (**help desk**) 91–8046010000, 91–8068948777, 0836–2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ. ಇವರ ಕಾರ್ಯಾಲಯ

ಸಂ:ಕಾನಿಇಂ:ಲೋಇ:ವಿಕೊ:ಸರ್ವಿಸ್‌ಟೆಂಡರ್:ಟೆಂ:2021–22: 3551 ದಿನಾಂಕ : 12.01.2022.

ಅಲ್ಪಾಕಾಲಾವಧಿ ಟೆಂಡರ್ ಪ್ರಕಟಣೆ ಸೇವಾ ದರ ನಮೂದಿಸಲು ಟೆಂಡರ್ ಪ್ರಕಟಣೆ.

2021–22ನೇ ಸಾಲಿನ ಲೆಕ್ಕ ಶೀರ್ಷಿಕೆ **2059–ಯೋಜನೇತರ** ಅಡಿಯಲ್ಲಿ ಕೊಪ್ಪಳ ಲೋಕೋಪಯೋಗಿ ಇಲಾಖೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಗಂಗಾವತಿ ಉಪ ವಿಭಾಗದ ಅಡಿಯಲ್ಲಿಯ ಕನಕಗಿರಿ ಪ್ರವಾಸಿ ಮಂದಿರ, ಗಂಗಾವತಿ ಪ್ರವಾಸಿ ಮಂದಿರ, ಗಂಗಾವತಿ ಉಪ ವಿಭಾಗ, ಕಾರಟಗಿ ಪ್ರವಾಸಿ ಮಂದಿರ, ಗಂಗಾವತಿ ಸರ್ಕ್ಯೂರ್ಟ ಹೌಸ್ ಗಳಿಗೆ ಗ್ರೂಪ್ ಡಿ ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ತಿಂಗಳೊಂದರ ಸೇವಾದರ ನಮೂದಿಸಲು ಸ್ಪರ್ಧಾತ್ಮಕ ದರಗಳನ್ನು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು "ಇ–ಪ್ರೂಕ್ಯೂರಮೆಂಟ್ ಪೋರ್ಟಲ್" **http://eproc.karnataka.gov.in** ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು :– 1. ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬೇಕು. 2. ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಗುತ್ತಿಗೆ ಜೊತೆಯಲ್ಲಿ ಲಗತ್ತಿಸಬೇಕು. 3. ನಿಗದಿತ ಇ.ಎಂ.ಡಿ. ಹಣವನ್ನು ಆನ್ ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಹಾಗೂ ಸಹಾಯಕ ದೂರವಾಣಿ ಸಂಖ್ಯೆ 08539 – 222318 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್ ಸೈಟ್‌ನಲ್ಲಿಯ **http://eproc.karnataka.gov.in** ರಲ್ಲಿ ಪಡೆಯಬಹುದು. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್ ಸೈಟ್‌ನಲ್ಲಿಯ ದಾಖಲೆಯಿಂದ ದಿನಾಂಕ 12–01–2022ರ ನಂತರ ನಿಗದಿತ ಅವಧಿಯೊಳಗೆ ನಕಲು ತಗೆಯುವುದು **(Down load)** ಮಾಡಿಕೊಳ್ಳಬಹುದಾಗಿದೆ.

ಇಎಂಡಿ ಮೊತ್ತ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ**. ಟೆಂಡರ್ ಪ್ರೊಸೆಸಿಂಗ್ ಶುಲ್ಕ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ**. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ಕಾಲಾವಧಿ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ**. ಟೆಂಡರ್ ಆಕ್ಷೇಪಣೆ:ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯ : **ಇ–ಪ್ರೂಕ್ಯೂರ್‌ಮೆಂಟ್‌ನಲ್ಲಿರುವಂತೆ**. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **24–01–2022 ಸಮಯ 16.00 ಗಂಟೆ**. ಟೆಂಡರ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **25–01–2022 ಸಮಯ 16.30 ಗಂಟೆ**

ಷರತ್ತುಗಳು:– 1. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಅಥವಾ ಹಿಂತೆಗೆದುಕೊಳ್ಳುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ. 2.ಇತರೆ ಷರತ್ತುಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು. 3. ಹೊರಗುತ್ತಿಗೆ ಮೂಲಕ ಸೇವೆ ನೀಡಲು ಶಕ್ತವಿರುವ ಸಂಸ್ಥೆಗಳು ಟೆಂಡರ್ ನಿಬಂಧನೆಗಳ ಪ್ರಕಾರ ನಿಗದಿಪಡಿಸಿದ ದಾಖಲೆಗಳೊಂದಿಗೆ ಸೇವಾ ವೆಚ್ಚ ಮಾತ್ರ ನಮೂದಿಸಬೇಕು. ವೈಯಕ್ತಿಕವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/485/ಎಂಸಿಎ/2021–22

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಅ/ಸಕಾನಿಅ/2021–22/41901 ದಿನಾಂಕ: 20.01.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ)

ಈ ಕೆಳ ಕಾಣಿಸಿದ ಸಾಮಗ್ರಿಗಳನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರು ಮಾಡಿ ಸರಬರಾಜು ಮಾಡುವುದು
ಪಿ.ಸಿ–1167: ಗ್ಯಾಲ್ವನೈಜ್ಡ್ ಎ. ಸಿ. ಎಸ್. ಆರ್ ವಿದ್ಯುತ್ ವಾಹಕ (ಟೆಂಡರ್ ಮೊತ್ತ ರೂ 2737.28 ಲಕ್ಷ)
ದಿನಾಂಕ: ಇ–ಪ್ರೊಕ್ಯೂರಮೆಂಟನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 21.01.2022ರಂದು ಅಥವಾ ನಂತರ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 22.02.2022 ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ: 24.02.2022.
ಪಿ.ಸಿ–1155 (ಕರೆ–2) ಎಲ್. ಟಿ 2 ಪಿನ್ ಅಡ್ಡ ಪಟ್ಟಿ (ಟೆಂಡರ್ ಮೊತ್ತ ರೂ 9.57 ಲಕ್ಷ)
ದಿನಾಂಕ: ಇ–ಪ್ರೊಕ್ಯೂರಮೆಂಟನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 21.01.2022 ರಂದು ಅಥವಾ ನಂತರ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 05.02.2022 ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.02.2022.
ಬಿಡ್ದುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಕಾರ್ಯನಿರ್ವಾಹಕ ಅಭಿಯಂತರರು(ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359006: ಅಂತರ್ಜಾಲತಾಣದ ವಿಳಾಸ: **www.eproc.karnataka.gov.in**

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/982/ಎಂ.ಸಿ&ಎ/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–10/13917/2021–22 ದಿನಾಂಕ: 20.01.2022

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.
ಕಾಮಗಾರಿಯ ಹೆಸರು: ಹಾವೇರಿ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಪ್ರಸ್ತಾಪಿತ ಕೋಲೂರು – ಗಣಜೂರು ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ಇತ್ಯಾದಿ ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ದಪಡಿಸಲು ಸಲಹಾ ಸೇವೆಗಳನ್ನು ಒದಗಿಸುವುದು.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 09.02.2022, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ದಿನಾಂಕ: 25.01.2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O:2944/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–3:ಟೆಂಡರ್–90:2021–22/3266 ದಿನಾಂಕ: 19.01.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ **ಏಕ ಲಕೋಟೆ ಮತ್ತು ದ್ವಿ ಲಕೋಟೆ** ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ : 5054–04–337–0–01–422 ಜಿಲ್ಲಾ ಮತ್ತು ಇತರೆ ರಸ್ತೆಗಳು – ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ):– (1) ಹೊಸದುರ್ಗ ತಾಲ್ಲೂಕು ನೀರಗುಂದ ಗೇಟ್‌ನಿಂದ ನೀರಗುಂದ ಎ.ಕೆ. ಕಾಲೋನಿಯವರೆಗೆ ರಸ್ತೆ ಅಭಿವೃದ್ಧಿ ಮತ್ತು ನೀರಗುಂದ ಭೋವಿ ಹಟ್ಟಿ ರಸ್ತೆ ಅಭಿವೃದ್ಧಿ (ವ.ಇಂ. 146358) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 150.00** (2) ಹೊಸದುರ್ಗ ತಾಲ್ಲೂಕು ಮತ್ತೋಡು ಮುಖ್ಯರಸ್ತೆಯಿಂದ (ಕಪ್ಪನಾಯಕನಹಳ್ಳಿ ಗೇಟ್)ನಿಂದ ಹೊಸೂರು ಭೋವಿಹಟ್ಟಿ ವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ (ವ.ಇಂ. 146355) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 150.00 ಲೆಕ್ಕ ಶೀರ್ಷಿಕೆ : 5054–04–337–0–01–423 ಜಿಲ್ಲಾ ಮತ್ತು ಇತರೆ ರಸ್ತೆಗಳು – ಗಿರಿಜನ ಉಪಯೋಜನೆ (ಟಿ.ಎಸ್.ಪಿ)**:– (3) ಹೊಸದುರ್ಗ ತಾಲ್ಲೂಕು ಕೋಡಿಹಳ್ಳಿ (ದೇವಪುರ) ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ ರಸ್ತೆ, ಸಂಪರ್ಕ ರಸ್ತೆಗಳು ಮತ್ತು ಸಿ.ಸಿ ಚರಂಡಿ ನಿರ್ಮಾಣ (ವ.ಇಂ. 146029) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 150.00 ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ:– ಸಾಮಾನ್ಯ:– ಲೆಕ್ಕ ಶೀರ್ಷಿಕೆ : 3054–04–337–1–10– ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ 423–ಗಿರಿಜನ ಉಪಯೋಜನೆ ಉಪಯೋಜನೆ (ಟಿ.ಎಸ್.ಪಿ)**:– (4) ಹೊಸದುರ್ಗ ತಾಲ್ಲೂಕು ನಾಕೀಕೆರೆ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ಚರಂಡಿ ನಿರ್ಮಾಣ. (ವ.ಇಂ. 145830) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 10.74 ಪರಿಶಿಷ್ಟ ಜಾತಿ:– ಲೆಕ್ಕ ಶೀರ್ಷಿಕೆ : 3054–04–337–1–10– ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ 422 – ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ)** (5) ಹೊಸದುರ್ಗ ತಾಲ್ಲೂಕು ನಾಕೀಕೆರೆ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಸಿ.ಸಿ. ಚರಂಡಿ ನಿರ್ಮಾಣ (ವ.ಇಂ. 145826) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 27.47 ಕ್ರಸಂ. 1 ರಿಂದ 3ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ**:– (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 03–02–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 04–02–2022 ಸಮಯ 16–00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 05–02–2022 ಸಮಯ 16–01 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 07–02–2022 ಸಮಯ 11–00 **ಕ್ರಸಂ. 4 ಮತ್ತು 5 ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ**:– (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 03–02–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 04–02–2022 ಸಮಯ 16–00 (1) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 05–02–2022 ಸಮಯ 16–01
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/MCA/800/2021-22 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂಡಿ, ಚಿತ್ರದುರ್ಗ.




ಫ್ಯಾಷನ್‌ಗೂ ಸಂಪ್ರದಾಯಕ್ಕೂ

ಪೋಟ್ಲಿ ಬ್ಯಾಗ್

ರೇಷ್ಮಾ

ಫ್ಯಾಷನ್ ಕ್ಷೇತ್ರಕ್ಕೂ ಹೆಣ್ಣುಮಕ್ಕಳಿಗೂ ಎಲ್ಲಿಲ್ಲದ ನಂಟು. ಫ್ಯಾಷನ್ ಮೇಲೆ ಒಲವು ಮೂಡಿಸಿಕೊಳ್ಳದ ಹೆಣ್ಣುಮಕ್ಕಳು ಕಡಿಮೆಯೇ ಸರಿ. ಫ್ಯಾಷನ್ ಎಂದರೆ ಕೇವಲ ಸೀರೆ, ಚೂಡಿದಾರ್, ಕುರ್ತಾ ಹೀಗೆ ಉಡುಪುಗಳಷ್ಟೇ ಅಲ್ಲ. ಉಡುಪುಗಳಾಚೆಗೂ ಫ್ಯಾಷನ್ ಕ್ಷೇತ್ರ ವಿಸ್ತರಿಸಿದೆ.

ದಿರಿಸಿಗೆ ಹೊಂದುವ ಚಪ್ಪಲಿ, ಬ್ಯಾಗ್, ಕಿವಿಯೋಲೆ, ಸರದಂತಹ ಮ್ಯಾಚಿಂಗ್ ವಸ್ತುಗಳನ್ನು ಧರಿಸಿದಾಗ ಇನ್ನಷ್ಟು ಸುಂದರವಾಗಿ ಕಾಣಬಹುದು. ಈಗ ಫ್ಯಾಷನ್ ಮಾರುಕಟ್ಟೆಯಲ್ಲಿ ಟ್ರೆಂಡ್ ಆಗಿರುವುದು ಪೋಟ್ಲಿ ಬ್ಯಾಗ್. ನೋಡುವುದಕ್ಕೆ ಹಿಂದಿನ ಕಾಲದ ಅಜ್ಜಿಯರು ಬಳಸುತ್ತಿದ್ದ ಎಲೆ–ಅಡಿಕೆ ಚೀಲದ ಮುಂದುವರಿದ ವಿನ್ಯಾಸದಂತೆ ಕಾಣುತ್ತದೆ. ಹಿಂದೆಲ್ಲಾ ಇದೇ ರೀತಿಯ ಚೀಲವನ್ನು ಮನೆಯ ಬೀಗದ ಗೊಂಚಲು ಇರಿಸಿಕೊಳ್ಳಲು ಬಳಸುತ್ತಿದ್ದರು. ಅರಸೊತ್ತಿಗೆಯ ಕಾಲದಲ್ಲಿ ರಾಣಿಯರು ಪೋಟ್ಲಿ ಬ್ಯಾಗ್ ಬಳಸುತ್ತಿದ್ದದ್ದನ್ನು ನಾವು ಸಿನಿಮಾಗಳಲ್ಲಿ, ಚಿತ್ರಗಳಲ್ಲಿ ಕಾಣಬಹುದು.





ಏನಿದು ಪೋಟ್ಲಿ ಬ್ಯಾಗ್?

ಸುಂದರವಾದ ಅಗಲ ಅಥವಾ ಉದ್ದನೆಯ ಚಿಕ್ಕದಾದ ಬ್ಯಾಗ್‌ಗೆ ಹಿಡಿಕೆ ರೂಪದಲ್ಲಿ ಎರಡು ದಾರಗಳನ್ನು ಪೋಣಿಸಿರಲಾಗುತ್ತದೆ. ಈ ದಾರವನ್ನು ಕೈಗೆ ಸಿಕ್ಕಿಸಿಕೊಳ್ಳಬಹುದು. ಹಿಂದಿನ ಕಾಲದ ಮಹಿಳೆಯರು ಇದನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಿದ್ದರು. ಇದು ಪಾಶ್ಚಿಮಾತ್ಯ ದೇಶಗಳಲ್ಲೂ ಬಹಳ ಹಿಂದಿನದಲ್ಲೂ ಬಳಕೆಯಲ್ಲಿದ್ದ ಬ್ಯಾಗ್ ಟ್ರೆಂಡ್ ಆಗಿದೆ. ಈಗ ಈ ಟ್ರೆಂಡ್ ನವೀನ ರೂಪ ಪಡೆದುಕೊಂಡು ಫ್ಯಾಷನ್ ಮಾರುಕಟ್ಟೆಯಲ್ಲಿ ಕಮಾಲ್ ಮಾಡುತ್ತಿದೆ.

ಸಾಂಪ್ರದಾಯಿಕ ಉಡುಪಿನೊಂದಿಗೆ

ಭಾರತೀಯ ಸಾಂಪ್ರದಾಯಿಕ ಉಡುಗೆಗಳಾದ ಸೀರೆ, ಚೂಡಿದಾರ್, ಘಾಗ್ರಾದಂತಹ ಉಡುಪುಗಳೊಂದಿಗೆ ಅದೇ ರೀತಿಯ ವಿನ್ಯಾಸವಿರುವ ಪೋಟ್ಲಿ ಬ್ಯಾಗ್ ಧರಿಸಬಹುದು. ಈ ಬ್ಯಾಗ್ ನಿಮ್ಮನ್ನು ಇನ್ನಷ್ಟು ಸ್ಟೈಲಿಶ್ ಆಗಿ ಕಾಣುವಂತೆ ಮಾಡುತ್ತದೆ. ಹಿಂದಿನ ಕಾಲದ ಹೆಣ್ಣುಮಕ್ಕಳು ಐಷಾರಾಮಿ ಪೋಟ್ಲಿ ಧರಿಸುತ್ತಿದ್ದರು.

ಪಾಶ್ಚಾತ್ಯ ಉಡುಪಿನೊಂದಿಗೆ

ಜೀನ್ಸ್, ಕುರ್ತಾ, ಟಾಪ್, ಕ್ರಾಪ್ ಟಾಪ್, ಮಿಡ್ಡಿ, ಸ್ಕರ್ಟ್‌ನಂತಹ ಪಾಶ್ಚಿಮಾತ್ಯ ಶೈಲಿಯ ಉಡುಪು ಧರಿಸಿದಾಗಲೂ ಪೋಟ್ಲಿ ಬ್ಯಾಗ್ ಧರಿಸಬಹುದು. ಆದರೆ ಪಾಶ್ಚಿಮಾತ್ಯ ಉಡುಪಿನೊಂದಿಗೆ ಸರಳ ವಿನ್ಯಾಸದ ಬ್ಯಾಗ್ ಹೆಚ್ಚು ಹೊಂದುತ್ತದೆ. ಜೀನ್ಸ್ ಟಾಪ್ ಅಥವಾ ಯಾವುದೇ ರೀತಿಯ ಟಾಪ್ ಧರಿಸಿದಾಗ ಅದೇ ಬಣ್ಣದ ಮಣಿಗಳಿರುವ ಅಥವಾ ಬಣ್ಣದ ನೂಲಿನ ಎಂಬ್ರಾಯಿಡರಿ ಇರುವ ಪೋಟ್ಲಿ ಧರಿಸಬಹುದು. ಇದರಿಂದ ನಿಮ್ಮ ನೋಟವೇ ಬದಲಾಗುತ್ತದೆ.

ಬಾಲಿವುಡ್ ತಾರೆಯರಿಗೂ ಮೆಚ್ಚು

ಬಾಲಿವುಡ್ ತಾರೆಯರು ಈ ಬ್ಯಾಗ್ ಅನ್ನು ಧರಿಸಿದ್ದಾರೆ. ಸೀರೆ, ಲೆಹಂಗಾದಂತಹ ಸಾಂಪ್ರದಾಯಿಕ ಉಡುಪು ತೊಟ್ಟಾಗ ಪೋಟ್ಲಿ ಬ್ಯಾಗ್ ಧರಿಸಲು ಇಷ್ಟ ಪಡುತ್ತಾರೆ. ಇದನ್ನು ಧರಿಸುವ ಮೂಲಕ ಈ ಬ್ಯಾಗ್ ಟ್ರೆಂಡ್ ಅನ್ನು ಇನ್ನಷ್ಟು ಖ್ಯಾತಿಗೊಳಿಸಿದ್ದಾರೆ ಬಿಟೌನ್ ಸುಂದರಿಯರು. ಕರೀಶ್ಮಾ ಖಾನ್ ಕಪೂರ್, ತಾರಾ ಸುತ್ರಿಯಾ, ಕಾಜಲ್, ಕಿಯಾರಾ ಅಡ್ವಾನಿ ಮುಂತಾದ ಬಾಲಿವುಡ್ ನಟಿಯರು ವಿಶೇಷ ಸಂದರ್ಭಗಳಲ್ಲಿ ಪೋಟ್ಲಿ ಬ್ಯಾಗ್ ಧರಿಸುವ ಮೂಲಕ ಮಿಂಚಿದ್ದಾರೆ.

ಐಷಾರಾಮಿ ಬ್ಯಾಗ್

ಪೋಟ್ಲಿ ಬ್ಯಾಗ್ ಐಷಾರಾಮದ ಸಂಕೇತವು ಹೌದು. ಅಬ್ಬರದ ವಿನ್ಯಾಸದಿಂದ ಕೂಡಿರುವ ಈ ಪುಟ್ಟ ಬ್ಯಾಗ್ ಧರಿಸಿದವರಿಗೂ ಐಷಾರಾಮಿ ನೋಟ ಸಿಗುವಂತೆ ಮಾಡುತ್ತದೆ. ಇದರಲ್ಲಿ ಸಂಪೂರ್ಣ ಜರಿ ವಿನ್ಯಾಸ, ಎಂಬ್ರಾಯಿಡರಿ, ಮುತ್ತಿನ ವಿನ್ಯಾಸ, ಗ್ಲಾಸ್‌ಗಳ ಜೋಡಣೆ, ಹೂವಿನ ಚಿತ್ತಾರ, ಮಣಿಗಳ ಜೋಡಣೆ ಹೀಗೆ ಹಲವು ರೀತಿಯ ಐಷಾರಾಮಿ ವಿನ್ಯಾಸಗಳಿರುತ್ತವೆ. ಹಿಡಿಕೆಗೂ ಮಣಿಗಳನ್ನು ಜೋಡಿಸುವುದು ಇತ್ತೀಚಿನ ಟ್ರೆಂಡ್.

ಉಡುಗೊರೆಗಾಗಿ

ಮದುವೆ, ಗೃಹಪ್ರವೇಶದಂತಹ ಶುಭಸಮಾರಂಭಗಳಲ್ಲಿ ಅತಿಥಿಗಳಿಗೆ ಉಡುಗೊರೆ ರೂಪದಲ್ಲಿ ಪೋಟ್ಲಿ ಬ್ಯಾಗ್ ಆಯ್ಕೆ ಮಾಡಿಕೊಳ್ಳಬಹುದು. ಇದು ಎಲ್ಲಾ ವಯೋಮಾನದವರಿಗೂ ಹೊಂದುವ ಕಾರಣ ಹೆಣ್ಣುಮಕ್ಕಳು ಬಹಳ ಇಷ್ಟಪಟ್ಟು ಧರಿಸುತ್ತಾರೆ.

ನೈಸರ್ಗಿಕ ವಸ್ತ್ರ

ಸ್ವಾವಲಂಬನೆಯ ಅಸ್ತ್ರ



ಸ್ವಸಹಾಯ ಸಂಘದ ಮಹಿಳೆಯರಿಗೆ ಮಾಸ್ಕ್ ಹಾಗೂ ಮಕ್ಕಳ ಬಟ್ಟೆಗಳನ್ನು ಹೊಲಿಯಲು ಮಾರ್ಗದರ್ಶನ ನೀಡುತ್ತಿರುವ ಕೃಷಿ ವಿವಿ ತಜ್ಞರು

> ವಿಶ್ವವಿದ್ಯಾಲಯದ ನೆರವಿನೊಂದಿಗೆ ನೈಸರ್ಗಿಕ ಬಣ್ಣಗಳಿಂದ ಮಾಡಿದ ಬಟ್ಟೆಗಳಿಂದ ಪುಟ್ಟ ಮಕ್ಕಳಿಗೆ ವೈವಿಧ್ಯಮಯ ಉಡುಪುಗಳನ್ನು ತಯಾರಿಸುತ್ತಿರುವ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು, ಈ ಮೂಲಕ ಮನೆ ಬಾಗಿಲಿನಲ್ಲೇ ಸ್ವ ಉದ್ಯೋಗ ಕಂಡುಕೊಂಡಿದ್ದಾರೆ.

ಇ.ಎಸ್. ಸುಧೀಂದ್ರ ಪ್ರಸಾದ್

ಆ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಎಳೆ ಮಕ್ಕಳಿಗೆ ತೊಡಿಸುವ ಬಟ್ಟೆಗಳನ್ನು ಹೊಲಿಯುತ್ತಾರೆ. ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ಸಾವಿರಾರು ಮಾಸ್ಕ್‌ಗಳನ್ನು ಹೊಲಿದುಕೊಟ್ಟಿದ್ದಾರೆ. ಬಿತ್ತನೆ ಬೀಜ ತುಂಬುವ ಚೀಲಗಳು, ಫೈಲ್‌ಗಳು, ಅಂದದ ಪರ್ಸ್, ಮೊಬೈಲ್ ಪೌಚ್.. ಹೀಗೆ ಬಟ್ಟೆಯಿಂದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಪ್ರತಿ ತಿಂಗಳು, ಮನೆ ಬಾಗಿಲಲ್ಲೇ ₹ 6 ಸಾವಿರದಿಂದ ₹10 ಸಾವಿರದವರೆಗೂ ಸಂಪಾದಿಸುತ್ತಾ, ಸ್ವಾವಲಂಬನೆಯ ಬದುಕು ನಡೆಸುತ್ತಿದ್ದಾರೆ..!

ಇದು ಬೈಲಹೊಂಗಲ ತಾಲ್ಲೂಕಿನ ಸುತುಗಟ್ಟಿಯ ಕೃಷಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರ ಪುಟ್ಟ ಯಶಸ್ಸಿನ ಕಥೆ. ಈ ಸಂಘದವರು ಎಳೆ ಮಕ್ಕಳಿಗೆ ಹೊಲಿದು ಕೊಡುವ ಬಟ್ಟೆಗಳು ನೈಸರ್ಗಿಕ ಬಣ್ಣಗಳಿಂದ ತಯಾರಿಸಿದ್ದು ಎಂಬುದು ವಿಶೇಷ. ಈ ವಸ್ತ್ರಗಳು ಮಹಿಳೆಯರ ಸ್ವಾವಲಂಬನೆ ಬದುಕಿನ ಅಸ್ತ್ರವಾಗಿವೆ. ಮಹಿಳೆಯರ ಈ ಸ್ವಯಂ ಉದ್ಯೋಗದ ಸಾಹಸಕ್ಕೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಕಾಲೇಜಿನ ಜವಳಿ ವಿಭಾಗ ಬೆನ್ನೆಲುಬಾಗಿ ನಿಂತಿದೆ. ಸುತುಗಟ್ಟಿ ಕೃಷಿ ವಿಜ್ಞಾನ ಕೇಂದ್ರವೂ ಸಾಥ್ ನೀಡಿದೆ.

ವಿವಿಯ ಜವಳಿ ವಿಭಾಗದ ವಿಜ್ಞಾನಿಗಳು ನೈಸರ್ಗಿಕ ಬಣ್ಣಗಳ ತಯಾರಿಕೆಯ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದಾರೆ. ಈ ತಂತ್ರಜ್ಞಾನದಿಂದ ತಯಾರಾದ ಬಣ್ಣದ ಬಟ್ಟೆಗಳಿಗೆ ಈ ಸಂಘದ ಮಹಿಳೆಯರು ಉಡುಪಿನ ರೂಪ ನೀಡುತ್ತಿದ್ದಾರೆ. ಅಷ್ಟೇ ಅಲ್ಲ, ಬಟ್ಟೆಗೆ ಬಣ್ಣ ಹಾಕುವ ಪ್ರಕ್ರಿಯೆಯಲ್ಲೂ ತೊಡಗಿಸಿಕೊಳ್ಳುತ್ತಿದ್ದು, ಈ ಬಟ್ಟೆಗಳಿಂದ ಸೀರೆ, ಎಳೆ ಮಕ್ಕಳಿಗೆ ಶರ್ಟ್, ನ್ಯಾಪಿ, ಟೋಪಿ ಸಿದ್ಧಪಡಿಸುತ್ತಿದ್ದಾರೆ.

ಸುತುಗಟ್ಟಿ ಕೆವಿಕೆ ಆವರಣದಲ್ಲೇ ಈ ಉಡುಪುಗಳ ತಯಾರಿ ನಡೆಯುತ್ತದೆ. ಪ್ರತಿ ಸದಸ್ಯೆಗೆ, ಒಂದು ಬಟ್ಟೆ ಹೊಲಿದುಕೊಡಲು ಕೆವಿಕೆ ₹200 ನೀಡುತ್ತದೆ. ಗಾಢ ಬಣ್ಣ ಮತ್ತು ತೊಡಲು ಹಿತಕರವಾಗಿರುವ ಈ ವಸ್ತ್ರಗಳಿಗೆ ಉತ್ತಮ ಬೇಡಿಕೆ ಇದೆ. ಈ ಉಡುಪುಗಳನ್ನು ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಆಯುರ್ವೇದ ಆಸ್ಪತ್ರೆಯಲ್ಲಿ 'ತಾಯಿಯ ಮಡಿಲು' ಕಿಟ್ ಜೊತೆ ನೀಡಲಾಗುತ್ತಿದೆ.



ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಕಾಲೇಜಿನ ಜವಳಿ ವಿಭಾಗದಲ್ಲಿ ವಸ್ತ್ರಕ್ಕೆ ಚೆಂಡುಹೂವಿನ ಬಣ್ಣ ಲೇಪಿಸುತ್ತಿರುವ ಪ್ರಕ್ರಿಯೆ

ಮಾಸ್ಕ್, ಬೀಜ ತುಂಬವ ಚೀಲ

ಇತ್ತ ಧಾರವಾಡ ಕೃಷಿ ವಿವಿಯ ಸಮುದಾಯ ವಿಜ್ಞಾನ ಕಾಲೇಜಿನಲ್ಲಿ ಕೋವಿಡ್‌–19 ಸಂದರ್ಭದಲ್ಲಿ 35 ಸಾವಿರ ಮಾಸ್ಕ್‌ಗಳನ್ನು ಮಹಿಳೆಯರು ಸಿದ್ಧಪಡಿಸಿದ್ದಾರೆ. ಇದರಲ್ಲಿ ಎರಡು ಹಾಗೂ ಮೂರು ಪದರಗಳ ಮಾಸ್ಕ್ ಸೇರಿದಂತೆ ಹಲವು ಬಗೆಯ ವಿನ್ಯಾಸಗಳ ಮಾಸ್ಕ್‌ಗಳನ್ನು ಸಿದ್ಧಪಡಿಸಿದ್ದಾರೆ. ಪ್ರತಿ ಮಾಸ್ಕ್ ತಯಾರಿಕೆಗಾಗಿ ವಿಶ್ವವಿದ್ಯಾಲಯ ₹3 ದರ ನಿಗದಿಪಡಿಸಿದೆ.

ಕೃಷಿ ವಿವಿ ಬೀಜ ಘಟಕಕ್ಕೆ ಅಗತ್ಯವಿರುವ ಬೀಜ ಹಾಕುವ ಚೀಲಗಳನ್ನೂ ಈ ಮಹಿಳೆಯರೇ ಸಿದ್ಧಪಡಿಸುತ್ತಿದ್ದಾರೆ. 200 ಗ್ರಾಂಗಳಿಂದ 15 ಕೆ.ಜಿ ತೂಕ ಬೀಜ ಹಿಡಿಸುವ ಚೀಲದವರೆಗೂ ತಯಾರಿಸುತ್ತಾರೆ. ಇದಕ್ಕಾಗಿ ವಿ.ವಿ ಅಗತ್ಯವಾದ ಬಟ್ಟೆಯನ್ನು ಪೂರೈಸುತ್ತದೆ. ಈ ವರ್ಷ ಸುಮಾರು 60 ಸಾವಿರ ಚೀಲಗಳನ್ನು ಹೊಲಿದುಕೊಟ್ಟಿದ್ದಾರೆ. ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. 'ಕಣ'ದ ಬಟ್ಟೆ ಬಳಸಿ ಅಂದದ ಫೈಲ್‌ಗಳು, ಮೊಬೈಲ್ ಪೌಚ್, ಪರ್ಸ್ ಸೇರಿದಂತೆ ಹಲವು ಬಗೆಯ ವಸ್ತುಗಳನ್ನು ಮಹಿಳೆಯರು ಸಿದ್ಧಪಡಿಸುತ್ತಿದ್ದಾರೆ.

ವಿನ್ಯಾಸಕ್ಕೆ ತಕ್ಕಂತೆ ದರ ನಿಗದಿ

ವಸ್ತ್ರ, ನೂಲು ಸೇರಿದಂತೆ ಹಲವು ಪರಿಕರಗಳನ್ನು ಮಹಿಳೆಯರಿಗೆ ಜವಳಿ ವಿಭಾಗದಿಂದಲೇ ನೀಡಲಾಗುತ್ತಿದೆ. ತರಬೇತಿ ಪಡೆದ ಹಲವು ಮಹಿಳೆಯರಲ್ಲಿ ಕೆಲವರು ವಿಶ್ವವಿದ್ಯಾಲಯದಲ್ಲೇ ಈ ವಸ್ತ್ರಗಳನ್ನು ಸಿದ್ಧಪಡಿಸುತ್ತಾರೆ. ಇನ್ನೂ ಕೆಲವರು ಕಚ್ಚಾ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಬಟ್ಟೆಗಳನ್ನು ಹೊಲಿದುಕೊಡುತ್ತಿದ್ದಾರೆ. ಒಂದು ಫೈಲ್ ತಯಾರಿಸಿದರೆ ₹25, ಪೌಚ್‌ಗೆ ₹15 ಹೀಗೆ, ಆಯಾ ವಿನ್ಯಾಸಗಳಿಗೆ ತಕ್ಕಂತೆ ವಿಶ್ವವಿದ್ಯಾಲಯ ದರ ನಿಗದಿಪಡಿಸಿದೆ.

ಕೃಷಿ ವಿಶ್ವ ವಿದ್ಯಾಲಯದ ಬೇರೆ ಬೇರೆ ವಿಭಾಗಗಳಲ್ಲಿ ಹಾಗೂ ತಾಕುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮನೆಯ ಹೆಣ್ಣುಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಆ ಮೂಲಕ ಆರ್ಥಿಕ ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದ್ದಾರೆ.

'ಮಾಸ್ಕ್, ಪೌಚ್‌ಗಳ ಜೊತೆಗೆ ಕೃಷಿ ವಿಭಾಗದ ವಿದ್ಯಾರ್ಥಿಗಳ ಯೋಜನೆಗೆ(ಪ್ರಾಜೆಕ್ಟ್) ಅಗತ್ಯವಿರುವ ಕೀಟಬಲೆಗಳು ಹಾಗೂ ವಿವಿಧ ಬಗೆಯ ವಸ್ತ್ರಗಳನ್ನು ಸಿದ್ಧಪಡಿಸುತ್ತೇವೆ. ಇದು ಒಂದಷ್ಟು ಗಳಿಕೆಗೆ ದಾರಿಯಾಗಿದೆ' ಎನ್ನುವುದು ಸಂಘದ ಸದಸ್ಯೆ ಪಾರವ್ವ ಗೋಟಡಕಿ ಅವರ ಅಭಿಪ್ರಾಯ.

ಹೀಗೆ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಕಾಲೇಜಿನ ಜವಳಿ ವಿಭಾಗದ ಯೋಜನೆಗಳು ಹಲವು ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಮೂಲಕ ಆರ್ಥಿಕವಾಗಿ ಸಶಕ್ತರನ್ನಾಗಿಸಲು ನೆರವಾಗಿವೆ.

ಚಿತ್ರಗಳು: ಬಿ.ಎಂ. ಕೇದಾರನಾಥ

ಸೀರೆಗೆ ನೈಸರ್ಗಿಕ ಬಣ್ಣದ ಮೆರಗು

ಧಾರವಾಡ ಕೃಷಿ ವಿವಿಯ ಜವಳಿ ವಿಭಾಗದ ಸಂಶೋಧಕರು ಮೂರು ವರ್ಷಗಳ ಹಿಂದೆ ಚೆಂಡುಹೂವು, ಅಡಿಕೆ ಚೊಗರು, ತುಳಸಿ, ಮಂಜಿಷ್ಠದ ಬೇರು, ಸಾಗುವಾನಿ ಎಲೆ, ದಾಳಿಂಬೆಯ ಸಿಪ್ಪೆಯಿಂದ ಬಟ್ಟೆಗೆ ಹಾಕುವ ನೈಸರ್ಗಿಕ ಬಣ್ಣಗಳ ಉತ್ಪಾದನಾ ತಂತ್ರಜ್ಞಾನದ ಅಭಿವೃದ್ಧಿ ಆರಂಭಿಸಿದ್ದರು.

ಇದರ ಭಾಗವಾಗಿ ಅಡಿಕೆ ಚೊಗರಿನಿಂದ ಕಂದು ಬಣ್ಣ ಹಾಗೂ ಚೆಂಡು ಹೂವಿನಿಂದ ಹಳದಿ ಬಣ್ಣವನ್ನು ಸಿದ್ಧಪಡಿಸಿ, ಹತ್ತಿ ನೂಲಿನ ಲಡಿಗೆ ಲೇಪಿಸಿ, ಅದರಿಂದ ಸುಂದರವಾದ ಸೀರೆ ತಯಾರಿಸಿದರು. ಹತ್ತಿಯಷ್ಟೇ ಅಲ್ಲದೇ, ರೇಷ್ಮೆ ವಸ್ತ್ರಗಳಿಗೂ ಈ ನೈಸರ್ಗಿಕ ಬಣ್ಣವನ್ನು ಪ್ರಯೋಗಿಸಿ, ಯಶಸ್ವಿಯಾದರು.

ನೈಸರ್ಗಿಕ ಬಣ್ಣಗಳನ್ನು ಲೇಪಿಸಿದ ಹಾಗೂ ಅದೇ ಬಣ್ಣದ ದಾರಗಳಿಂದ ನೇಯ್ದ ಬಟ್ಟೆಗಳು ರಾಸಾಯನಿಕ ಮುಕ್ತ ಹಾಗೂ ಬ್ಯಾಕ್ಟೀರಿಯಾ ಸೋಂಕು ನಿರೋಧಕ ಹಾಗೂ ಅತಿನೇರಳೆ ಕಿರಣಗಳಿಂದ ರಕ್ಷಣೆ ನೀಡಬಲ್ಲ ವಸ್ತ್ರಗಳಾಗಿರುತ್ತವೆ ಎಂಬುದು ಸಂಶೋಧಕರ ಅಭಿಪ್ರಾಯ.

'ಲಡ್ಡು ತಳಿಯ ಚೆಂಡು ಹೂವಿನಿಂದ ಹಳದಿ ಬಣ್ಣ ತೆಗೆದಿದ್ದೇವೆ. ಸುಮಾರು ಒಂದು ಕೆ.ಜಿ. ಬಟ್ಟೆಗೆ ಬೇಕಾದ ಬಣ್ಣ ತಯಾರಿಕೆಗೆ ಸುಮಾರು 15 ಕೆ.ಜಿ. ಚೆಂಡುಹೂವಿನ ದಳಗಳು ಬೇಕು. ಆ ಚೆಂಡು ಹೂವನ್ನು ವಿವಿಯ ತಾಕುಗಳಲ್ಲೇ ಬೆಳೆಸಿದ್ದೇವೆ. ಸ್ವಲ್ಪ ಪ್ರಮಾಣದಲ್ಲಿ ರೈತರಿಂದಲೂ ಖರೀದಿಸುತ್ತೇವೆ. ಮಲೆನಾಡು ಭಾಗದ ರೈತರಿಂದ ಅಡಿಕೆ ಬೇಯಿಸಿದ ಚೊಗರು ಖರೀದಿಸಿ, ಅದರಿಂದ ಬಣ್ಣ ಉತ್ಪಾದಿಸುತ್ತೇವೆ' ಎಂದು ವಿಭಾಗದ ಮುಖ್ಯಸ್ಥೆ ಡಾ. ಜ್ಯೋತಿ ವಸ್ತ್ರದ ವಿವರಿಸುತ್ತಾರೆ.

'ಹೂವು, ಚೊಗರಿನಿಂದ ತಯಾರಿಸಿ ಬಣ್ಣಗಳನ್ನು ಕೆಲವು ಗಂಟೆಗಳ ಕಾಲ ಕುದಿಸಿ, ಅದರಲ್ಲಿ ವಸ್ತ್ರವನ್ನು ಅದ್ದಿ, ಪುನಃ ಕೆಲ ಹೊತ್ತು ಕುದಿಸುತ್ತೇವೆ. ನಂತರ ವಸ್ತ್ರವನ್ನು ಒಣಗಿಸುತ್ತೇವೆ. ಈ ಎಲ್ಲಾ ಪ್ರಕ್ರಿಯೆಗಳಲ್ಲೂ ಸ್ವಸಹಾಯ ಗುಂಪಿನ ಮಹಿಳೆಯರು ಪಾಲ್ಗೊಳ್ಳುತ್ತಾರೆ. ಇವರಿಗೆ ವಿಭಾಗದ ತಜ್ಞರು ನೆರವಾಗುತ್ತಿದ್ದಾರೆ' ಎಂದು ಜ್ಯೋತಿ ವಿವರಿಸಿದರು.

ಈ ಬಣ್ಣಗಳಿಂದ ಸಾಮಾನ್ಯ ವಸ್ತ್ರಗಳ ಮೇಲೆ ಬಗೆಬಗೆಯ ಚಿತ್ತಾರ ಬಿಡಿಸುವ ಪ್ರಯೋಗ ಯಶಸ್ವಿಯಾಗಿದೆ. ಇದೇ ವಸ್ತ್ರಗಳನ್ನು ಸ್ವಸಹಾಯ ಸಂಘದ ಮಹಿಳೆಯರಿಗೆ ನೀಡಿ, ಅವುಗಳಿಂದ ಎಳೆ ಮಕ್ಕಳಿಗೆ ಬೇಕಾದ ಉಡುಪುಗಳನ್ನು ಹೊಲಿಸಲಾಗುತ್ತಿದೆ. ಎಲ್ಲಾ ಹಂತಗಳಲ್ಲೂ ಈ ಪ್ರಯೋಗ ಯಶಸ್ವಿಯಾಗಿದ್ದು, ಶೀಘ್ರದಲ್ಲೇ ಈ ತಂತ್ರಜ್ಞಾನವನ್ನು ವಾಣಿಜ್ಯೀಕರಣ ಗೊಳಿಸಲು ವಿಶ್ವವಿದ್ಯಾಲಯ ಸಿದ್ಧತೆ ನಡೆಸಿದೆ ಎನ್ನುತ್ತಾರೆ ಜ್ಯೋತಿ.

ಪತ್ನಿಯೇ ಪ್ರೇಯಸಿ ಆಗದಿದ್ದರೆ...

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್



ಪುರುಷ. ಇತ್ತೀಚೆಗೆ ಮದುವೆಯಾಗಿದೆ. ಸಂಗಾತಿಯೊಡನೆ ಮಿಲನದಲ್ಲಿ ನಿಮಿರುದೌರ್ಬಲ್ಯ ಮತ್ತು ಶೀಘ್ರಸ್ಖಲನ ಸಮಸ್ಯೆ. ಎರಡು ವರ್ಷಗಳ ಹಿಂದೆ ಪ್ರೇಯಸಿಯೊಂದಿಗೆ ಈ ಸಮಸ್ಯೆಗಳಿರಲಿಲ್ಲ. ದೈಹಿಕವಾಗಿ ಆರೋಗ್ಯವಾಗಿದ್ದೇನೆ. ಔಷಧಿಗಳ ಅಗತ್ಯವಿದೆಯೇ? ಪರಿಹಾರವೇನು?

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪತ್ರದಲ್ಲಿಯೇ ಸಮಸ್ಯೆಗೆ ಪರಿಹಾರವಿರುವುದನ್ನು ಗಮನಿಸಿ. ಪತ್ನಿಯನ್ನು ನೀವಿನ್ನೂ ಪ್ರೇಯಸಿಯನ್ನಾಗಿ ಮಾಡಿಕೊಂಡಿಲ್ಲ. ಹೀಗೆ ಮಾಡಲು ನಿಮ್ಮ ಮನಸ್ಸಿನಲ್ಲಿರುವ ಹಿಂಜರಿಕೆಗಳೇನಿರಬಹುದು? ಪತ್ನಿಯೆದುರು ಮನಸ್ಸನ್ನು ತೆರೆಯಲು ಕಷ್ಟಪಡುತ್ತಿದ್ದೀರಲ್ಲವೇ? ಪತ್ನಿಯ ಲೈಂಗಿಕ ಆಸಕ್ತಿಯ ಕುರಿತಾಗಿ ತಿಳಿದುಕೊಳ್ಳದೆ ಅವರನ್ನು ತೃಪ್ತಿಪಡಿಸುವ ಜವಾಬ್ದಾರಿಯನ್ನು ನೀವು ತೆಗೆದುಕೊಂಡಿರಬಹುದೇ? ಪರಸ್ಪರ ಲೈಂಗಿಕತೆಯ ಪರಿಚಯವೇ ಇಲ್ಲದಿರುವಾಗ ತಪ್ಪು ಕಲ್ಪನೆಗಳಿಂದ ಆತಂಕ ಮೂಡುವುದು ಸಹಜ. ನಿಮ್ಮ ಸಮಸ್ಯೆಗಳಿಗೆ ಕಾರಣ ನಿಮ್ಮೊಳಗಿರುವ ಆತಂಕ. ನಿಮಗೆ ಯಾವುದೇ ಔಷಧಿಗಳ ಅಗತ್ಯವಿಲ್ಲ. ಇಬ್ಬರೂ ನಿಮ್ಮ ಲೈಂಗಿಕತೆಯ ಕುರಿತಾಗಿ ಮುಕ್ತವಾಗಿ ಮಾತನಾಡುವುದು ಖಾಯಂ ಆದ ಪರಿಹಾರ ನೀಡುತ್ತದೆ. ಪತ್ನಿ ಪ್ರೇಯಸಿಯಾದಾಗ ಸಮಸ್ಯೆಗಳು ಮಾಯವಾಗುತ್ತವೆ. ಅಗತ್ಯವಿದ್ದರೆ ಲೈಂಗಿಕ ಮನೋಚಿಕಿತ್ಸಕರ ಸಹಾಯ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು...

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in


ನಾಟಿಶೈಲಿಯ ಚಿಂತಾಮಣಿ ಚಿಕನ್

ದೀಪಕ್ ಗೌಡ

ನಳಪಾಕ

ಚಿಂತಾಮಣಿ ಚಿಕನ್

ಬೇಕಾಗುವ ಸಾಮಗ್ರಿಗಳು: ಚಿಕನ್- 1/2 ಕೆ.ಜಿ, ಗುಂಟೂರು ಮೆಣಸಿನಕಾಯಿ –20, ನಾಟಿ ಈರುಳ್ಳಿ- 1/2 ಕೆ.ಜಿ, ಉಪ್ಪು- 2 ಚಮಚದಷ್ಟು, ಅಡುಗೆ ಎಣ್ಣೆ- 1 ಟೇಬಲ್ ಚಮಚ, ಕೊತ್ತಂಬರಿ- 2 ಟೇಬಲ್ ಚಮಚ, ಸೊಂಪು- ಅರ್ಧ ಚಮಚ, ಸಾಸಿವೆ- ಅರ್ಧ ಚಮಚ, ಅರಿಸಿನ- ಅರ್ಧ ಚಮಚ, ಬೆಳ್ಳುಳ್ಳಿ- 4/5 ಎಸಳು, ಶುಂಠಿ- ಸಣ್ಣ 1 ತುಂಡು, ಲವಂಗ- 4-5, ಚಕ್ಕೆ- ಸಣ್ಣ 1 ತುಂಡು/ಎಲೆಯಾದರೆ ಪೂರ್ತಿ ಒಂದು, ಸ್ವಲ್ಪ ಕೊತ್ತಂಬರಿ ಸೊಪ್ಪು, ಸ್ವಲ್ಪ ಕರಿಬೇವಿನ ಸೊಪ್ಪು.



ತಯಾರಿಸುವ ವಿಧಾನ: ಒಂದು ಅಗಲವಾದ ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ, ಉದ್ದುದ್ದು ಹೆಚ್ಚಿದ ಅರ್ಧ ಈರುಳ್ಳಿ, ಸ್ವಲ್ಪ ಕರಿಬೇವಿನ ಸೊಪ್ಪು, ಕಾಲು ಚಮಚ ಸಾಸಿವೆ ಹಾಕಿ. ಈರುಳ್ಳಿ ಬೆಂದು ಕೆಂಪಾದ ಮೇಲೆ ಚಿಕನ್ ಹಾಕಿ. ಕಾಲು ಚಮಚ ಅರಿಸಿನ, 2 ಚಮಚದಷ್ಟು ಉಪ್ಪು ಹಾಕಿ. ಚೆನ್ನಾಗಿ ಮಿಶ್ರಣ ಮಾಡಿ. ಬೇಯಲು ಬಿಡಿ.

ಮಸಾಲೆಗೆ: ಮೊದಲಿಗೆ ಗೊಜ್ಜು ಸಿದ್ಧಪಡಿಸಿಕೊಳ್ಳಿ. ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ, ಸ್ಟೌವ್ ಸಣ್ಣ ಉರಿಯಲ್ಲಿರಲಿ. ಸ್ವಲ್ಪ ಕರಿಬೇವು, ಸಾಸಿವೆ, ಕೊತ್ತಂಬರಿ, ಚಕ್ಕೆ, ಲವಂಗ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಎಲ್ಲವನ್ನು ಹಾಕಿ ಚೆನ್ನಾಗಿ ಬೆರೆಸಿಕೊಡಿ. ಸಣ್ಣ ಗಾತ್ರದಲ್ಲಿ ಕತ್ತರಿಸಿದ ಚಿಕನ್ ಅದರಲ್ಲಿ ಹಾಕಿ, ಕುದಿಯಲು ಬಿಡಿ. ನಂತರ ತೆಂಗಿನಕಾಯಿ ತುರಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಕೊನೆಯಲ್ಲಿ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಘಮ ಘಮ ಚಿಂತಾಮಣಿ ಚಿಕನ್ ಸಿದ್ಧ.

ಮಟನ್ ಕರಿ



ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 2 ದೊಡ್ಡದು ಹೆಚ್ಚಿದ್ದು, ಟೊಮೆಟೊ – 2 ದೊಡ್ಡದು ಹೆಚ್ಚಿದ್ದು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 3 ಚಮಚ, ಗರಂ ಮಸಾಲೆ – 2 ಚಮಚ, ಕೊತ್ತಂಬರಿ ಪುಡಿ – 2 ಚಮಚ, ಜೀರಿಗೆ ಪುಡಿ – 2 ಚಮಚ, ಅರಿಸಿನ – ಅರ್ಧ ಚಮಚ, ಖಾರದಪುಡಿ – ಅರ್ಧ ಚಮಚ, ಕುರಿ ಮಾಂಸ – ಅರ್ಧ ಕೆ.ಜಿ, ಉಪ್ಪು – ರುಚಿಗೆ, ಎಣ್ಣೆ- ಸ್ವಲ್ಪ, ಕೊತ್ತಂಬರಿ ಸೊಪ್ಪು – ಹೆಚ್ಚಿದ್ದು 2 ಚಮಚ.

ತಯಾರಿಸುವ ವಿಧಾನ: ಕುಕರ್‌ನಲ್ಲಿ 1 ಕೆ.ಜಿ ಮಟನ್, 2 ಕಪ್ ನೀರು ಅದಕ್ಕೆ ಸ್ವಲ್ಪ ಉಪ್ಪು ಮತ್ತು ಅರಿಸಿನ ಪುಡಿ ಹಾಕಿ ಬೇಯಿಸಿ ಇಟ್ಟುಕೊಳ್ಳಿ. ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಈರುಳ್ಳಿ ಹಾಕಿ ಬಣ್ಣ ಬದಲಾಗುವವರೆಗೂ ಹುರಿಯಿರಿ. ನಂತರ ಟೊಮೆಟೊ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಬೆರೆಸಿ ಹುರಿದುಕೊಳ್ಳಿ. ಇದಕ್ಕೆ ಯಾವುದೇ ರೀತಿಯ ಮಸಾಲೆ ರುಬ್ಬುವ ಅಗತ್ಯ ಇರುವುದಿಲ್ಲ.

ಅದಕ್ಕೆ ಅರ್ಧ ಚಮಚ ಅರಿಸಿನ ಪುಡಿ, 1 ಚಮಚ ದನಿಯಾ ಪುಡಿ, 2 ಚಮಚ ಕಾರದ ಪುಡಿ, ಅರ್ಧ ಚಮಚ ಗರಂ ಮಸಾಲೆ, ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ, ಎಣ್ಣೆ ಬಿಡುವವರೆಗೂ ಕುದಿಸಿ. ಕುರಿ ಮಾಂಸವನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಮಸಾಲೆ ಹೋಳುಗಳಿಗೆ ಹಿಡಿಯುವವರೆಗೆ ಕೈಯಾಡಿಸಿ. ನಂತರ ಒಂದು ಕಪ್ ನೀರು ಹಾಕಿ ಮತ್ತೆ ಎಲ್ಲವನ್ನೂ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಕುರಿ ಮಾಂಸ ಬೇಯುವವರೆಗೆ ಬೇಯಿಸಿ. ಚೆನ್ನಾಗಿ ಕುದಿದು, ಮಾಂಸ ಬೆಂದು ಮಂದ ಆಗುವವರೆಗೂ ಕುದಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಕೊತ್ತಂಬರಿ ಸೊಪ್ಪನ್ನು ಉದುರಿಸಿ.

ಚಪ್ಪಾತಿ, ದೋಸೆ, ಮುದ್ದೆ, ಅನ್ನದ ಜೊತೆಗೆ ಗ್ರೇವಿ ಬೆರೆಸಿಕೊಳ್ಳಬೇಕಾದರೆ ಮಾತ್ರ 2 ಕಪ್ ಮಟನ್ ಬೇಯಿಸಿದ ನೀರನ್ನು ಹಾಕಿಕೊಂಡು ಕುದಿಸಬೇಕು. ತಳ ಹಿಡಿಯದಂತೆ ಕೈಯಾಡಿಸುತ್ತಾ ಇರಬೇಕು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಅತ್ಯಂತ ಚಿಕ್ಕದಾದ ಕೀಲಿಕೈ ಭಾರಿ ಬಲಿಷ್ಠವಾದ ಬಾಗಿಲನ್ನು ತೆರೆಯಬಲ್ಲದು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

–ಚಾರ್ಲ್ಸ್ ಡಿಕನ್ಸ್

ಅಸಮಾನತೆ ನಿವಾರಣೆ ಕ್ರಮಗಳು ಜಾಗತಿಕ ನೆಮ್ಮದಿಗೆ ಅನಿವಾರ್ಯ

ನಮ್ಮ ಸಮಾಜದಲ್ಲಿ ಮತ್ತು ಅರ್ಥ ವ್ಯವಸ್ಥೆಯಲ್ಲಿ ಅಸಮಾನತೆ ಸದಾ ಇದ್ದೇ ಇತ್ತು. ಜನಸಮುದಾಯಗಳು ಮತ್ತು ಜನರು ಅದರ ಜತೆಗೇ ಬದುಕುತ್ತಿದ್ದಾರೆ ಮತ್ತು ಅಸಮಾನತೆಯನ್ನು ಕಡಿಮೆ ಮಾಡಲು ತಮ್ಮ ಕೈಲಾದ ಪ್ರಯತ್ನ ಮಾಡುತ್ತಲೇ ಇದ್ದಾರೆ. ಸಮಸ್ಯೆಗಳನ್ನು ನಿವಾರಿಸುವ ಮತ್ತು ವಿವಿಧ ರೀತಿಯಲ್ಲಿ ಅವುಗಳನ್ನು ಪರಿಹರಿಸುವ ಪ್ರಯತ್ನಗಳು ನಡೆದಿವೆ. ನೈಸರ್ಗಿಕ ಮತ್ತು ಇತರ ರೀತಿಯ ವಿದ್ಯಮಾನಗಳು ಅಂತರವನ್ನು ಇನ್ನಷ್ಟು ಹೆಚ್ಚಿಸಿ ಸಮಸ್ಯೆಯ ಬಿಗಡಾಯಿಸುವಂತೆ ಮಾಡಿವೆ; ಸಂಪರ್ಕಗಳು, ಬಂಧಗಳು ಕುಸಿಯುವಂತೆ ಮಾಡಿ ಪರಿಸ್ಥಿತಿಯನ್ನು ಇನ್ನಷ್ಟು ಪೋಲವಾಗಿಸಿದ್ದೂ ಇದೆ. ಕೋವಿಡ್-19 ಸಾಂಕ್ರಾಮಿಕ ಕೂಡ ಅದನ್ನೇ ಮಾಡಿದೆ. ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಶೃಂಗಸಭೆಗೂ ಮುನ್ನ ಪ್ರಕಟವಾದ ಆಕ್ಸ್‌ಫಾಮ್ ವರದಿಯಲ್ಲಿ ಅಸಮಾನತೆ ಹೆಚ್ಚಳದ ಬಗ್ಗೆ ವಿವರಗಳು ಇವೆ. ಭಾರತದ ಶೇ 84ರಷ್ಟು ಕುಟುಂಬಗಳ ಆದಾಯವು 2021ರಲ್ಲಿ ಗಣನೀಯವಾಗಿ ಕುಸಿದಿದೆ; ಅದೇ ಹೊತ್ತಿಗೆ ಸಹಸ್ರ ಕೋಟ್ಯಧಿಪತಿಗಳ ಸಂಖ್ಯೆ 102ರಿಂದ 142ಕ್ಕೆ ಏರಿದೆ. ತಳಮಟ್ಟದಲ್ಲಿ ಇರುವ 55.2 ಕೋಟಿ ಜನರಲ್ಲಿ ಒಟ್ಟಾಗಿ ಇರುವಷ್ಟು ಸಂಪತ್ತು ಭಾರತದ ಅತ್ಯಂತ ಶ್ರೀಮಂತ 98 ವ್ಯಕ್ತಿಗಳಲ್ಲಿ ಇದೆ. ದೇಶದ ಶೇ 10ರಷ್ಟು ಅತಿ ಹೆಚ್ಚು ಶ್ರೀಮಂತರಲ್ಲಿ ಶೇ 57ರಷ್ಟು ಸಂಪತ್ತು ಇದೆ. ತಳಮಟ್ಟದಲ್ಲಿ ಇರುವ ಅರ್ಧದಷ್ಟು ಜನರಲ್ಲಿ ಶೇ 13ರಷ್ಟು ಸಂಪತ್ತು ಮಾತ್ರ ಇದೆ.



ಅಂತರರಾಷ್ಟ್ರೀಯವಾಗಿ ನೋಡಿದಾಗಲೂ ಅಸಮಾನತೆಯ ಪ್ರಮಾಣ ಹೆಚ್ಚಾಗಿದೆ. ಜಾಗತಿಕ ನೆಲೆಯಲ್ಲಿ ಗಮನಿಸಿದಾಗ, ಶೇ 99ರಷ್ಟು ಜನರ ತಮ್ಮ ಆದಾಯದಲ್ಲಿ ಕುಸಿತ ಕಂಡಿದ್ದಾರೆ. 16 ಕೋಟಿ ಜನರು ಬಡತನದ ಬೇಗೆಗೆ ಒಳಗಾಗಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಬಡ ಮತ್ತು ಶ್ರೀಮಂತ ದೇಶಗಳ ನಡುವಣ ಅಂತರ ಕೂಡ ಹೆಚ್ಚುತ್ತಲೇ ಇದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಇದರ ಹೊಡೆತ ಹೆಚ್ಚು ತೀವ್ರವಾಗಿದೆ. ಮಹಿಳೆಯರು, ಮಕ್ಕಳು ಮತ್ತು ಅಲ್ಪಸಂಖ್ಯಾತರಂತಹ ದುರ್ಬಲ ವರ್ಗಗಳ ಮೇಲೆ ಪ್ರತಿಕೂಲ ಪರಿಣಾಮ ಹೆಚ್ಚು ಗಾಢವಾಗಿದೆ. ಅಸಮಾನತೆಯಿಂದಾಗಿ ಹಸಿವು ಅಥವಾ ಅನಾರೋಗ್ಯದ ಕಾರಣದಿಂದ ಪ್ರತೀ ದಿನ 21 ಸಾವಿರ ಜನರು ಸಾಯುತ್ತಿದ್ದಾರೆ. ಕೋವಿಡ್-19 ಸಾಂಕ್ರಾಮಿಕಕ್ಕೆ ಜಗತ್ತು ನೀಡಿದ ಪ್ರತಿಕ್ರಿಯೆ ರೀತಿಯು ಪ್ರತಿಯೊಂದು ರೀತಿಯ ಅಸಮಾನತೆಯನ್ನೂ ಹೆಚ್ಚಿಸಿದೆ ಎಂಬುದಾಗಿ ವರದಿಯು ಬೆಳಕು ಚೆಲ್ಲಿದೆ. 'ಅಸಮಾನತೆಯು ಅನಾರೋಗ್ಯಕರ, ಅಸಂತೃಪ್ತಿಕರ ಸಮಾಜ ನಿರ್ಮಿಸಿದ್ದಷ್ಟೇ ಅಲ್ಲದೆ, ಹಿಂಸೆಗೂ ಕಾರಣವಾಗಿದೆ. ಅಸಮಾನತೆಯು ಹಂತಕನೂ ಹೌದು' ಎಂದು ವರದಿಯ ಉಪಸಂಹಾರದಲ್ಲಿ ಹೇಳಲಾಗಿದೆ.

ದೇಶದಲ್ಲಿ ದಿನ ಕಳೆದಂತೆ ಹದಗೆಡುತ್ತಿರುವ ಅಸಮಾನತೆಯ ಸಮಸ್ಯೆಯನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಬಗೆಹರಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕಿದೆ

ಹೆಚ್ಚುತ್ತಿರುವ ಅಸಮಾನತೆಯನ್ನು ಕಡಿಮೆ ಮಾಡಲು ಮತ್ತು ಅದರ ಪರಿಣಾಮವನ್ನು ಕನಿಷ್ಠಗೊಳಿಸಲು ಕೈಗೊಳ್ಳಬಹುದಾದ ಹಲವು ಕ್ರಮಗಳ ಮತ್ತು ನೀತಿಗಳ ಬಗ್ಗೆ ವರದಿಯು ಸಲಹೆಗಳನ್ನು ಮುಂದಿಟ್ಟಿದೆ. ದುರ್ಬಲ ವರ್ಗಗಳ ಮತ್ತು ಕಾರ್ಮಿಕರಿಗೆ ಉತ್ತಮ ರಕ್ಷಣೆ ಒದಗಿಸುವುದಕ್ಕಾಗಿ ಕಾನೂನು ಚೌಕಟ್ಟಿನ ಅಗತ್ಯ ಇದೆ ಎಂದು ವರದಿಯು ಹೇಳಿದೆ. ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಈ ವರ್ಗಗಳಿಗೆ ಪ್ರಾತಿನಿಧ್ಯ ಕಲ್ಪಿಸುವುದರ ಪರವಾಗಿಯೂ ವರದಿಯು ವಾದಿಸಿದೆ. ಬಡ ದೇಶಗಳ ಜನರಿಗೆ ಲಸಿಕೆಯು ತ್ವರಿತವಾಗಿ ಸಿಗುವಂತಾಗಲು ಲಸಿಕೆಗಳ ಮೇಲಿನ ಬೌದ್ಧಿಕ ಆಸ್ತಿ ಹಕ್ಕನ್ನು ಮನ್ನಾ ಮಾಡಬೇಕಾದ ಅಗತ್ಯ ಇದೆ ಎಂದು ವರದಿಯು ಪ್ರತಿಪಾದಿಸಿದೆ. ಸಾಂಕ್ರಾಮಿಕದ ಅವಧಿಯಲ್ಲಿ ಸೃಷ್ಟಿಯಾದ ಸಂಪತ್ತಿನ ಮೇಲೆ ತೆರಿಗೆ ಹೇರಬೇಕು ಎಂದು ವರದಿಯು ಸರ್ಕಾರಗಳನ್ನು ಬಲವಾಗಿ ಒತ್ತಾಯಿಸಿದೆ. ಹೀಗೆ ಸಂಗ್ರಹವಾದ ಹಣವನ್ನು ಸಾರ್ವತ್ರಿಕ ಆರೋಗ್ಯ ರಕ್ಷಣೆ ಸೇವೆಗಳು, ಸಾಮಾಜಿಕ ಭದ್ರತಾ ಯೋಜನೆಗಳು, ಹವಾಮಾನ ಬದಲಾವಣೆ ತಡೆ ಕ್ರಮಗಳು, ಲಿಂಗತ್ವ ಆಧಾರಿತ ಹಿಂಸೆ ತಡೆ ಮತ್ತು ಇಂತಹ ಇತರ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕು ಎಂದು ವರದಿಯು ಆಗ್ರಹಿಸಿದೆ. ಅಮೆರಿಕ ಮತ್ತು ಚೀನಾ ಇಂತಹ ನೀತಿ ಜಾರಿಯ ಬಗ್ಗೆ ಪರಿಶೀಲನೆ ನಡೆಸುತ್ತಿವೆ ಎಂಬುದನ್ನು ವರದಿಯು ಗುರುತಿಸಿದೆ. ಭಾರತದಲ್ಲಿ ಅಸಮಾನತೆಯ ಸಮಸ್ಯೆಯು ತೀವ್ರವಾಗಿದೆ ಮತ್ತು ದಿನ ಕಳೆದಂತೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಹಾಗಾಗಿ, ಅಸಮಾನತೆಯ ಸಮಸ್ಯೆಯನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಬಗೆಹರಿಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳಬೇಕಿದೆ. ಅಸಮಾನತೆಯ ಪ್ರಮಾಣವನ್ನು ಕಡಿಮೆ ಮಾಡುವುದಕ್ಕಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ವಿವಿಧ ಕಾರ್ಯಕ್ರಮಗಳಿಗೆ ಸಂಪನ್ಮೂಲ ಒದಗಿಸುವ ಹಲವು ಪ್ರಸ್ತಾವಗಳನ್ನು ಕೂಡ ವರದಿಯು ಸರ್ಕಾರಗಳ ಮುಂದಿಟ್ಟಿದೆ.

ಸಂವಿಧಾನವು ತನ್ನ ಪ್ರತಿಯೊಂದು ಅಧ್ಯಾಯದಲ್ಲೂ ಮುಕ್ತವಾಗಿ ತೆರೆದುಕೊಂಡಿದೆ. ಆದರೆ ನಾವು...?

ನಮ್ಮ ಸಂವಿಧಾನ ಮತ್ತು ನಾವು



ವಿಶ್ಲೇಷಣೆ

ರಾಜಾರಾಮ ತೋಳ್ಪಾಡಿ
ನಿತ್ಯಾನಂದ ಬಿ. ಶೆಟ್ಟಿ

ಆಧುನಿಕ ಸಮಾಜಗಳ ರಾಜಕೀಯ ನೀತಿಸಂಹಿತೆ ಎಂದು ಕರೆಯಬಹುದಾದ ಎಲ್ಲ ಸಂವಿಧಾನಗಳು ಪರಸ್ಪರ ಅವಲಂಬಿತವಾದ ಮೂರು ಅಂಶಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ಮೊದಲನೆಯದು ಸ್ವಾತಂತ್ರ್ಯ, ಸಮಾನತೆ, ಹಕ್ಕು-ಕರ್ತವ್ಯಗಳೇ ಮೊದಲ್ಗೊಂಡ ಪ್ರಮುಖ ತಾತ್ವಿಕ ಮೌಲ್ಯಗಳು. ಎರಡನೆಯದು, ಸಂಸತ್ತು, ಮಂತ್ರಿಮಂಡಲ, ನ್ಯಾಯಾಂಗ ಎಂಬಿತ್ಯಾದಿ ಮಹತ್ವದ ಸಂಘ-ಸಂಸ್ಥೆಗಳು. ಮೂರನೆಯದಾಗಿ, ಚುನಾವಣೆ, ಆಂದೋಲನ, ಸಾರ್ವಜನಿಕ ಅಭಿವ್ಯಕ್ತಿಯಂತಹ ಕ್ರಿಯಾಚರಣೆಗಳು.

ಪ್ರಮುಖ ತಾತ್ವಿಕ ಮೌಲ್ಯಗಳ ಪ್ರತಿಪಾದನೆ, ಮಹತ್ವದ ಸಂಘ-ಸಂಸ್ಥೆಗಳ ಪ್ರತಿಷ್ಠಾಪನೆ ಮತ್ತು ಸಾಮುದಾಯಿಕ ಕ್ರಿಯಾಚರಣೆಗಳಿಗೆ (ಆ್ಯಕ್ಟಿವಿಸಂ) ಮುಕ್ತ ಅವಕಾಶ ಮಾಡಿಕೊಡುವ ಸಂವಿಧಾನಗಳು ತಮ್ಮತಮ್ಮ ಸಮಾಜಗಳ ರಾಜಕಾರಣದ ಸ್ವರೂಪವನ್ನು ನಿರ್ಧರಿಸುತ್ತವೆ.

ಭಾರತದ ಸಂವಿಧಾನಕ್ಕೆ ಈಗ ಎಪ್ಪತ್ತೆರಡು ವರ್ಷ. ಈ ಕಾಲಘಟ್ಟದಲ್ಲಿ ನಮ್ಮ ರಾಜಕಾರಣ ಮತ್ತು ಸಂವಿಧಾನದ ಬಗ್ಗೆ ಅವಲೋಕನ ರೂಪದ ಟಿಪ್ಪಣಿಯೊಂದನ್ನು ಬರೆಯುವುದು ಈ ಲೇಖನದ ಉದ್ದೇಶ.

ನಮ್ಮ ಸಂವಿಧಾನದ ಸ್ವರೂಪ ಮತ್ತು ಕಳೆದ ಏಳು ದಶಕಗಳ ಅದರ ಕಾರ್ಯವಿಧಾನಗಳ ಕುರಿತು ತಜ್ಞರು ಬಗೆಬಗೆಯ ವಿಮರ್ಶೆ ಮಾಡಿದ್ದಾರೆ. ಭಾರತದ ಸಂವಿಧಾನ ತಜ್ಞರಲ್ಲಿ ಪ್ರಮುಖರಾದ ಗ್ರೆನ್‌ವಿಲ್ ಆಸ್ಟಿನ್ ನಮ್ಮ ಸಂವಿಧಾನವನ್ನು 'ವಕೀಲರ ಸ್ವರ್ಗ'ವೆಂದು ವರ್ಣಿಸಿದ್ದಾರೆ. ಅಂತೆಯೇ, ಸಂವಿಧಾನ ಸಭೆಯ ಸದಸ್ಯರಲ್ಲೊಬ್ಬರಾದ ಎಚ್.ವಿ.ಕಾಮತ್ ಅವರು ಭಾರತದ ಸಂವಿಧಾನವನ್ನು 'ಬೃಹತ್ ಗಾತ್ರದ ಕ್ಲಿಷ್ಟ ನಿಘಂಟು' ಎಂದಿದ್ದಾರೆ. ಈ ಟೀಕೆಗಳಾಚೆಗೂ ಭಾರತೀಯ ಸಂವಿಧಾನವನ್ನು 'ಸಂಕೀರ್ಣವಾದ, ಸಂಯಮಶೀಲವಾದ, ಪ್ರಗತಿಪರವಾದ, ಪ್ರಜಾತಾಂತ್ರಿಕವಾದ, ರಾಜಕೀಯ ನೀತಿಸಂಹಿತೆ'- ಎಂದು ಎಲ್ಲ ತಜ್ಞ ಓದುಗರೂ ಮಾನ್ಯ ಮಾಡಿದ್ದಾರೆ.

ಇತರೆ ಪ್ರಜಾತಾಂತ್ರಿಕ ದೇಶಗಳ ಸಂವಿಧಾನಗಳಂತೆಯೇ ನಮ್ಮ ಸಂವಿಧಾನವೂ ಅನೇಕ ಬಗೆಯ ಚಾರಿತ್ರಿಕ- ಸಾಂಸ್ಕೃತಿಕ ಒತ್ತಡಗಳ ನಡುವೆ ಹುಟ್ಟಿದೆ. ಇದರ ಜೊತೆಗೆ ಭಾರತದ ಸಂವಿಧಾನವು ಭಾರತೀಯ ಸಮಾಜದ ಬಹುಸಂಸ್ಕೃತೀಯ ವಿಷಮ- ವೈವಿಧ್ಯಗಳ ಅರಿವಿನಲ್ಲಿ ರೂಪುಗೊಂಡಿದೆಯೆಂಬುದೂ ನಾವೆಲ್ಲರೂ ತಿಳಿದಿರಬೇಕಾದ ಪ್ರಾಥಮಿಕ ಸತ್ಯ. ಸುದೀರ್ಘ ಅವಧಿಯ ವಸಾಹತುಶಾಹಿ ಆಡಳಿತ, ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸಿದ ಸಮಾಜ ಸುಧಾರಣಾ ಪ್ರಯತ್ನಗಳು, ಬಗೆಬಗೆಯ ಸೈದ್ಧಾಂತಿಕ ಹಿನ್ನೆಲೆಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ, ಸಂವಿಧಾನ ಸಭೆಯಲ್ಲಿನ ತೀಕ್ಷ್ಣ ವಾದ ವಾಗ್ವಾದಗಳ ಮಥನದಲ್ಲಿ ಒಡಮೂಡಿದ ಅರಿವು ಮತ್ತು ಸ್ವಾತಂತ್ರ್ಯೋತ್ತರ ರಾಜಕಾರಣದ ತಿಕ್ಕಾಟಗಳು ನಮ್ಮ ಸಂವಿಧಾನವನ್ನು ರೂಪಿಸಿವೆ- ರೂಪಾಂತರಿಸಿವೆ.

ಈ ರೂಪ- ರೂಪಾಂತರಗಳ ನಡುವೆ ಭಾರತದ ಸಂವಿಧಾನ ಪ್ರಜಾತಂತ್ರ, ಸೆಕ್ಯುಲರ್‌ವಾದ, ಫೆಡರಲಿಸಮ್ ಮತ್ತು ಸಾಮಾಜಿಕ ನ್ಯಾಯಗಳೆಂಬ ನಾಲ್ಕು ಉದಾತ್ತ ತತ್ವಗಳನ್ನು ನಿರಂತರವಾಗಿ ಪ್ರತಿಪಾದಿಸಿಕೊಂಡು ಬಂದಿದೆ. ಆ ಕುರಿತು ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕು.

ಪ್ರಜಾತಂತ್ರವೆನ್ನುವ ಸಂಕೀರ್ಣವಾದ ಜೀವನ ದೃಷ್ಟಿಯನ್ನು ಭಾರತದ ಸಂವಿಧಾನ ನಮ್ಮ ಸಾರ್ವಜನಿಕ ಜೀವನದ ಬುನಾದಿ ಸಿದ್ಧಾಂತವನ್ನಾಗಿಸಿದೆ. ಈ ಜೀವನದೃಷ್ಟಿಯನ್ನು ವಾಸ್ತವದಲ್ಲಿ ನಿಜಗೊಳಿಸುವುದಕ್ಕಾಗಿ ಸಂಸದೀಯ ಮಾದರಿಯ ರಾಜಕೀಯ ಪದ್ಧತಿಯನ್ನು ಸಂವಿಧಾನ ನಮ್ಮ ಮುಂದಿಟ್ಟಿದೆ. ಈ ಸಂಸದೀಯ ಪ್ರಜಾಸತ್ತೆ, ವಸಾಹತು ಆಡಳಿತದ ಮೂಲಕವೇ ಭಾರತೀಯರಾದ ನಮ್ಮ ಅನುಭವಕ್ಕೆ ಬಂದದ್ದು. ಹಾಗಿದ್ದರೂ ಇದನ್ನು ಅನುಕರಣೆಯೆಂದು ತಿಳಿಯಬಾರದು. ಯಾಕೆಂದರೆ ನಾವು ಬಹುಸಂಸ್ಕೃತೀಯ ಸಮಾಜದವರಾಗಿರುವುದರಿಂದ ಇಲ್ಲಿಯ ರಾಜಕಾರಣದ ನಿಭಾವಣೆಯಲ್ಲಿ ಸಮುದಾಯಗಳ ಪ್ರಾತಿನಿಧ್ಯದ ಅವಶ್ಯಕತೆಯನ್ನು ನಮ್ಮ ಸಂವಿಧಾನ ಮನಗಂಡಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಚಲನಶೀಲವಾಗಿದ್ದ ಪ್ರಜಾತಂತ್ರದ ಕಲ್ಪನೆಯನ್ನು ಮೂರ್ತರೂಪವನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ನಮ್ಮ ಸಂವಿಧಾನದ್ದು. ಹಾಗಾಗಿ ತನ್ನ ಸುದೀರ್ಘ ಇತಿಹಾಸದಲ್ಲಿ ನಿರ್ದಿಷ್ಟ ರೂಪದ ರಾಜಕೀಯ ಪದ್ಧತಿಯಾಗಿ ಸಾಕಾರಗೊಂಡ ಭಾರತದ ಪ್ರಜಾತಂತ್ರದ, ಸಾಂಸ್ಕೃತಿಕ- ಚಾರಿತ್ರಿಕ ಸನ್ನಿವೇಶವನ್ನು ಮರೆತು ಇದನ್ನು ಬ್ರಿಟಿಷ್ ಸಂಸದೀಯ ಪದ್ಧತಿಯ ನಕಲಿ ಎಂದು ಪರಿಗಣಿಸುವುದು ವಿವೇಕವಲ್ಲ.

ಸರ್ವಧರ್ಮ ಸಮಭಾವದ ಸೆಕ್ಯುಲರ್ ದೃಷ್ಟಿಯು ಭಾರತದ ಸಂವಿಧಾನ ಪ್ರತಿನಿಧಿಸುವ ಎರಡನೆಯ ಮೌಲ್ಯ. ಸೈದ್ಧಾಂತಿಕ ವಿದ್ಯಮಾನವಾಗಿ ಸೆಕ್ಯುಲರ್‌ವಾದವನ್ನು ಪಾಶ್ಚಿಮಾತ್ಯ ಚರಿತ್ರೆಯ ಉತ್ಪನ್ನ ಎಂದು ಕರೆಯಬಹುದಾದರೂ ಅದನ್ನು ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಮರುರೂಪಿಸುವ ಬೌದ್ಧಿಕ ಚಟುವಟಿಕೆಯ ಆರಂಭಿಕ ಹೆಜ್ಜೆಗಳನ್ನು ಸಂವಿಧಾನ ಸಭೆಯ ಚರ್ಚೆಗಳಲ್ಲಿ ಕಾಣಬಹುದು.

ಭಾರತದ ಸಂವಿಧಾನ ಸಭೆಯ ಚರ್ಚೆಗಳಲ್ಲಿ ಯಾ ಸಂವಿಧಾನದ ಪಠ್ಯದಲ್ಲಿ (42ನೇ ಸಂವಿಧಾನ ತಿದ್ದುಪಡಿಯ ತನಕ) ಸೆಕ್ಯುಲರ್‌ವಾದದ ಕುರಿತು ನೇರವಾದ ಪ್ರಸ್ತಾಪ ಕಾಣಸಿಗುವುದಿಲ್ಲ. ಆದರೆ ಬಹುಧರ್ಮೀಯ ಸಮಾಜವಾಗಿ ಅನೇಕ ವಿಷಮ ಸಂಘರ್ಷಗಳನ್ನು ಭಾರತ ಎದುರಿಸಿದ ಹಿನ್ನೆಲೆಯಲ್ಲಿ ನಮ್ಮ ಪ್ರಜಾತಾಂತ್ರಿಕ ಬದುಕಿನಲ್ಲಿ ಸೆಕ್ಯುಲರ್‌ವಾದ ಒಂದು ರಾಜಕೀಯ ಅವಶ್ಯಕತೆಯಾಗಿ ನಿಧಾನವಾಗಿಯಾದರೂ ರೂಪುಗೊಂಡಿದೆ. ಸೆಕ್ಯುಲರ್‌ವಾದದ ತಾತ್ವಿಕ ಸ್ವರೂಪ ಹಾಗೂ ಭಾರತೀಯ ಸಂದರ್ಭದಲ್ಲಿ ಅದರ ಪ್ರಸ್ತುತತೆಯ ಕುರಿತು ಇಂದು ಅನೇಕ ತಕರಾರುಗಳಿವೆ. ಹಾಗಿದ್ದರೂ ಭಾರತದ 'ರಾಜಧರ್ಮ'ವನ್ನು ದಿಟ್ಟಿಸಿ ಹೇಳುವುದಾದರೆ, ನಮ್ಮ ಸೆಕ್ಯುಲರ್‌ವಾದವನ್ನು ಯಾರೂ ನಿರಾಕರಿಸಲಾರರು.

ಭಾರತದ ಸಂವಿಧಾನದ ಮೂರನೆಯ ತಾತ್ವಿಕ ದೃಷ್ಟಿಕೋನ, ಒಕ್ಕೂಟ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದೇ ಆಗಿದೆ. ಭಾರತದ ಇತಿಹಾಸ, ರಾಜಕಾರಣ ಹಾಗೂ ಪ್ರಾದೇಶಿಕ ವೈವಿಧ್ಯಗಳ ಸಂಘರ್ಷಪೂರ್ಣ ಸಂಗಮದಲ್ಲಿ ಅಸ್ತಿತ್ವಕ್ಕೆ ಬಂದ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಪಶ್ಚಿಮದ ಕೆಲ ಸಂವಿಧಾನ ತಜ್ಞರು 'ಅರೆ-ಬರೆ ಒಕ್ಕೂಟ'ವೆಂದು ಹಂಗಿಸಿದ್ದಾರೆ. ಆದರೆ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇದರ ವಿಶೇಷಗಳು ಹಾಗೂ ಇತಿಮಿತಿಗಳು ಸ್ವಯಂ ಸ್ಪಷ್ಟವಾಗಿವೆ. ವಸಾಹತುಶಾಹಿ ಆಳ್ವಿಕೆಯ ಚಾರಿತ್ರಿಕ ಸನ್ನಿವೇಶದಲ್ಲಿ ಒಂದಾಗಿ ಸಂಯೋಜಿಸಲ್ಪಟ್ಟ ಭಾರತೀಯ ಒಕ್ಕೂಟ; ಒಂದು ದೇಶವಾಗಿ ನಾವು ಗಳಿಸಿಕೊಳ್ಳಬೇಕಾದ ಸಮಗ್ರತೆ ಹಾಗೂ ಪ್ರಾದೇಶಿಕ ವೈವಿಧ್ಯಗಳ ನಡುವಿನ ಒಂದು ಬಗೆಯ ಸಮತೋಲನವೂ ಹೌದು. ಆದ್ದರಿಂದಲೇ, ಭಾರತದ ಒಕ್ಕೂಟ ವ್ಯವಸ್ಥೆಯನ್ನು 'ಸಹಕಾರಿ ಒಕ್ಕೂಟ' ಎಂದು ತಜ್ಞರು ವ್ಯಾಖ್ಯಾನಿಸಿದ್ದಾರೆ. ಕೆಲವೊಮ್ಮೆ ಕೇಂದ್ರೀಯತೆ, ಕೆಲವೊಮ್ಮೆ ಪ್ರಾದೇಶಿಕ ವಿಕೇಂದ್ರೀಯತೆಗಳ ನಡುವೆ ತೊನೆದಾಡುವ ನಮ್ಮ ಈ ಒಕ್ಕೂಟ ವ್ಯವಸ್ಥೆ ಸಮಸ್ಯೆಯೂ ಹೌದು, ವಿಶಿಷ್ಟವೂ ಹೌದು.

ಭಾರತದ ಸಂವಿಧಾನದ ಪ್ರಜಾತಾಂತ್ರಿಕ ದೃಷ್ಟಿಕೋನದ ನಾಲ್ಕನೆಯ ಅಂಶ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆ. ಭಾರತದಂತಹ ವಿಭಿನ್ನ ಸಾಮುದಾಯಿಕ ಅಸ್ಮಿತೆಗಳಿಂದ ಕೂಡಿದ ಅ-ಸಮಾನ ಸಮಾಜಗಳಲ್ಲಿ ಸಾಮಾಜಿಕ ನ್ಯಾಯವನ್ನು ಭಾರತ ಸಂವಿಧಾನದ ನಿರ್ಮಾತೃಗಳು ಒಂದು ಪ್ರಜಾತಾಂತ್ರಿಕ ಅನಿವಾರ್ಯವೆಂದು ಪರಿಭಾವಿಸಿದರು. ಹಾಗಾಗಿ, ಆರ್ಥಿಕ ಅಭಿವೃದ್ಧಿಯ ಜೊತೆಜೊತೆಗೆ ಸಾಮಾಜಿಕ ನ್ಯಾಯದ ಆಕಾಂಕ್ಷೆಯೂ ಭಾರತೀಯ ಬದುಕಿನ ಪ್ರೇರಕ ಶಕ್ತಿಯಾಗಿದೆ. ಹಿನ್ನೋಟವನ್ನು ಬೀರಿ ಹೇಳುವುದಾದರೆ, ನಮ್ಮಲ್ಲಿ ಸಂಭವಿಸಿದ ಚಾರಿತ್ರಿಕ ಮಹತ್ವದ ಸಮಾಜ ಸುಧಾರಣಾ ಪ್ರಯತ್ನಗಳ ಫಲಶ್ರುತಿಯಾಗಿಯೇ ಭಾರತದ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯದ ಘನ ಉಪಸ್ಥಿತಿಯಿದೆ.



ಆಧುನಿಕ ಭಾರತದ ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸಿದ ಅನೇಕಾನೇಕ ಸೈದ್ಧಾಂತಿಕ ಹಾಗೂ ರಾಜಕೀಯ ಘರ್ಷಣೆಯ ಮಾರ್ನುಡಿಯಾಗಿ ಸಂವಿಧಾನ ನಮ್ಮ ಮುಂದಿದೆ. ತನ್ನ ಪ್ರತಿಯೊಂದು ಅಧ್ಯಾಯದಲ್ಲೂ ಮುಕ್ತ ಮನಸ್ಸಿನಿಂದ ತೆರೆದುಕೊಂಡಿರುವ (ಓಪನ್ ಎಂಡೆಡ್) ಈ ಸಂವಿಧಾನದ ವಾರಸುದಾರರಾಗಬೇಕಾದ ನಾವು, ನಮ್ಮ ವಿವೇಕದ ಬಾಗಿಲುಗಳನ್ನು ಯಾಕೆ ಮುಚ್ಚಿಕೊಂಡಿದ್ದೇವೆ?

ಚುರುಮುರಿ



ಆರೋಗ್ಯ ಸದನ

• ಸಿ.ಎನ್.ರಾಜು

'ಪೂಜಾ ರೂಂ ವಿಶಾಲವಾಗಿರಬೇಕು. ಕಿಟಕಿ ಮುಚ್ಚಿದರೂ ಬಾತ್ ರೂಮ್‌ನಲ್ಲಿ ಬೆಳಕಿರಬೇಕು, ಕಿಚನ್ ಹೊಗೆಮುಕ್ತವಾಗಿರಬೇಕು, ಹಾಗೆ ಮನೆಯ ಪ್ಲಾನ್ ಸಿದ್ಧ ಮಾಡಿ...' ಹೊಸ ಮನೆ ಕಟ್ಟಿಸುವ ಸಡಗರದಲ್ಲಿ ಎಂಜಿನಿಯರ್‌ಗೆ ಅನು ಸಲಹೆ ಮಾಡಿದಳು.

'ಮನೆಯ ಆಯಾ, ಪಾಯ ಸರಿಯಿರಬೇಕು, ವಾಸ್ತುಲೋಪ ಇರಬಾರದು' ಗಿರಿ ಹೇಳಿದ.

'ಕಾಂಪೌಂಡ್ ಎತ್ತರವಾಗಿರಲಿ. ಕಳ್ಳರು, ಕೊರೊನಾ ಮನೆಗೆ ನುಗ್ಗಲು ಆಗಬಾರದು' ಎಂದಳು ಅನು.

'ಕೊರೊನಾಗೆ ಕಾಂಪೌಂಡ್ ಕಟ್ಟಲಾಗುತ್ತಾ ಮೇಡಂ?' ಎಂದರು ಎಂಜಿನಿಯರ್.

'ಕೊರೊನಾ ಕಾಟದಲ್ಲಿ ಆರೋಗ್ಯಕರ ಮನೆ ಕಟ್ಟಿಕೊಳ್ಳದಿದ್ದರೆ ನಾವು ಬಾಳೋದು ಕಷ್ಟ ಆಗುತ್ತೆ' ಗಿರಿ ಆತಂಕಪಟ್ಟ.

'ಆಗಲಿ ಸಾರ್, ಕೊರೊನಾ ಕೇರ್ ಮನೆ ನಿರ್ಮಾಣಕ್ಕೆ ಪ್ಲಾನ್ ಸಿದ್ಧಮಾಡ್ತೀನಿ' ಎಂಜಿನಿಯರ್ ಹೇಳಿದರು.

'ಹೋಂ ಕ್ವಾರಂಟೈನ್‌ಗೆ ಸ್ಥಳಾವಕಾಶ ಮಾಡಿ' ಅಂದ ಗಿರಿ.

'ಮಾಡ್ತೀನಿ, ನಿಮ್ಮ ಮಗನ ಆನ್‌ಲೈನ್ ಕ್ಲಾಸಿಗೆ ಸೌಂಡ್‌ಪ್ರೂಫ್ ರೂಂ ಸಿದ್ಧಮಾಡ್ತೀನಿ, ನಿಮ್ಮ ವರ್ಕ್ ಫ್ರಂ ಹೋಂಗೂ ಯೂಸ್ ಆಗುತ್ತೆ. ಜೊತೆಗೆ, ಐಸಿಯು ಬೆಡ್, ಆಕ್ಸಿಜನ್ ಬೆಡ್ ರೆಡಿ ಮಾಡ್ತೀನಿ. ಮುಂದೆ ಆರೋಗ್ಯ ಸೇವೆ ದುಬಾರಿಯಾಗುತ್ತೆ, ಆಸ್ಪತ್ರೆಗಳಲ್ಲಿ ಬೆಡ್ ಸಿಗೋದು ಕಷ್ಟವಾಗಬಹುದು'.

'ಹೌದ್ದೌದು, ಕೊರೊನಾದಂತಹ ಇನ್ನಷ್ಟು ಕಾಯಿಲೆಗಳು ವಕ್ಕರಿಸಿಕೊಂಡರೆ ಮುಂದೆ ಉಸಿರಾಡಲು ಆಕ್ಸಿಜನ್ ಕೊಂಡುಕೊಳ್ಳುವ ಕಾಲ ಬರಬಹುದು'.

'ಹಾಗಾಗಬಾರದು ಅಂತ ಮನೆ ಕಾಂಪೌಂಡಿನಲ್ಲಿ ಒಂದು ಆಕ್ಸಿಜನ್ ಪ್ಲಾಂಟ್ ನಿರ್ಮಾಣ ಮಾಡ್ತೀನಿ, ನಿಮ್ಮ ಕುಟುಂಬಕ್ಕಾಗುವಷ್ಟು ಆಮ್ಲಜನಕ ಉತ್ಪತ್ತಿಯಾಗುತ್ತದೆ'.

'ಮಗನನ್ನು ಮೆಡಿಕಲ್ ಓದಿಸಿ, ಮನೆಯಲ್ಲೊಂದು ಮೆಡಿಕಲ್ ಸ್ಟೋರ್ ಇಟ್ಟುಕೊಂಡರೆ ನಮ್ಮ ಮನೆ ಆರೋಗ್ಯ ಕೇಂದ್ರವಾಗಿ ನಾವು ಆರೋಗ್ಯ ಸ್ವಾವಲಂಬಿಯಾಗಬಹುದು ಅಲ್ವಾ?' ಎಂದ ಗಿರಿ.

'ಹೌದು ಸಾರ್, ನಾನು ಅಂತಹ ಆರೋಗ್ಯ ಸದನ ಕಟ್ಟಿಕೊಡುತ್ತೇನೆ, ನೀವು ಆನಂದವಾಗಿ ಆರೋಗ್ಯಕರವಾಗಿ ಬಾಳಬಹುದು...' ಎಂದು ಹೇಳಿ ಎಂಜಿನಿಯರ್ ಹೊರಟರು.

ದಿನದ ಟ್ವೀಟ್

ಸ್ವಾತಂತ್ರ್ಯವೆಂದರೆ...



ಚಿಕ್ಕವನಿದ್ದಾಗ ಓದುವುದು ನನಗೆ ಇಷ್ಟವಾಗುತ್ತಿರಲಿಲ್ಲ. ಏಕೆಂದರೆ, ಆಗ ನಾನು ಓದುವಂತೆ ಮಾಡಲಾಗುತ್ತಿತ್ತು. ಇಂದು: ನನ್ನ ಕೆಲಸದಲ್ಲಿ ನಾನು ಹೆಚ್ಚು ಆನಂದಿಸುವುದು ಯಾವುದರಿಂದ ಗೊತ್ತೇ? ನನಗೆ ಇಷ್ಟವಾಗುವುದನ್ನು ಓದಲು ಸಿಕ್ಕಿರುವ ಅವಕಾಶದಿಂದ. ಸ್ವಾತಂತ್ರ್ಯವು ಅತ್ಯಮೂಲ್ಯವಾದ ಸಂಗತಿ ಎಂದು ಜನ ಹೇಳುವುದು ತಮಾಷೆಗಲ್ಲ. ಕೆಲಸ, ಅಧ್ಯಯನ ಮತ್ತು ಜೀವನ ಎಲ್ಲಕ್ಕೂ ಈ ಮಾತು ಅನ್ವಯಿಸುತ್ತದೆ.

ಅಕ್ಷತ್ ಶ್ರೀವಾಸ್ತವ, ಶಿಕ್ಷಕ, ಉದ್ಯಮಿ

ಕಿಡಿನುಡಿ



ಇಂಗ್ಲೆಂಡ್ ತಂಡವು ಆ್ಯಷಸ್ ಟೆಸ್ಟ್ ಸರಣಿಯಲ್ಲಿ ಹೀನಾಯವಾಗಿ ಸೋತಿದ್ದಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯನ್ನು ಟೀಕಿಸುವುದು ಸರಿಯಲ್ಲ. ಇಂಗ್ಲೆಂಡ್‌ನಲ್ಲಿ ಟೆಸ್ಟ್ ಕ್ರಿಕೆಟ್ ಕ್ಷೀಣಿಸಲು ಕೌಂಟಿ ಕ್ರಿಕೆಟ್ ವ್ಯವಸ್ಥೆ ಸೊರಗಿದ್ದು ಕಾರಣ. ಐಪಿಎಲ್‌ನಲ್ಲಿ ಇಂಗ್ಲೆಂಡ್‌ನ ಮೂವರು, ನಾಲ್ವರು ಆಟಗಾರರು ಆಡುತ್ತಾರಷ್ಟೇ. ಅದರಿಂದ ಇಡೀ ತಂಡದ ಮೇಲೆ ಹೇಗೆ ಪರಿಣಾಮವಾಗುತ್ತದೆ?

ಕೆವಿನ್ ಪೀಟರ್ಸನ್, ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ

---

25 ವರ್ಷಗಳ ಹಿಂದೆ

ಬುಧವಾರ, 22-1-1997

• ಭಾರತಕ್ಕೆ ಬೊಫೋರ್ಸ್ ದಾಖಲೆ ಹಸ್ತಾಂತರ

ಬೆರ್ನ್, ಜ. 21 (ಯುಎನ್‌ಐ)– 1.3 ಶತಕೋಟಿ ಡಾಲರ್ ಬೊಫೋರ್ಸ್ ಬಂದೂಕು ಒಪ್ಪಂದದಲ್ಲಿ ನೀಡಲಾಗಿದೆ ಎನ್ನಲಾದ ರುಷುವತ್ತು ಪಡೆದವರ ಮೇಲೆ ಬೆಳಕು ಚೆಲ್ಲಲಿರುವ 500 ಪುಟಗಳ ರಹಸ್ಯ ಸ್ವಿಸ್ ಬ್ಯಾಂಕ್ ದಾಖಲೆಗಳನ್ನು ಸ್ವಿಟ್ಜರ್‌ಲ್ಯಾಂಡ್ ಸರ್ಕಾರ ಇಂದು ಭಾರತಕ್ಕೆ ಹಸ್ತಾಂತರಿಸಿತು.

ಕಳೆದ ಏಳು ವರ್ಷಗಳಿಂದ ಆಮೆಗತಿಯಲ್ಲಿ ಸಾಗಿದ್ದ ಬೊಫೋರ್ಸ್ ರುಷುವತ್ತು ಪ್ರಕರಣ ಇದರಿಂದ ಅಂತಿಮ ಘಟ್ಟಕ್ಕೆ ತಲುಪಿದಂತಾಗಿದೆ.

ಸ್ವಿಟ್ಜರ್‌ಲ್ಯಾಂಡ್‌ನ ಬೆರ್ನ್‌ನ ಪಾರ್ಲಿಮೆಂಟ್ ಭವನದಲ್ಲಿ ಇಂದು ಮಧ್ಯಾಹ್ನ ಭಾರತೀಯ ಕಾಲಮಾನ 2.30ಕ್ಕೆ ನಡೆದ ಸಮಾರಂಭದಲ್ಲಿ ಸ್ವಿಸ್ ಪೊಲೀಸ್ ಇಲಾಖೆಯ ಉಪನಿರ್ದೇಶಕ ರುಡಾಲ್ಫ್ ವಿಸ್ ಅವರು ಸ್ವಿಟ್ಜರ್‌ಲ್ಯಾಂಡ್‌ನ ಭಾರತ ರಾಯಭಾರಿ ಕೆ.ಪಿ. ಬಾಲಕೃಷ್ಣನ್ ಅವರಿಗೆ ಈ ದಾಖಲೆಗಳನ್ನು ಒಪ್ಪಿಸಿದರು.

• ಲಾರಿ ಮುಷ್ಕರ ಮತ್ತಷ್ಟು ತೀವ್ರ

ಬೆಂಗಳೂರು, ಜ. 21– ನಗರದೊಳಗೆ ಭಾರಿ ಸರಕು ಸಾಗಣೆ ಲಾರಿಗಳ ಪ್ರವೇಶ ಮತ್ತು ಸಂಚಾರದ ಮೇಲೆ ಸಮಯದ ನಿರ್ಬಂಧ ಹೇರಿರುವುದನ್ನು ಪ್ರತಿಭಟಿಸಿ ಲಾರಿ ಮಾಲೀಕರು ನಡೆಸುತ್ತಿರುವ ಮುಷ್ಕರ ಇಂದು ಎರಡನೇ ದಿನ ಪ್ರವೇಶಿಸಿದ್ದು, ಮತ್ತಷ್ಟು ತೀವ್ರಗೊಂಡಿದೆ.

ನಗರಕ್ಕೆ ಸರಕು ತರುವ ಲಾರಿಗಳ ಸಂಖ್ಯೆ ಕಡಿಮೆಯಾಗಿದೆ. ಇಲ್ಲಿಂದ ಮಾಲು ವಾಡಿಕೆಯ ಪ್ರಮಾಣದಲ್ಲಿ ಹೊರ ಹೋಗುತ್ತಿಲ್ಲ. ಮರಳು, ಜಲ್ಲಿಕಲ್ಲು ಮತ್ತು ಇತರ ಕಟ್ಟಡ ನಿರ್ಮಾಣ ವಸ್ತುಗಳನ್ನು ಪೂರೈಸುವ ಲಾರಿಗಳ ಸಂಖ್ಯೆಯೂ ಗಮನಾರ್ಹವಾಗಿ ಇಳಿಮುಖಗೊಂಡಿದೆ.

50 ವರ್ಷಗಳ ಹಿಂದೆ

ಶನಿವಾರ, 22-1-1972

• ಪಕ್ಷದ ಒಂದು ಗುಂಪಿನ ಪ್ರತಿನಿಧಿ ತಿವಾರಿ ನಗರದ ಹೊಸ ಮೇಯರ್

ಬೆಂಗಳೂರು, ಜ. 21– ಮೇಯರ್ ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಬಾರದೆಂಬ ಪ್ರದೇಶ ಹೈಕಮಾಂಡಿನ ಆದೇಶವನ್ನು ಧಿಕ್ಕರಿಸಿದ ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ಒಂದು ಗುಂಪಿನ ಪ್ರತಿನಿಧಿ ಶ್ರೀ ಎಂ.ವಿ. ತಿವಾರಿ ಅವರು ಇತರರ ಬೆಂಬಲದೊಡನೆ ಇಂದು ನಗರದ 'ಪ್ರಥಮ ಪ್ರಜೆ'ಯಾಗಿ ಚುನಾಯಿತರಾದರು.

ಇದೇ ಗುಂಪಿಗೆ ಸೇರಿದ ಶ್ರೀ ಎನ್. ವೆಂಕಟರಾಮ್ ಅವರು ಉಪಮೇಯರ್ ಆಗಿ ಆಯ್ಕೆಯಾದರು. ಸದಸ್ಯರೊಬ್ಬರು ತಮ್ಮ ಮತ ನೀಡಿಕೆಯನ್ನು ಬಹಿರಂಗಪಡಿಸಿದ ಸಂದರ್ಭದಲ್ಲಿ ಉಂಟಾದ ಬಿಸಿ ಪ್ರಕರಣವನ್ನು ಸುಧಾರಿಸಲು ಪೊಲೀಸರು ಸಭಾಭವನವನ್ನು ಪ್ರವೇಶಿಸಿದರು.

ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಂ.ವಿ.ತಿವಾರಿ ಅವರು 37 ಮತಗಳನ್ನೂ ಕೆಲ ವಿರೋಧ ಪಕ್ಷಗಳಿಂದ ಪ್ರತಿಸ್ಪರ್ಧಿಯಾಗಿದ್ದ ಶ್ರೀ ವರದರಾಜ್ ಅವರು 18 ಮತಗಳನ್ನೂ ಗಳಿಸಿದರು.

ಸಂಗತ

ಸಂಸ್ಕೃತ ಎಂಬ ಮಾಯಾಮೃಗ

ಸಂಸ್ಕೃತ 'ದೇವ ಭಾಷೆ'ಯಾದುದರಿಂದ, ಆ ಭಾಷೆಯನ್ನು ಆಧರಿಸಿದ ಕಾರ್ಯಕ್ಕಾಗಿ ದೇವಲೋಕದಿಂದಲೇ ಸುವರ್ಣವೃಷ್ಟಿ ಆಗುತ್ತದೆಯೇ?

• ಸಿ.ಎನ್.ರಾಮಚಂದ್ರನ್


ನಾನು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯದ ಪ್ರೇಮಿ. ಸಂಸ್ಕೃತ ಸಾಹಿತ್ಯವನ್ನು ಸಾಕಷ್ಟು ಅಧ್ಯಯನ ಮಾಡಿದ್ದೇನೆ. ಮಂತ್ರಭಾಗವೂ ಅಲ್ಪ ಸ್ವಲ್ಪ ಗೊತ್ತಿದೆ. ನಿರೀಕ್ಷಣಾ ಜಾಮೀನಿಗೆ ಇಷ್ಟು ಸಾಕು ಎಂದು ಭಾವಿಸಿ ಮುಂದುವರಿಯಬಹುದು. ಇಂದು ನಮ್ಮ ದೇಶದಲ್ಲಿ 18 ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. ಪ್ರತಿಯೊಂದಕ್ಕೂ ಸಂಲಗ್ನಗೊಂಡಿರುವ ಹತ್ತಾರು ಸಂಶೋಧನಾ ಕೇಂದ್ರಗಳಿವೆ. ಕರ್ನಾಟಕದಲ್ಲಿಯೇ, ಬೆಂಗಳೂರಿನಲ್ಲಿ ಒಂದು ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಸ್ಥಾಪಿಸಲ್ಪಟ್ಟಿತು. ಈಗ, 2022ರಲ್ಲಿ, ಅದರ ಮೂಲಸೌಕರ್ಯ ಅಭಿವೃದ್ಧಿಗಾಗಿ ₹ 320 ಕೋಟಿ ಅನುದಾನ ಒದಗಿಸುವ ಅವಶ್ಯಕತೆ ಇದೆಯೇ?

ಈಗಾಗುತ್ತಿರುವ ಅಥವಾ ಆಗಬೇಕಾದ ಚರ್ಚೆಯ ಕೇಂದ್ರವು ಸಂಸ್ಕೃತ ಭಾಷೆಯ ಪ್ರಾಚೀನತೆಯಾಗಲಿ, ಸಂಸ್ಕೃತ ಸಾಹಿತ್ಯದ ಸ್ವೋಪಜ್ಞತೆಯಾಗಲಿ, ಅದರ ವಿಷಯ-ವೈಶಾಲ್ಯವಾಗಲಿ ಅಲ್ಲ. ಇವೆಲ್ಲವೂ ಈಗಾಗಲೇ ಎಲ್ಲರೂ ಒಪ್ಪಿಕೊಂಡಿರುವ ಸಂಗತಿಗಳು. ಚರ್ಚೆಯಾಗಬೇಕಾಗಿರುವುದು ಅದರ ಅವಶ್ಯಕತೆ ಇಂದು– ವಿದ್ಯಾರ್ಥಿಗಳಿಗೆ ಹಾಗೂ ಒಟ್ಟಾರೆ ಸಮಾಜಕ್ಕೆ– ಇದೆಯೇ ಎಂಬುದು.

ವಿದ್ಯಾರ್ಥಿಗಳು ಅನೇಕ ಕಾರಣಗಳಿಗಾಗಿ ಒಂದು ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಳ್ಳುತ್ತಾರೆ. ಮೊದಲನೆಯದು, ಆ ವಿಷಯದ ಕುರಿತು ಅವರಿಗಿರುವ ಕುತೂಹಲ ಹಾಗೂ ಆಸಕ್ತಿ. ಆದರೆ, ಹೆಚ್ಚಿನ ವಿದ್ಯಾರ್ಥಿಗಳ ಅತಿ ಮುಖ್ಯ ಕಾರಣವೆಂದರೆ, ಅವರು ಕೈಗೊಳ್ಳುವ ಅಧ್ಯಯನ ಒಂದಲ್ಲಾ ಒಂದು ಬಗೆಯಲ್ಲಿ ಅವರಿಗೆ ಜೀವನ ನಿರ್ವಹಣೆಗೆ ಸಹಾಯ ಮಾಡುತ್ತದೆ ಎಂಬುದು. ಹಾಗಾಗಬೇಕಾದರೆ ಆ ವಿಷಯ ಹಾಗೂ ಭಾಷೆ ಒಂದಲ್ಲಾ ಒಂದು ಬಗೆಯ ಉದ್ಯೋಗಕ್ಕೆ ಅಥವಾ ವೃತ್ತಿಗೆ ಸಂಬಂಧಿಸಿರಬೇಕು. ಕೃಷಿಯಿಂದ ಪ್ರಾರಂಭಿಸಿ, ಹೋಟೆಲ್ ಉದ್ಯಮ, ಪತ್ರಿಕೋದ್ಯಮ, ವೈದ್ಯಕೀಯ, ತಾಂತ್ರಿಕ ಉದ್ಯಮಗಳು ಇತ್ಯಾದಿ ಯಾವ ವೃತ್ತಿಗೂ ಅಥವಾ ಉದ್ಯಮಕ್ಕೂ ಸಂಸ್ಕೃತ ಭಾಷಾ-ಸಾಹಿತ್ಯಗಳ ಅಧ್ಯಯನ ಇಂದು ನೆರವಾಗುವುದಿಲ್ಲ. ಎಂದ ಮೇಲೆ ಯಾವ ವಿದ್ಯಾರ್ಥಿಗಳು– ಪೋಷಕರು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒಲವು ತೋರಿಸುತ್ತಾರೆ?

ಈ ಸಂದರ್ಭದಲ್ಲಿ 'ನಿಮ್ಮ ಹೆಸರಿನಲ್ಲಿಯೇ ಸಂಸ್ಕೃತ ಪದವಿದೆಯಲ್ಲಾ! ಅದನ್ನು ಬದಲಾಯಿಸಿಕೊಳ್ಳುತ್ತೀರೇನು?' ಎಂದು ಈ ಚರ್ಚೆಯ ಸಂದರ್ಭದಲ್ಲಿ ಸಂಸತ್ ಸದಸ್ಯರೊಬ್ಬರು ಪ್ರತಿಕ್ರಿಯಿಸಿದರೆಂದು ತಿಳಿದು ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಜೀವನ ನಿರ್ವಹಣೆಗಾಗಿ, ಕೆಲಸಕ್ಕಾಗಿ ಅಲೆಯಬೇಕಾಗಿ ಬಂದಾಗ, ಈ ಸರಳೀಕೃತ-ಚಾತುರ್ಯಭರಿತ ಹೇಳಿಕೆಗಳು ಅರ್ಥಹೀನವೆಂದು ಗೊತ್ತಾಗುತ್ತದೆ.

ಈ ಹೇಳಿಕೆಯ ಒಂದು ಅಸಾಧಾರಣ ಉದಾಹರಣೆಯೆಂದರೆ, ಕಳೆದ ಶತಮಾನದ 70-80ರ ದಶಕದಲ್ಲಿ ಅಮೆರಿಕದಲ್ಲಿ ಇಂಗ್ಲಿಷ್ ಅಧ್ಯಯನಕ್ಕೆ ಇದ್ದ ಸ್ಥಾನ. ಆಗ, ಹೆಚ್ಚಿನ ಅವಕಾಶಗಳಿದ್ದುದು ಉದ್ಯಮ ಕ್ಷೇತ್ರದಲ್ಲಿ. ಹೀಗಾಗಿ, ವಿದ್ಯಾರ್ಥಿಗಳು ಕಾಮರ್ಸ್, ಎಂಜಿನಿಯರಿಂಗ್, ವೈದ್ಯಕೀಯ ಇತ್ಯಾದಿ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇಂಗ್ಲಿಷ್ ಎಂ.ಎ./ ಪಿಎಚ್.ಡಿ ಪದವೀಧರರಿಗೆ ಯಾವ ಕಾಲೇಜಿನಲ್ಲಿಯೂ ವಿಶ್ವವಿದ್ಯಾಲಯದಲ್ಲಿಯೂ ಕೆಲಸ ಸಿಗುತ್ತಿರಲಿಲ್ಲ. ಈ ಪರಿಸ್ಥಿತಿ ಎಷ್ಟು ಉಲ್ಬಣವಾಗಿತ್ತೆಂದರೆ, ಅನೇಕ ಸ್ಟೇಟ್ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ವಿಭಾಗಗಳು ಮುಚ್ಚಲ್ಪಟ್ಟವು. ಕೆಲವು ಪದವೀಧರರು ಆತಂಕದಿಂದ ಆದರೆ ಅನಿವಾರ್ಯವಾಗಿ, ಇಂಗ್ಲಿಷ್ ಭಾಷೆಯನ್ನು ಕಲಿಸಲು ತಂಡ ತಂಡವಾಗಿ ಗಲ್ಫ್ ರಾಷ್ಟ್ರಗಳಿಗೆ ಹೋಗುತ್ತಿದ್ದರು. 'ನ್ಯೂಯಾರ್ಕ್ ಟೈಮ್ಸ್'ನಂತಹ ಖ್ಯಾತ ಪತ್ರಿಕೆಗಳು 'ಬೋಧನೆಯ ಹೊರತಾಗಿ ಇಂಗ್ಲಿಷ್ ಪದವೀಧರರು ಬೇರೇನು ಮಾಡಬಹುದು?' ಎಂಬ ವಿಷಯದ ಕುರಿತು ದೀರ್ಘ ಲೇಖನಗಳನ್ನು ಪ್ರಕಟಿಸುತ್ತಿದ್ದವು. ನಾನು ಅಮೆರಿಕದಿಂದ ಕರ್ನಾಟಕಕ್ಕೆ ಮರಳಿದುದೂ ಅಲ್ಲಿ ಅರೆಕಾಲಿಕ ಕೆಲಸವೂ ಸಿಗುವುದಿಲ್ಲ ಎಂಬ ಕಾರಣಕ್ಕೆ.



ಭಾಷಾವಾರು ರಾಜ್ಯಗಳ ಸ್ಥಾಪನೆಯ ಮುಖ್ಯ ಉದ್ದೇಶವೇ ಆಯಾಯ ರಾಜ್ಯಗಳ ಭಾಷೆಯನ್ನು, ಸಾಹಿತ್ಯ-ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸುವುದು. ಆ ಕಾರ್ಯದಲ್ಲಿ ನಿರತವಾಗಿರುವ ಸಂಸ್ಥೆಗಳಿಗೆ ಅವಶ್ಯಕವಾದ ಆರ್ಥಿಕ- ಸಾಂಸ್ಥಿಕ ನೆರವನ್ನು ನೀಡುವುದು. ಈ ದಿಕ್ಕಿನಲ್ಲಿ ಇತ್ತೀಚೆಗೆ ಅನೇಕ ಕನ್ನಡ ಸಂಸ್ಥೆಗಳು, ವಿಭಾಗಗಳು ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅನೇಕ ಸರ್ಕಾರಿ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಲ್ಲಿ ಪೂರ್ಣಪ್ರಮಾಣದ ಅಧ್ಯಾಪಕ-ಪ್ರಾಧ್ಯಾಪಕರಿಲ್ಲ. ಇನ್ನು ಕನ್ನಡಕ್ಕೆಂದೇ ಇರುವ ಕನ್ನಡ ವಿಶ್ವವಿದ್ಯಾಲಯದ ಕಥೆಯನ್ನು ಹೇಳುವುದೇ ಬೇಡ. ಸಂಸ್ಕೃತ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ (ಅದೂ ಈ ಕೋವಿಡ್ ಕಾಲದಲ್ಲಿ) ₹ 320 ಕೋಟಿ ಕೊಡಲು ಕರ್ನಾಟಕ ಸರ್ಕಾರದ ಬಳಿ ಹಣವಿದೆ ಎಂದಾದರೆ, 2020-21ರಲ್ಲಿ, ಕನ್ನಡ ವಿಶ್ವವಿದ್ಯಾಲಯದ ಉದ್ಯೋಗಿಗಳಿಗಾಗಿ ಸಂಬಳ ಕೊಡಲು ಅಲ್ಲಿನ ಕುಲಪತಿಗಳು- ವಿತ್ತಾಧಿಕಾರಿಗಳು ಕೇವಲ ₹ 50 ಲಕ್ಷಕ್ಕಾಗಿ ಮುಖ್ಯಮಂತ್ರಿಯಿಂದ ಹಿಡಿದು ಇತರ ಎಲ್ಲಾ ಮಂತ್ರಿವರೇಣ್ಯರನ್ನು ಹಾಗೂ ಶಾಸಕರನ್ನು ಕಾಡಿ ಬೇಡುವಂತಾದುದು ಹೇಗೆ? ಅಥವಾ ಸಂಸ್ಕೃತ 'ದೇವ ಭಾಷೆ'ಯಾದುದರಿಂದ, ಆ ಭಾಷೆಯನ್ನು ಆಧರಿಸಿದ ಕಾರ್ಯಕ್ಕಾಗಿ ದೇವಲೋಕದಿಂದಲೇ ಸುವರ್ಣವೃಷ್ಟಿ ಆಗುತ್ತದೆಯೇ?

ಇಂದಿನ ಕಾಲಘಟ್ಟದಲ್ಲಿ, ಪ್ರತಿಯೊಂದು ರಾಜ್ಯ ಸರ್ಕಾರದ ಕರ್ತವ್ಯವೂ ಮೊದಲಿಗೆ ಆಯಾಯ ರಾಜ್ಯಗಳ ರಾಜ್ಯಭಾಷೆಗಳನ್ನು ಹಾಗೂ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸುವುದು ಮತ್ತು ಎಲ್ಲಾ ವಿಶಿಷ್ಟ ಉದ್ಯಮಗಳು ಬೇಡುವ ಇಂಗ್ಲಿಷ್ ಭಾಷೆಯ ಬೋಧನೆಗೆ ಅನುವು ಮಾಡಿಕೊಡುವುದು. ಈ ಪ್ರಬುದ್ಧತೆಯನ್ನು ಕರ್ನಾಟಕ ಸರ್ಕಾರ ಪ್ರದರ್ಶಿಸುತ್ತದೆಯೇ?

ವಾಚಕರ ವಾಣಿ

ಹೇಳಿಕೆ ವಾಸ್ತವಕ್ಕೆ ಹತ್ತಿರವಿರಲಿ

ಮಹೇಶ್ ಜೋಷಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಂತರ ಪರಿಷತ್ತಿನ ಸದಸ್ಯತ್ವ ಶುಲ್ಕವನ್ನು ಪ್ರಸ್ತುತ ₹ 500ರಿಂದ ₹ 250ಕ್ಕೆ ಇಳಿಸುವುದಾಗಿ ಹಾಗೂ ಸದಸ್ಯರ ಸಂಖ್ಯೆಯನ್ನು ಒಂದು ಕೋಟಿಗೆ ಹೆಚ್ಚಿಸುವ ಗುರಿ ಇರುವುದಾಗಿ ಹೇಳಿಕೆ ನೀಡಿದರು. ಪ್ರಸ್ತುತ ಕಸಾಪ ಸದಸ್ಯರಾಗ ಬಯಸುವವರಿಗೆ ಪರೀಕ್ಷೆ ನಡೆಸುವುದಾಗಿ ಹೇಳಿಕೆ ಬಂದಿದೆ.

ಪರೀಕ್ಷೆ ಮಾಡಬೇಕಾದರೆ ಮೊದಲು ರಾಜ್ಯ, ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ನಿಲ್ಲುವವರು ಪರೀಕ್ಷೆ ಎದುರಿಸಬೇಕಾಗುತ್ತದೆ. ಆಗ ಪ್ರಶ್ನೆಪತ್ರಿಕೆ ತಯಾರಿಸುವವರು ಯಾರು? ಅದರಲ್ಲಿ ಏನಿರಬೇಕು ಎಂಬ ಪ್ರಶ್ನೆಗಳು ಮೂಡುತ್ತವೆ. ಸರಿಯಾಗಿ ಪರೀಕ್ಷೆ ನಡೆದರೆ ಹೆಚ್ಚಿನ ಅಭ್ಯರ್ಥಿಗಳು ನಪಾಸಾಗಬಹುದು! ಹಾಗಾಗಿ ಅಧ್ಯಕ್ಷ ಸ್ಥಾನದಿಂದ ಬರುವ ಹೇಳಿಕೆಗಳು ವಾಸ್ತವಕ್ಕೆ ಹತ್ತಿರ ಇರಬೇಕಾಗುತ್ತದೆ.

ಈ.ಬಸವರಾಜು, ಬೆಂಗಳೂರು

ಮಕ್ಕಳ ಮುಂದೆ ಮಂಡಿಯೂರಬೇಕಾದೀತು!

ನಾವೆಲ್ಲ ಮತ್ತೊಂದು ಗಣರಾಜ್ಯೋತ್ಸವ ಆಚರಿಸುವ ಉತ್ಸಾಹದಲ್ಲಿದ್ದೇವೆ. ಕೊರೊನಾ ಉಲ್ಬಣದ ನಡುವೆ ರಾಷ್ಟ್ರೀಯ ಹಬ್ಬಗಳ ಆಚರಣೆ ಸರಳ ರೀತಿಯಲ್ಲಿ ನಡೆದರೂ ರಾಷ್ಟ್ರಾಭಿಮಾನವನ್ನು ಮಾತ್ರ ಇಮ್ಮಡಿಗೊಳಿಸುತ್ತದೆ. ಮಕ್ಕಳಿಗೆ ನಾವು ಇತಿಹಾಸದ ಪಾಠಗಳನ್ನು ಹೇಳುವಾಗ ಶೋಷಣೆ, ದಬ್ಬಾಳಿಕೆ, ಅಸಮಾನತೆ ಹಾಗೂ ವಸಾಹತುಶಾಹಿ ಧೋರಣೆಗಳಿಂದ ಆದ ಅನಾಹುತಗಳನ್ನು ತಿಳಿಸುತ್ತೇವೆ ಹಾಗೂ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ತ್ಯಾಗ, ಆದರ್ಶಗಳನ್ನು ಹೇಳುತ್ತಾ ಸಮಾನತೆ, ಸಂವಿಧಾನದ ಮಹತ್ವ ಹಾಗೂ ಮೌಲ್ಯಗಳನ್ನು ತಿಳಿಸಿಕೊಡುತ್ತೇವೆ. ಇದನ್ನೆಲ್ಲಾ ತಿಳಿದುಕೊಂಡ ನಂತರ ಮಕ್ಕಳನ್ನು ಕಾಡುವ ಬಹುದೊಡ್ಡ ಪ್ರಶ್ನೆಯೆಂದರೆ, ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಸಂವಿಧಾನ, ಪ್ರಜಾಸತ್ತಾತ್ಮಕ ಗಣರಾಜ್ಯ, ಉದಾರ ನ್ಯಾಯದಾನ ವ್ಯವಸ್ಥೆಯಿದ್ದೂ ಯಾಕೆ ಇಂದು ಅಸಮಾನತೆ, ಹಿಂಸೆ, ದೌರ್ಜನ್ಯಗಳು ತಾಂಡವವಾಡುತ್ತಿವೆ, ಜಾತಿ ಮತ್ಸರ, ಧರ್ಮಾಂಧತೆ ಹಾಗೂ ಶೋಷಣೆಗಳ ಮಾತು ಸಂವಿಧಾನಾತ್ಮಕ ಹುದ್ದೆಗಳಲ್ಲಿ ಇರುವವರಿಂದಲೇ ಕೇಳಿಬರುತ್ತವೆ ಎಂದು. ಖಂಡಿತಾ ಅವರು ತಮಗೆ ಎದುರಾಗುವ ವಯಸ್ಕರಾದ ತಂದೆತಾಯಿಗಳು ಹಾಗೂ ಶಿಕ್ಷಕರನ್ನು ಈ ಬಗ್ಗೆ ಕೇಳುತ್ತಾರೆ. ಅಲ್ಲದೆ ಚಿಂತಕರು, ಮೇಧಾವಿಗಳು, ಸಾಹಿತಿಗಳೆಲ್ಲ ಸಂವಿಧಾನದ ಆಶಯಗಳಿಗೆ ಅಪಾಯ ಎದುರಾಗಿದೆ ಎಂದು ಪುಂಖಾನುಪುಂಖವಾಗಿ ಲೇಖನ ಕಥೆ-ಕವನಗಳನ್ನು ಬರೆಯುತ್ತಾರೆ, ಆದರೂ ಅನ್ಯಾಯಗಳು ಏಕೆ ಹೆಚ್ಚಾಗುತ್ತಿವೆ, ಹಾಗಾದರೆ ಅವುಗಳನ್ನು ನೀವೇಕೆ ಪ್ರಶ್ನಿಸಲಿಲ್ಲ ಹಾಗೂ ಪ್ರತಿಭಟಿಸಲಿಲ್ಲ ಎಂದು ಕೇಳಿದರೆ, ವಯಸ್ಕರಾದ ನಾವು ಅವರ ಮುಂದೆ ಮಂಡಿಯೂರಬೇಕಾಗುತ್ತದೆ. ನಾವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಇಂತಹ ಅನ್ಯಾಯಗಳಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಹಾಗಾಗಿ ಮುಂದಿನ ಪ್ರಜೆಗಳಾದ ಮಕ್ಕಳು ನಮ್ಮನ್ನು ಪ್ರಶ್ನಿಸಿದಾಗ, ಅವರಿಗೆ ಉತ್ತರ ಕೊಡುವಷ್ಟಾದರೂ ನಮ್ಮಲ್ಲಿ ನೈತಿಕತೆ ಉಳಿದಿರಬೇಕು.

ಸುವರ್ಣ ಸಿ.ಡಿ., ತರೀಕೆರೆ

'ಪಶು'ಗಳು!

'ಮೆದುಳಿನ ಮೇವಿಗೊಂದು ಗೂಡು' (ಸಂಗತ, ಜ. 5).
ಸಾಕ್ಷರ (ವಿದ್ಯಾವಂತ) 'ಪಶು'ಗಳಿಗೆ ಆ ಮೇವು ಉದ್ದಿಷ್ಟ ಎಂದಾಯಿತು!
ವಿದ್ಯಾವಿಹೀನರು (ಸಾಕ್ಷಾತ್) ಪಶುಗಳು ಎನ್ನುತ್ತದೆ ಒಂದು ಪ್ರಾಚೀನ ಸುಭಾಷಿತ.
ಅಂತೂ ಎಲ್ಲರೂ ಪಶುಗಳೇ!
(ಕಾಪಾಡಲಿ ಪಶುಪತಿ).

ಸಿ.ಪಿ.ಕೆ., ಮೈಸೂರು

ಪುಣ್ಯಸ್ಥಳ ಅಭಿವೃದ್ಧಿ: ಅನಾರೋಗ್ಯಕರ ಚಿಂತನೆ ಸಲ್ಲ

ಭಾರತೀಯರಲ್ಲಿ ಧರ್ಮದ ಮೇಲಿರುವ ನಂಬಿಕೆ, ಇಲ್ಲಿರುವ ಪುಣ್ಯಸ್ಥಳಗಳನ್ನು ಬೆಸೆಯಬೇಕಾದ ಜರೂರು, ಇಲ್ಲಿಯ ಜನ ಸಾಧು-ಸಂತರ ಮಾತಿಗೆ ಹೆಚ್ಚು ಬೆಲೆ ಕೊಡುವುದು ಮುಂತಾದವನ್ನು ಎ.ರವೀಂದ್ರ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಜ. 21) ಗುರುತಿಸಿದ್ದಾರೆ. ಆದರೆ, ಈ ಸ್ಥಳಗಳ ಮೂಲಕ ಸರ್ಕಾರವು ಪಡೆಯಬಹುದಾದ ಆರ್ಥಿಕ ಲಾಭಗಳತ್ತ ಅವರು ಗಮನ ಸೆಳೆದಿರುವ ವಿಚಾರ ಪ್ರಶ್ನಾರ್ಹವಾಗಿದೆ.

ಏಕೆಂದರೆ, ಆರ್ಥಿಕ ಲಾಭ ಎಂದಕೂಡಲೇ ವಾಹನ ಸಂಚಾರ, ವಾಣಿಜ್ಯ ಸಂಕೀರ್ಣಗಳು, ಹೋಟೆಲ್ ವ್ಯಾಪಾರ, ಮದ್ಯದಂಗಡಿ, ವಸತಿ ನಿಲಯಗಳು, ರೋಪ್ ವೇ, ದೊಡ್ಡದೊಡ್ಡ ರಸ್ತೆಗಳ ಅಭಿವೃದ್ಧಿ, ಸೇತುವೆಗಳು, ನಿಲ್ದಾಣಗಳು, ಒಳಚರಂಡಿ, ಯಾತ್ರಿ ನಿವಾಸಗಳೆಲ್ಲ ಬಂದೇಬರುತ್ತವೆ. ಅಂದಹಾಗೆ, ನಮ್ಮ ಅಭಿವೃದ್ಧಿಯ ಕಲ್ಪನೆ ಸುತ್ತುತ್ತಿರುವುದೇ ಈ ವಿಷವರ್ತುಲದಲ್ಲಿ. ಹೀಗಾಗಿ, ಈಗಾಗಲೇ ಹೆಸರಾಂತ ಯಾತ್ರಾಸ್ಥಳಗಳೆಲ್ಲ (ಉದಾ: ನಂದಿ ಗಿರಿಧಾಮ, ಬೇಲೂರು, ಶ್ರವಣಬೆಳಗೊಳ, ಚಾಮುಂಡಿ ಬೆಟ್ಟ, ಜೋಗ್ ಜಲಪಾತ, ಮಲೆ ಮಹದೇಶ್ವರ, ಮೇಲುಕೋಟೆ, ಕಾಂಚೀಪುರಂ, ಶ್ರೀರಂಗಂ, ತಿರುಪತಿ, ಕನ್ಯಾಕುಮಾರಿ, ವೇಲಾಂಕಣಿ, ಶಿರಡಿ...) ಮಾರುಕಟ್ಟೆಗಳಂತೆ ಆಗಿಹೋಗಿವೆ. ಆದರೆ, ಇನ್ನೂ ಅಷ್ಟಾಗಿ ಬೆಳಕಿಗೆ ಬಾರದೆ ಅನಾಮಿಕವಾಗಿ ಉಳಿದುಕೊಂಡಿರುವ ಬೆಟ್ಟಗುಡ್ಡಗಳು, ದೇವಸ್ಥಾನಗಳು, ಚಾರಿತ್ರಿಕ ಸ್ಥಳಗಳು (ಉದಾ: ಬೆಳವಾಡಿ, ದೊಡ್ಡಗದ್ದವಳ್ಳಿ, ನುಗ್ಗೇಹಳ್ಳಿ, ಅರಳಗುಪ್ಪೆ, ಅಗ್ರಹಾರ ಬೆಳಗುಲಿ, ಅಮೃತಾಪುರ ಮುಂತಾದವು) ತಮ್ಮ ಪ್ರಶಾಂತ ವಾತಾವರಣವನ್ನು ಉಳಿಸಿಕೊಂಡು, ವಿರಳ ಸಂಖ್ಯೆಯಲ್ಲಿ ಬರುವ ಜಿಜ್ಞಾಸುಗಳಿಗೆ ನೆಮ್ಮದಿಯ ತಂಪನ್ನೀಯುತ್ತಿವೆ.

ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದೇನೆಂದರೆ, ಆರ್ಥಿಕ ಪ್ರಯೋಜನದ ದೃಷ್ಟಿ ಬಂದ ಕೂಡಲೇ ಒಂದು ಪರಿಸರದ ಘನವಾದ ಅಂಶಗಳೆಲ್ಲವೂ ಕೆಲವೇ ವರ್ಷಗಳಲ್ಲಿ ಗತವೈಭವವಾಗುತ್ತವೆ. ಜೊತೆಗೆ ಹಣದೊಂದಿಗೆ ಅನೈತಿಕತೆ, ಭ್ರಷ್ಟಾಚಾರ, ಗುಂಪುಗಾರಿಕೆ, ರಾಜಕೀಯದಂತಹ ಅನಾರೋಗ್ಯಕರ ಅಂಶಗಳು ತಲೆ ಎತ್ತುತ್ತವೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪುಣ್ಯಸ್ಥಳಗಳನ್ನು ಜನಜಂಗುಳಿಯ ತಾಣಗಳನ್ನಾಗಿಸದೆ, ಅಲ್ಲಿಯ ಅಲೌಕಿಕ ಅನನ್ಯತೆಯನ್ನು ಹೇಗೆ ಅವಿಚ್ಛಿನ್ನವಾಗಿ ಉಳಿಸಿಕೊಳ್ಳಬಹುದು ಎನ್ನುವುದರತ್ತ ಗಮನ ಹರಿಸುವುದು ಸೂಕ್ತ. ಇಲ್ಲದಿದ್ದರೆ 'ಹರುಷದ ಕೂಳಿಗೆ ಹೋಗಿ ವರುಷದ ಕೂಳನ್ನು ಕಳೆದುಕೊಂಡಂತೆ' ಎನ್ನುವ ರೇಜಿಗೆಯ ಸ್ಥಿತಿ ಸೃಷ್ಟಿಯಾಗುತ್ತದಷ್ಟೇ. ತಾತ್ಕಾಲಿಕ ಆಕರ್ಷಣೆಗೆ ಮರುಳಾಗುವುದಕ್ಕಿಂತ ಚಿರಂತನವಾದ ನೆಮ್ಮದಿಯ ಬೆಲೆಯನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಮುಖ್ಯ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಾಯಕತ್ವದಿಂದ ಕೊಹ್ಲಿ ನಿರ್ಗಮನ: ಬಿಸಿಸಿಐ ಜತೆಗಿನ ಸಂಘರ್ಷದ ಪರಿಣಾಮವೇ?

ಕೊಹ್ಲಿಗೆ ಬೇಕಿತ್ತು ಉತ್ತಮ ವಿದಾಯ

• ವಿಜಯ್ ಲೋಕಪಲ್ಲಿ



ಪ್ರೀತಿಪಾತ್ರವಾದ ಆದರೆ ಗ್ರಹಿಕೆಗೆ ಸುಲಭಕ್ಕೆ ನಿಲುಕದ, ಒಳ್ಳೆಯತನ, ಸಿಡುಕು, ಆಕ್ರೋಶ, ಮೃದುತ್ವ ಎಲ್ಲವೂ ಒಳಗೊಂಡ ವ್ಯಕ್ತಿತ್ವ ಅವರದ್ದು. ಅಂಗಣದಲ್ಲಿ ಆಕ್ರಮಣಶೀಲರಾಗಿದ್ದರೂ ಹೊರಗೆ ಬಂದಾಗ ಮೃದು. ವ್ಯಕ್ತಿತ್ವ ಬಹಳ ಗಟ್ಟಿ. ನಿರ್ಭೀತ ಬ್ಯಾಟ್ಸ್‌ಮನ್. ಸ್ಫೂರ್ತಿದಾಯಕ ನಾಯಕ. ವಿರಾಟ್ ಕೊಹ್ಲಿಗೆ ಅವರು ಮಾತ್ರ ಹೋಲಿಕೆ. ನಿರಂಕುಶವಾದರೂ ಇತರರನ್ನು ಅರ್ಥ ಮಾಡಿಕೊಳ್ಳಬಲ್ಲ ಯಶಸ್ವಿ ನಾಯಕ. ಹಾಗಿದ್ದರೂ ವಿವಾದಾತ್ಮಕವಾದವರು; ಸಾಮಾನ್ಯವಾಗಿ ತಪ್ಪು ಗ್ರಹಿಕೆಗೆ ಒಳಗಾದವರು. ಜಾಗತಿಕ ಕ್ರಿಕೆಟ್ ಈಗ ಏನು ಆಗಿದೆಯೋ ಅದರ ಅವಿಭಾಜ್ಯ ಅಂಗವಾಗಿ ಕೊಹ್ಲಿ ಇದ್ದಾರೆ.

14 ವರ್ಷದ ಬಾಲಕನಾಗಿದ್ದಾಗಿನಿಂದಲೇ ನನಗೆ ಅವರು ಗೊತ್ತು. ಅಚ್ಚರಿ ಹುಟ್ಟಿಸುವ ರೀತಿಯ ಹೊಡೆತಗಳಿಂದ ಅವರು ದೆಹಲಿ ಕ್ರಿಕೆಟ್ ವಲಯದಲ್ಲಿ ಅಲೆ ಎಬ್ಬಿಸುತ್ತಿದ್ದ ದಿನಗಳವು. ಇನ್ನಷ್ಟು ಸುಧಾರಿಸಬೇಕು ಮತ್ತು ತ್ವರಿತವಾಗಿ ಬೆಳೆಯಬೇಕು ಎಂಬ ತುಡಿತದಿಂದಾಗಿ ಅವರು ತಮಗಿಂತ ಬಹಳ ದೊಡ್ಡ ಹುಡುಗರ ಜೊತೆ ಆಡುತ್ತಿದ್ದರು. ಅವರ ಜೊತೆ ವಾಗ್ವಾದ, ಸ್ಪರ್ಧೆ ಮಾಡುತ್ತಿದ್ದರು ಮತ್ತು ಅವರನ್ನು ಮುಖಾಮುಖಿಯಾಗುತ್ತಿದ್ದರು. ಈ ಪ್ರವೃತ್ತಿ ಅವರಲ್ಲಿ ಹಾಸುಹೊಕ್ಕಾಗಿ ಉಳಿದು ಹೋಯಿತು.

ಕಳೆದ ಒಂದು ವರ್ಷದ ಪಯಣ ಕೊಹ್ಲಿ ಪಾಲಿಗೆ ಏರುಪೇರಿನದ್ದಾಗಿತ್ತು. ಭಾರತೀಯ ಕ್ರಿಕೆಟ್‌ನಲ್ಲಿ ಕ್ರಾಂತಿಕಾರಕ ಎನ್ನಬಹುದಾದ ಹಲವು ಕ್ರಮಗಳನ್ನು ಅವರು ಕೈಗೊಂಡರು. ಭಾರತ ತಂಡವು ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದಾಗ, ಪಿತೃತ್ವ ರಜೆಯಿಂದಾಗಿ ಮೂರು ಟೆಸ್ಟ್ ಪಂದ್ಯಗಳನ್ನು ಅವರು ಕಳೆದುಕೊಳ್ಳಬೇಕಾಯಿತು. ಇದು ಅತ್ಯಂತ ಸ್ಪಷ್ಟವಾಗಿ ಅವರಿಗೆ ಕುಟುಂಬದ ವಿಚಾರ. ಇದಕ್ಕಾಗಿ ಅವರಲ್ಲಿ ಲೋಪ ಹುಡುಕಲು ಸಾಧ್ಯವೇ? ವೈವಾಹಿಕ ಜೀವನದ ಅತ್ಯಂತ ಸಂಭ್ರಮದ ಕ್ಷಣದಲ್ಲಿ ಗಂಡ ಜೊತೆಗೆ ಇರುವುದು ಎಷ್ಟು ಖುಷಿಯ ಸಂಗತಿ ಎಂಬುದು ಅನುಷ್ಕಾ ಶರ್ಮಾ ಅವರಿಗೆ ಗೊತ್ತು. ಕೊಹ್ಲಿ ಅವರು ಕ್ರಿಕೆಟ್ ಆಟಗಾರ, ಭಾರತ ತಂಡದ ನಾಯಕ ಆಗಿದ್ದಾಗಲೂ ಅವರೊಬ್ಬ ಗಂಡ ಮತ್ತು ತಂದೆ ಕೂಡ ಹೌದು.

ಉತ್ಕೃಷ್ಟತೆಯ ಹುಡುಕಾಟದಲ್ಲಿ, ಭಾರತೀಯ ಕ್ರಿಕೆಟನ್ನು ಉತ್ತುಂಗಕ್ಕೆ ಒಯ್ಯುವಲ್ಲಿ ಜಗತ್ತನ್ನು ಎದುರು ಹಾಕಿಕೊಳ್ಳಲು ಕೊಹ್ಲಿ ಹಿಂದೆ ಮುಂದೆ ನೋಡಿದ್ದಿಲ್ಲ; ಏಕೆಂದರೆ ಅವರು ಸದಾ ತಂಡದ ಬೆನ್ನಿಗೆ ನಿಂತವರು. ಅವರು ತಂಡದ ಆಟಗಾರರ ನಾಯಕ. ಬಿಸಿಸಿಐಯನ್ನು ಮೂಕಪ್ರೇಕ್ಷಕ ಎಂಬ ಮಟ್ಟಕ್ಕೆ ಸುಪ್ರೀಂ ಕೋರ್ಟ್ ಇಳಿಸಿದ್ದ ಸಂದರ್ಭದಲ್ಲಿ ಆಡಳಿತ ಸಮಿತಿಯ ಜತೆಗಿನ ಅವರ ಸಂವಹನದಲ್ಲಿ ಇದು ಎದ್ದು ಕಾಣುತ್ತಿದ್ದ ಅಂಶವಾಗಿತ್ತು. ಆಡಳಿತ ಸಮಿತಿಯಲ್ಲಿ ತಮ್ಮ ಮಾತು ನಡೆಯುವಂತೆ ಕೊಹ್ಲಿ ನೋಡಿಕೊಂಡಿದ್ದರು.

ಕೊಹ್ಲಿ ಬಗ್ಗೆ ಬಿಸಿಸಿಐಗೆ ಇದ್ದ ಒಲವು ಕುಸಿಯಿತು ಎಂದು ಒಳಗಿನವರು ಹೇಳುತ್ತಾರೆ. ಭಾರತದ ಕ್ರಿಕೆಟ್‌ಗೆ ಸಂಬಂಧಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವವರು ಯಾರು ಎಂಬ ಬಗ್ಗೆ ಯಾವತ್ತೂ ಚರ್ಚೆಯೇ ಇಲ್ಲ. ಅದು ಬಿಸಿಸಿಐಯೇ. ಲಾಲಾ ಅಮರನಾಥ್, ಬಿಷನ್ ಸಿಂಗ್ ಬೇಡಿ, ಗಾವಸ್ಕರ್, ಸಚಿನ್ ತೆಂಡೂಲ್ಕರ್‌ರಿಂದ ಕುಂಬ್ಳೆ ವರೆಗೆ... ಆಟಕ್ಕಿಂತ ದೊಡ್ಡವರು ಯಾರೂ ಇಲ್ಲ. ಕೊಹ್ಲಿ ಅದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಬಿಸಿಸಿಐ ಬಯಸಿತ್ತು

ಅನಿಲ್ ಕುಂಬ್ಳೆ ಪ್ರಕರಣದಲ್ಲಿ ಕೊಹ್ಲಿ ತೋರಿದ್ದು ಉದ್ಧಟತನ. ಕುಂಬ್ಳೆ ಅವರು ಕ್ರಿಕೆಟ್ ವಲಯದ ಎಲ್ಲರ ಜತೆಗೂ ಮುಕ್ತವಾಗಿ ಒಡನಾಡುವ ವ್ಯಕ್ತಿ. ಅವರ ಜತೆಗೂ ಅಹಂ ಸಂಘರ್ಷ ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಷ್ಟವೇ ಸರಿ. ಕುಂಬ್ಳೆ ಅವರ ಜತೆ ಜಗಳಕ್ಕೆ ಇಳಿದದ್ದು ಕೊಹ್ಲಿ ಅವರನ್ನು ಒಳ್ಳೆಯದಾಗಿ ಬಿಂಬಿಸಲಿಲ್ಲ. ಟೀಕೆಯನ್ನು ಸ್ವೀಕರಿಸಲು ಕೊಹ್ಲಿ ಸಿದ್ಧರಿಲ್ಲ ಎಂಬುದರ ಆರಂಭಿಕ ಸೂಚನೆ ಅದಾಗಿತ್ತು.

ರವಿಶಾಸ್ತ್ರಿ ಜತೆಗಿನ ಬಾಂಧವ್ಯವು ಕೊಹ್ಲಿ ಅವರಿಗೆ ಪೂರಕವಾಗಿ ಕೂಡಿಬಂತಾದರೂ ಅದು ಅವರನ್ನು ಸರ್ವಾಧಿಕಾರಿ ಮಾಡಿಬಿಟ್ಟಿತು. ಅವರ ಧೋರಣೆ ಮತ್ತು ಆಕ್ರಮಣಶೀಲತೆಯಲ್ಲಿ ಮಾಜಿ ಆಟಗಾರರು ಲೋಪ ಕಂಡರಾದರೂ ತಂಡದ ಆಟಗಾರರು ಅದನ್ನು ಇಷ್ಟಪಟ್ಟರು. ಫಿಟ್‌ನೆಸ್ ಬಗೆಗಿನ ಗೀಳು, ಆಟಕ್ಕೆ ಬದ್ಧತೆ ಬೇಕು ಎಂಬ ಅವರ ಆಗ್ರಹವನ್ನು ತಂಡವು ಒಪ್ಪಿಕೊಂಡಿತು. ಆಯ್ಕೆ ಸಂಬಂಧಿ ವಿಚಾರಗಳಲ್ಲಿ ನಾಯಕ ತಮ್ಮ ಕೈಬಿಡುವುದಿಲ್ಲ ಎಂಬುದು ತಂಡಕ್ಕೆ ಬಹಳ ನೆಚ್ಚಿನದಾಗಿತ್ತು.

ವೈಯಕ್ತಿಕ ಯಶಸ್ಸು, ಭಯ ಹುಟ್ಟಿಸುವ ವೇಗದಲ್ಲಿ ಅವರು ರನ್ ಕಲೆ ಹಾಕುತ್ತಿದ್ದ ರೀತಿ ಬಿಸಿಸಿಐಯನ್ನೇ ಮೂಲೆಗುಂಪು ಮಾಡಿತು; ಸಚಿನ್ ತೆಂಡೂಲ್ಕರ್ ನಂತರದ ಯುಗದ ಅತ್ಯಂತ ಶ್ರೇಷ್ಠ ಆಟಗಾರನಾಗಿ ಹೊರಹೊಮ್ಮಿದ ಕೊಹ್ಲಿ, ತಮ್ಮ ನಿರಂತರತೆಯಿಂದಾಗಿ ಆಟದಲ್ಲಿ ಛಾಪು ಮೂಡಿಸಿದರು. ಅವರು ಕ್ರಿಕೆಟ್‌ನ ಅದರಲ್ಲೂ ವಿಶೇಷವಾಗಿ ಟೆಸ್ಟ್ ಕ್ರಿಕೆಟ್‌ನ ಅತ್ಯುತ್ತಮ ರಾಯಭಾರಿಯಾಗಿ ಮೂಡಿ ಬಂದರು.

ಬಿಸಿಸಿಐ ಅಧ್ಯಕ್ಷರಾಗಿ ಸೌರವ್ ಗಂಗೂಲಿ ಮುನ್ನೆಲೆಗೆ ಬಂದದ್ದು ಕುತೂಹಲಕರ ಹಂತ; ಆದರೆ, ಇದು ಅತ್ಯಂತ ಚಂಚಲ ಹಂತವೂ ಆಯಿತು. ಕೊಹ್ಲಿ ಅವರ ಮೇಲಿನ ಒತ್ತಡ ಹೆಚ್ಚುತ್ತಲೇ ಹೋಯಿತು. ಭಿನ್ನ ಮಾದರಿಗಳಿಗೆ ಬೇರೆ ಬೇರೆ



ನಾಯಕರ ನೇಮಕದ ವಿಚಾರ ಚರ್ಚೆಗೆ ಬಂತು ಮತ್ತು ಕೆಲಸದ ಒತ್ತಡವು ಕೊಹ್ಲಿ ಅವರ ಫಾರ್ಮ್ ಮೇಲೆ ಪರಿಣಾಮ ಬೀರಿತು. ರನ್ ಗಳಿಕೆ, ಪ್ರಶಸ್ತಿ ಗೆಲ್ಲುವಿಕೆ ಮರೀಚಿಕೆಯಾಗತೊಡಗಿತು. ಟೀಕೆಗಳು ಯಾವ ಮಟ್ಟಕ್ಕೆ ಹೆಚ್ಚಿದವು ಎಂದರೆ, ನಾಯಕತ್ವ ಸಾಮರ್ಥ್ಯದ ಬಗೆಗೆ ನಿರಂತರವಾಗಿ ಕೇಳಿ ಬಂದ ಪ್ರಶ್ನೆಗಳಿಂದ ತಮ್ಮ ಖ್ಯಾತಿಯನ್ನು ರಕ್ಷಿಸಿಕೊಳ್ಳಲು ಕೊಹ್ಲಿ ಅವರು ಟ್ವೆಂಟಿ 20 ನಾಯಕತ್ವವನ್ನು ಬಿಟ್ಟುಕೊಡುವುದಾಗಿ ಹೇಳಬೇಕಾಯಿತು.

ಈ ನಿರ್ಧಾರದಿಂದ ಅವರನ್ನು ಹಿಮ್ಮೆಟ್ಟಿಸುವ ಪ್ರಯತ್ನ ನಡೆಸಲಾಯಿತಾದರೂ ಯುಎಇಯಲ್ಲಿ ನಡೆದ ಟ್ವೆಂಟಿ20 ವಿಶ್ವಕಪ್ ನಂತರ ನಾಯಕತ್ವ ತೊರೆಯುವುದಾಗಿ ಘೋಷಿಸುವ ಅಸಾಧಾರಣ ಕ್ರಮವನ್ನು ಕೊಹ್ಲಿ ಕೈಗೊಂಡರು ಎಂದು ಬಿಸಿಸಿಐ ಆರೋಪಿಸಿದೆ. ಕೊಹ್ಲಿ ನಡೆ ಬಿಸಿಸಿಐಗೆ ಹಿಡಿಸಲಿಲ್ಲ. ಏಕದಿನ ತಂಡದ ನಾಯಕತ್ವ ಉಳಿಸಿಕೊಳ್ಳುವ ಇಚ್ಛೆ ವ್ಯಕ್ತಪಡಿಸುವ ತಪ್ಪನ್ನೂ ಅವರು ಮಾಡಿದರು. ಬಿಸಿಸಿಐ ಅದನ್ನು ಒಪ್ಪಲಿಲ್ಲ. ಟ್ವೆಂಟಿ20 ಮತ್ತು ಏಕದಿನ ತಂಡಕ್ಕೆ ರೋಹಿತ್ ಶರ್ಮಾ ಅವರನ್ನು ನಾಯಕನನ್ನಾಗಿ ನೇಮಿಸಿತು. ಕೊಹ್ಲಿ ಸಿಟ್ಟಾದರು.

ಈಗ ಸೂಚನೆಗಳು ಅತ್ಯಂತ ಸ್ಪಷ್ಟವಾಗಿದ್ದವು. ಆಡಳಿತ ಸಮಿತಿಯ ಅವಧಿಯಲ್ಲಿ ಅವರಿಗೆ ಪೂರಕವಾಗಿ ಒದಗಿ ಬಂದದ್ದು ಈಗ ನೆರವಾಗಿ ಬರಲಿಲ್ಲ. ಸಂವಹನಕ್ಕೇ ಸಿಗದ ಕೊಹ್ಲಿ ಬಗ್ಗೆ ಬಿಸಿಸಿಐ ಕೋಪಗೊಂಡಿತ್ತು. ಅರ್ಥ ಮಾಡಿಕೊಳ್ಳಲು ಸಿದ್ಧರಿಲ್ಲದ ಕೊಹ್ಲಿ ಅವರ ಬಗ್ಗೆ ಆಯ್ಕೆಗಾರರೂ ಸಿಟ್ಟಾದರು ಎಂದು ಹೇಳಲಾಗುತ್ತಿದೆ.

ಕೊಹ್ಲಿ ಬಗ್ಗೆ ಬಿಸಿಸಿಐಗೆ ಇದ್ದ ಒಲವು ಕುಸಿಯಿತು ಎಂದು ಒಳಗಿನವರು ಹೇಳುತ್ತಾರೆ. ಭಾರತದ ಕ್ರಿಕೆಟ್‌ಗೆ ಸಂಬಂಧಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವವರು ಯಾರು ಎಂಬ ಬಗ್ಗೆ ಯಾವತ್ತೂ ಚರ್ಚೆಯೇ ಇಲ್ಲ. ಅದು ಬಿಸಿಸಿಐಯೇ. ಲಾಲಾ ಅಮರನಾಥ್, ಬಿಷನ್ ಸಿಂಗ್ ಬೇಡಿ, ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್‌ರಿಂದ ಕುಂಬ್ಳೆ ವರೆಗೆ... ಆಟಕ್ಕಿಂತ ದೊಡ್ಡವರು ಯಾರೂ ಇಲ್ಲ. ಕೊಹ್ಲಿ ಅದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಬಿಸಿಸಿಐ ಬಯಸಿತ್ತು.

ಟೀಕಾಕಾರರು ಕೊಹ್ಲಿ ಅವರ ತಲೆದಂಡಕ್ಕೆ ಸಜ್ಜಾಗಿದ್ದರು. ಬದಲಾವಣೆ ಆರಂಭವಾಗಿದೆ ಎಂಬುದು ಕ್ರಿಕೆಟ್‌ನ ದಂತಕತೆ ರಾಹುಲ್ ದ್ರಾವಿಡ್ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಿದಾಗಲೇ ಕೊಹ್ಲಿ ಅವರ ಅನುಭವಕ್ಕೆ ಬಂದಿರಬೇಕು. ಭಾರತದ ಅತ್ಯಂತ ಯಶಸ್ವಿ ನಾಯಕನಿಗೆ ತಮ್ಮ ಆಯ್ಕೆಯ ತಂಡ ಸಿಗುತ್ತಿರಲಿಲ್ಲ. ಆಯ್ಕೆಗಾರರು ಕೊಹ್ಲಿ ಅವರನ್ನು ಪ್ರಶ್ನಿಸಲಾರಂಭಿಸಿದ್ದರು ಮತ್ತು ಅದು ಸರಿ ಕೂಡ. ಗಾಳಿ ಬೀಸುವ ದಿಕ್ಕು ಬದಲಾಗಿತ್ತು.

ಕೊಹ್ಲಿ ತಲೆ ತುಂಬಾ ಹತ್ತಾರು ವಿಚಾರಗಳಿವೆ. ಬಿಸಿಸಿಐನ ಸದಾ ಅನುಮಾನದ ನೋಟದಿಂದ ಅವರಿಗೆ ಮುಕ್ತಿ ಬೇಕಿದೆ. ಟೆಸ್ಟ್ ಪಂದ್ಯದ ನಾಯಕ ಸ್ಥಾನ ತ್ಯಜಿಸುವ ನಿರ್ಧಾರವನ್ನು ಸದ್ಯಕ್ಕೆ ತಡೆ ಹಿಡಿಯಿರಿ ಎಂದು ಅವರನ್ನು ಕೇಳಿಕೊಂಡದ್ದು ನಿಜ. ಆರ್‌ಸಿಬಿ ತಾರೆಗೆ ಬೆಂಗಳೂರು ಕ್ರೀಡಾಂಗಣವು ವಿದಾಯಕ್ಕೆ ಅತ್ಯುತ್ತಮ ತಾಣ ಆಗಬಹುದಿತ್ತು. ಆದರೆ ಬಿಸಿಸಿಐಗೆ ವಿಶ್ವಾಸ ಇಲ್ಲದಿರುವಾಗ ನಾಯಕತ್ವದಲ್ಲಿ ಮುಂದುವರಿಯಲು ಕೊಹ್ಲಿ ಒಪ್ಪಲಿಲ್ಲ. ಇದು ಸಿಂಹಾಸನ ತೊರೆಯುವ ಸಮಯ. ಭಾರತದ ಅತ್ಯಂತ ಯಶಸ್ವಿ ಟೆಸ್ಟ್ ತಂಡದ ನಾಯಕ ಕೊಹ್ಲಿ ಸಮಯ ವ್ಯರ್ಥ ಮಾಡಲಿಲ್ಲ. ಆದರೆ, ಅವರು ಸುನಿಲ್ ಗಾವಸ್ಕರ್ ಅವರನ್ನು ಅನುಸರಿಸಬಹುದಿತ್ತು. ಗಾವಸ್ಕರ್ ಅವರು 1985ರಲ್ಲಿ ವಿಶ್ವ ಚಾಂಪಿಯನ್‌ಶಿಪ್ ಗೆದ್ದು ಉತ್ತುಂಗದಲ್ಲಿ ಇದ್ದಾಗಲೇ ವಿದಾಯ ಹೇಳಿದ್ದರು. ಕ್ರಿಕೆಟ್‌ನ ದಂತಕತೆ ಕೊಹ್ಲಿಗೆ ಅವರ ಅರ್ಹತೆಯ ವಿದಾಯ ದೊರೆಯಲಿಲ್ಲ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗುತ್ತದೆ. ಕೊಹ್ಲಿ ಅವರು ಆಡಳಿತಗಾರರಿಂದ ಸಂಕಷ್ಟಕ್ಕೆ ಒಳಗಾದ ಮೊದಲ ಆಟಗಾರನೇನೂ ಅಲ್ಲ. ಕೊನೆಯವರೂ ಅಲ್ಲ. ನೂರು ಟೆಸ್ಟ್‌ಗಳ ಮೈಲುಗಲ್ಲುಗಳ ಸನಿಹ ಇರುವ ಆಟಗಾರನನ್ನು ಇನ್ನಷ್ಟು ಉತ್ತಮವಾಗಿ ನಡೆಸಿಕೊಳ್ಳಬೇಕಿತ್ತು.

ಲೇಖಕ: ಸ್ಪೋರ್ಟ್ಸ್‌ಸ್ಟಾರ್ ಸಂಪಾದಕೀಯ ಸಲಹೆಗಾರ, ನಿರೂಪಿತ ಲೇಖನ

ಪ್ರಜಾವಾಣಿ ಚರ್ಚೆ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 25

ನಂದಿಕೇಶ್ವರ ಹೇಳಿದ ಶಿವನ ಆಕಾರ

ಶಿವನ ಆಕಾರದ ಬಗ್ಗೆ ದೇವಮುನಿ ಸನತ್ಕುಮಾರ ಮತ್ತು ಶಿವನ ವಾಹನವಾದ ನಂದಿಕೇಶ್ವರ ಹೇಳಿದ ವಿವರವನ್ನೂ ಸಹ ಪ್ರಯಾಗದ ಋಷಿಮುನಿಗಳಿಗೆ ಸೂತಮುನಿ ತಿಳಿಸುತ್ತಾನೆ. ಶಿವನ ಆಕಾರ ಮತ್ತು ನಿರಾಕಾರದ ಬಗ್ಗೆ ನಂದಿಕೇಶ್ವರನು ಸನತ್ಕುಮಾರನಿಗೆ. ಸನತ್‌ಕುಮಾರದೇವನು ವ್ಯಾಸರಿಗೆ, ವ್ಯಾಸರು ತನಗೆ ಹೇಳಿದ್ದನ್ನು ಸೂತಮುನಿಯು ತಿಳಿಸುತ್ತಾನೆ.

ಮಂದಾರಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ ಬ್ರಹ್ಮಪುತ್ರನಾದ ಸನತ್ಕುಮಾರ ತನ್ನ ಬಳಿ ಬಂದ ನಂದಿಕೇಶ್ವರನಿಗೆ 'ಶಿವನನ್ನು ಮಾತ್ರ ಲಿಂಗ ಮತ್ತು ವಿಗ್ರಹಗಳೆರಡರಲ್ಲೂ ಏಕೆ ಪೂಜೆ ಮಾಡುತ್ತಾರೆ?' ಅಂತ ಕೇಳುತ್ತಾನೆ. ಇದಕ್ಕೆ ನಂದಿಕೇಶ್ವರ 'ಅನುತ್ತರಮಿಮಂ ಪ್ರಶ್ನಂ, ರಹಸ್ಯಂ-ಬ್ರಹ್ಮಲಕ್ಷಣಂ' ಅಂತ ಬಹಳ ಸರಳವಾಗಿ ಉತ್ತರಿಸುತ್ತಾನೆ. 'ನೀನು ಕೇಳಿದ ಪ್ರಶ್ನೆ ಅತಿ ರಹಸ್ಯವಾದುದು. ಸಾಮಾನ್ಯರು ಬ್ರಹ್ಮವಿಷಯವಾದ ಈ ಪ್ರಶ್ನೆಗೆ ಉತ್ತರವನ್ನು ಹೇಳಲು ಸಾಧ್ಯವಿಲ್ಲ. ಆದರೂ ಶಿವನು ನನಗೆ ಹೇಳಿದ್ದನ್ನು ಶಿವಭಕ್ತನಾದ ನಿನಗೆ ಹೇಳುವೆನು ಕೇಳು' ಅಂತ ತಿಳಿಸುತ್ತಾನೆ.

ಶಿವನು ಬ್ರಹ್ಮರೂಪನು ಮತ್ತು ಆಕಾರವಿಲ್ಲದವನು. ಆದಕಾರಣ ಆಕಾರವಿಲ್ಲದ ಲಿಂಗವೇ ಶಿವಪೂಜೆಯಲ್ಲಿ ಪ್ರಶಸ್ತವಾದುದು. ವೇದಗಳಲ್ಲಿಯೂ ಹಾಗೆಯೇ ಹೇಳಿದೆ. ಅಲ್ಲದೆ, ಶಂಕರನು ಮಾಯಿಕವಾದ ಆಕಾರವುಳ್ಳವನೂ ಆಗಿದ್ದಾನೆ. ಹೀಗಾಗಿ ಈಶ್ವರನು ಸಾಕಾರ ಮತ್ತು ನಿರಾಕಾರ ಎರಡು ರೂಪಗಳುಳ್ಳವನೂ ಆಗಿದ್ದಾನೆ. ಆದ್ದರಿಂದ ಶಿವನನ್ನು ಸಾಕಾರವಾದ ವಿಗ್ರಹದಲ್ಲಿಯೂ ಜನರು ಪೂಜಿಸಬಹುದು. ಶಿವನ ಹೊರತು ಮಿಕ್ಕ ದೇವರುಗಳು ಜೀವವುಳ್ಳವರು ಮತ್ತು ಆಕಾರವುಳ್ಳವರು. ಹಾಗೇ, ಚಿರಾಯುಗಳಲ್ಲದ ಮತ್ತು ಬ್ರಹ್ಮರೂಪರಲ್ಲದ ಇತರ ದೇವರುಗಳನ್ನು ವಿಗ್ರಹದಲ್ಲಿಯೇ ಪೂಜೆ ಮಾಡಬೇಕೆಂದು ವೇದಗಳಲ್ಲಿ ಹೇಳಿದೆ. ದೇವತೆಗಳು ಸಾಕಾರವಾದಂತಹ ರೂಪದಿಂದಲೇ ಆವಿರ್ಭವಿಸುವರು ಮತ್ತು ಪ್ರತ್ಯಕ್ಷರಾಗುವರು. ಆದರೆ ಶಿವನು ಸಾಕಾರನಾಗಿ ಮತ್ತು ನಿರಾಕಾರನಾಗಿ ಎರಡು ರೀತಿಯಲ್ಲೂ ಗೋಚರನಾಗುವನು ಎನ್ನುತ್ತಾನೆ ನಂದಿಕೇಶ್ವರ.

ಆಕಾರ ಮತ್ತು ನಿರಾಕಾರಗಳಲ್ಲಿ ಶಿವನನ್ನು ಏಕೆ ಪೂಜಿಸಬೇಕು ಎಂಬುದನ್ನು ಸ್ವತಃ ಶಿವನಿಂದ ತಾನು ಕೇಳಿ ತಿಳಿದ ವಿವರವನ್ನು ಸಹ, ನಂದಿಕೇಶ್ವರನಿಗೆ ಇದೇ ಸಂದರ್ಭದಲ್ಲಿ ಸನತ್ಕುಮಾರನಿಗೆ ಹೇಳುತ್ತಾನೆ.

ಬಹಳ ಹಿಂದಿನ ಕಲ್ಪದಲ್ಲಿ, ಅಂದರೆ, ಲೋಕಪ್ರಸಿದ್ಧನಾದ ಮಹಾಕಾಳೇಶ್ವರನು ಲೋಕದಲ್ಲಿ ಅವತರಿಸಿದ ಕಾಲದಲ್ಲಿ ಒಂದು ಘಟನೆ ನಡೆಯುತ್ತದೆ. ಬ್ರಹ್ಮ ಮತ್ತು ವಿಷ್ಣು ಇಬ್ಬರೂ ಪರಸ್ಪರ ನಾನು ಮೇಲು, ತಾನು ಮೇಲು ಎಂದು ಹೊಡೆದಾಡುತ್ತಾರೆ. ಇದನ್ನು ತಿಳಿದ ಮಹಾಶಿವನು ಬ್ರಹ್ಮ ಮತ್ತು ವಿಷ್ಣು ಗರ್ವವನ್ನು ಹೋಗಿಸಲು ನಿರ್ಧರಿಸುತ್ತಾನೆ. ಇದಕ್ಕಾಗಿ ಪರಮೇಶ್ವರನು ಅವರ ಮಧ್ಯದಲ್ಲಿ ನಿರಾಕಾರವಾದ ದೊಡ್ಡ ಕಂಬದ ರೂಪದಲ್ಲಿ ನಿಲ್ಲುತ್ತಾನೆ. ಶಿವನು ತನ್ನ ಸ್ವರೂಪವನ್ನು ಗುರುತಿಸುವಂತಹ ಆ ಕಂಬವನ್ನು ಜಗತ್ತಿನ ಕ್ಷೇಮಕ್ಕಾಗಿ ಪ್ರಕಟಿಸಿದನು. ಅಂದಿನಿಂದ ಶಿವಪೂಜೆಗೆ ಕಂಬರೂಪದ ಲಿಂಗದ ಜೊತೆಗೆ ಶಿವನ ಮೂರ್ತಿಯು ಸಹ ಕಲ್ಪಿಸಲ್ಪಟ್ಟವು. ಇದು ಲಿಂಗ ಮತ್ತು ಮೂರ್ತಿಗಳೆರಡರಲ್ಲೂ ಈಶ್ವರನನ್ನು ಪೂಜಿಸಬಹುದೆಂಬುದರ ಅರ್ಥ.

ಇತರ ದೇವತೆಗಳಿಗೆ ಮೂರ್ತಿಪೂಜೆ ಮಾತ್ರ ವಿಹಿತವಾಗಿರುವುದು. ಏಕೆಂದರೆ, ಆ ದೇವತೆಗಳು ಭಕ್ತರಿಗೆ ಐಹಿಕ ಮತ್ತು ಸ್ವರ್ಗೀಯ ಭೋಗಗಳನ್ನು ಮಾತ್ರ ಕೊಡಲು ಸಮರ್ಥರಾಗಿರುವರು, ಮೋಕ್ಷಫಲವನ್ನು ಕೊಡಲು ಶಕ್ತರಲ್ಲ. ಆದರೆ ಈಶ್ವರನು ಭಕ್ತರಿಗೆ ಐಹಿಕಾದಿ-ಭೋಗಗಳನ್ನೂ ಮೋಕ್ಷವನ್ನೂ ಕೊಡಲು ಸಮರ್ಥನಾಗಿದ್ದಾನೆ. ಆದ್ದರಿಂದ ಪರಮೇಶ್ವರನು ಲಿಂಗ ಮತ್ತು ಮೂರ್ತಿಗಳ ರೂಪದಲ್ಲಿ ಆರಾಧಿಸಲ್ಪಡುವನು ಎಂದು ನಂದಿಕೇಶ್ವರನು ಸನತ್ಕುಮಾರದೇವನಿಗೆ ತಿಳಿಸಿದ್ದ. ನಂದಿಕೇಶ್ವರನಿಂದ ಕೇಳಿದ ಮಹಾಕಾಳೇಶ್ವರ ಆವಿರ್ಭವಿಸಿದ ಕಥೆಯನ್ನು ಸನತ್ಕುಮಾರನು ವೇದವ್ಯಾಸರಿಗೆ ತಿಳಿಸಿದ್ದ. ಹೀಗೆ ಶಿವಮಹಾಪುರಾಣದ ಮೊದಲ ಸಂಹಿತೆಯಾದ ವಿದ್ಯೇಶ್ವರ ಸಂಹಿತೆಯ ಐದನೇ ಅಧ್ಯಾಯವು ನಂದಿಕೇಶ್ವರ ಹೇಳುವ ಶಿವಲಿಂಗಾಕಾರದ ವಿವರವಾದ ಮಾತಿನೊಂದಿಗೆ ಮುಗಿಯುತ್ತದೆ. ಆರನೇ ಅಧ್ಯಾಯದಲ್ಲಿ, ಸುಳ್ಳು ಹೇಳಿದ ಬ್ರಹ್ಮ ತನ್ನ ಐದನೇ ತಲೆಯನ್ನು ಹೇಗೆ ಕತ್ತರಿಸಿಕೊಂಡ ಎಂಬ ಘಟನೆಯನ್ನು ಸೂತಮುನಿ ತಿಳಿಸುತ್ತಾನೆ.

ಐಸಿಸಿ ಟ್ರೋಫಿಗೆ ಕಣ್ಣಿಟ್ಟು ಕೊಹ್ಲಿ ಕೈಬಿಟ್ಟ ಬಿಸಿಸಿಐ

• ಆರ್. ಕೌಶಿಕ್



ಭಾರತ ಕ್ರಿಕೆಟ್ ತಂಡದಲ್ಲಿ ಹೋದ ಸೆಪ್ಟೆಂಬರ್ ಮಧ್ಯದಿಂದ ಆರಂಭವಾದ ಮೈದಾನದಾಚೆಯ ಗೊಂದಲಮಯ ವಿಷಯ ಜನವರಿ 15ರಂದು ವಿರಾಟ್ ಕೊಹ್ಲಿ ದಿಢೀರ್ ಎಂದು ಟೆಸ್ಟ್ ತಂಡದ ನಾಯಕತ್ವ ಬಿಡುವ ಘೋಷಣೆಯೊಂದಿಗೆ ಉತ್ತುಂಗ ತಲುಪಿತು. ವಿರಾಟ್ ಕೊಹ್ಲಿಯ ಏಳು ವರ್ಷಗಳ ವರ್ಣರಂಜಿತ ನಾಯಕತ್ವದ ಅವಧಿಯಲ್ಲಿ ಭಾರತ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಿಂದ ಅಗ್ರಸ್ಥಾನಕ್ಕೇರಿತು. ಸಾಗರೋತ್ತರ ಸರಣಿಗಳಲ್ಲಿ ಇತಿಹಾಸ ಬರೆಯಿತು. ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾ ಸರಣಿಗಳ ಜಯ, ಹೋದ ಬೇಸಿಗೆಯಲ್ಲಿ ಇಂಗ್ಲೆಂಡ್‌ನಲ್ಲಿ ಭಾರತ 2–1ರ ಮುನ್ನಡೆಯ ಸಾಧನೆ. ತಂಡದಲ್ಲಿ ಕೋವಿಡ್ ಪ್ರಕರಣ ವರದಿಯಾದ ಕಾರಣ ಕೊನೆಯ ಪಂದ್ಯ ಮುಂದೂಡಲಾಗಿತ್ತು.

ಆದರೆ ಸೆಪ್ಟೆಂಬರ್ 16ರಂದು ತಿಳಿಗೊಳದಲ್ಲಿ ಕಲ್ಲುಬಿತ್ತು. ಗೊಂದಲದ ಅಲೆ ಎದ್ದಿತು. ಅದಕ್ಕೆ ಕಾರಣ ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್ ತಂಡದ ನಾಯಕತ್ವ ಬಿಡುವುದಾಗಿ ಮಾಡಿದ ಘೋಷಣೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿದ್ದ ಟಿ20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಭಾರತ ತಂಡವು ಕಣಕ್ಕಿಳಿಯುವ ಐದು ವಾರಗಳ ಮುನ್ನ ಕೊಹ್ಲಿಯ ಈ ಹೇಳಿಕೆ ಸಂಚಲನ ಮೂಡಿಸಿತ್ತು. ಮೂರು ಮಾದರಿಗಳಲ್ಲಿಯೂ ತಂಡದ ನಾಯಕನಾಗಿ ಮತ್ತು ಪ್ರಮುಖ ಬ್ಯಾಟ್ಸ್‌ಮನ್ ಆಗಿ ಕೊಹ್ಲಿ ತಮ್ಮ ಕಾರ್ಯಭಾರವನ್ನು ಕಡಿಮೆ ಮಾಡಿಕೊಳ್ಳಲು ಈ ಹೆಜ್ಜೆಯಿಟ್ಟಿದ್ದರಲ್ಲಿ ಅಚ್ಚರಿಯೇನೂ ಇಲ್ಲ. 2017ರಿಂದ ಅವರು ಮೂರು ಮಾದರಿಗಳ ತಂಡದ ಮುಂದಾಳತ್ವ ವಹಿಸಿಕೊಂಡೂ ವೈಯಕ್ತಿಕ ಫಿಟ್‌ನೆಸ್ ಕಾಪಾಡಿಕೊಂಡವರು.

ಅವರು ಏಕದಿನ ಮತ್ತು ಟೆಸ್ಟ್ ತಂಡಗಳಿಗೆ ತಮ್ಮ ನಾಯಕತ್ವದ ಸಾಮರ್ಥ್ಯ ಧಾರೆಯೆರೆಯಲು ನಿರ್ಧರಿಸಿದ್ದರು. ಬಿಳಿಚೆಂಡಿನ ಮಾದರಿಯ ತಂಡಕ್ಕೆ ಇಬ್ಬರು ನಾಯಕರನ್ನು ನೇಮಕ ಮಾಡುವ ಅವಕಾಶಗಳು ಭಾರತದಲ್ಲಿ ಕಡಿಮೆ ಎನ್ನುವುದು ಬಹುಶಃ ಕೊಹ್ಲಿಗೆ ಅರಿವಿದ್ದಿರಬೇಕು. ಆದರೆ ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಮಿಥಾಲಿ ರಾಜ್ ಆ ರೀತಿ ಏಕದಿನ ಮತ್ತು ಟೆಸ್ಟ್ ಮಾದರಿಗಳಿಗೆ ನಾಯಕಿಯಾಗಿರುವುದು ನಿಜ. ಹೈದರಾಬಾದಿನ ಮಿಥಾಲಿ 2020ರ ಜೂನ್‌ನಲ್ಲಿ ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವ ಮುನ್ನವೂ ಈ ವ್ಯವಸ್ಥೆ ಇತ್ತು. ಆದರೆ ಈ ಸೂತ್ರವನ್ನು ಪುರುಷರ ತಂಡಕ್ಕೆ ಅನ್ವಯಿಸುವುದು ತುಸು ಕಠಿಣವೇ ಸರಿ.

ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯು ವಾಸ್ತವ ಸಂಗತಿಗಳತ್ತ ಚಿತ್ತ ಹರಿಸಿತು. ಮುಂಬರುವ 22 ತಿಂಗಳುಗಳ ಅವಧಿಯಲ್ಲಿ ಆಸ್ಟ್ರೇಲಿಯಾವು ಟಿ20 ವಿಶ್ವಕಪ್ ಮತ್ತು ಭಾರತವು 50 ಓವರ್‌ಗಳ ಮಾದರಿಯ ವಿಶ್ವಕಪ್ ಟೂರ್ನಿಗಳನ್ನು ಆಯೋಜಿಸಲಿವೆ. ಆ ಟೂರ್ನಿಗಳಲ್ಲಿ ಆಡುವ ಸೀಮಿತ ಓವರ್‌ಗಳ ಮಾದರಿಯ ತಂಡದ ಆಟಗಾರರನ್ನು ಸಿದ್ಧಗೊಳಿಸುವುದು ಮುಖ್ಯ. ಅದಕ್ಕಾಗಿ ಟೂರ್ನಿ ಮತ್ತು ಮಾದರಿಗಳ ಬ್ರ್ಯಾಂಡ್ ಕ್ರಿಕೆಟ್‌ಗೆ ತಕ್ಕ ಹೊಂದಾಣಿಕೆಯನ್ನು ರೂಢಿಗತಗೊಳಿಸಲು ಬಿಳಿಚೆಂಡಿನ ಮಾದರಿಯ ತಂಡಕ್ಕೆ ಏಕನಾಯಕತ್ವ ಸೂಕ್ತ ಎಂಬ ಸ್ಪಷ್ಟ ನಿರ್ಧಾರ ಕೈಗೊಂಡಿತು. ಅವರ ನಾಯಕತ್ವದಲ್ಲಿ 2019ರ ವಿಶ್ವಕಪ್ ಟೂರ್ನಿಗಳು ಮತ್ತು 2017ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳಲ್ಲಿ ಭಾರತವು ಪ್ರಶಸ್ತಿ ಜಯಿಸಿಲ್ಲ. ಆದ್ದರಿಂದ ಮುಂದಿನ ಟೂರ್ನಿಗಳಲ್ಲಿ ಚಾಂಪಿಯನ್ ಪಟ್ಟದ ಮೇಲೆ ಕಣ್ಣಿಟ್ಟಿದೆ.

ದ್ವಿಪಕ್ಷೀಯ ಸರಣಿಗಳಲ್ಲಿ ಕೊಹ್ಲಿ ದಾಖಲೆಗಳು ಅಮೋಘವಾಗಿವೆ. ಆದರೂ ಐಸಿಸಿ ಟ್ರೋಫಿ ವಿಜಯದ ಸಾಧನೆಗಳಿಗೆ ಅವು ಸರಿಸಮವಾಗುವುದಿಲ್ಲ. ತಂಡದ ಮುಖ್ಯ ಕೋಚ್ ಸ್ಥಾನದಿಂದ ರವಿಶಾಸ್ತ್ರಿ ನಿರ್ಗಮನದ ಬಳಿಕ ರಾಹುಲ್ ದ್ರಾವಿಡ್ ನೇಮಕವಾದಾಗಲೇ ತಂಡದಲ್ಲಿ ನವನಾಯಕತ್ವದ ಜಟಿಲ ಸಮಸ್ಯೆಯನ್ನು ಬಿಡಿಸುವ ಹಗ್ಗಜಗ್ಗಾಟ ಆರಂಭವಾಗಿತ್ತು

ಇದರ ಪರಿಣಾಮವಾಗಿ ಕೊಹ್ಲಿಯನ್ನು ಏಕದಿನ ತಂಡದ ನಾಯಕತ್ವದಿಂದ ಕೈಬಿಡಲಾಯಿತು. ದ್ವಿಪಕ್ಷೀಯ ಸರಣಿಗಳಲ್ಲಿ ಕೊಹ್ಲಿ ದಾಖಲೆಗಳು ಅಮೋಘವಾಗಿವೆ. ಆದರೂ ಐಸಿಸಿ ಟ್ರೋಫಿ ವಿಜಯದ ಸಾಧನೆಗಳಿಗೆ ಅವು ಸರಿಸಮವಾಗುವುದಿಲ್ಲ. ಟಿ20 ನಾಯಕತ್ವ ಬಿಡದಂತೆ ಮನವೊಲಿಸಲು ತಾವು ಕೊಹ್ಲಿಯೊಂದಿಗೆ ಮಾತುಕತೆ ನಡೆಸಿದ್ದನ್ನು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದರು. ಒಪ್ಪದಿದ್ದ ಕೊಹ್ಲಿಯನ್ನು ಏಕದಿನ ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಸದಾ ಅಧಿಕಾರದ ಸುತ್ತ ಸುಳಿದಾಡುವವರೇ ತುಂಬಿರುವ ಬಿಸಿಸಿಐನ ಕಾರಿಡಾರ್‌ನಲ್ಲಿ ಕೊಹ್ಲಿಯನ್ನು ಈ ವಿಷಯದಲ್ಲಿ ಬೆಂಬಲಿಸುವ ಸ್ನೇಹಿತರು ಹೆಚ್ಚಿರಲಿಲ್ಲ. ಹೋದ ತಿಂಗಳು ದಕ್ಷಿಣ ಆಫ್ರಿಕಾಕ್ಕೆ ತೆರಳುವ ಮುಂಚೆ ಮುಂಬೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನೀಡಿದ ಹೇಳಿಕೆಯು ಬಹಳಷ್ಟು ಸಂಚಲನಕ್ಕೆ ಕಾರಣವಾಯಿತು. ಆದರೆ ಅವರು ಆಗಲೇ ದಕ್ಷಿಣ ಆಫ್ರಿಕಾ ಸರಣಿಯ ನಂತರ ಟೆಸ್ಟ್ ನಾಯಕತ್ವ ಬಿಟ್ಟುಬಿಡಲು ಮಾನಸಿಕವಾಗಿ ನಿರ್ಧರಿಸಿರಬಹುದು. ಅದೇನೆ ಇರಲಿ; ಒಂದು ಕಾಲದ ವಿವಾದಾತೀತ ಮತ್ತು ಪ್ರಶ್ನಾತೀತ ನಾಯಕ ಕೊಹ್ಲಿಯ ಕೈಯಿಂದ ಸಮಯ ಕೈಜಾರುತ್ತಿರುವುದು ದಿಟವಾಗಿತ್ತು.

ತಂಡದ ಮುಖ್ಯ ಕೋಚ್ ಸ್ಥಾನದಿಂದ ರವಿಶಾಸ್ತ್ರಿ ನಿರ್ಗಮನದ ಬಳಿಕ ರಾಹುಲ್ ದ್ರಾವಿಡ್ ನೇಮಕವಾದಾಗಲೇ ತಂಡದಲ್ಲಿ ನವನಾಯಕತ್ವದ ಜಟಿಲ ಸಮಸ್ಯೆಯನ್ನು ಬಿಡಿಸುವ ಹಗ್ಗಜಗ್ಗಾಟ ಆರಂಭವಾಗಿತ್ತು. ಇದೇ ಹೊತ್ತಿನಲ್ಲಿ ರೋಹಿತ್ ಶರ್ಮಾ ಗಾಯಗೊಂಡರು. ಆದ್ದರಿಂದ ದಕ್ಷಿಣ ಆಫ್ರಿಕಾದ ಏಕದಿನ ಸರಣಿಯಲ್ಲಿ ಕೆ.ಎಲ್. ರಾಹುಲ್‌ಗೆ ನಾಯಕತ್ವದ ಪರೀಕ್ಷೆಯೊಡ್ಡಲಾಯಿತು. ಆದರೆ ಅಂತರರಾಷ್ಟ್ರೀಯ ಕ್ರಿಕೆಟ್ ನಾಯಕತ್ವದಲ್ಲಿ ರಾಹುಲ್‌ಗೆ ಉತ್ತಮ ಆರಂಭ ಸಿಗಲಿಲ್ಲ. ಅವರ ಮುಂದಾಳತ್ವದಲ್ಲಿ ಭಾರತವು ಎರಡನೇ ಟೆಸ್ಟ್ ಮತ್ತು ಮೊದಲ ಏಕದಿನ ಪಂದ್ಯಗಳಲ್ಲಿ ಸೋತಿತು. ಈ ಫಲಿತಾಂಶವಷ್ಟೇ ರಾಹುಲ್ ಸಾಮರ್ಥ್ಯದ ಅಳತೆಗೋಲು ಆಗಲಿಕ್ಕಿಲ್ಲ.

ಚೇತನ್ ಶರ್ಮಾ ಮತ್ತು ಇನ್ನೂ ನಾಲ್ವರು ಆಯ್ಕೆಗಾರರ ಮುಂದೆ ಹಲವು ಸವಾಲುಗಳಿವೆ; ಎಲ್ಲ ಮಾದರಿಗಳ ಹೊಣೆಯನ್ನೂ ರೋಹಿತ್ ಮಡಿಲಿಗೆ ಹಾಕುವುದೇ ಅಥವಾ ಸೀಮಿತ ಓವರ್‌ಗಳ ಹೊಣೆಯನ್ನು ಮಾತ್ರ ನೀಡುವುದೇ, ಟೆಸ್ಟ್ ನಾಯಕತ್ವಕ್ಕೆ ಮತ್ತೊಬ್ಬ ಆಟಗಾರನನ್ನು ನೇಮಕ ಮಾಡುವುದೇ ಎಂಬುದು ಅದರಲ್ಲಿ ಮುಖ್ಯವಾದವು. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಟೆಸ್ಟ್ ತಂಡದ ಉಪನಾಯಕರಾಗಿದ್ದ ಅಜಿಂಕ್ಯ ರಹಾನೆಯನ್ನು ಕೈಬಿಟ್ಟು ಈ ಹೊಣೆಯನ್ನು ರೋಹಿತ್‌ಗೆ ನೀಡಲಾಗಿತ್ತು. ಈ ಆಧಾರದಲ್ಲಿ ರೋಹಿತ್ ಟೆಸ್ಟ್ ತಂಡದ ನಾಯಕತ್ವಕ್ಕೂ ಅರ್ಹರಾಗಬಹುದೇ? ಗೊತ್ತಿಲ್ಲ.

ಒಟ್ಟಾರೆ, ಈ ಆಯ್ಕೆ ಮಾಡುವುದು ಶರ್ಮಾ ಬಳಗಕ್ಕೆ ಸುಲಭವಲ್ಲ. ಈ ಹಿಂದೆ ಕೊಹ್ಲಿಗೆ ಲಭಿಸಿದ್ದಂತಹ ಮೂರು ಮಾದರಿಗಳ ನಾಯಕತ್ವದ ಅವಕಾಶವನ್ನು ರೋಹಿತ್‌ಗೆ ನೀಡುವುದು ಅಲ್ಪಕಾಲದವರೆಗೆ ಸಾಧನೆಯ ಮೇಲೆ ನಿಗಾ ಇಡುವುದು ಅಥವಾ ರಾಹುಲ್ ಅವರತ್ತ ದೃಷ್ಟಿ ಹೊರಳಿಸುವುದು ಒಂದು ದಾರಿ. ತಾಂತ್ರಿಕ ನೈಪುಣ್ಯ ಮತ್ತು ಪರಿಸ್ಥಿತಿ ನಿಭಾಯಿಸುವ ಸಾಮರ್ಥ್ಯದಲ್ಲಿ ರಾಹುಲ್ ಅವರು ಕೊಹ್ಲಿಯನ್ನು ಸರಿಗಟ್ಟುವ ವಿಶ್ವಾಸ ಮೂಡಿಸುವುದು ಅವಶ್ಯಕವಾಗಲಿದೆ. ಯುವ ವಿಕೆಟ್‌ಕೀಪರ್ –ಬ್ಯಾಟ್ಸ್‌ಮನ್ ರಿಷಭ್ ಪಂತ್ ಕಳೆದ ಕೆಲವು ಕಾಲದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. 24 ವರ್ಷದ ಪಂತ್‌ಗೆ ಹೊಣೆ ನೀಡಿದರೆ ಅವರ ನಿರ್ಭೀತ ಶೈಲಿಯ ಆಟಕ್ಕೆ ತೊಡಕಾಗಬಹುದು. ಆದ್ದರಿಂದ ಕೆಲವು ಕಾಲ ರೋಹಿತ್ ಅಥವಾ ರಾಹುಲ್ ನಾಯಕತ್ವದಲ್ಲಿ ಪಳಗಲಿ ಎಂದೂ ಸಮಿತಿ ಯೋಚಿಸಬಹುದು.

ಮುಂದಿನ ಮೂರು ವಾರಗಳಲ್ಲಿ ಆಯ್ಕೆ ಸಮಿತಿಯು ಒಂದು ಸ್ಪಷ್ಟ ನಿರ್ಧಾರಕ್ಕೆ ಬರಬಹುದು. ಫೆಬ್ರುವರಿ 25ರಿಂದ ಭಾರತವು ಶ್ರೀಲಂಕಾ ಎದುರಿನ ಎರಡು ಟೆಸ್ಟ್‌ಗಳ ಸರಣಿಗೆ ಆತಿಥ್ಯ ವಹಿಸಲಿದೆ. ಕೊಹ್ಲಿಯ ವಾರಸುದಾರ ಯಾರೆಂಬುದಕ್ಕೆ ಈ ಸರಣಿಯಲ್ಲಿ ಸ್ಪಷ್ಟತೆ ದೊರಕಲಿದೆ. ಕೊಹ್ಲಿ ನಿರ್ಧಾರದಿಂದ ಸೃಷ್ಟಿಯಾಗಿರುವ ನಿರ್ವಾತವನ್ನು ತುಂಬುವ ವ್ಯಕ್ತಿ ಯಾರೆಂಬುದು ತಿಳಿಯಲಿದೆ. ಅದಕ್ಕಾಗಿ ಒಂದಿಷ್ಟು ಚರ್ಚೆಗಳು ನಡೆಯಬಹುದು. ಅಲ್ಲದೇ ಈ ಲೇಖನ ಬರೆದು ಮುಗಿಸುವ ಹೊತ್ತಿಗೆ ಐಸಿಸಿ ರ‍್ಯಾಂಕಿಂಗ್‌ನಲ್ಲಿ ಭಾರತವು ಮೂರನೇ ಸ್ಥಾನಕ್ಕೆ ಕುಸಿದಿದೆ. ಇದೂ ಚರ್ಚೆಯ ಕೇಂದ್ರಬಿಂದುವಾಗಬಹುದು.

ಲೇಖಕ: ಕ್ರೀಡಾ ಬರಹಗಾರ

ಪದಬಂಧ 4846


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಎತ್ತರವಾದ ಪ್ರದೇಶ (2)
5.ಚಕ್ರಾಕಾರವಾಗಿ ಸುತ್ತುವಿಕೆ (3)
6.ಭವನದಲ್ಲಿರುವ ಸಂಸಾರ! (2)
7.ಹೆಚ್ಚು ಪದದ ವಿರುದ್ಧ ಪದ (3)
9.ಈಕೆ ಪತಿವ್ರತೆ (3)
10.ತಪ್ಪು ಉದ್ದೇಶಕ್ಕೆ ಬಳಸುವುದು (5)
11.ಆಳು ಕರೆದುಕೊಂಡು ಬಂದಿರುವ ಹಸು (3)
12.ಮುಸಲ್ಮಾನ ದೊರೆ (3)
15.ಕಥೆ ಕೇಳಿ ಆಗಿರುವ ದುಃಖ (2)
16.ಬೊಕ್ಕ ತಲೆಯವನ ಖಜಾನೆ! (3)
17.ಅಗೆದ ಗುಣಿಯನ್ನು ಹೀಗೂ ಹೇಳುವರು (2)

ಮೇಲಿಂದ ಕೆಳಕ್ಕೆ

1.ಅಳತೆಗೆ ಮೀರಿದ ಸ್ಥಿತಿ (4)
2.ಹೆಣ್ಣು ದುಂಬಿಯಿದು (3)
3.ಕೀಲುದಸೆಯಿದು (4)
8.ಮಸ್ತಿಷ್ಕ ಇಲ್ಲಿದೆ (3)
9.ಗಮನವಿಟ್ಟರೆ ಆಕಾಶ ಇಲ್ಲಿಯೇ ಕಾಣುತ್ತಿದೆ! (3)
11.ಆದಾಯ ಮತ್ತು ಖರ್ಚು (4)
13.ಬಾಣಗಳನ್ನಿಡುವ ಕೋಶ (4)
14.ಅಕ್ಕ ತೋರಿದ ಪ್ರೀತಿ (3)



4845ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ3.ವ್ಯವಕಲನ
5.ಸರ6.ಶುಕ್ರವಾರ
7.ಅಗ್ನಿಶಾಮಕದಳ
10.ನಳಪಾಕ11.ಶುಕ
13.ಕಸಾಯಿಖಾನೆ
14.ಪಗಡಿ
ಮೇಲಿಂದ ಕೆಳಕ್ಕೆ:
1.ಪತ್ತೆ2.ವಿಚಾರ
4.ನಗರ5.ಸರಳ
6.ಶುನಕ8.ಶಾಸಕ
9.ಳಪಾಕ10.ನರ್ತಕ
11.ಶುರಪ
12.ಕುಡಿ

ಸುಡೊಕು 5232

6		4	9		7			8
					6		2	
	7	8	2			4		6
7					8		6	
	8		4			7	3	5
		5		7				
4	9		3	8		6		1
	6					5		
8		7			4			3

5231 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಶನಿವಾರ ಜನವರಿ 22, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 08 ನೇ ದಿನ ತಿಥಿ: (ಪೌಷ ಕೃಷ್ಣ) ಚತುರ್ಥಿ ಗಂ. 09-15 ನಕ್ಷತ್ರ: ಪೂರ್ವಫಲ್ಗುನಿ ಗಂ. 10-38 ಯೋಗ: ಶೋಭನ ಗಂ. 14-06 ಕರಣ: ಬಾಲವ ಗಂ. 09-15. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 07-01 ಸೂರ್ಯಾಸ್ತ : 06-22 ಮುಸ್ಲಿಂ ದಿನಾಂಕ : 18 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ : 2, 9

ಮೇಷ: ಕೌಟುಂಬಿಕ ವಲಯದಲ್ಲಿ ಗೌರವ ಹೆಚ್ಚಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರುವುದು. ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಉನ್ನತಿ. ಪರೋಪಕಾರ್ಯಗಳಿಂದ ಸಮಾಜದಲ್ಲಿಯೂ ಸಹ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವಿರಿ.

ವೃಷಭ: ನಾಯಕತ್ವದ ಪಟ್ಟ ಹೊರುವ ನಿಮ್ಮ ಸಾಮರ್ಥ್ಯವು ಕೆಲವರ ಕಣ್ಣಿಗೆ ಕೆಂಪಾಗಿ ಕಾಣುತ್ತದೆ. ಆದರೆ ಭಯ ಬೇಡ ಮುನ್ನುಗ್ಗಿ ಕಾರ್ಯನಿರ್ವಹಿಸಿ. ಹೊಗಳುಭಟರ ಮಾತಿಗೆ ಮರುಳಾಗದಿರಿ. ನಿಕಟ ವ್ಯಕ್ತಿಗಳ ಜೊತೆ ಜಗಳ ಸಲ್ಲ.

ಮಿಥುನ: ಹಿಂದಿನಿಂದ ಬಂದ ನಿಮ್ಮ ಹಲವು ಕಷ್ಟ ಕಾರ್ಪಣ್ಯಗಳಿಗೆ ದೇವರು ಇಂದು ದಾರಿ ತೋರುತ್ತಾನೆ. ಸರ್ಕಾರಿ ಉದ್ಯೋಗಸ್ಥರು ಮುಂಬಡ್ತಿ ಹೊಂದಲು ಬೇಕಾದ ತಯಾರಿ ಮಾಡಿ. ಆದಾಯ ಎಂದಿನಂತೆ ಇರುತ್ತದೆ.

ಕರ್ಕಾಟಕ: ಧಾರ್ಮಿಕ ವಿಚಾರಗಳಲ್ಲಿ ಸಾಧನೆ ಮಾಡುವವರಿಗೆ ಈ ದಿನ ಸುಸಮಯ. ಸೇವಕ ವರ್ಗದವರಿಂದ ನಿಮಗೆ ಸಹಕಾರ ಸಿಗುವುದು. ವಿದ್ಯಾಪೇಕ್ಷಿಗಳು ಶ್ರದ್ಧೆಯಿಂದ ಸತತ ಪರಿಶ್ರಮ ಪಟ್ಟರೆ ಫಲವುಂಟು.

ಸಿಂಹ: ನಿಮ್ಮ ಪ್ರಭಾವದಿಂದ ಬೇರೆಯವರು ಲಾಭ ಪಡೆಯುವಷ್ಟು ಯೋಗ್ಯತೆ ನಿಮ್ಮದಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ವಪ್ರಯತ್ನದ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಪಿತ್ರಾರ್ಜಿತ ಆಸ್ತಿ ಸಿಗುವುದು.

ಕನ್ಯಾ: ನಿಮ್ಮ ಸಹೋದ್ಯೋಗಿಗಳ ಸಹಕಾರಕ್ಕೆ ಅವರ ಬಳಿಯಲ್ಲಿ ಸ್ನೇಹ ಮನೋಭಾವದಿಂದ ಇರುವುದು ಅಗತ್ಯ. ಅರಣ್ಯ ಸುತ್ತಾಡುವ ಹವ್ಯಾಸ ಹೊಂದಿರುವವರು ಅಂತಹ ಸಮಯದಲ್ಲಿ ಜಾಗ್ರತೆ ವಹಿಸುವುದು ಅವಶ್ಯಕ.

ತುಲಾ: ವಿದೇಶದಲ್ಲಿರುವ ಮಕ್ಕಳ ಅಥವಾ ಬಂಧು ಮಿತ್ರರ ಆಗಮನ ಮನಸ್ಸಿಗೆ ಸಂತೋಷ ಕೊಡುತ್ತದೆ. ಗೋ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಲಾಭ. ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸಲು ಪ್ರಯತ್ನ ಪಡುವುದು ಒಳ್ಳೆಯದು.

ವೃಶ್ಚಿಕ: ಅದೃಷ್ಟ ನಿಮ್ಮದಾಗಲಿದೆ. ಆದ್ದರಿಂದ ಸಾಧನೆಯ ಗುರಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಬೇಡಿ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿವಹಿಸಿ. ಮಡದಿಯ ಭಾವನೆಗಳಿಗೆ ಬೆಲೆ ಕೊಡಿ. ಮಾನಸಿಕ ಧೈರ್ಯ ವೃದ್ಧಿಯಾಗಲಿದೆ.

ಧನು: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಅನುಕೂಲ. ವೈಯಕ್ತಿಕ ಹಾಗೂ ವೃತ್ತಿ ಚಟುವಟಿಕೆಯಲ್ಲಿ ಯಶಸ್ಸು ಸಾಧಿಸಲು ಕೊಂಚ ಹೆಚ್ಚಿನ ಶ್ರಮ ವಹಿಸಿ. ಸಮಸ್ಯೆಗಳಿಂದ ನೆಮ್ಮದಿ ಪಡೆಯಲು ಆಂಜನೇಯನನ್ನು ಆರಾಧಿಸಿ.

ಮಕರ: ಸಂಚಾರಶೀಲರಾಗಿರುವ ನೀವು ಈ ದಿನದ ಪ್ರಯಾಣದಲ್ಲಿ ಜಾಗ್ರತೆ ವಹಿಸುವುದು ಅತ್ಯಗತ್ಯ. ಆರಕ್ಷಕರಿಗೆ ಅನಿವಾರ್ಯವಾಗಿ ಬಿಡುವಿಲ್ಲದ ಕೆಲಸ. ಸತ್ಯಾಸತ್ಯತೆಯನ್ನು ತಿಳಿದು ಕಾರ್ಯ ಮುಂದುವರಿಸಿ.

ಕುಂಭ: ನಿಮ್ಮ ಧೈರ್ಯ, ಸಾಹಸ, ಎದೆಗಾರಿಕೆಯ ಬಗ್ಗೆ ಮಿತ್ರರು, ಬಂಧುಗಳು ಟೀಕಿಸುವವರಿದ್ದಾರೆ, ಲೆಕ್ಕಿಸದೆ ಮುನ್ನುಗ್ಗಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ತಂದೆ-ತಾಯಿಯ ಆರೋಗ್ಯದ ಬಗ್ಗೆ ಗಮನವಹಿಸುವುದು ಅಗತ್ಯ.

ಮೀನ: ಹೊಸ ದಾರಿಯನ್ನು ಹಿಡಿಯಲು ಯೋಚಿಸುತ್ತಿರುವ ವಿದ್ಯಾರ್ಥಿಗಳಿಗೆ ಗ್ರಹಗತಿಯ ಬೆಂಬಲ ಇದೆ. ಮಹಿಳೆಯರಿಗೆ ಉದ್ಯೋಗದಲ್ಲಿ ಲಾಭ. ಆಯುರ್ವೇದ ತಿಳಿದವರಿಗೆ ಬೇಡಿಕೆ ಹೆಚ್ಚಾದೀತು.

ಕೋವಿಡ್: ತಜ್ಞ ವೈದ್ಯರ ಸಂಖ್ಯೆಯೂ ಕಡಿಮೆ: ಕೆಲ ಹಾಸಿಗೆಗಳು ಮಕ್ಕಳ ಚಿಕಿತ್ಸೆಗಾಗಿ ಮೀಸಲು

10 ಜಿಲ್ಲೆಗಳಲ್ಲಷ್ಟೇ ಮಕ್ಕಳಿಗೆ ಪ್ರತ್ಯೇಕ ವಾರ್ಡ್

• ಸಚ್ಚಿದಾನಂದ ಕುರಗುಂದ



3 ಸುಧಾರಿಸಿದೆಯೇ ಆರೋಗ್ಯ ವ್ಯವಸ್ಥೆ

ಬೆಂಗಳೂರು: ಕೊರೊನಾ ಸೋಂಕಿಗೆ ಒಳಗಾಗುವ ಮಕ್ಕಳಿಗಾಗಿ ಪ್ರತ್ಯೇಕ ಯೋಜನೆಯನ್ನು ಸರ್ಕಾರ ರೂಪಿಸಿಲ್ಲ. ಮೂರನೇ ಅಲೆಯಿಂದ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ ಹತ್ತು ಜಿಲ್ಲೆಗಳಲ್ಲಿ ಮಾತ್ರ ಪ್ರತ್ಯೇಕ ವಾರ್ಡ್‌ಗಳನ್ನು ತೆರೆಯಲಾಗಿದೆ. ಉಳಿದೆಡೆ, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲೂ ಮಕ್ಕಳಿಗೆ ಆಮ್ಲಜನಕ ಸಹಿತ ಹಾಸಿಗೆಗಳನ್ನು ಮೀಸಲಿಡಲಾಗಿದೆ.

ಧಾರವಾಡ, ಹಾವೇರಿ, ಗದಗ, ಬೆಳಗಾವಿ, ಉತ್ತರಕನ್ನಡ, ಬಳ್ಳಾರಿ, ವಿಜಯಪುರ, ವಿಜಯನಗರ, ಬಾಗಲಕೋಟೆ, ಮೈಸೂರು ಜಿಲ್ಲೆಗಳಲ್ಲಿ ಮಕ್ಕಳಿಗಾಗಿ ಕೋವಿಡ್ ವಾರ್ಡ್‌ಗಳನ್ನು ಆರಂಭಿಸಲಾಗಿದೆ.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿನ ಅನುಭವಗಳ ಆಧಾರದ ಮೇಲೆ ತಜ್ಞರ ಸಮಿತಿಯು ವೈದ್ಯರ ನೇಮಕ, ಸಿಬ್ಬಂದಿಗೆ ತರಬೇತಿ ಮತ್ತು ಆರೋಗ್ಯ ಕ್ಷೇತ್ರದಲ್ಲಿನ ಮೂಲಸೌಕರ್ಯಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಿತ್ತು.

ಮೂರನೇ ಅಲೆಗೆ ಸಂಬಂಧಿಸಿದಂತೆ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞ ವೈದ್ಯರ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಬೆಂಗಳೂರಿನ 45,958 ಮಕ್ಕಳು ಸೇರಿದಂತೆ ರಾಜ್ಯದಲ್ಲಿ 3.4 ಲಕ್ಷ ಮಕ್ಕಳು ಸೋಂಕಿತರಾಗುವ ಬಗ್ಗೆ ಉಲ್ಲೇಖಿಸಿತ್ತು.

'ಸರ್ಕಾರದ ಸಿದ್ಧತೆಗಳು ಈಗ ದಾಖಲೆಯಲ್ಲಿವೆ. ಪ್ರತಿ ಅಲೆಯು ಪರೀಕ್ಷೆ ಸಮಯ. ಪರೀಕ್ಷಾ ಸಮಯದಲ್ಲಿ ಸಿದ್ಧತೆಗಳ ನಿಜ ಸ್ವರೂಪ ಬಯಲಾಗಲಿದೆ' ಎನ್ನುವುದು ಮಕ್ಕಳ ತಜ್ಞರ ಅಭಿಪ್ರಾಯ.

ರಾಜ್ಯದಲ್ಲಿ ಸುಮಾರು 3,000 ಮಕ್ಕಳ ತಜ್ಞರಿದ್ದಾರೆ. ಇವರಲ್ಲಿ 1,300 ತಜ್ಞರು ಬೆಂಗಳೂರಿನಲ್ಲೇ ಇದ್ದಾರೆ. ಎರಡು ಕೋಟಿಗೂ ಹೆಚ್ಚು ಇರುವ ಮಕ್ಕಳ ಸಂಖ್ಯೆಗೆ ಹೋಲಿಸಿದಾಗ ತಜ್ಞರ ಸಂಖ್ಯೆ ಕಡಿಮೆ. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ತಜ್ಞರು ಲಭ್ಯವಾಗುವುದೇ ಕಷ್ಟಸಾಧ್ಯ. ರಾಜ್ಯದ ಪ್ರಮುಖ ಸಂಸ್ಥೆಯಾದ ಬೆಂಗಳೂರಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ 34 ಮಕ್ಕಳ ತಜ್ಞ ವೈದ್ಯರಿದ್ದಾರೆ.

'ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲೂ 30ರಿಂದ 35 ಐಸಿಯು ಹಾಸಿಗೆಗಳನ್ನು ಕಾಯ್ದಿರಿಸುವಂತೆ ಎರಡನೇ ಅಲೆಯ ಸಂದರ್ಭದಲ್ಲಿ ಸಮಿತಿ ಶಿಫಾರಸು ಮಾಡಿತ್ತು. ಈ ನಿರ್ದೇಶನವನ್ನೇ ಸದ್ಯ ಪಾಲಿಸಲಾಗುತ್ತಿದೆ. ಜತೆಗೆ ಜನರಲ್ ವಾರ್ಡ್ ಸೇರಿದಂತೆ ಎಲ್ಲ ರೀತಿಯ ವಾರ್ಡ್‌ಗಳಲ್ಲಿನ ಹಾಸಿಗೆಗಳಿಗೂ ಆಮ್ಲಜನಕದ ವ್ಯವಸ್ಥೆ ಇರಬೇಕು ಎಂದು ತಿಳಿಸಲಾಗಿತ್ತು. ಎರಡನೇ ಅಲೆಯ ರೀತಿಯಲ್ಲಿ ಉತ್ತುಂಗ ಸ್ಥಿತಿಗೆ ತಲುಪಿದರೆ ಪರಿಸ್ಥಿತಿ ಗಂಭೀರವಾಗಬಹುದು. ಹೀಗಾಗಿ, ಮಕ್ಕಳಿಗೂ ಪ್ರತ್ಯೇಕ ವ್ಯವಸ್ಥೆ ಇರಬೇಕು' ಎಂದು ಮಕ್ಕಳ ತಜ್ಞ ಹಾಗೂ ಕೋವಿಡ್ ತಜ್ಞರ ಸಮಿತಿ ಸದಸ್ಯ ಡಾ. ಯೋಗಾನಂದ ರೆಡ್ಡಿ ಹೇಳುತ್ತಾರೆ.

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತರಿಗಾಗಿಯೇ ವಿಶೇಷ ಬ್ಲಾಕ್ ಮಾಡಲಾಗಿದೆ. 20 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. 60 ಎಚ್‌ಡಿಯು ಹಾಸಿಗೆಗಳು 10 ವಿಶೇಷ ನವಜಾತ ಆರೈಕೆಗೆ (ಎಸ್‌ಎನ್‌ಸಿಯು)ಮತ್ತು 20 ಪಿಸಿಯು ಹಾಸಿಗೆಗಳನ್ನು ಮೀಸಲಿರಿಸಲಾಗಿದೆ.

ಎರಡನೇ ಅಲೆಗೆ ಹೋಲಿಸಿದರೆ ಮೂರಲೇ ಅಲೆಯಲ್ಲಿ ಮಕ್ಕಳಿಗಿಂತ ವಯಸ್ಕರಲ್ಲಿ ಸೋಂಕು ಹಬ್ಬುತ್ತಿದೆ ಎಂದು ಕೋವಿಡ್ 'ವಾರ್ ರೂಂ' ವಿಶ್ಲೇಷಿಸಿದೆ.

'ಮಕ್ಕಳಿಗೆ ರೋಗ ನಿರೋಧಕ ಶಕ್ತಿಯೇ ವರ. ಮೊದಲ ಮತ್ತು ಎರಡನೇ ಅಲೆಯಲ್ಲಿ ಮಕ್ಕಳು ಸೋಂಕಿಗೆ ಒಳಗಾಗಿದ್ದರೂ ಈ ಶಕ್ತಿಯೇ ಅವರನ್ನು ಕಾಪಾಡಿದೆ. ಈಗ ಮೂರನೇ ಅಲೆಯಲ್ಲೂ ಮಕ್ಕಳಲ್ಲಿ ಸೌಮ್ಯ ಸ್ವರೂಪದ ಲಕ್ಷಣಗಳಿವೆ. ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಲಾಕ್‌ಡೌನ್ ವಿಧಿಸಲಾಗಿತ್ತು. ಶಾಲೆಗಳನ್ನು ಆರಂಭಿಸಿರಲಿಲ್ಲ. ಹೀಗಾಗಿ, ಮಕ್ಕಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕು ಕಾಣಿಸಿಕೊಂಡಿರಲಿಲ್ಲ. ಈಗ ವಸತಿ ಶಾಲೆಗಳು ಸಹ ಆರಂಭವಾಗಿವೆ. ಆದರೆ, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಕಡಿಮೆ' ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ವಿವರಿಸಿದ್ದಾರೆ.

'ಬಿಬಿಎಂಪಿ ವ್ಯಾಪ್ತಿಯ ಪ್ರತಿಯೊಂದು ಆಸ್ಪತ್ರೆಯಲ್ಲಿ ಐಸಿಯು ವ್ಯವಸ್ಥೆ ಹೊಂದಿರುವ ಕನಿಷ್ಠ 10ಹಾಸಿಗೆಗಳನ್ನು ಮಕ್ಕಳಿಗೆ ಮೀಸಲಿಡಲು ನಿರ್ದೇಶನ ನೀಡಲಾಗಿದೆ. ಜತೆಗೆ ಆಸ್ಪತ್ರೆಯ ಸಾಮರ್ಥ್ಯ ಅನುಸಾರ ಸಾಮಾನ್ಯ ವಾರ್ಡ್‌ಗಳಲ್ಲಿಯೂ 30 ರಿಂದ 35 ಮಕ್ಕಳಿಗೆ ಹಾಸಿಗೆಗಳನ್ನು ಮೀಸಲಿಡಲು ನಿರ್ದೇಶನ ನೀಡಲಾಗಿದೆ. ಇದು ಪರಿಸ್ಥಿತಿ ಮೇಲೆ ಅವಲಂಬನೆಯಾಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಆರೋಗ್ಯ) ಡಾ. ತ್ರಿಲೋಕ್ ಚಂದ್ರ ವಿವರಿಸಿದ್ದಾರೆ.

'ಎಲ್ಲ ಮಕ್ಕಳಿಗೆ ಲಸಿಕೆ ನೀಡುವುದು ಅಗತ್ಯ'

'ಮೊದಲ ಮತ್ತು ಎರಡನೇ ಅಲೆಯಲ್ಲಿ ಮಕ್ಕಳು ಸೋಂಕಿಗೆ ಒಳಗಾಗಿದ್ದರು. ಶೇಕಡ 90ರಷ್ಟು ಮಕ್ಕಳ ತಜ್ಞರು ಸಹ ಸೋಂಕಿಗೆ ಒಳಗಾಗಿದ್ದರು. ಮಕ್ಕಳು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವುದು ಕಷ್ಟ. ಹೀಗಾಗಿ, ಸೋಂಕಿಗೆ ಒಳಗಾಗುವುದು ಸಹಜ. ಆದರೆ, ಎಲ್ಲ ವಯೋಮಾನದ ಮಕ್ಕಳಿಗೆ ಲಸಿಕೆ ನೀಡುವ ಬಗ್ಗೆ ಸರ್ಕಾರ ವಿಳಂಬ ಮಾಡುತ್ತಿದೆ' ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ಅಭಿಪ್ರಾಯಪಟ್ಟಿದ್ದಾರೆ.

'ಮಕ್ಕಳಿಗೂ ಲಸಿಕೆ ನೀಡಬೇಕು ಎಂದು ಸರ್ಕಾರಕ್ಕೆ ಪತ್ರ ಬರೆದಿರುವೆ. ಮಕ್ಕಳಲ್ಲಿ ಸಾವಿನ ಪ್ರಮಾಣ ತೀವ್ರ ಕಡಿಮೆ ಇರುವ ಕಾರಣ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಮೊದಲ ಮತ್ತು ಎರಡನೇ ಅಲೆಯಲ್ಲಿ 60 ವರ್ಷ ಮೇಲ್ಪಟ್ಟವರು ಹೆಚ್ಚು ಬಾಧಿತರಾದರು. ಹೀಗಾಗಿ, ಲಸಿಕೆ ಲಭ್ಯವಾದ ಬಳಿಕ 60 ವರ್ಷದ ಮೇಲ್ಪಟ್ಟವರಿಗೆ ಆದ್ಯತೆ ನೀಡಲಾಯಿತು. ನಂತರ 40–60 ವಯೋಮಾನದವರು ಹೆಚ್ಚು ಸೋಂಕಿಗೆ ಒಳಗಾದರು. ಹೀಗಾಗಿ, ಅವರಿಗೆ ಲಸಿಕೆ ನೀಡಲಾಯಿತು. ಆದರೆ, ಮಕ್ಕಳನ್ನು ಕಡೆಗಣಿಸಲಾಯಿತು' ಎಂದು ಹೇಳುತ್ತಾರೆ.

0–18 ವಯಸ್ಸಿನ ಮಕ್ಕಳಲ್ಲಿನ ಸೋಂಕು ದೃಢ ಪ್ರಮಾಣದ ವಿವರ

ತಿಂಗಳು	ಪರೀಕ್ಷೆಗಳು	ಸೋಂಕು ದೃಢ ಪ್ರಮಾಣ	ಸೋಂಕು ದೃಢ ಪ್ರಮಾಣ ದರ
2021ರ ಏಪ್ರಿಲ್	6.5 ಲಕ್ಷ	57,442	ಶೇ 8.82
2021ರ ಮೇ	4.11ಲಕ್ಷ	1,01314	ಶೇ 24.61
2021ರ ನವೆಂಬರ್	5.62 ಲಕ್ಷ	1304	ಶೇ 0.23
2021ರ ಡಿಸೆಂಬರ್	10.37ಲಕ್ಷ	2238	ಶೇ 0.22
2022 ಜನವರಿ	7.64ಲಕ್ಷ	43463	ಶೇ 5.69

15–18 ವಯೋಮಾನದ ಮಕ್ಕಳಿಗೆ ಲಸಿಕೆ

20.92 ಲಕ್ಷ ಮಕ್ಕಳಿಗೆ ಲಸಿಕೆ

ಶೇ **65.9** ಪ್ರಗತಿ

31.75 ಲಕ್ಷ ಮಕ್ಕಳು ಒಟ್ಟು ಗುರಿ

> **ಮಕ್ಕಳ ರೋಗ ನಿರೋಧಕ ಶಕ್ತಿ ಹೆಚ್ಚಿಸಬೇಕು. ಅಪೌಷ್ಟಿಕತೆ ಇರುವ ಮಕ್ಕಳ ಬಗ್ಗೆ ಕಾಳಜಿ ವಹಿಸಬೇಕು. ಎರಡನೇ ಅಲೆಯಲ್ಲಿ ಕಡಿಮೆ ಮಕ್ಕಳ ಸಾವು ಸಂಭವಿಸಿತ್ತು.**
> **ಡಾ. ಯೋಗಾನಂದ ರೆಡ್ಡಿ,** ಮಕ್ಕಳ ತಜ್ಞ ಹಾಗೂ ಕೋವಿಡ್ ತಜ್ಞರ ಸಮಿತಿ ಸದಸ್ಯ

ಸುದ್ದಿ 2 ನಿಮಿಷ

ಅಮೃತ್ ಯೋಜನೆ:2ನೇ ಹಂತಕ್ಕೆ ಮೈಸೂರು, ಬಳ್ಳಾರಿ –ಚಿಂತನೆ

ಮೈಸೂರು: 'ಅಟಲ್ ಮಿಷನ್ ಫಾರ್ ರಿಜುವೆನೇಶನ್ ಅಂಡ್ ಅರ್ಬನ್ ಟ್ರಾನ್ಸ್‌ಫರ್ಮೇಶನ್ (ಅಮೃತ್) ಯೋಜನೆಯ 2ನೇ ಹಂತದಲ್ಲಿ ಮೈಸೂರು, ಬಳ್ಳಾರಿ ನಗರಗಳನ್ನು ಪರಿಗಣಿಸಲು ಚಿಂತನೆ ನಡೆದಿದೆ' ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ತಿಳಿಸಿದರು.

'ಕೇಂದ್ರ ಸರ್ಕಾರದ ಯೋಜನೆಯಡಿ ₹ 3ರಿಂದ 4 ಸಾವಿರ ಕೋಟಿ ಅನುದಾನ ಬರುವ ನಿರೀಕ್ಷೆ ಇದೆ. ಹೀಗಾಗಿ ಸ್ಮಾರ್ಟ್ ಸಿಟಿ ಯೋಜನೆಗೆ ಒಳಪಡದ ನಗರಗಳನ್ನು ಸೇರಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಲಾಗಿದೆ' ಎಂದು ಇಲ್ಲಿ ಶುಕ್ರವಾರ ಸುದ್ದಿಗಾರರಿಗೆ ಹೇಳಿದರು.

ಹೊಸಪೇಟೆ ನಗರಸಭೆಯಲ್ಲಿ ಮೊದಲ ಬಾರಿ ಬಿಜೆಪಿ ಅಧಿಕಾರಕ್ಕೆ



ಹೊಸಪೇಟೆ (ವಿಜಯನಗರ): ಇಲ್ಲಿನ ನಗರಸಭೆಯಲ್ಲಿ ಪ್ರಪ್ರಥಮ ಬಾರಿಗೆ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಶುಕ್ರವಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಬಿಜೆಪಿಯ ಸುಂಕಮ್ಮ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಎಲ್.ಎಸ್. ಆನಂದ್, ಕಾಂಗ್ರೆಸ್ ಅಭ್ಯರ್ಥಿ ಬಿ.ನಾರಾಯಣಪ್ಪ ಅವರಿಗಿಂತ ಅಧಿಕ ಮತ ಪಡೆದು ಜಯಶಾಲಿಯಾದರು.

ಡಿಸೆಂಬರ್‌ನಲ್ಲಿ ನಗರಸಭೆಗೆ ನಡೆದ ಚುನಾವಣೆಯಲ್ಲಿ ಒಟ್ಟು 35 ಸ್ಥಾನಗಳಲ್ಲಿ ಕಾಂಗ್ರೆಸ್ 12, ಪಕ್ಷೇತರರು 12, ಬಿಜೆಪಿ ಹತ್ತು, ಎಎಪಿ ಒಂದು ಸ್ಥಾನದಲ್ಲಿ ಜಯ ಗಳಿಸಿತ್ತು. ನಂತರ ನಡೆದ ಬೆಳವಣಿಗೆಯಲ್ಲಿ ಎಎಪಿಯ ಒಬ್ಬ ಸದಸ್ಯ ಹಾಗೂ ಒಂಬತ್ತು ಜನ ಪಕ್ಷೇತರರು ಬಿಜೆಪಿ ಸೇರಿದ್ದರು. ಇದರೊಂದಿಗೆ ಬಿಜೆಪಿ ಸಂಖ್ಯಾಬಲ 20ಕ್ಕೆ ಏರಿಕೆಯಾಗಿತ್ತು.

ಪರಿಷತ್ ಚುನಾವಣೆ: ಎಚ್.ಕೆ. ರಾಮು ಜೆಡಿಎಸ್ ಅಭ್ಯರ್ಥಿ

ಬೆಂಗಳೂರು: ಕರ್ನಾಟಕ ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಜೂನ್‌ನಲ್ಲಿ ನಡೆಯುವ ಚುನಾವಣೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್.ಕೆ. ರಾಮು ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವುದಾಗಿ ಜೆಡಿಎಸ್ ಘೋಷಿಸಿದೆ.

ರಾಮು ಅವರಿಗೆ ಶುಕ್ರವಾರ ಪತ್ರ ಬರೆದಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, 'ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಮತ್ತು ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ನಿಮ್ಮನ್ನು ದಕ್ಷಿಣ ಪದವೀಧರರ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಘೋಷಿಸಿದ್ದಾರೆ' ಎಂದು ತಿಳಿಸಿದ್ದಾರೆ. ಚುನಾವಣೆಯಲ್ಲಿ ಜಯ ಗಳಿಸುವುದಕ್ಕೆ ಪೂರಕವಾಗಿ ಪಕ್ಷ ಸಂಘಟನೆಗೆ ಕ್ರಮ ಕೈಗೊಳ್ಳುವಂತೆ ಸೂಚನೆಯನ್ನೂ ನೀಡಿದ್ದಾರೆ.

ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬಲು ಜಿಲ್ಲಾಡಳಿತದ ಸಂಕಲ್ಪ

ಹಾವೇರಿ, ವಿಜಯಪುರದಲ್ಲಿ ವಿಶೇಷ ವಾರ್ಡ್

ಪ್ರಜಾವಾಣಿ ವಾರ್ತೆ



ವಿಜಯಪುರ ಜಿಲ್ಲಾಸ್ಪತ್ರೆಯಲ್ಲಿ 'ಮಕ್ಕಳ ಕೋವಿಡ್ ವಾರ್ಡ್' ಅನ್ನು ವಿಶೇಷವಾಗಿ ಸಜ್ಜುಗೊಳಿಸಲಾಗಿದೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ಸೋಂಕಿತರಾಗುವ ಮಕ್ಕಳ ಆರೈಕೆಗಾಗಿ ಹಾವೇರಿ ಹಾಗೂ ವಿಜಯಪುರದಲ್ಲಿ ವಿಶೇಷ ವಾರ್ಡ್ ನಿರ್ಮಿಸಿದ್ದಲ್ಲದೇ, ಮಕ್ಕಳಲ್ಲಿ ಚೈತನ್ಯ ಹೊಮ್ಮಿಸುವ ರೀತಿಯಲ್ಲಿ ಆಕರ್ಷಕವಾಗಿ ರೂಪಿಸಲಾಗಿದೆ.

ಕೋವಿಡ್‌ನಿಂದ ಸಂಭಾವ್ಯ ಭೀತಿ ಹೋಗಲಾಡಿಸಿ, ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಲು ವಾರ್ಡ್‌ನ ಗೋಡೆಗಳ ಮೇಲೆ ವರ್ಣರಂಜಿತ ಚಿತ್ರಗಳನ್ನು ಬಿಡಿಸಲಾಗಿದೆ. ಮಕ್ಕಳ ಮನಸೆಳೆಯುವ ಮಿಕ್ಕಿಮೌಸ್, ಡೊನಾಲ್ಡ್ ಡಕ್ ಸೇರಿದಂತೆ ವಿವಿಧ ಕಾರ್ಟೂನ್‌ಗಳನ್ನು ಕಲಾವಿದರು ಅರಳಿಸಿದ್ದಾರೆ. ಆಟವಾಡಲು ಮಕ್ಕಳ ಆಟಿಕೆಗಳನ್ನೂ ಇರಿಸಲಾಗಿದೆ.

ಚಿಕಿತ್ಸೆ ಕೊಡಿಸಲು ಮಕ್ಕಳ ಕೋವಿಡ್ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುವ ನರ್ಸಿಂಗ್ ಆಫೀಸರ್‌ಗಳಿಗೆ ಕೌಶಲಯುಕ್ತ ತರಬೇತಿ ನೀಡಲಾಗಿದೆ.

ಹಾವೇರಿ ಜಿಲ್ಲಾಸ್ಪತ್ರೆಯ 30 ಹಾಸಿಗೆಗಳನ್ನೊಳಗೊಂಡ ಮಕ್ಕಳ ಕೋವಿಡ್ ವಾರ್ಡ್‌ನಲ್ಲಿ ಐಸಿಯು ವೆಂಟಿಲೇಟರ್, ಆಕ್ಸಿಜನ್ ಕಾನ್ಸನ್‌ಟ್ರೇಟರ್, ನಿಯೋನಾಟಲ್ ಮಾನಿಟರ್, ಸಿರಿಂಜ್ ಇನ್‌ಫ್ಯೂಷನ್ ಪಂಪ್, ನಾನ್ ರೀಬ್ರೀತರ್ ಮಾಸ್ಕ್, ಅಂಬು ಬ್ಯಾಗ್ ಸೇರಿದಂತೆ ಎಲ್ಲ ವೈದ್ಯಕೀಯ ಉಪಕರಣಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವು ಸೌಲಭ್ಯಗಳ ಕೊರತೆಗಳಿವೆ. ಶೃಂಗೇರಿ, ಕೊಪ್ಪ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಕ್ಕಳ ತಜ್ಞರು ಇಲ್ಲ.

ಉಡುಪಿ ಜಿಲ್ಲೆಯಾದ್ಯಂತ 'ವಾತ್ಸಲ್ಯ' ಕಾರ್ಯಕ್ರಮದಡಿ 1.75 ಲಕ್ಷ ಮಕ್ಕಳ ಮಕ್ಕಳ ಆರೋಗ್ಯ ತಪಾಸಣೆ ಮಾಡಲಾಗಿದೆ. ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಮಕ್ಕಳನ್ನು ಗುರುತಿಸಿ ಅವರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲು ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಪೌಷ್ಟಿಕ ಆಹಾರ ಒದಗಿಸಲಾಗಿದೆ ಎಂದು ಡಿಎಚ್‌ಒ ನಾಗಭೂಷಣ ಉಡುಪ ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಲ್ಲಿ 18 ವರ್ಷಕ್ಕಿಂತ ಕಡಿಮೆ ಇರುವ 703 ಮಕ್ಕಳಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಪ್ರಸ್ತುತ 25 ಮಕ್ಕಳು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಮಕ್ಕಳಿಗಾಗಿ ಯಾವುದೇ ವಿಶೇಷ ಅನುದಾನ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ 13 ಮಕ್ಕಳ ವೈದ್ಯರಿದ್ದಾರೆ. ಕೋವಿಡ್ 3ನೇ ಅಲೆಯ ನಿರ್ವಹಣೆಗಾಗಿ ಪ್ರತ್ಯೇಕ ಅನುದಾನ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಚಿಕಿತ್ಸೆಗಾಗಿ 30 ಕಿ.ಮೀ. ತೆರಳಬೇಕು'

ರಾಯಚೂರು: ಜಿಲ್ಲೆಯ ಎರಡು ಹೊಸ ತಾಲ್ಲೂಕು ಕೇಂದ್ರಗಳಲ್ಲಿ ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ಚಿಕಿತ್ಸೆ ಕೊಡಿಸುವ ಸಮಸ್ಯೆಯೂ ವಿಪರೀತವಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಕೂಡ ಮಕ್ಕಳ ತಜ್ಞರಿಲ್ಲದ ಸಿರವಾರ ಹಾಗೂ ಮಸ್ಕಿ ತಾಲ್ಲೂಕು ಕೇಂದ್ರಗಳ ಜನರು ಆಸ್ಪತ್ರೆಗೆ ತಲುಪುವುದಕ್ಕಾಗಿಯೇ ಅತಿ ಹೆಚ್ಚು ವೆಚ್ಚ ಮಾಡುವ ಸ್ಥಿತಿ ಈಗಲೂ ಇದೆ. ಮಸ್ಕಿ ವಿಧಾನಸಭೆ ಕ್ಷೇತ್ರವಾಗಿ 15 ವರ್ಷಗಳಾದರೂ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿಯಾಗಲಿ, ಖಾಸಗಿಯಾಗಲಿ ಮಕ್ಕಳ ತಜ್ಞರನ್ನು ಹೊಂದುವುದಕ್ಕೆ ಸಾಧ್ಯವಾಗಿಲ್ಲ. ದಿಢೀರ್ ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ಚಿಕಿತ್ಸೆ ಕೊಡಿಸಲು ಕನಿಷ್ಠ 30 ಕಿಮೀ ದೂರದ ಸಿಂಧನೂರು ಅಥವಾ ಲಿಂಗಸುಗೂರು ಪಟ್ಟಣಕ್ಕೆ ಧಾವಿಸುವ ಅನಿವಾರ್ಯತೆ ಇದೆ.

ಲಿಂಗಸುಗೂರು ತಾಲ್ಲೂಕು ಆಸ್ಪತ್ರೆಯಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ವಾರ್ಡ್ ಮೀಸಲಾಗಿದೆ. ಆದರೆ, ಕಾಯಂ ಮಕ್ಕಳ ತಜ್ಞರಿಲ್ಲ. ಬೇರೆ ಕಡೆಯ ವೈದ್ಯರು ವಾರದಲ್ಲಿ ಮೂರು ದಿನ ಇಲ್ಲಿಗೆ ಬರುತ್ತಾರೆ.

ಕೋವಿಡ್: 3.23 ಲಕ್ಷಕ್ಕೆ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 48,049 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3.23 ಲಕ್ಷಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 2.49 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 19.23 ರಷ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 22 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ.

ಬೆಂಗಳೂರಿನಲ್ಲಿ 29,068 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ತುಮಕೂರಿನಲ್ಲಿ 2,021, ಹಾಸನದಲ್ಲಿ 1,889, ಮಂಡ್ಯದಲ್ಲಿ 1,506, ಕಲಬುರಗಿಯಲ್ಲಿ 1,164 ಹಾಗೂ ಉಡುಪಿಯಲ್ಲಿ 1,018 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 34.25 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 18,115 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 30.63 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ 2.23 ಲಕ್ಷ ಮಂದಿ ಸೋಂಕಿತರಿದ್ದಾರೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಕೆಪಿಎಸ್‌ಸಿ: ಸುಪ್ರೀಂ ಕೋರ್ಟ್ ತೀರ್ಪಿಗೆ ಬೆಲೆಯಿಲ್ಲವೇ– ಎಚ್.ವಿಶ್ವನಾಥ್

'ದೇವೇಗೌಡರ ಮನವಿಗೆ ಸೊಪ್ಪು ಹಾಕಬೇಡಿ'

ಪ್ರಜಾವಾಣಿ ವಾರ್ತೆ


ಮೈಸೂರು: '2011ನೇ ಸಾಲಿನ 362 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸುವಂತೆ ಕೋರಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಸಲ್ಲಿಸಿರುವ ಮನವಿಗೆ ಸೊಪ್ಪು ಹಾಕಬೇಡಿ' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೋರಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸಂವಿಧಾನಬಾಹಿರವಾಗಿ ಆಯ್ಕೆಯಾದ 362 ಮಂದಿ ಸುಪ್ರೀಂಕೋರ್ಟ್ ತೀರ್ಪನ್ನು ಧಿಕ್ಕರಿಸಿ ಒಬ್ಬ ರಾಜಕಾರಣಿಗೆ ಮನವಿ ಸಲ್ಲಿಸುವುದು, ಆ ರಾಜಕಾರಣಿ ಮುಖ್ಯಮಂತ್ರಿಗೆ ಪತ್ರ ಬರೆಯುವುದು, ಅದನ್ನು ಆಧರಿಸಿ ಮುಖ್ಯಮಂತ್ರಿ ಕ್ರಮ ತೆಗೆದುಕೊಳ್ಳಲು ಮುಂದಾಗುವುದೆಂದರೆ ಏನರ್ಥ' ಎಂದು ಆಕ್ಷೇಪಿಸಿದರು.

'ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತಿ, ದುಡ್ಡಿನ ಬಲದಿಂದಲೇ ಆಯ್ಕೆಯಾಗಿದ್ದವರು ಸಿರಿಗೆರೆಯ ತರಳುಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗೂ ಮನವಿ ಸಲ್ಲಿಸಿದ್ದರು. ದೇಶದ ನ್ಯಾಯ ವ್ಯವಸ್ಥೆಯನ್ನು ರಾಜಕಾರಣಿಗಳು, ಸ್ವಾಮೀಜಿಗಳು ಕೈಗೆತ್ತಿಕೊಂಡರೆ ಪರಿಸ್ಥಿತಿ ಏನಾಗಬೇಕು? ಹೈಕೋರ್ಟ್, ಸುಪ್ರೀಂಕೋರ್ಟ್ ತೀರ್ಪಿಗೆ ಬೆಲೆಯಿಲ್ಲವೇ?' ಎಂದು ಕಿಡಿಕಾರಿದರು.

'ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಅಪಾರ ಗೌರವವಿದೆ. ಆದರೆ ಅವರು ಭ್ರಷ್ಟಾಚಾರದಿಂದ ಆಯ್ಕೆಯಾದವರ ಪರ ನಿಂತದ್ದು ಸರಿಯಲ್ಲ. ಸುಪ್ರೀಂಕೋರ್ಟ್‌ನ ತೀರ್ಪನ್ನೇ ಧಿಕ್ಕರಿಸುವಂತಹ ಕಾಲದಲ್ಲಿ ಸಾಮಾನ್ಯರಿಗೆ ನ್ಯಾಯ ದೊರಕಿಸಿಕೊಡುವವರು ಯಾರು' ಎಂದು ಪ್ರಶ್ನಿಸಿದರು.

'362 ಮಂದಿಗೆ ಅನ್ಯಾಯ ಆಗಿದೆ ಎನ್ನುತ್ತಿದ್ದೀರಿ. ಆದರೆ ಅವರೊಂದಿಗೆ ಕೆಪಿಎಸ್‌ಸಿ ಪರೀಕ್ಷೆ ಬರೆದಿದ್ದ ಲಕ್ಷಾಂತರ ಮಂದಿ ಮತ್ತು ಪ್ರಿಲಿಮಿನರಿ ಪರೀಕ್ಷೆ ಉತ್ತೀರ್ಣರಾಗಿದ್ದ ಸಾವಿರಾರು ಮಂದಿ ನಿಮಗೆ ಲೆಕ್ಕಕ್ಕಿಲ್ಲವೇ? ಅವರಿಗೆ ಅನ್ಯಾಯವಾದರೂ ಕೇಳುವವರು ಇಲ್ಲವೇ? ರಾಜಕಾರಣಿಗಳ ಶಿಫಾರಸಿನಂತೆ ಆಯ್ಕೆಯಾದವರ ಬಗ್ಗೆ ಏಕಿಷ್ಟು ಕಾಳಜಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



> **ಪ್ರಧಾನಿ ಆಗಿದ್ದಂತಹ ದೇವೇಗೌಡ ಅವರ ಮೇಲೆ ಅಪಾರ ಗೌರವ ಇದೆ. ಆದರೆ ಅಸಾಂವಿಧಾನಿಕವಾಗಿ ಆಯ್ಕೆಯಾದವರ ಪರ ವಕಾಲತ್ತು ವಹಿಸಿದ್ದು ಸರಿಯಲ್ಲ.**
> **ಎಚ್.ವಿಶ್ವನಾಥ್**
> ವಿಧಾನ ಪರಿಷತ್ ಸದಸ್ಯ

ಅತಂತ್ರ ಸ್ಥಿತಿಯಲ್ಲಿ ಹಾಲು ಉತ್ಪಾದಕರು

ಮದ್ದೂರು (ಮಂಡ್ಯ): 'ತಾಲ್ಲೂಕಿನ ಕೆ. ಹೊನ್ನಲಗೆರೆಯ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಜಿಲ್ಲಾ ಹಾಲು ಒಕ್ಕೂಟಕ್ಕೆ ರಾಸಾಯನಿಕ ಮಿಶ್ರಿತ ಹಾಲನ್ನು ಸರಬರಾಜು ಮಾಡಲಾಗಿದೆ' ಎಂದು ಆರೋಪಿಸಿ ಸಂಘದ ಕಾರ್ಯದರ್ಶಿ ಅಂಕರಾಜು ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕರು ದೂರು ದಾಖಲಿಸಿದ್ದಾರೆ.

ಸಂಘದಿಂದ ಹಾಲು ಖರೀದಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದರಿಂದ ಉತ್ಪಾದಕರು ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ. ಎರಡು ತಿಂಗಳ ಹಿಂದೆ ಕೆ.ಹೊನ್ನಲಗೆರೆಯ ಸಂಘದಿಂದ ಪ್ರತಿನಿತ್ಯ ಸುಮಾರು 20 ಕ್ಯಾನ್‌ಗಳಲ್ಲಿ ಸಕ್ಕರೆ ಮಿಶ್ರಿತ ಹಾಲು ಸರಬರಾಜಾಗುತ್ತಿದ್ದುದು ಗಮನಕ್ಕೆ ಬಂದ ಕೂಡಲೇ ಒಕ್ಕೂಟವು ನೋಟಿಸ್ ನೀಡಿ ಎಚ್ಚರಿಸಿತ್ತು.

ರಾಜ್ಯದಲ್ಲಿ ವಾರಾಂತ್ಯ ಕರ್ಫ್ಯೂ ರದ್ದು

ಒಂದನೇ ಪುಟದಿಂದ

'ರಾತ್ರಿ ಕರ್ಫ್ಯೂ ರಾತ್ರಿ 10 ರಿಂದ ಬೆಳಿಗ್ಗೆ 5 ರವರೆಗೆ ಮುಂದುವರೆಯುತ್ತದೆ. ರಾತ್ರಿ ವೇಳೆಯಲ್ಲಿ ಕ್ಲಬ್, ಪಬ್, ಬಾರ್‌ಗಳಲ್ಲಿ ಹೆಚ್ಚು ಜನ ಸೇರುತ್ತಾರೆ ಮತ್ತು ಪಾರ್ಟಿಗಳು ನಡೆಯುತ್ತವೆ. ಇಲ್ಲಿ ಸೋಂಕು ಹರಡುವ ಸಾಧ್ಯತೆ ಹೆಚ್ಚು. ಹೀಗಾಗಿ, ರಾತ್ರಿ ಕರ್ಫ್ಯೂ ಮುಂದುವರಿಸಲಾಗಿದೆ. ಇದು ನಮ್ಮ ರಾಜ್ಯ ಮಾತ್ರ ಅಲ್ಲ, ಕೋವಿಡ್ ಹೆಚ್ಚಾಗಿರುವ ಎಲ್ಲ ರಾಜ್ಯಗಳಲ್ಲೂ ಅನುಸರಿಸಲಾಗುತ್ತಿದೆ. ಇದರಿಂದ ಕೋವಿಡ್ ಇದೆ ಎಂಬ ಅರಿವೂ ಸಾರ್ವಜನಿಕರಲ್ಲೂ ಇರುತ್ತದೆ' ಎಂದು ಅಶೋಕ ಸಮರ್ಥಿಸಿಕೊಂಡರು.

'ಇನ್ನು ಮುಂದೆ ರಾಜ್ಯವನ್ನು ಒಂದು ಘಟಕವನ್ನಾಗಿ ಪರಿಗಣಿಸಲಾಗುತ್ತದೆ. ವಾರಾಂತ್ಯ ಕರ್ಫ್ಯೂ ಹೊರತುಪಡಿಸಿ ಉಳಿದ ಎಲ್ಲ ನಿಯಮಗಳೂ ಜಾರಿಯಲ್ಲಿರುತ್ತವೆ. ಅದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ' ಎಂದರು.

'ರಾಜ್ಯದಲ್ಲಿನ ಸಕ್ರಿಯ ಪ್ರಕರಣ, ಆಸ್ಪತ್ರೆ ಚಿಕಿತ್ಸೆ, ಐಸಿಯುನಲ್ಲಿರುವವರು ಹಾಗೂ ವೆಂಟಿಲೇಟರ್ ಸೌಲಭ್ಯ ಪಡೆದಿರುವವರ ಸಂಖ್ಯೆಯನ್ನು ಪರಿಗಣಿಸಿದ ತಜ್ಞರು ವಾರಾಂತ್ಯ ಕರ್ಫ್ಯೂ ಕೈಬಿಡಲು ಸಲಹೆ ನೀಡಿದರು' ಎಂದರು.

'ಬೆಂಗಳೂರು ಬಿಟ್ಟು ಮೈಸೂರು, ತುಮಕೂರು, ಹಾಸನ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದ ಕೋವಿಡ್ ಪ್ರಕರಣಗಳು ವರದಿಯಾಗಿವೆ. ದೃಢ ಪ್ರಮಾಣದ ದರ ಶೇ 19.94 ಇದೆ. ಮಕ್ಕಳಲ್ಲಿ ದೃಢ ಪ್ರಮಾಣ ದರ ಶೇ 8, ವಯಸ್ಕರ ದೃಢ ಪ್ರಮಾಣ ಶೇ 16.57 ಇದೆ. ಆಸ್ಪತ್ರೆಗೆ ದಾಖಲಾಗಿರುವ ಮಕ್ಕಳ ಮೇಲೆ ಹೆಚ್ಚಿನ ನಿಗಾ ಇಡಲಾಗಿದೆ' ಎಂದು ಅಶೋಕ ಹೇಳಿದರು.

ಚರ್ಚಿತ ಪ್ರಮುಖಾಂಶಗಳು:

- ಕೋವಿಡ್ ಪ್ರಕರಣಗಳು ಸರಾಸರಿ ಮೂರು ದಿನಕ್ಕೆ ದ್ವಿಗುಣಗೊಳ್ಳುತ್ತಿದೆ. ಒಬ್ಬ ಸೋಂಕಿತನಿಂದ ಸರಾಸರಿ 2.6 ಜನರಿಗೆ ಹರಡುತ್ತಿದೆ. ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಸೋಂಕು ತಗುಲುತ್ತಿದೆ.
- ವಾರಾಂತ್ಯ ಕರ್ಫ್ಯೂ ವಿಧಿಸಿದ್ದರೂ ಕೂಡಾ ಹೆಚ್ಚಿನ ಪರಿಣಾಮ ಉಂಟಾಗಿಲ್ಲ. ಸೋಂಕಿತರ ಸಂಖ್ಯೆ ಮತ್ತು ದೃಢ ದರ ಹೆಚ್ಚಾದರೂ ಆಸ್ಪತ್ರೆ ದಾಖಲಾಗುತ್ತಿರುವವರ ಪ್ರಮಾಣ ಶೇ 5 ರಿಂದ ಶೇ 6 ರ ಮಧ್ಯದಲ್ಲಿದೆ. ಚೇತರಿಸಿಕೊಳ್ಳುತ್ತಿರುವ ಸೋಂಕಿತರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ.
- ಕೋವಿಡ್ ನಿರ್ವಹಣೆಯ ಮುಂಚೂಣಿ ಕಾರ್ಯಕರ್ತರು ಹೆಚ್ಚಿನ ಪ್ರಮಾಣದಲ್ಲಿ ಸೋಂಕಿಗೆ ಒಳಗಾಗುತ್ತಿದ್ದಾರೆ. ಜನರ ಜೀವ ಮತ್ತು ಜೀವನ ನಿರ್ವಹಣೆ ಸರಿದೂಗಿಸುವ ಬಗ್ಗೆ ಸಭೆ ಚರ್ಚಿಸಿದೆ.
- ಸಭೆಗೆ ಮಾಹಿತಿ ನೀಡಿದ ಆರೋಗ್ಯ ತಜ್ಞರು,ಮುಂದಿನ ವಾರ ಕೋವಿಡ್ ಪ್ರಕರಣ ಹೆಚ್ಚಾಗಲಿದೆ ಎಂಬುದನ್ನೂ ಗಮನಕ್ಕೆ ತಂದಿದ್ದಾರೆ.

ಚಂದ್ರು ಕಾಳೇನಹಳ್ಳಿ, ಶ್ರೀಪಾದ ಶೆಟ್ಟಿಗೆ 'ಜಾನಪದ ತಜ್ಞ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯ 2021ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟವಾಗಿದ್ದು, ಜಾನಪದ ವಿದ್ವಾಂಸರಾದ ಹಾಸನದ ಚಂದ್ರು ಕಾಳೇನಹಳ್ಳಿ ಹಾಗೂ ಉತ್ತರ ಕನ್ನಡದ ಶ್ರೀಪಾದ ಶೆಟ್ಟಿ ಅವರು 'ಜಾನಪದ ತಜ್ಞ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷೆ ಬಿ. ಮಂಜಮ್ಮ ಜೋಗತಿ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಶುಕ್ರವಾರ ಬಿಡುಗಡೆಮಾಡಿದರು. ವಾರ್ಷಿಕ ಗೌರವ ಪ್ರಶಸ್ತಿಗೆ 30 ಜಿಲ್ಲೆಗಳಿಂದ 30 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. 'ಜಾನಪದ ತಜ್ಞ ಪ್ರಶಸ್ತಿ'ಯು ತಲಾ ₹ 50 ಸಾವಿರ ನಗದು ಹಾಗೂ 'ಗೌರವ ಪ್ರಶಸ್ತಿ'ಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

ಗೌರವ ಪ್ರಶಸ್ತಿಗೆ ಆಯ್ಕೆಯಾದವರು: ಬೆಂಗಳೂರಿನ ಗಂಗಮ್ಮ (ಸೋಬಾನೆ ಪದ), ಬೆಂಗಳೂರು ಗ್ರಾಮಾಂತರದ ತಿಮ್ಮಯ್ಯ (ಜಾನಪದ ಕಥೆಗಾರ), ರಾಮನಗರದ ಚಿಕ್ಕಮ್ಮ (ಸೋಬಾನೆ ಪದ), ತುಮಕೂರಿನ ಕಡಬ ಶ್ರೀನಿವಾಸ (ಜಾನಪದ ಹಾಸ್ಯ), ಚಿಕ್ಕಬಳ್ಳಾಪುರದ ಗ.ನ. ಅಶ್ವತ್ಥ (ಜಾನಪದ ಗಾಯಕ), ಕೋಲಾರದ ನಾರಾಯಣಸ್ವಾಮಿ (ತತ್ವಪದ), ಶಿವಮೊಗ್ಗದ ಲಕ್ಷ್ಮೀರಾಮಪ್ಪ (ಹಸೆ ಚಿತ್ತಾರ), ಚಿತ್ರದುರ್ಗದ ಚಂದ್ರಮ್ಮ (ಮದುವೆ ಹಾಡು), ದಾವಣಗೆರೆಯ ರಂಗಮ್ಮ ಗಂಡ ಗಿಡ್ಡಪ್ಪ (ಜಾನಪದ ಗಾಯಕಿ), ಮಂಡ್ಯದ ಮಹದೇವಸ್ವಾಮಿ (ನೀಲಗಾರರ ಪದ), ಮೈಸೂರಿನ ಮಹದೇವು (ಬೀಸು ಕಂಸಾಳೆ), ಹಾಸನದ ಎಚ್.ಎಂ. ರಾಮಯ್ಯ (ಕೀಲು ಕುದುರೆ), ದಕ್ಷಿಣ ಕನ್ನಡದ ವೆಂಕಟೇಶ ಬಂಗೇರ (ಕರಗ ನೃತ್ಯ), ಚಾಮರಾಜನಗರದ ಆರ್.ಎಂ. ಶಿವಮಲ್ಲೇಗೌಡ (ಗೊರವರ ಕುಣಿತ), ಚಿಕ್ಕಮಗಳೂರಿನ ಹನುಮಕ್ಕ (ತತ್ವಪದ), ಕೊಡಗಿನ ಜೆ.ಕೆ. ಮರಿ (ಜೇನು ಕುರುಬರ ನೃತ್ಯ ಮತ್ತು ಹಾಡು), ಉಡುಪಿಯ ಪದ್ಮಾವತಿ ಆಚಾರ್ಯ (ನಾಟಿ ವೈದ್ಯೆ), ಧಾರವಾಡದ ಕುಬೇರ ನಗೌಡ ಮುರಳ್ಳಿ (ಜಗ್ಗಲಿಗೆ), ಗದಗದ ರಾಮಚಂದ್ರ ಸಿದ್ದಪ್ಪ (ಕರಡಿ ಮಜಲು), ವಿಜಯಪುರದ ನಾಗಲಿಂಗಪ್ಪ ಸಿದ್ರಾಮಪ್ಪ (ಭಜನೆ), ಬಾಗಲಕೋಟೆಯ ರಂಗಪ್ಪ ಬಾಲಪ್ಪ ಹಲಕುರ್ಕಿ (ಶಿವಭಜನೆ), ಹಾವೇರಿಯ ಸಿದ್ದಲಿಂಗಪ್ಪ ಚನ್ನಬಸಪ್ಪ (ತತ್ವ ಪದ), ಬೆಳಗಾವಿಯ ರುದ್ರಾಂಬಿಕಾ ಮಹಾಂತೇಶ (ಬೆಳಗಾವಿ), ಉತ್ತರ ಕನ್ನಡದ ಭೂಗೂ ಧಾಕೂ ಕೊಳಾಪ್ಪೆ (ಹೋಳಿ ಸಿಗ್ಮಾ ಕುಣಿತ), ಬಳ್ಳಾರಿಯ ಪೆದ್ದ ಮಾರಕ್ಕೆ (ಬುರ್ರಕಥಾ), ರಾಯಚೂರಿನ ಮರಿಯಪ್ಪ (ಭಜನೆ ಪದ), ಕೊಪ್ಪಳದ ಶಿವಲಿಂಗಪ್ಪ (ಹಗಲುವೇಷ), ಕಲಬುರಗಿಯ ಶಕುಂತಲಾ (ಗೀಗಿ ಪದ), ಬೀದರ್‌ನ ಸಿದ್ರಾಮ (ಗೋಂದಳಿ ಪದ) ಹಾಗೂ ಯಾದಗಿರಿಯ ಭೂಮ್ಮಣ್ಣ ಬಸಪ್ಪ ಲಾಠಿ (ಡೊಳ್ಳು ಕುಣಿತ)

'ಬುರುಡೆ ದೇವರು' ಮರಿಗೆ ಪ್ರಶಸ್ತಿ!

ಗೋಣಿಕೊಪ್ಪಲು: ವಿರಾಜಪೇಟೆ ತಾಲ್ಲೂಕಿನ ಬಾಳೆಲೆ ಬಳಿಯ ನಾಗರಹೊಳೆ ಅರಣ್ಯದಂಚಿನಲ್ಲಿರುವ ತಟ್ಟೆಕೆರೆ ಗಿರಿಜನ ಹಾಡಿಯ ಜನರಿಗೆ ಭೂತ, ಪಿಶಾಚಿಗಳ ಹೆಸರಿನಲ್ಲಿ, 'ಮಂತ್ರ ವಿದ್ಯೆ' ಬಳಸಿ ಕಾಯಿಲೆ ವಾಸಿ ಮಾಡುವ 'ಬುರುಡೆ ದೇವರು' ಎಂದೇ ಖ್ಯಾತರಾಗಿರುವ ಜೆ.ಕೆ.ಮರಿ ಅವರನ್ನು 'ಜೇನುಕುರುಬರ ಹಾಡು ಮತ್ತು ನೃತ್ಯ' ಕ್ಷೇತ್ರದಲ್ಲಿ ಜಾನಪದ ಅಕಾಡೆಮಿಯ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಅಚ್ಚರಿ ಮೂಡಿಸಿದೆ.

ಬಿಜೆಪಿ ಸರ್ಕಾರ ಪುಸ್ತಕ ಪ್ರಕಟಿಸಿದಾಗ ಬಾಯಿ ಮುಚ್ಚಿದ್ದೇಕೆ: ಸಿದ್ದರಾಮಯ್ಯ

ಬೆಂಗಳೂರು: 'ಜಗದೀಶ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಟಿಪ್ಪು ಸುಲ್ತಾನ್ ಅವರನ್ನು ಹಾಡಿ, ಹೊಗಳಿ ಗ್ರಂಥ ಪ್ರಕಟಿಸಿದ್ದಾಗ ಬಾಯಿ ಮುಚ್ಚಿಕೊಂಡಿದ್ದೇಕೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್‌ಕುಮಾರ್ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ಗೆ ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ಕಳುಹಿಸಿದ್ದನ್ನು ಟೀಕಿಸಿರುವ ಸಚಿವರಿಗೆ ಪ್ರತಿಕ್ರಿಯೆ ನೀಡಿರುವ ಅವರು, 'ಬಿಜೆಪಿ ಸರ್ಕಾರ ಪ್ರಕಟಿಸಿದ್ದ ಟಿಪ್ಪು ಸುಲ್ತಾನ್ ಕುರಿತ ಗ್ರಂಥ ಈಗಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗ್ರಂಥಾಲಯದಲ್ಲಿದೆ. ಇದು ಇಲಾಖೆ ಸಚಿವರಾಗಿರುವ ಸುನೀಲ್‌ಕುಮಾರ್ ಗಮನಕ್ಕೆ ಬಂದಿಲ್ಲವೇ? ಯಾಕೆ ಈ ಆತ್ಮವಂಚನೆ?' ಎಂದು ಕೇಳಿದ್ದಾರೆ.

'2017ರಲ್ಲಿ ಕರ್ನಾಟಕ ವಿಧಾನಮಂಡಲದ ವಜ್ರ ಮಹೋತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು 'ಟಿಪ್ಪು ಸುಲ್ತಾನ್ ಅವರನ್ನು ಸ್ವಾತಂತ್ರ್ಯ ಯೋಧ' ಎಂದು ಹಾಡಿ ಹೊಗಳಿದ್ದಾಗ ಸುನೀಲ್‌ಕುಮಾರ್ ಮತ್ತು ಬಿಜೆಪಿಯ ನಾಯಕರು ಎಲ್ಲಿ ಅಡಗಿಕೊಂಡಿದ್ದರು' ಎಂದೂ ಪ್ರಶ್ನಿಸಿದ್ದಾರೆ.

'ನಾನು ಮುಖ್ಯಮಂತ್ರಿಯಾಗಿದ್ದಾಗ 2014ರಲ್ಲಿ ಗಣರಾಜ್ಯೋತ್ಸವ ಪರೇಡ್‌ಗೆ ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ಕಳುಹಿಸಿದ್ದು ನಿಜ. ಸುನೀಲ್‌ಕುಮಾರ್ ಅವರಂತಹ ಟಿಪ್ಪು ವಿರೋಧಿಗಳು ಏಕೆ ಆಗ ಅದನ್ನು ವಿರೋಧಿಸಲಿಲ್ಲ' ಎಂದು ಸಿದ್ದರಾಮಯ್ಯ ಕೇಳಿದ್ದಾರೆ.

ಸ್ತಬ್ಧಚಿತ್ರದ ವಿವಾದ ಹುಟ್ಟಿಕೊಂಡ ದಿನದಿಂದ ನರೇಂದ್ರ ಮೋದಿ ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಸುಳ್ಳುಗಳ ಮೂಟೆ ಉರುಳಿಸುತ್ತಿರುವ ಸುನೀಲ್ ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಪ್ರಲ್ಹಾದ ಜೋಶಿಯಂತಹವರು ನಾರಾಯಣ ಗುರುಗಳನ್ನು ತಾವು ಒಪ್ಪುವುದಿಲ್ಲ ಎಂಬ ಒಂದು ಸತ್ಯವನ್ನು ಏಕೆ ಹೇಳಬಾರದು ಎಂದು ಸವಾಲು ಹಾಕಿದ್ದಾರೆ.

'ನಾರಾಯಣ ಗುರುಗಳು ನನ್ನ ಸೈದ್ಧಾಂತಿಕ ಗುರುಗಳು. ಆ ಕಾರಣಕ್ಕಾಗಿಯೇ ನಾನು ಮುಖ್ಯಮಂತ್ರಿಯಾಗಿದ್ದಾಗ ನಾರಾಯಣ ಗುರುಗಳ ಜಯಂತಿಯನ್ನು ಸರ್ಕಾರವೇ ಆಚರಿಸುವ ಐತಿಹಾಸಿಕ ನಿರ್ಧಾರ ಕೈಗೊಂಡಿದ್ದೆ' ಎಂದಿದ್ದಾರೆ.

ಟಿಪ್ಪು ಸ್ತಬ್ಧಚಿತ್ರ ಶಿಫಾರಸು ಮಾಡಿದ್ದೇಕೆ?

ಮುಖ್ಯಮಂತ್ರಿಯಾಗಿದ್ದಾಗ ಗಣರಾಜ್ಯೋತ್ಸವ ಪರೇಡ್‌ಗೆ ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ಕಳಿಸುವಂತೆ ಶಿಫಾರಸು ಮಾಡಿದ್ದ ಸಿದ್ದರಾಮಯ್ಯನವರು ಈಗ ನಾರಾಯಣ ಗುರುಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ಅಕ್ಷಮ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಹೇಳಿದ್ದಾರೆ.

ತಮ್ಮ ಬಿಡುವಿನ ಸಮಯವನ್ನು ಸತ್ಕಾರ್ಯಕ್ಕೆ ಬಳಸಿಕೊಳ್ಳುವ ಬದಲು ಎಲ್ಲದರಲ್ಲೂ ರಾಜಕೀಯ ಹುಡುಕುತ್ತಿರುವ ವಿರೋಧ ಪಕ್ಷದ ನಾಯಕರು, ಕೇರಳದ ಕಮ್ಯುನಿಸ್ಟ್ ಸರ್ಕಾರ ಹಚ್ಚಿದ ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳಲು ಹೊರಟಿದ್ದಾರೆ ಎಂದು ಟೀಕಿಸಿದ್ದಾರೆ.

ಈ ಹಿಂದೆ ಕೇರಳ ಸರ್ಕಾರ ನಾರಾಯಣ ಗುರು ಪ್ರತಿಮೆಯನ್ನು ಸಿಲುಬೆಗೆ ಕಟ್ಟಿ ಅವಮಾನ ಮಾಡಿದಾಗ ಪ್ರಶ್ನೆ ಮಾಡುವ ಧೈರ್ಯ ಅವರಿಗೆ ಇರಲಿಲ್ಲ. ಅಧಿಕಾರದಲ್ಲಿದ್ದಾಗ ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ಕಳುಹಿಸುವಂತೆ ಶಿಫಾರಸು ಮಾಡಿದವರು, ಹಿಂದೂ ಧಾರ್ಮಿಕ ಸಂತರ ಪರ ಈಗ ವಕಾಲತ್ತು ವಹಿಸುವುದು ಚೋದ್ಯ. ಒಂದೇ ಕಣ್ಣಿನಲ್ಲಿ ನೀರು ಸುರಿಸಿ ಅಮಾಯಕರನ್ನು ಬಲಿ ಪಡೆಯುವ ನಿಮ್ಮ ಮಕರ ನೀತಿಯನ್ನು ರಾಜ್ಯದ ಜನ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಮಹಾಪುರುಷರ ತತ್ವ, ಆದರ್ಶಗಳ ಪಾಲನೆ ಬೇಕಿಲ್ಲ. ಮಹಾಪುರುಷರನ್ನು ಎಷ್ಟು ಸಾಧ್ಯವೋ ಅಷ್ಟು ಬಳಸಿಕೊಳ್ಳುವ ಹೊಟ್ಟೆಬಾಕತನ ಮಾತ್ರ ಬೇಕು. ಗಾಂಧಿ ಆದರ್ಶದ ಪಾಲನೆಯಿಲ್ಲದಿದ್ದರೂ ಗಾಂಧಿ ಹೆಸರು ಬಳಸಿಕೊಂಡಿರಿ. ಈಗ ನಾರಾಯಣ ಗುರುಗಳ ಹೆಸರನ್ನು ರಾಜಕೀಯಕ್ಕೆ ಎಳೆದು ತರುತ್ತಿದ್ದೀರಿ. ನಾರಾಯಣ ಗುರು ರಾಜಕೀಯದ ವಸ್ತು ಅಲ್ಲ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಿ ಎಂದಿದ್ದಾರೆ.

ಅಶ್ಲೀಲ ವಿಡಿಯೊ ಚಿತ್ರೀಕರಣ: ಯುವಕರ ಬಂಧನ

ಹೊಸನಗರ: ಕಾಲೇಜು ವಿದ್ಯಾರ್ಥಿನಿ ಜತೆ ಲೈಂಗಿಕ ಕ್ರಿಯೆ ನಡೆಸಿದ ವಿಡಿಯೊ ಚಿತ್ರೀಕರಣ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಿಗೆ ಹರಿಬಿಟ್ಟ ಆರೋಪದ ಮೇಲೆ ಆರು ಯುವಕರನ್ನು ಹೊಸನಗರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಹೊಸನಗರ ಠಾಣೆ ವ್ಯಾಪ್ತಿಯ ಗ್ರಾಮವೊಂದರ ವಿದ್ಯಾರ್ಥಿನಿ ಜತೆ ಸಲುಗೆ ಬೆಳೆಸಿಕೊಂಡಿದ್ದ ಒಬ್ಬ ಯುವಕ ವಾರದ ಹಿಂದೆ ಲೈಂಗಿಕ ಕ್ರಿಯೆ ನಡೆಸಿದ್ದ. ಅದನ್ನು ತನ್ನ ಸ್ನೇಹಿತರಿಗೆ ಹೇಳಿ ವಿಡಿಯೊ ಮಾಡಿಸಿದ್ದ. ಈ ವಿಡಿಯೊವನ್ನು ಯುವಕರು ತಮ್ಮ ಸ್ನೇಹಿತರ ವಾಟ್ಸ್‌ಆ್ಯಪ್‌ಗಳಿಗೆ ಕಳುಹಿಸಿದ್ದಾರೆ.

ಒಬ್ಬರಿಂದ ಒಬ್ಬರಿಗೆ ಹರಡುತ್ತಿದ್ದಂತೆ ಮಾಹಿತಿ ಪಡೆದ ಪೊಲೀಸರು ತಕ್ಷಣ ಸುಮೊಟೊ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪಿಎಸ್‌ಐ ರಾಜೇಂದ್ರ ನಾಯಕ್, ಎಎಸ್‌ಐ ಶ್ರೀನಿವಾಸ್, ಗಿರಿಪ್ರಸಾದ್, ಸತೀಶ ರಾಜ್, ಚಂದ್ರಶೇಖರ್ ನಾಯ್ಕ, ಆದರ್ಶ, ಅಮೃತ ಸಾಗರ್ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಕ್ಷಿಪ್ರ ಕಾರ್ಯಾಚರಣೆ ನಡೆಸಿದ ತಂಡ ಒಂದು ತಾಸಿನ ಒಳಗೆ ಆರೋಪಿಗಳನ್ನು ಬಂಧಿಸಿದೆ.

'ವಿಡಿಯೊ ಹರಿದಾಡುತ್ತಿರುವ ವಿಷಯ ಗಮನಕ್ಕೆ ಬಂದ ತಕ್ಷಣ ಸುಮೊಟೊ ಪ್ರಕರಣ ದಾಖಲಿಸಿಕೊಂಡೆವು.' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀ ಪ್ರಸಾದ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಹಿಂದುಳಿದವರು – ಮುಂದುವರಿದವರ ಸ್ಪರ್ಧೆ'ಗೆ ತಿರುಗೇಟು ನೀಡಲು ಆರ್‌ಎಸ್‌ಎಸ್ ಕಾರ್ಯತಂತ್ರ

ಒಬಿಸಿ ಪಲ್ಲಟ: ಬಿಜೆಪಿ 'ಹಿಂದುತ್ವ' ಆಟ

• ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯು 'ಹಿಂದುಳಿದವರು ಮತ್ತು ಮುಂದುವರಿದವರ ನಡುವಣ ಸ್ಪರ್ಧೆ' ಎಂಬಂತೆ ಬಿಂಬಿತವಾಗಿರುವುದು ಬಿಜೆಪಿಯಲ್ಲಿ ಕಳವಳ ಮೂಡಿಸಿದೆ. ಬಿಜೆಪಿಯಲ್ಲಿದ್ದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಹಲವು ಮುಖಂಡರು ಬಿಜೆಪಿ ತೊರೆದು ಸಮಾಜವಾದಿ ಪಕ್ಷ (ಎಸ್‌ಪಿ) ಸೇರಿರುವುದು ಇದಕ್ಕೆ ಕಾರಣ. 'ಹಿಂದುತ್ವ ಮತ್ತು ರಾಷ್ಟ್ರೀಯತೆ'ಯನ್ನು ಮುನ್ನೆಲೆಗೆ ತರುವ ಮೂಲಕ ಎಸ್‌ಪಿಯ ಕಾರ್ಯತಂತ್ರಕ್ಕೆ ತಿರುಗೇಟು ನೀಡುವ ಯೋಜನೆಯನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ರೂಪಿಸಿದೆ.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ, ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ಕಾಶಿ ವಿಶ್ವನಾಥ ಧಾಮ ಯೋಜನೆ ಮುಂತಾದವುಗಳನ್ನು ಇರಿಸಿಕೊಂಡು ಜನರ ಬಳಿಗೆ ಹೋಗಲು ಆರ್‌ಎಸ್‌ಎಸ್ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಆರ್‌ಎಸ್‌ಎಸ್‌ನ ಹಿರಿಯ ಮುಖಂಡರೊಬ್ಬರ ಅಧ್ಯಕ್ಷತೆಯಲ್ಲಿ ಕೆಲ ದಿನಗಳ ಹಿಂದೆ ನಡೆಸಿದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಮಥುರಾ, ಚಿತ್ರಕೂಟ, ಪ್ರಯಾಗರಾಜ್ ಸೇರಿದಂತೆ ನವೀಕರಣಗೊಂಡ ದೇವಾಲಯಗಳ ಬಗ್ಗೆ ಕಿರುಪುಸ್ತಕ ಸಿದ್ಧಪಡಿಸಲು ಆರ್‌ಎಸ್‌ಎಸ್ ನಿರ್ಧರಿಸಿದೆ. ಕಿರುಪುಸ್ತಕವನ್ನು ಮತದಾರರಿಗೆ ಹಂಚಲಾಗುವುದು ಎಂದು ಆರ್‌ಎಸ್‌ಎಸ್ ಕಾರ್ಯತಂತ್ರದ ಬಗ್ಗೆ ಅರಿವು ಇರುವ ಬಿಜೆಪಿಯ ಮುಖಂಡರೊಬ್ಬರು ತಿಳಿಸಿದ್ದಾರೆ.


ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಆಗ್ರಾದ ರಾವ್ಲಿ ಮಹಾದೇವ ದೇವಾಲಯದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿದರು ಪಿಟಿಐ ಚಿತ್ರ

ಯೋಗಿ ಆದಿತ್ಯನಾಥ ಅವರು 2017ರಲ್ಲಿ ಮುಖ್ಯಮಂತ್ರಿಯಾದ ಬಳಿಕ ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಜನ್ಮಾಷ್ಟಮಿ ಆಚರಣೆ ಮತ್ತು ರಾಜ್ಯದಲ್ಲಿ ನಡೆಸಲಾದ 'ಕಂವಡ್ ಯಾತ್ರೆ'ಗಳ ಬಗ್ಗೆಯೂ ಕಿರುಪುಸ್ತಕದಲ್ಲಿ ಉಲ್ಲೇಖ ಇರಲಿದೆ.

'ಬಿಜೆಪಿಯೇತರ ಕೆಲವು ಪಕ್ಷಗಳು ನಕಲಿ ಹಿಂದುತ್ವದ ಮೊರೆ ಹೋಗಿವೆ. ಆರ್‌ಎಸ್‌ಎಸ್ ಕಾರ್ಯಕರ್ತರು ಅದಕ್ಕೂ ಬೆಳಕು ಚೆಲ್ಲಲಿದ್ದಾರೆ' ಎಂದು ಬಿಜೆಪಿ ಮುಖಂಡ ಹೇಳಿದ್ದಾರೆ.

ಈ ಕಿರುಪುಸ್ತಕದ ಮೂಲಕ, ಹಿಂದುತ್ವದ ವ್ಯಾಪ್ತಿ ವಿಸ್ತಾರದ ಪ್ರಯತ್ನವೂ ನಡೆಯಲಿದೆ. ಈ ಕಿರುಪುಸ್ತಕದಲ್ಲಿ ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳನ್ನೂ ಹಿಂದುತ್ವಕ್ಕೆ ಸೇರಿಸಲು ನಿರ್ಧರಿಸಲಾಗಿದೆ. ಈ ಎಲ್ಲ ಧರ್ಮದ ಜನರ ಬೆಂಬಲ ಪಡೆಯಲು ಕಿರುಪುಸ್ತಕ ನೆರವಾಗಬಹುದು ಎಂಬ ಭಾವನೆ ಆರ್‌ಎಸ್‌ಎಸ್‌ನಲ್ಲಿ ಇದೆ. ಪರಿಶಿಷ್ಟ ಜಾತಿಯ ಗಣನೀಯ ಪ್ರಮಾಣದ ಜನರು ಬೌದ್ಧ ಧರ್ಮವನ್ನು ಅನುಸರಿಸುತ್ತಿದ್ದಾರೆ. ಹಾಗಾಗಿ, ಈ ಕಾರ್ಯತಂತ್ರ ಮಹತ್ವದ್ದು ಎನಿಸಿದೆ.

ಪ್ರತಿಸ್ಪರ್ಧಿ ಪಕ್ಷಗಳು ಪ್ರತಿಪಾದಿಸುತ್ತಿರುವ 'ರಾಷ್ಟ್ರೀಯತೆ'ಯನ್ನು ಕಿರುಪುಸ್ತಕದಲ್ಲಿ ಪ್ರಶ್ನಿಸಲಾಗುವುದು. ಹಾಗೆಯೇ, ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ರದ್ದತಿ, ನಿರ್ದಿಷ್ಟ ದಾಳಿ, ಕೆಲವು ಎನ್‌ಜಿಒಗಳಿಗೆ ವಿದೇಶಿ ದೇಣಿಗೆ ರದ್ದತಿಯಂತಹ ವಿಚಾರಗಳು ಕೂಡ ಕಿರುಪುಸ್ತಕದಲ್ಲಿ ಚರ್ಚೆ ಒಳಗಾಗಲಿವೆ.

ರಾಜಕೀಯವಾಗಿ ಅತ್ಯಂತ ಮಹತ್ವದ್ದಾದ ಉತ್ತರ ಪ್ರದೇಶ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಜಾತಿ ಸಮೀಕರಣವು ಬೀರುವ ಪರಿಣಾಮವನ್ನು ಕನಿಷ್ಠಗೊಳಿಸುವುದು ಈ ಕಾರ್ಯತಂತ್ರದ ಉದ್ದೇಶ ಎಂದು ಬಿಜೆಪಿಯ ಮುಖಂಡ ಹೇಳಿದ್ದಾರೆ.

ಬಿಜೆಪಿ ತೊರೆದು ಎಸ್‌ಪಿ ಸೇರಿರುವ ಒಬಿಸಿ ಮುಖಂಡರು, ಬಿಜೆಪಿಯನ್ನು 'ಒಬಿಸಿ ವಿರೋಧಿ' ಎಂದು ಬಿಂಬಿಸಲು ಯತ್ನಿಸುತ್ತಿದ್ದಾರೆ. 2014 ಮತ್ತು 2019ರ ಲೋಕಸಭಾ ಚುನಾವಣೆ ಮತ್ತು 2017ರ ವಿಧಾನಸಭಾ ಚುನಾವಣೆಯಲ್ಲಿ ಒಬಿಸಿಗೆ ಸೇರಿದ ಜಾತಿಗಳ ಬೆಂಬಲವು ಬಿಜೆಪಿಯ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿತ್ತು.

ಒಬಿಸಿ: ಅಪ್ನಾದಳ, ನಿಶಾದ್ ಪಕ್ಷ ನೆಚ್ಚಿಕೊಂಡ ಬಿಜೆಪಿ

ಉತ್ತರ ಪ್ರದೇಶದ ಹಿಂದುಳಿದ ವರ್ಗಗಳ ಹಲವು ಮುಖಂಡರು ಬಿಜೆಪಿಯನ್ನು ತೊರೆದ ನಂತರ ಪಕ್ಷವು, ಈ ವರ್ಗಗಳ ಮತಕ್ಕಾಗಿ ಅಪ್ನಾದಳ ಮತ್ತು ನಿಶಾದ್ ಪಕ್ಷವನ್ನು ಅವಲಂಬಿಸಿದೆ. ಉತ್ತರ ಪ್ರದೇಶದ ಪೂರ್ವಾಂಚಲದಲ್ಲಿ ಚುನಾವಣೆ ಎದುರಿಸಲು ಈ ಪಕ್ಷಗಳನ್ನೇ ಬಿಜೆಪಿ ನೆಚ್ಚಿಕೊಂಡಿದೆ. ಆದರೆ ಒಬಿಸಿ ಸಮುದಾಯದ ಬೇರೆ ನಾಯಕರು ಪಕ್ಷ ತೊರೆದ ಕಾರಣ ಆದ ನಷ್ಟವನ್ನು, ಈ ಪಕ್ಷಗಳು ತುಂಬಿಕೊಡುತ್ತವೆಯೇ ಎಂಬುದು ಅಸ್ಪಷ್ಟವಾಗಿದೆ.

ರಾಜ್ಯದ ಕುರ್ಮಿ ಸಮುದಾಯದ ಸಂಪೂರ್ಣ ಬೆಂಬಲ ತನಗಿದೆ ಎಂದು ಅಪ್ನಾದಳವು ಹೇಳಿಕೊಂಡಿದೆ. ಆದರೆ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ. ಪಕ್ಷದ ಮುಖ್ಯಸ್ಥೆ ಅನುಪ್ರಿಯಾ ಪಟೇಲ್ ಅವರ ತಾಯಿ ಕೃಷ್ಣಾ ಪಟೇಲ್ ಅವರು ತಮ್ಮದೇ ಪ್ರತ್ಯೇಕ ಪಕ್ಷ ಸ್ಥಾಪಿಸಿ, ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ಇದರಿಂದ ಈ ಸಮುದಾಯದ ಮತಗಳು ವಿಭಜನೆಯಾಗಲಿವೆ.

ಅಂಬಿಗ ಮತ್ತು ಮೀನುಗಾರರ ಸಮುದಾಯದ ನಿಶಾದ್ ಪಕ್ಷವು ರಾಜ್ಯದ ಎಲ್ಲೆಡೆ ಸಮುದಾಯದ ಬೆಂಬಲ ಹೊಂದಿದೆ ಎಂದು ಹೇಳಿಕೊಂಡಿದೆ. ಆದರೆ ಪೂರ್ವಾಂಚಲದಲ್ಲಿ ಮಾತ್ರವೇ ಪಕ್ಷದ ಪ್ರಭಾವವಿದೆ. ರಾಜ್ಯದ ಬೇರೆಡೆ ಸಮುದಾಯದ ಹಲವು ನಾಯಕರು ರಾಜಕೀಯ ಪ್ರವೇಶಿಸಿದ್ದಾರೆ. ಮುಖೇಶ್ ಸಾಹ್ನಿ ನೇತೃತ್ವದ ವಿಕಾಸಶೀಲ ಇನ್ಸಾನ್ ಪಕ್ಷವು, ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಸಿದ್ಧತೆ ನಡೆಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ನಿಶಾದ್ ಪಕ್ಷ ಮತ್ತು ವಿಕಾಸಶೀಲ ಇನ್ಸಾನ್ ಪಕ್ಷದ ಜತೆಗೆ ಕ್ಷೇತ್ರ ಹಂಚಿಕೆ ಬಗ್ಗೆ ಸಭೆ ನಡೆದಿತ್ತು. ಆದರೆ ಅಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಈ ಪಕ್ಷವೂ ಸ್ವತಂತ್ರವಾಗಿ ಕಣಕ್ಕೆ ಇಳಿದರೆ ಈ ಸಮುದಾಯದ ಮತಗಳೂ ವಿಭಜನೆಯಾಗುವ ಸಾಧ್ಯತೆ ಇದೆ.

ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆಗೆ ಚನ್ನಿ ಸಿದ್ಧತೆ

ಚಂಡೀಗಡ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಶುಕ್ರವಾರ ಹೇಳಿದ್ದಾರೆ.


ಚರಣ್‌ಜಿತ್ ಸಿಂಗ್ ಚನ್ನಿ

ಚನ್ನಿ ಅವರ ಸಂಬಂಧಿಗೆ ಸೇರಿದ ಆಸ್ತಿಯ ಮೇಲೆ ದಾಳಿ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ನಡೆಸಿ ಭಾರಿ ಮೊತ್ತದ ಹಣ ವಶಪಡಿಸಿಕೊಂಡಿದ್ದರ ಕುರಿತು ಬುಧವಾರ ಟೀಕೆ ಮಾಡಿದ್ದ ಕೇಜ್ರಿವಾಲ್, 'ಚನ್ನಿ ಸಾಮಾನ್ಯ ವ್ಯಕ್ತಿ ಅಲ್ಲ, ಅವರು ಅಪ್ರಾಮಾಣಿಕ ವ್ಯಕ್ತಿ' ಎಂಬ ಹೇಳಿಕೆ ನೀಡಿದ್ದರು. ಕೇಜ್ರಿವಾಲ್ ಅವರ ಈ ಹೇಳಿಕೆ ವಿರುದ್ಧ ತಾವು ಕ್ರಮ ಕೈಗೊಳ್ಳುತ್ತಿರುವುದಾಗಿ ಚನ್ನಿ ಹೇಳಿದ್ದಾರೆ.

'ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ಅನುಮತಿ ನೀಡಬೇಕೆಂದು ನಾನು ಪಕ್ಷಕ್ಕೆ ಕೇಳಿಕೊಂಡಿದ್ದೇನೆ. ನಾನು ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ. ಅವರು ನನ್ನನ್ನು ಅಪ್ರಾಮಾಣಿಕ ಎಂದು ಕರೆದಿದ್ದಾರೆ ಮತ್ತು ಅದನ್ನು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ' ಎಂದು ಚನ್ನಿ ಅವರು ಚಮ್ಕೌರ್ ಸಾಹಿಬ್‌ನಲ್ಲಿ ಸುದ್ದಿಗಾರರ ಎದುರು ಹೇಳಿದ್ದಾರೆ.

ಕೇಜ್ರಿವಾಲ್ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಇತರರ ವ್ಯಕ್ತಿತ್ವಕ್ಕೆ ಅಪಚಾರವಾಗುವಂಥ ಆರೋಪಗಳನ್ನು ಮಾಡುವುದು ಕೇಜ್ರಿವಾಲ್ ಅವರಿಗೆ ಚಟವಾಗಿದೆ. ಬಿಜೆಪಿ ನಾಯಕರಾದ ನಿತಿನ್ ಗಡ್ಕರಿ, ಅರುಣ್ ಜೇಟ್ಲಿ ಮತ್ತು ಶಿರೋಮಣಿ ಅಕಾಲಿ ದಳದ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಅವರ ಮೇಲೂ ಆರೋಪಗಳನ್ನು ಮಾಡಿದ್ದರು. ಬಳಿಕ ಹೇಗೆ ಕ್ಷಮೆಯಾಚಿಸಿದರು ಎಂಬುದನ್ನು ನಾವು ನೋಡಿದ್ದೇವೆ' ಎಂದು ಚನ್ನಿ ಹೇಳಿದ್ದಾರೆ.

'ಇ.ಡಿ ಅಧಿಕಾರಿಗಳು ವಶಪಡಿಸಿಕೊಂಡ ಹಣದ ಜೊತೆ ನನ್ನ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಏಕೆ ಬಳಸಲಾಗುತ್ತಿದೆ. ಈ ಮೊಕದ್ದಮೆಯಲ್ಲಿ ನನ್ನನ್ನು ಏಕೆ ಎಳೆಯಲಾಗುತ್ತಿದೆ. ಇ.ಡಿ ನನ್ನ ಮನೆಯ ಮೇಲೆ ದಾಳಿ ನಡೆಸಿಲ್ಲ. ಅವರು ವಶಪಡಿಸಿಕೊಂಡ ಹಣ ನನ್ನದಲ್ಲ' ಎಂದು ಚನ್ನಿ ಹೇಳಿದ್ದಾರೆ.

ಕೇಜ್ರಿವಾಲ್ ನನ್ನನ್ನು ಅಪ್ರಾಮಾಣಿಕ ಎಂದು ಕರೆಯುತ್ತಿದ್ದಾರೆ. ಅವರ ಸಂಬಂಧಿ ಸಿಕ್ಕಿ ಬಿದ್ದಾಗ ಅವರು ತಮ್ಮನ್ನು ಅಪ್ರಾಮಾಣಿಕ ಎಂದು ಕರೆದುಕೊಂಡಿದ್ದರೇ?
ಚರಣ್‌ಜಿತ್ ಸಿಂಗ್ ಚನ್ನಿ, ಪಂಜಾಬ್ ಮುಖ್ಯಮಂತ್ರಿ

ಚನ್ನಿ ಸೋಲು ಖಚಿತ: ಕೇಜ್ರಿವಾಲ್

ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಚಮ್ಕೌರ್ ಸಾಹಿಬ್ ಕ್ಷೇತ್ರದಲ್ಲಿ ಸೋಲಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಭವಿಷ್ಯ ನುಡಿದಿದ್ದಾರೆ.


ಅರವಿಂದ ಕೇಜ್ರಿವಾಲ್

'ನಮ್ಮ ಪಕ್ಷವು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದೆ. ಚಮ್ಕೌರ್ ಸಾಹಿಬ್ ಕ್ಷೇತ್ರದಲ್ಲಿ ಚನ್ನಿ ಅವರು ಸೋಲಲಿದ್ದಾರೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕಂತೆ ಕಂತೆ ನೋಟುಗಳನ್ನು ಎಣಿಸುವುದನ್ನು ಸುದ್ದಿ ವಾಹಿನಿಗಳಲ್ಲಿ ನೋಡಿ ಜನರಿಗೆ ಅಘಾತವಾಗಿದೆ' ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

'ಉಚಿತ ಶಿಕ್ಷಣ, ರೈತರ ಸಾಲ ಮನ್ನಾ'

ನೋಯ್ಡಾ (ಪಿಟಿಐ): ಭೀಮ್ ಆರ್ಮಿಯ ನಾಯಕ ಚಂದ್ರಶೇಖರ್ ಆಜಾದ್ ಅವರ ಆಜಾದ್ ಸಮಾಜ್ ಪಕ್ಷವು ಉತ್ತರ ಪ್ರದೇಶ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣ ಮತ್ತು ರೈತರ ಎಲ್ಲಾ ಸಾಲವನ್ನು ಮನ್ನಾ ಮಾಡುವುದಾಗಿ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ.


ಚಂದ್ರಶೇಖರ್ ಆಜಾದ್

'ಪಕ್ಷವು ಅಧಿಕಾರಕ್ಕೆ ಬಂದರೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸುತ್ತದೆ. ಕಬ್ಬು ಬೆಳೆಗಾರರಿಗೆ ಕಬ್ಬು ಪೂರೈಸಿದ 10 ದಿನಗಳಲ್ಲಿ ಹಣ ಪಾವತಿ ಮಾಡುವ ವ್ಯವಸ್ಥೆ ಜಾರಿಗೆ ತರಲಾಗುತ್ತದೆ. ಕೃಷಿ ಉಪಕರಣಗಳ ಖರೀದಿಯಲ್ಲಿ ಶೇ 50ರಷ್ಟು ಸಹಾಯಧನ ನೀಡಲಾಗುವುದು' ಎಂದು ಹೇಳಿದ್ದಾರೆ.

'ರಾಜ್ಯದ ಆರೋಗ್ಯ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆ ತರಲಾಗುವುದು. ಎಲ್ಲರಿಗೂ ಉಚಿತ ವೈದ್ಯಕೀಯ ಸೇವೆ ನೀಡಲಾಗುವುದು. ಎಲ್ಲಾ ಜಿಲ್ಲೆಗಳಲ್ಲಿ ಕೃಷಿ ಮಾರುಕಟ್ಟೆಗಳನ್ನು ಆರಂಭಿಸುತ್ತೇವೆ. ಗೊಬ್ಬರ ಮತ್ತು ಬಿತ್ತನೆ ಬೀಜಗಳಿಗೆ ಶೇ 50ರಷ್ಟು ಸಹಾಯಧನ ನೀಡುತ್ತೇವೆ' ಎಂದು ಅವರು ಹೇಳಿದ್ದಾರೆ.

'ರಾಜ್ಯದಲ್ಲಿ 80 ಲಕ್ಷ ಉದ್ಯೋಗ ಸೃಷ್ಟಿಸುತ್ತೇವೆ. ಸಿ ಮತ್ತು ಡಿ ವರ್ಗದಲ್ಲಿ ಐದು ವರ್ಷಕ್ಕಿಂತ ಹೆಚ್ಚು ಅವಧಿ ಸೇವೆ ಸಲ್ಲಿಸಿದ ಗುತ್ತಿಗೆ ನೌಕರರನ್ನು ಕಾಯಂ ಮಾಡಲಾಗುತ್ತದೆ. ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರ ನೌಕರಿಯನ್ನು ಕಾಯಂ ಮಾಡಲಾಗುತ್ತದೆ ಮತ್ತು ಅವರ ಮಾಸಿಕ ವೇತನವನ್ನು ₹10,000ಕ್ಕೆ ಏರಿಕೆ ಮಾಡಲಾಗುತ್ತದೆ' ಎಂದು ಹೇಳಿದ್ದಾರೆ.

ಪಕ್ಷವು ಅಧಿಕಾರಕ್ಕೆ ಬಂದರೆ, ರಾಜ್ಯದಲ್ಲಿ ಗುಂಪುಗೂಡಿ ಹಲ್ಲೆ ನಡೆಸಿ ಕೊಲ್ಲುವುದನ್ನು ನಿಷೇಧಿಸಲು ಕಾನೂನು ಜಾರಿಗೆ ತರುತ್ತೇವೆ
ಚಂದ್ರಶೇಖರ್ ಆಜಾದ್, ಆಜಾದ್ ಸಮಾಜ್ ಪಕ್ಷದ ಅಧ್ಯಕ್ಷ

ಚುನಾವಣಾ ಕಣದಲ್ಲಿ

- ಉತ್ತರ ಪ್ರದೇಶದ ಕೈರಾನಾದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಮನೆ ಮನೆ ಭೇಟಿ ನಡೆಸಲಿದ್ದಾರೆ
- ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಜತೆ ಮೈತ್ರಿ ಮಾಡಿಕೊಂಡಿರುವ ಎನ್‌ಸಿಪಿಯ ಅಭ್ಯರ್ಥಿಗಳ ಪರವಾಗಿ ಪಕ್ಷದ ಮುಖ್ಯಸ್ಥ ಶರದ್ ಪವಾರ್ ಪ್ರಚಾರ ನಡೆಸಲಿದ್ದಾರೆ
- ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ಟಿಕೆಟ್ ದೊರೆಯಲಿಲ್ಲ ಎಂಬ ಕಾರಣಕ್ಕೆ ಕಾಂಗ್ರೆಸ್‌ನ ಇಬ್ಬರು ಟಿಕೆಟ್ ಆಕಾಂಕ್ಷಿಗಳು ಪಕ್ಷ ತೊರೆದಿದ್ದಾರೆ
- ಉತ್ತರಾಖಂಡ ವಿಧಾನಸಭಾ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. 70 ಕ್ಷೇತ್ರಗಳಲ್ಲಿ 59 ಕ್ಷೇತ್ರಗಳಿಗಷ್ಟೇ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಆದರೆ ಮೊದಲ ಪಟ್ಟಿಯಲ್ಲಿ ಹಾಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಹಾಲಿ 10 ಶಾಸಕರಿಗೆ ಸ್ಥಾನ ನೀಡಿಲ್ಲ
- ಮಣಿಪುರ: ಟಿಎಂಸಿಯ ಏಕೈಕ ಶಾಸಕ ಟಿ.ರವೀಂದ್ರೋ ಸಿಂಗ್ ಅವರು ಬಿಜೆಪಿ ಸೇರಿದ್ದಾರೆ
- ನಾಮಪತ್ರ ಸಲ್ಲಿಕೆ ವೇಳೆ ಚುನಾವಣಾ ನೀತಿ ಸಂಹಿತೆ ಮತ್ತು ಕೋವಿಡ್ ನಿಯಂತ್ರಣ ಕ್ರಮಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ಬಿಜೆಪಿ ಶಾಸಕ ಶಾಮ್ಲಿ ತೇಜೇಂದ್ರ ನಿರ್ವಾಲ್ ಮತ್ತು ಅವರ 100 ಮಂದಿ ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಮಾಜವಾದಿ–ಆರ್‌ಎಲ್‌ಡಿ ಮೈತ್ರಿಕೂಟದ ಅಭ್ಯರ್ಥಿ ಸೌರವ್ ಸ್ವರೂಪ್ ಮತ್ತು 20 ಬೆಂಬಲಿಗರ ವಿರುದ್ಧ ಇದೇ ಆರೋಪಗಳ ಅಡಿ ಪ್ರಕರಣ ದಾಖಲಿಸಲಾಗಿದೆ

ಗೋವಾ: ಮೈತ್ರಿ ಪ್ರಸ್ತಾವನೆಗೆ ಕಾಂಗ್ರೆಸ್‌ನಿಂದ ಪ್ರತಿಕ್ರಿಯೆ ಇಲ್ಲ ಎಂಬ ಆರೋಪ

ಬಿಜೆಪಿ ಗೆದ್ದರೆ ಕಾಂಗ್ರೆಸ್ ಹೊಣೆ: ಶಿವಸೇನಾ

ಪಣಜಿ (ಪಿಟಿಐ): 'ಗೋವಾದಲ್ಲಿ ಬಿಜೆಪಿ ಗೆದ್ದರೆ ಅದಕ್ಕೆ ಕಾಂಗ್ರೆಸ್ ಪಕ್ಷವನ್ನೇ ಹೊಣೆಯಾಗಿಸಬೇಕು' ಎಂದು ಶಿವಸೇನಾ ಮುಖಂಡ ಸಂಜಯ್ ರಾವುತ್ ಅವರು ಶುಕ್ರವಾರ ಹೇಳಿದ್ದಾರೆ.


ಸಂಜಯ್ ರಾವುತ್

ಎನ್‌ಸಿಪಿ ಮತ್ತು ಗೋವಾ ಫಾರ್ವರ್ಡ್ ಪಕ್ಷದ (ಜಿಎಫ್‌ಪಿ) ಜೊತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವ ಕುರಿತು ಕಾಂಗ್ರೆಸ್ ಎದುರು ಶಿವಸೇನಾ ಪ್ರಸ್ತಾವ ಇರಿಸಿತ್ತು. ಆದರೆ ಈ ಪ್ರಸ್ತಾವಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆ ನೀಡಿಲ್ಲ. ಹೀಗಾಗಿ, ಕಾಂಗ್ರೆಸ್ ವಿರುದ್ಧ ಶಿವಸೇನಾ ಹರಿಹಾಯ್ದಿದೆ.

ಎನ್‌ಸಿಪಿ ಜೊತೆ ಸೇರಿ ಶಿವಸೇನಾ ಗೋವಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಪಕ್ಷದ ಒಂಬತ್ತು ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದ ರಾವುತ್ ಅವರು ಸುದ್ದಿಗಾರರ ಜೊತೆ ಮಾತನಾಡಿದರು. 'ಎನ್‌ಸಿಪಿ, ಜಿಎಫ್‌ಪಿ, ಕಾಂಗ್ರೆಸ್ ಮತ್ತು ಶಿವಸೇನಾ ಪಕ್ಷಗಳು ಮೈತ್ರಿ ಮಾಡಿಕೊಳ್ಳುವ ಕುರಿತು ಕಾಂಗ್ರೆಸ್ ಮುಖಂಡರಾದ ದಿನೇಶ್ ಗುಂಡೂ ರಾವ್, ದಿಗಂಬರ್ ಕಾಮತ್ ಮತ್ತು ಗಿರೀಶ್ ಚೋಡಣ್‌ಕರ್ ಅವರ ಜೊತೆ ಸಭೆ ನಡೆಸಿದ್ದೆವು. ಆದರೆ ಯಾವುದೇ ಪ್ರತಿಕ್ರಿಯೆ ಬರಲಿಲ್ಲ' ಎಂದರು.

ಚುನಾವಣೆಯಲ್ಲಿ ಶಿವಸೇನಾ ಇತಿಹಾಸ ಸೃಷ್ಟಿಸಲಿದೆ. ನಾವು ಉತ್ತಮ ಚಾರಿತ್ಯ ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಟಿಕೆಟ್ ನೀಡುತ್ತಿದ್ದೇವೆ
ಸಂಜಯ್ ರಾವುತ್, ಶಿವಸೇನಾ ಸಂಸದ

ಕೆಲ ದಿನಗಳ ಹಿಂದಷ್ಟೇ ಕಾಂಗ್ರೆಸ್ ವಿರುದ್ಧ ತೃಣಮೂಲ ಕಾಂಗ್ರೆಸ್ ಇಂಥದ್ದೇ ಆರೋಪ ಮಾಡಿತ್ತು. ಗೋವಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರೇ ಕಾರಣರಾಗುತ್ತಾರೆ ಎಂದು ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಹೇಳಿದ್ದರು. ಅಭಿಷೇಕ್ ಅವರ ಹೇಳಿಕೆಯನ್ನು ರಾವುತ್ ಅನುಮೋದಿಸಿದ್ದಾರೆ. ಆದರೆ, ಚಿದಂಬರಂ ಅವರನ್ನು ಮಾತ್ರ ಹೊಣೆಯಾಗಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಹೈಕಮಾಂಡ್ ಹೇಳಿದಂತೆ ಚಿದಂಬರಂ ಕೇಳುತ್ತಾರೆ ಎಂದು ಅವರು ಹೇಳಿದ್ದಾರೆ.

'40 ಸ್ಥಾನಗಳ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 30 ಸ್ಥಾನಗಳಿಗೆ ಸ್ಪರ್ಧಿಸಲಿ, ಉಳಿದ 10 ಸ್ಥಾನಗಳನ್ನು ಮಿತ್ರ ಪಕ್ಷಗಳು ಹಂಚಿಕೊಳ್ಳಬಹುದು ಎಂದು ಕಾಂಗ್ರೆಸ್ ಎದುರು ಪ್ರಸ್ತಾವ ಇರಿಸಿದ್ದೆವು. ಈ ಹತ್ತು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಎಂದಿಗೂ ಗೆದ್ದಿಲ್ಲ' ಎಂದು ರಾವುತ್ ಹೇಳಿದ್ದಾರೆ.

ಗೋವಾದ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಮಗ, ಬಿಜೆಪಿಯಿಂದ ಟಿಕೆಟ್ ವಂಚಿತರಾದ ಉತ್ಪಲ್ ಪರಿಕ್ಕರ್ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಶಿವಸೇನಾ ಬೆಂಬಲ ನೀಡಲಿದೆ. ಆದರೆ ಅವರು ಮುಂದಿನ ದಿನಗಳಲ್ಲಿ ಬಿಜೆಪಿಗೆ ಬೆಂಬಲ ನೀಡುವುದಿಲ್ಲ ಎಂಬ ಭರವಸೆ ನೀಡಬೇಕು ಎಂದು ರಾವುತ್ ಹೇಳಿದ್ದಾರೆ.

ಎಂಜಿಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಗೋವಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ 10 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ (ಎಂಜಿಪಿ) ಶುಕ್ರವಾರ ಬಿಡುಗಡೆ ಮಾಡಿದೆ. ಅದರಲ್ಲಿ ಪಕ್ಷದ ಮುಖ್ಯಸ್ಥ ದೀಪಕ್ ಧವಾಲಿಕರ್ ಮತ್ತು ಅವರ ಸಹೋದರ ಸುದಿನ್ ಧವಾಲಿಕರ್ ಅವರ ಹೆಸರೂ ಇವೆ. ದೀಪಕ್ ಅವರು ಪ್ರಿಯೋಲ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಮತ್ತು ಸುದಿನ್ ಅವರು ಮರ್ಕೈಮ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಬಿಜೆಪಿ ತೊರೆದು ಎಂಜಿಪಿ ಸೇರ್ಪಡೆ ಆಗಿದ್ದ ಮಾಜಿ ಶಾಸಕ ಪ್ರವೀಣ್ ಝ್ಯಾಂತೆ ಅವರು ಮಾಯೆಂ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಎಂಜಿಪಿಯು ತೃಣಮೂಲ ಕಾಂಗ್ರೆಸ್ ಜೊತೆ ಇತ್ತೀಚೆಗಷ್ಟೇ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದೆ.

ಜಿಎಫ್‌ಪಿ ತೊರೆದ ಶಾಸಕ ವಿನೋದ್

ಪಣಜಿ (ಪಿಟಿಐ): ಗೋವಾ ಫಾರ್ವರ್ಡ್ ಪಕ್ಷದ (ಜಿಎಫ್‌ಪಿ) ಶಾಸಕ ವಿನೋದ್ ಪಳಿಯೆಂಕರ್ ಪಕ್ಷದ ಸದಸ್ಯತ್ವ ಮತ್ತು ಶಾಸನ ಸಭೆಗೆ ಶುಕ್ರವಾರ ರಾಜೀನಾಮೆ ನೀಡಿದರು. ಇವರ ರಾಜೀನಾಮೆ ಬಳಿಕ, 40 ಸದಸ್ಯರ ಗೋವಾ ವಿಧಾನಸಭೆಯಲ್ಲಿ ಜಿಎಫ್‌ಪಿ ಶಾಸಕರ ಸಂಖ್ಯೆ ಒಂದಕ್ಕೆ ಇಳಿದಿದೆ. ಸಿಯೋಲಿಂ ಕ್ಷೇತ್ರದ ಶಾಸಕರಾಗಿದ್ದ ವಿನೋದ್ ಅವರು ಅದೇ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ತಮ್ಮ ಬಂಬಲಿಗರು ಇಚ್ಛೆ ಪಟ್ಟ ಕಾರಣ ತಾವು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಅವರು ಹೇಳಿದ್ದಾರೆ.

ಬಿಜೆಪಿ ತೊರೆದ ಪರಿಕ್ಕರ್ ಪುತ್ರ

ಗೋವಾ: ಪಕ್ಷೇತರ ಅಭ್ಯರ್ಥಿಯಾಗಿ ಉತ್ಪಲ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾದ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಪುತ್ರ ಉತ್ಪಲ್ ಪರಿಕ್ಕರ್ ಅವರು ಬಿಜೆಪಿ ತೊರೆಯುವುದಾಗಿ ಶುಕ್ರವಾರ ಘೋಷಿಸಿದ್ದಾರೆ. 'ಪಣಜಿ ಕ್ಷೇತ್ರದಿಂದ ಟಿಕೆಟ್ ನೀಡದೇ ಇರುವುದಕ್ಕೇ ಪಕ್ಷವನ್ನು ತೊರೆಯುತ್ತಿದ್ದೇನೆ. ಪಣಜಿಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

'30 ವರ್ಷಗಳಿಂದ ಪಕ್ಷವನ್ನು ಕಟ್ಟಿ ಬೆಳೆಸಲಾಗಿದೆ. ನನ್ನ ತಂದೆಯವರ ನಿಧನದ ನಂತರ ಉಪಚುನಾವಣೆಗೆ ಸ್ಪರ್ಧಿಸಲು ನನಗೆ ಟಿಕೆಟ್ ನಿರಾಕರಿಸಲಾಯಿತು. ಪಕ್ಷಕ್ಕಾಗಿ ನಾನು ದುಡಿಯಬೇಕು ಎಂದು ಹೇಳಲಾಯಿತು. ಈಗ ಮತ್ತೆ ಅದೇ ಮಾತನ್ನು ಹೇಳುತ್ತಿದ್ದಾರೆ. ಆದರೆ ಎರಡು ವರ್ಷಗಳ ಹಿಂದೆ ಪಕ್ಷಕ್ಕೆ ಬಂದವರಿಗೆ ಟಿಕೆಟ್ ನೀಡಲಾಗಿದೆ' ಎಂದು ಅವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.



ನಾನು ಆಯ್ದುಕೊಂಡಿರುವ ಹಾದಿ ಬಹಳ ಅಪಾಯಕಾರಿಯಾದದ್ದು. ಆದರೆ ನಾನು ಪಕ್ಷೇತರನಾಗಿ ಕಣಕ್ಕೆ ಇಳಿಯುವಂತಹ ಒತ್ತಡವನ್ನು ಸೃಷ್ಟಿಸಲಾಯಿತು
ಉತ್ಪಲ್ ಪರಿಕ್ಕರ್, ಬಿಜೆಪಿ ತೊರೆದ ಮುಖಂಡ

ಪಣಜಿ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಉತ್ಪಲ್ ಕೇಳಿಕೊಂಡಿದ್ದರು. ಅದನ್ನು ಬಿಜೆಪಿ ನಿರಾಕರಿಸಿತ್ತು. ಬದಲಿಗೆ ಬೇರೆ ಎರಡು ಕ್ಷೇತ್ರಗಳ ಆಯ್ಕೆ ನೀಡುವುದಾಗಿ ಹೇಳಿತ್ತು. ಗೋವಾ ಬಿಜೆಪಿ ಉಸ್ತುವಾರಿ ದೇವೇಂದ್ರ ಫಡಣವೀಸ್ ಅವರು, 'ಉತ್ಪಲ್‌ಗೆ ಆ ಸಾಮರ್ಥ್ಯವಿಲ್ಲ. ಅವರು ಪಕ್ಷಕ್ಕಾಗಿ ಇನ್ನೂ ದುಡಿಯಬೇಕು' ಎಂದು ಹೇಳಿದ್ದರು.

'ನನಗೆ ರಾಜಕೀಯ ಪಕ್ಷ ಎಂದು ಇದ್ದದ್ದು ಬಿಜೆಪಿ ಮಾತ್ರ. ಹೀಗಾಗಿ ಪಕ್ಷೇತರನಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ' ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್‌ಗೆ ಹರ್ಕತ್ ರಾವತ್, ಸೊಸೆ

ಡೆಹ್ರಾಡೂನ್/ನವದೆಹಲಿ (ಪಿಟಿಐ): ಬಿಜೆಪಿಯಿಂದ ಗುರುವಾರವಷ್ಟೇ ಉಚ್ಚಾಟಿತರಾಗಿದ್ದ ಉತ್ತರಾಖಂಡದ ಮಾಜಿ ಸಚಿವ ಹರ್ಕತ್ ಸಿಂಗ್ ರಾವತ್ ಅವರು ಶುಕ್ರವಾರ ತಮ್ಮ ಸೊಸೆ ಅನುಕೃತಿ ಗುಸೇನ್ ಜತೆಗೆ ಕಾಂಗ್ರೆಸ್ ಸೇರಿದ್ದಾರೆ.

ಉತ್ತರಾಖಂಡ ಕಾಂಗ್ರೆಸ್ ಉಸ್ತುವಾರಿ ಹರೀಶ್ ರಾವತ್ ಅವರ ಸಮ್ಮುಖದಲ್ಲಿ ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಪಕ್ಷ ಸೇರಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಮಗೆ ಮತ್ತು ತಮ್ಮ ಸೊಸೆಗೆ ಟಿಕೆಟ್ ನೀಡುವಂತೆ ಒತ್ತಾಯಿಸಿದ ಕಾರಣಕ್ಕೆ ಬಿಜೆಪಿ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಿತ್ತು. ಪಕ್ಷದಿಂದಲೂ ಅವರನ್ನು ಉಚ್ಚಾಟಿಸಿತ್ತು.


ದೆಹಲಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹರಿಶರ್ ರಾವತ್ ಅವರು ಹರ್ಕತ್ ಸಿಂಗ್ ರಾವತ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು —ಪಿಟಿಐ ಚಿತ್ರ

ಈ ಮೊದಲು ಕಾಂಗ್ರೆಸ್‌ನಲ್ಲೇ ಇದ್ದ ಹರ್ಕತ್ ಅವರು 2016ರಲ್ಲಿ ಹರೀಶ್ ರಾವತ್ ವಿರುದ್ಧ ಬಂಡೆದ್ದು, ಪಕ್ಷವನ್ನು ತೊರೆದಿದ್ದರು. ಆನಂತರ ಬಿಜೆಪಿ ಸೇರಿದ್ದರು. 2017ರ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಬಿಜೆಪಿಯು ಗುರುವಾರ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿಲ್ಲ.

ಹರ್ಕತ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಾದರೆ ಅವರು ಕ್ಷಮೆ ಯಾಚಿಸಬೇಕು ಎಂದು ಹರೀಶ್ ರಾವತ್ ಅವರು ಷರತ್ತು ಹಾಕಿದ್ದರು. ಆದರೆ ಈಗ ಯಾವುದೇ ಷರತ್ತಿಲ್ಲದೆ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಸ್ವತಃ ಹರ್ಕತ್ ಸಿಂಗ್ ಹೇಳಿದ್ದಾರೆ.

ಹರ್ಕತ್ ಅವರಿಗೆ ಕೇದಾರನಾಥ ಕ್ಷೇತ್ರ ಮತ್ತು ಅನುಕೃತಿ ಅವರಿಗೆ ಲಾನ್ಸ್‌ಡೋವ್ನೆ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡುವುದಾಗಿ ಕಾಂಗ್ರೆಸ್ ಹೇಳಿದೆ. ರಾಜ್ಯ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಇನ್ನಷ್ಟೇ ಬಿಡುಗಡೆ ಮಾಡಬೇಕಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ: ಕಾಂಗ್ರೆಸ್‌ನ 'ಯುವ ಪ್ರಣಾಳಿಕೆ' ಬಿಡುಗಡೆ

ಪ್ರಿಯಾಂಕಾ ಗಾಂಧಿ ಮುಖ್ಯಮಂತ್ರಿ ಅಭ್ಯರ್ಥಿ?

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿಯಾಗುತ್ತಾರೆಯೇ? ಹೀಗೊಂದು ಪ್ರಶ್ನೆ ಶುಕ್ರವಾರದಿಂದ ಚರ್ಚೆಗೆ ಬಂದಿದೆ. ಉತ್ತರ ಪ್ರದೇಶ ಚುನಾವಣೆಗೆ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ಯಾರಾಗುತ್ತಾರೆ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರಿಯಾಂಕಾ ಅವರು, 'ನನ್ನ ಮುಖ ಕಾಣುತ್ತಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಉತ್ತರ ಪ್ರದೇಶ ಚುನಾವಣೆಗೆ ಪಕ್ಷದ 'ಯುವ ಪ್ರಣಾಳಿಕೆ'ಯನ್ನು ಬಿಡುಗಡೆ ಮಾಡಿದ ಕಾರ್ಯಕ್ರಮದಲ್ಲಿ ಅವರು ಈ ಮಾತು ಹೇಳಿದ್ದಾರೆ. ಇದೇ ಕಾರ್ಯಕ್ರಮದಲ್ಲಿ ಪಕ್ಷದ ನಾಯಕ ಮತ್ತು ಪ್ರಿಯಾಂಕಾ ಸೋದರ ರಾಹುಲ್ ಗಾಂಧಿ ಸಹ ಇದ್ದರು.



ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ನವದೆಹಲಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

'ಉತ್ತರ ಪ್ರದೇಶದಲ್ಲಿ ಎಲ್ಲಾ ಕಡೆ ನಾನೇ ಕಾಣುತ್ತಿದ್ದೇನೆ. ಬೇರೆ ಯಾವುದಾದರೂ ಮುಖ ಕಾಣುತ್ತಿದೆಯೇ' ಎಂದು ಅವರು ಪತ್ರಕರ್ತರನ್ನು ಮರುಪ್ರಶ್ನಿಸಿದ್ದಾರೆ. ಹಾಗಿದ್ದರೆ ಚುನಾವಣೆಯಲ್ಲಿ ನೀವೂ ಸ್ಪರ್ಧಿಸುತ್ತೀರಾ ಎಂದು ಪತ್ರಕರ್ತರು ಪ್ರಶ್ನಿಸಿದ್ದಾರೆ. ಆಗ ಪ್ರಿಯಾಂಕಾ, 'ಅದನ್ನು ಇನ್ನಷ್ಟೇ ನಿರ್ಧರಿಸಬೇಕು' ಎಂದು ಉತ್ತರಿಸಿದ್ದಾರೆ.

ಉತ್ತರ ಪ್ರದೇಶ ಚುನಾವಣೆಯನ್ನು ಯೋಗಿ ಆದಿತ್ಯನಾಥ ಅವರ ನೇತೃತ್ವದಲ್ಲೇ ಎದುರಿಸುವುದಾಗಿ ಬಿಜೆಪಿ ಹೇಳಿದೆ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರೇ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದಾರೆ. ಆದರೆ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಉತ್ತರ ಪ್ರದೇಶ ಮಾತ್ರವಲ್ಲ ಈಗ ಚುನಾವಣೆ ನಡೆಯುತ್ತಿರುವ ಐದೂ ರಾಜ್ಯಗಳಲ್ಲಿ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಈವರೆಗೆ ಘೋಷಿಸಿಲ್ಲ.

ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿರುವ ಯೋಗಿ ಆದಿತ್ಯನಾಥ ಮತ್ತು ಎಸ್‌ಪಿ ಅಭ್ಯರ್ಥಿಯಾಗಿರುವ ಅಖಿಲೇಶ್ ಯಾದವ್ ಅವರು ಈ ಬಾರಿ ವಿಧಾನಸಭಾ ಚುನಾವಣಾ ಕಣಕ್ಕೆ ಇಳಿಯುತ್ತಿದ್ದಾರೆ.

20 ಲಕ್ಷ ಉದ್ಯೋಗದ ಭರವಸೆ

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 20 ಲಕ್ಷ ಸರ್ಕಾರಿ ಉದ್ಯೋಗ ನೀಡುತ್ತೇವೆ. ಅದರಲ್ಲಿ 8 ಲಕ್ಷ ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡುತ್ತೇವೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಉತ್ತರ ಪ್ರದೇಶ ಚುನಾವಣೆಗೆ ಕಾಂಗ್ರೆಸ್ ಶುಕ್ರವಾರ 'ಭರ್ತೀ ವಿಧಾನ' ಎಂಬ ಮತ್ತೊಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಯುವಕರಿಗೆ 20 ಲಕ್ಷ ಉದ್ಯೋಗ ನೀಡುವ ಭರವಸೆ ಈ ಪ್ರಣಾಳಿಕೆಯಲ್ಲಿ ಇದೆ.

'ಉತ್ತರ ಪ್ರದೇಶದ ಸಮಸ್ಯೆಗಳಲ್ಲಿ ನಿರುದ್ಯೋಗ ಪ್ರಮುಖವಾದುದು. ಇದರಿಂದ ಯುವಜನರು ತೀವ್ರ ಆಕ್ರೋಶಗೊಂಡಿದ್ದಾರೆ. ನಾವು ಈ ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ಸರ್ಕಾರಿ ಹುದ್ದೆಗಳ ನೇಮಕಾತಿಯನ್ನು ವ್ಯವಸ್ಥಿತಗೊಳಿಸುತ್ತೇವೆ' ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಈ ಪ್ರಣಾಳಿಕೆಯನ್ನು, ಯುವಜನರ ಪ್ರಣಾಳಿಕೆ ಎಂದು ರಾಹುಲ್ ಗಾಂಧಿ ಬಣ್ಣಿಸಿದ್ದಾರೆ.

'ಇದು ಕೇವಲ ಭರವಸೆಯಲ್ಲ. ಯುವಜನರ ಜತೆ ಚರ್ಚೆ ನಡೆಸಿ, ಈ ಪ್ರಣಾಳಿಕೆಯನ್ನು ಸಿದ್ಧಪಡಿಸಿದ್ದೇವೆ. ಉತ್ತರ ಪ್ರದೇಶದ ಯುವಕರಿಗೆ ಹೊಸ ಧ್ಯೇಯ–ಗುರಿಗಳು ಬೇಕಾಗಿವೆ. ಅದನ್ನು ಕಾಂಗ್ರೆಸ್ ಮಾತ್ರವೇ ನೀಡಬಲ್ಲದು. ನಾವು ದ್ವೇಷವನ್ನು ಹರಡುವುದಿಲ್ಲ. ನಾವು ಜನರನ್ನು ಒಗ್ಗೂಡಿಸುತ್ತೇವೆ. ನಾವು ಯುವಕರ ಬಲದೊಂದಿಗೆ ಹೊಸ ಉತ್ತರ ಪ್ರದೇಶವನ್ನು ರೂಪಿಸುತ್ತೇವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

'2014ರಲ್ಲಿ ಬಿಜೆಪಿ ಮತ್ತು ನರೇಂದ್ರ ಮೋದಿ ಅವರು ಇಂತಹದ್ದೇ ಭರವಸೆ ನೀಡಿದ್ದರು. ಆದರೆ ಅದನ್ನು ಈಡೇರಿಸುವಲ್ಲಿ ಅವರು ವಿಫಲವಾದರು. ಜಿಎಸ್‌ಟಿ, ನೋಟು ಅಮಾನ್ಯೀಕರಣ, ಲಾಕ್‌ಡೌನ್‌ನಿಂದ ಉತ್ತರ ಪ್ರದೇಶ ಒಂದರಲ್ಲೇ 16 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ' ಎಂದು ರಾಹುಲ್ ಹರಿಹಾಯ್ದಿದ್ದಾರೆ.

ಕಾರ್ಯಕರ್ತರಲ್ಲಿ ಉತ್ಸಾಹ

ಪ್ರಿಯಾಂಕಾ ಗಾಂಧಿ ಅವರು ಮುಖ್ಯಮಂತ್ರಿ ಅಭ್ಯರ್ಥಿಯಾಗುವ ಸೂಚನೆ ನೀಡಿರುವುದು ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದೆ. ಆದರೆ ಇದರಿಂದ ಕಾಂಗ್ರೆಸ್‌ಗೆ ಹೆಚ್ಚಿನ ಉಪಯೋಗವೇನೂ ಆಗುವುದಿಲ್ಲ ಎಂದು ಬೇರೆ ಪಕ್ಷಗಳ ನಾಯಕರು ಮತ್ತು ರಾಜಕೀಯ ತಜ್ಞರು ಹೇಳಿದ್ದಾರೆ.

ಪ್ರಿಯಾಂಕಾ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಬೇಕು ಎಂದು ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಈ ಮೊದಲೇ ಕೇಳಿಕೊಂಡಿದ್ದರು. ಈಗ ಅಧಿಕೃತವಾಗಿ ಘೋಷಣೆ ಮಾಡದಿದ್ದರೂ, ವಿಷಯ ಸೂಕ್ತ ಸಮಯದಲ್ಲೇ ಹೊರಗೆ ಬಂದಿದೆ. ಇದು ಪಕ್ಷದ ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸಿದೆ ಎಂದು ಕಾಂಗ್ರೆಸ್‌ನ ಮುಖಂಡರೊಬ್ಬ ಹೇಳಿದ್ದಾರೆ.

'ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಸಾಮರ್ಥ್ಯ ಅವರಿಗೆ ಇದೆ' ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಹೇಳಿದ್ದಾರೆ.

ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಪ್ರಿಯಾಂಕಾ ಅವರ ಹೆಸರು ಘೋಷಣೆ ಪಕ್ಷದ ಕಾರ್ಯಕರ್ತರಲ್ಲಿನ ಉತ್ಸಾಹವನ್ನು ಸ್ವಲ್ಪ ಹೆಚ್ಚಿಸಬಹುದು. ಆದರೆ ಇದರಿಂದ ಪಕ್ಷ ಪುನಶ್ಚೇತನವಾಗುತ್ತದೆ ಎಂದು ಹೇಳಲಾಗದು. ಪಕ್ಷಕ್ಕೆ ರಾಜ್ಯದಲ್ಲಿ ಕಾರ್ಯಕರ್ತರ ಬಲವಿಲ್ಲ. ಜಾತಿ ಸಮೀಕರಣವೂ ಕಾಂಗ್ರೆಸ್‌ಗೆ ಪೂರಕವಾಗಿಲ್ಲ ಎಂದು ರಾಜಕೀಯ ವಿಶ್ಲೇಷಕ ಜೆ.ಪಿ.ಶುಕ್ಲಾ ಹೇಳಿದ್ದಾರೆ.

ಪ್ರಿಯಾಂಕಾ ಅವರು ಟ್ವಿಟರ್ ರಾಜಕಾರಣಿ. ಅವರ ಜತೆಗಾರರೆಲ್ಲರೂ ರಾಜಕೀಯ ಪ್ರವಾಸಿಗರು. ಚುನಾವಣೆ ಮುಗಿಯುತ್ತಲೇ ಅವರೆಲ್ಲಾ ಮಾಯವಾಗುತ್ತಾರೆ ಎಂದು ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಈ ಹಿಂದೆ ಹೇಳಿದ್ದರು.

ಈ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಖಾತೆ ತೆರೆಯುವುದಿಲ್ಲ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸಹ ಈ ಹಿಂದೆ ಹೇಳಿದ್ದರು.

ಮೈತ್ರಿಗೆ ಮುಕ್ತ: ಕಾಂಗ್ರೆಸ್

ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು, ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಮುಕ್ತವಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್ ತನ್ನ ಭರವಸೆಗಳನ್ನು ಈಡೇರಿಸಲು ಬೇರೆ ಪಕ್ಷಗಳ ಜತೆಗೆ ಮೈತ್ರಿಮಾಡಿಕೊಳ್ಳುತ್ತದೆಯೇ ಅಥವಾ ಬೇರೆ ಪಕ್ಷಕ್ಕೆ ಬೆಂಬಲ ನೀಡುತ್ತದೆಯೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರಿಯಾಂಕಾ ಈ ಉತ್ತರ ನೀಡಿದ್ದಾರೆ.

'ನಾವು ಚುನಾವಣೋತ್ತರ ಮೈತ್ರಿ ಮಾಡಿಕೊಂಡು ಸರ್ಕಾರದ ಭಾಗವಾಗುತ್ತೇವೆಯೇ ಅಥವಾ ಹೊರಗಿನಿಂದ ಬೆಂಬಲ ನೀಡುತ್ತೇವೆಯೇ ಎಂಬುದೇ ನಿಮ್ಮ ಪ್ರಶ್ನೆ. ಅಂತಹ ಸಂದರ್ಭ ಬಂದರೆ, ನಾವು ಮೈತ್ರಿ ಮಾಡಿಕೊಳ್ಳಲು ಮುಕ್ತರಾಗಿದ್ದೇವೆ ಎಂದು ಈ ಎರಡೂ ಪ್ರಶ್ನೆಗಳಿಗೆ ನಾನು ಉತ್ತರಿಸುತ್ತೇನೆ. ಆದರೆ ಯಾವುದೇ ಮೈತ್ರಿಯಾದರೂ, ಯುವಜನರು ಮತ್ತು ಮಹಿಳೆಯರಿಗೆ ನೀಡಿರುವ ಭರವಸೆಗಳನ್ನು ಈಡೇರಿಸುವುದೂ ಮುಖ್ಯವಾಗುತ್ತದೆ' ಎಂದು ಅವರು ಹೇಳಿದ್ದಾರೆ.

ನಕಲಿ ಆರ್‌ಟಿಪಿಸಿಆರ್ ವರದಿ; ದೂರು ದಾಖಲು

ಗುಂಡ್ಲುಪೇಟೆ: ನಕಲಿ ಆರ್‌ಟಿಪಿಸಿಆರ್ ಪ್ರಮಾಣ ಪತ್ರ ತೋರಿಸಿ ಪ್ರಯಾಣಿಸುತ್ತಿದ್ದ ಕೇರಳದ ನಾಲ್ವರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಾಲ್ವರ ವಿರುದ್ಧ ಪ್ರಕರಣ ದಾಖಲು ಮಾಡಿ, ವಾಹನ ವಶಕ್ಕೆ ಪಡೆಯಲಾಗಿದೆ. ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಕೇರಳದಿಂದ ಬರುತ್ತಿದ್ದ ಅವರ ಆರ್‌ಟಿಪಿಸಿಆರ್ ಪ್ರಮಾಣ ಪತ್ರ ಪರಿಶೀಲಿಸಿದಾಗ, ಒಂದೇ ಐಡಿ ಸಂಖ್ಯೆಯಿಂದ ನಾಲ್ವರು ನಕಲಿ ಪ್ರಮಾಣ ಪತ್ರ ಪಡೆದಿರುವುದು ಪತ್ತೆಯಾಯಿತು. ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ.

ಶಿವಕುಮಾರ ಸ್ವಾಮೀಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಹೆಚ್ಚು ಜನ ಸೇರಿದ್ದಕ್ಕೆ ತರಾಟೆ

ಐಜಿಪಿ, ಡಿವೈಎಸ್‌ಪಿ ವಿರುದ್ಧ ಸಿ.ಎಂ ಗರಂ

ಪ್ರಜಾವಾಣಿ ವಾರ್ತೆ

ತುಮಕೂರು: 'ಸೀನಿಯರ್ ಆಫೀಸರ್ ಇದ್ದೀಯಾ. ಕೋವಿಡ್ ನಿಯಮ ಕಾಪಾಡೋದು ಗೊತ್ತಿಲ್ವ. ಇಷ್ಟು ಜನರನ್ನು ಯಾಕೆ ಸೇರಿಸಿದ್ದೀಯಾ. ನಿಮಗೆ ಬುದ್ಧಿ ಇಲ್ವ. ಹೋಗಿ ಎಲ್ಲಾದ್ರು ದೂರ ನಿಂತುಕೊಳ್ಳಿ'

ಹೀಗೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕೇಂದ್ರ ವಲಯ ಐಜಿಪಿ ಚಂದ್ರಶೇಖರ್ ಮತ್ತು ಡಿವೈಎಸ್‌ಪಿ ಶ್ರೀನಿವಾಸ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಅವರ ಮೂರನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಶುಕ್ರವಾರ ಸರಳವಾಗಿ ಆಚರಿಸಲಾಯಿತು. ಸೋಂಕು ಹೆಚ್ಚಳದ ಹಿನ್ನೆಲೆಯಲ್ಲಿ ಗದ್ದುಗೆ ಪೂಜೆ ಹೊರತುಪಡಿಸಿ ಉತ್ಸವ, ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮವನ್ನು ರದ್ದುಪಡಿಸಲಾಗಿತ್ತು.

ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡರೆ ಮಠದ ವಿದ್ಯಾರ್ಥಿಗಳು ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ಇದರಿಂದ ಸೋಂಕು ಹರಡುವ ಸಾಧ್ಯತೆ ಇದೆ ಎಂದು ಮುಂಜಾಗ್ರತೆಯಾಗಿ ಸಿದ್ಧಲಿಂಗ ಸ್ವಾಮೀಜಿ ಅವರೇ ಈ ನಿರ್ಧಾರ ಕೈಗೊಂಡಿದ್ದರು.

ಬೆಳಿಗ್ಗೆ 10.11ಗಂಟೆಗೆ ಮುಖ್ಯಮಂತ್ರಿ ಬೊಮ್ಮಾಯಿ ಮಠಕ್ಕೆ ಭೇಟಿ ನೀಡಿದರು. ಅವರೊಟ್ಟಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇದ್ದರು. ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ, ಸಂಸದ ಜಿ.ಎಸ್. ಬಸವರಾಜ್, ಶಾಸಕ ಜ್ಯೋತಿ ಗಣೇಶ್, ಮಾಜಿ ಸಚಿವ ಸೊಗಡು ಶಿವಣ್ಣ, ಮಾಜಿ ಶಾಸಕ ಸುರೇಶ್ ಗೌಡ ಸ್ಥಳದಲ್ಲಿದ್ದರು. ಮುಖ್ಯಮಂತ್ರಿ ಆಗಮನದ ಸುದ್ದಿ ತಿಳಿದು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ವ್ಯಕ್ತಿಗತ ಅಂತರ ಮರೆತು ನೆರೆದಿದ್ದರು.

ಕಾರಿನಿಂದ ಇಳಿದ ತಕ್ಷಣವೇ ಬೊಮ್ಮಾಯಿ ಅವರು ಸ್ವಾಮೀಜಿಯ ಗದ್ದುಗೆ ದರ್ಶನ ಪಡೆಯಲು ಮುಂದಾದರು. ಆಗ ಅವರ ನೋಟ ಮಾರ್ಗಸೂಚಿ ಉಲ್ಲಂಘಿಸಿ ನೆರೆದಿದ್ದ ಜನರತ್ತ ನೆಟ್ಟಿತು. ಮೊದಲೇ ಸೂಚನೆ ನೀಡಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದನ್ನು ಕಂಡ ಅವರು ಮೊದಲು ಡಿವೈಎಸ್‌ಪಿ ವಿರುದ್ಧ ಸಿಡಿಮಿಡಿಗೊಂಡರು.

ಬಳಿಕ ಅಲ್ಲಿಯೇ ನಿಂತಿದ್ದ ಐಜಿಪಿ ಅವರಿಗೆ, 'ನೀವು ಹಿರಿಯ ಅಧಿಕಾರಿಯಾಗಿದ್ದೀರಿ. ನಿಮಗೆ ಗೊತ್ತಾಗುವುದಿಲ್ಲವೇ. ನಿಯಮ ಉಲ್ಲಂಘಿಸಿದ ಮೇಲೆ ಈಗೇನು ಕ್ರಮಕೈಗೊಳ್ಳುತ್ತೀರಿ' ಎಂದು ತರಾಟೆಗೆ ತೆಗೆದುಕೊಂಡರು.

'ಹೆಚ್ಚು ಜನರನ್ನು ಸೇರಿಸಬೇಡಿ ಅಂತ ಮೊದಲೇ ಹೇಳಿದ್ದೀನಿ. ಯಾಕೆ ಇಷ್ಟು ಜನರನ್ನು ಸೇರಿಸಿದ್ದೀರಿ' ಎಂದು ಅಸಮಾಧಾನಗೊಂಡ ಅವರು ಗದ್ದುಗೆ ದರ್ಶನಕ್ಕೆ ತೆರಳಿದರು.



ತುಮಕೂರಿನ ಸಿದ್ಧಗಂಗಾ ಮಠಕ್ಕೆ ಶುಕ್ರವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ವಲಯ ಐಜಿಪಿ ಚಂದ್ರಶೇಖರ್ ಮತ್ತು ಡಿವೈಎಸ್‌ಪಿ ಶ್ರೀನಿವಾಸ್ ಅವರನ್ನು ತರಾಟೆಗೆ ತೆಗೆದುಕೊಂಡರು

ಸಿದ್ಧಗಂಗಾ ಮಠದಲ್ಲಿ ದಾಸೋಹ ದಿನಾಚರಣೆ

ತುಮಕೂರು: 'ದಾಸೋಹ ಭಾರತೀಯ ಪರಂಪರೆ. ಅನ್ನ, ಅಕ್ಷರ, ವಿದ್ಯೆ ಸೇರಿ ತ್ರಿವಿಧ ದಾಸೋಹದ ಮೂಲಕ ಸಿದ್ಧಗಂಗಾ ಮಠದಿಂದ ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಕೆಲಸ ಮಾಡಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಹೇಳಿದರು.

ದಾಸೋಹ ದಿನದ ಅಂಗವಾಗಿ ಸಿದ್ಧಗಂಗಾ ಮಠದಲ್ಲಿ ಮಕ್ಕಳಿಗೆ ಊಟ ಬಡಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಸಿದ್ಧಗಂಗಾ ಮಠದ ದಾಸೋಹ ಪರಂಪರೆಯನ್ನು ಸರ್ಕಾರ ಗುರುತಿಸಿದೆ. ಇಂದಿನ ಆಧುನಿಕ ಕಾಲದಲ್ಲೂ ದಾಸೋಹಕ್ಕೆ ಮಹತ್ವ ನೀಡುವ ಉದ್ದೇಶದಿಂದ ರಾಜ್ಯದಾದ್ಯಂತ ದಾಸೋಹ ದಿನ ಆಚರಣೆ ಮಾಡಲಾಗುತ್ತಿದೆ. ನಮ್ಮನ್ನು ನಾವು ದಾಸೋಹದ ಪರಂಪರೆಯಲ್ಲಿ ಸಮರ್ಪಣೆ ಮಾಡಿಕೊಳ್ಳುವ ಧ್ಯೇಯ ಇದರಲ್ಲಿದೆ. ಸರ್ಕಾರದಿಂದ ಅನ್ನ ದಾಸೋಹ ಮಾಡುವ ಮಠಗಳಿಗೆ ಪಡಿತರ ವಿತರಿಸಲಾಗುತ್ತಿದೆ' ಎಂದು ತಿಳಿಸಿದರು.

'ಸರ್ಕಾರದಿಂದ ಅನ್ನ ದಾಸೋಹ ಮಾಡುವಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಕ್ಕಿ, ರಾಗಿ, ಜೋಳ ವಿತರಣೆಯ ಪ್ರಮಾಣ ಹೆಚ್ಚಿಸುವ ಕೆಲಸ ಮಾಡಲಾಗಿದೆ. ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾನಿಧಿಯನ್ನು ಪ್ರಥಮ ಬಾರಿಗೆ ಶುರು ಮಾಡಲಾಗಿದೆ. ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ ಯೋಜನೆಗೆ ₹ 150 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜ್ಯದ ಜನತೆಗೆ ಆಶ್ರಯ ದಾಸೋಹ ನೀಡುವ ನಿಟ್ಟಿನಲ್ಲಿ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದರು.

' ದಾಸೋಹ ಕೆಲಸವನ್ನು ಸರ್ಕಾರದಿಂದ ವ್ಯವಸ್ಥಿತವಾಗಿ ಮಾಡುವ ಬಗ್ಗೆ ಕಾರ್ಯಕ್ರಮ ರೂಪಿಸಲು ಬದ್ಧ. ಶ್ರೀಗಳಿಗೆ 'ಭಾರತ ರತ್ನ' ನೀಡುವ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸಲಾಗುವುದು' ಎಂದರು.ಸಚಿವರಾದ ಜೆ.ಸಿ. ಮಾಧುಸ್ವಾಮಿ, ಬಿ.ಸಿ. ನಾಗೇಶ್, ಸಂಸದ ಬಿ.ಎಸ್. ಬಸವರಾಜು, ಶಾಸಕರಾದ ಜಿ.ಬಿ. ಜ್ಯೋತಿಗಣೇಶ್, ಮುಖಂಡರಾದ ಸೊಗಡು ಶಿವಣ್ಣ, ಸುರೇಶ್ ಗೌಡ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ, ಜಿ.ಪಂ ಸಿಇಒ ಕೆ. ವಿದ್ಯಾಕುಮಾರಿ ಇದ್ದರು.

ಕೇರಳ ಮಾಜಿ ಸಿ.ಎಂ ಅಚ್ಯುತಾನಂದನ್ ಆಸ್ಪತ್ರೆಗೆ ದಾಖಲು

ತಿರುವನಂತಪುರ: ಕೇರಳದ ಮಾಜಿ ಮುಖ್ಯಮಂತ್ರಿ ವಿ. ಎಸ್. ಅಚ್ಯುತಾನಂದನ್ ಅವರಿಗೆ ಕೋವಿಡ್ ದೃಢಪಟ್ಟಿದ್ದು ಶುಕ್ರವಾರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.



ಅಚ್ಯುತಾನಂದನ್

98 ವರ್ಷದ ಅಚ್ಯುತಾನಂದನ್ ಅವರನ್ನು ಆರೈಕೆ ಮಾಡುತ್ತಿದ್ದ ಶುಶ್ರೂಷಕಿಯಿಂದ ಅವರಿಗೂ ಸೋಂಕು ತಗುಲಿದೆ ಎಂದು ಮೂಲಗಳು ತಿಳಿಸಿವೆ.

'ಅಚ್ಯುತಾನಂದನ್ ಅವರು ಮನೆಯಲ್ಲಿಯೇ ಪ್ರತ್ಯೇಕ ವಾಸದಲ್ಲಿದ್ದರು. ಅವರನ್ನು ಆರೈಕೆ ಮಾಡುತ್ತಿದ್ದ ಶುಶ್ರೂಷಕಿಗೆ ಗುರುವಾರ ಕೋವಿಡ್ ದೃಢಪಟ್ಟಿತ್ತು. ಬಳಿಕ ಅವರಿಗೂ ಸೋಂಕು ದೃಢಪಟ್ಟಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅವರ ಪುತ್ರ ವಿ.ಎ. ಅರುಣ್ ಕುಮಾರ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಮೈಸೂರು: ಡಿ.ಸಿ. ಕಚೇರಿಯ 22 ಸಿಬ್ಬಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ ಸೇರಿದಂತೆ ಕಚೇರಿಯ 22 ಮಂದಿಗೆ ಕೋವಿಡ್ ದೃಢಪಟ್ಟಿದ್ದು, ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯನ್ನು ಸ್ಯಾನಿಟೈಸ್ ಮಾಡಿ, ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು.

ಶನಿವಾರ ಮತ್ತು ಭಾನುವಾರ ರಜೆ ಇದ್ದು ಸೋಮವಾರ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಸದ್ಯ, ಸಿಬ್ಬಂದಿ ಮನೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯ 1ರಿಂದ 10ನೇ ತರಗತಿವರೆಗಿನ 32 ಮಕ್ಕಳಲ್ಲಿ ಶುಕ್ರವಾರ ಸೋಂಕು ದೃಢಪಟ್ಟಿದ್ದು, 239 ಮಕ್ಕಳು ಸೋಂಕಿನಿಂದ ಬಳಲುತ್ತಿದ್ದಾರೆ. ಒಂದು ವಾರದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. 22 ಶಿಕ್ಷಕರಿಗೂ ಸೋಂಕು ತಗುಲಿದ್ದು, ಒಟ್ಟು 134 ಶಿಕ್ಷಕರು ಸೋಂಕಿತರಾಗಿದ್ದಾರೆ. 15ರಿಂದ 18 ವರ್ಷದೊಳಗಿನ 4,254 ಮಕ್ಕಳು ಇನ್ನೂ ಕೋವಿಡ್ ಲಸಿಕೆ ಪಡೆದಿಲ್ಲ.

ಕಣವಿಗೆ ಕೋವಿಡ್ ನೆಗೆಟಿವ್: ಹಿರಿಯ ಕವಿ ಡಾ. ಚೆನ್ನವೀರ ಕಣವಿ ಅವರ ಕೋವಿಡ್ ವರದಿ ನೆಗೆಟಿವ್ ಬಂದಿದ್ದು, ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ.

- ಸುರಪುರ(ಯಾದಗಿರಿ ಜಿಲ್ಲೆ) ಶಾಸಕ ರಾಜೂಗೌಡ ಅವರಿಗೆ ಶುಕ್ರವಾರ ಕೋವಿಡ್ ದೃಢಪಟ್ಟಿದೆ.
- ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ 17 ವಿದ್ಯಾರ್ಥಿಗಳು, ಮಡಿಕೇರಿ ತಾಲ್ಲೂಕಿನ ಗಾಳಿಬೀಡು ಸಮೀಪದ ನವೋದಯ ಶಾಲೆಯ 9 ವಿದ್ಯಾರ್ಥಿಗಳು, 9 ಶಿಕ್ಷಕರು ಹಾಗೂ ಇಬ್ಬರು ಅಡುಗೆ ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಕುಶಾಲನಗರದ ಕ್ರೀಡಾ ಶಾಲೆ 14 ವಿದ್ಯಾರ್ಥಿಗಳಿಗೆ ಸೋಂಕು ತಗುಲಿದೆ.
- ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಸಿಮ್ಸ್) 65 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದು, ಕಾಲೇಜಿಗೆ ಮೂರು ದಿನ ರಜೆ ನೀಡಲಾಗಿದೆ.
- ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಶುಕ್ರವಾರ ಶಾಲೆ, ಕಾಲೇಜು ವಿದ್ಯಾರ್ಥಿಗಳೂ ಸೇರಿ 557 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.
- ಬೆಳಗಾವಿ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಇತ್ತೀಚೆಗೆ 106 ಮಂದಿ ಪೊಲೀಸರಿಗೆ ಕೋವಿಡ್ ಸೋಂಕು ದೃಢಪಟ್ಟಿದೆ.
- ದಾವಣಗೆರೆ ತಾಲ್ಲೂಕಿನ ಮೊರಾರ್ಜಿ ವಸತಿಶಾಲೆಯ ಇಬ್ಬರು ಶಿಕ್ಷಕರು, 16 ಮಕ್ಕಳು ಸೇರಿ ವಿವಿಧ ವಸತಿಶಾಲೆಗಳ ಒಟ್ಟು 30 ಮಕ್ಕಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ.
- ಕುಕ್ಕುವಾಡ ಸಮೀಪದ ಆಂಜನೇಯ ನಗರದಿಂದ ಶಬರಿಮಲೆಯಾತ್ರೆಯಿಂದ ವಾಪಸ್ ಆಗಿದ್ದ 62 ಮಂದಿಯಲ್ಲಿ 31 ಮಂದಿಗೆ ಕೋವಿಡ್ ದೃಢಪಟ್ಟಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

34,25,002 ▲	ಒಟ್ಟು ಸೋಂಕಿತರು (33,76,953 ನಿನ್ನೆಯ ವಿವರ)
3,23,143 ▲	ಸಕ್ರಿಯ ಪ್ರಕರಣಗಳು
30,63,292 ▲	ಗುಣಮುಖರಾದವರು
38,537 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	48,049	▲
ಗುಣಮುಖ	18,115	▼
ಸಾವು	22	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ದೆಹಲಿ: ವಾರಾಂತ್ಯ ಕರ್ಫ್ಯೂ ಮುಂದುವರಿಕೆ

ನವದೆಹಲಿ (ಪಿಟಿಐ): ವಾರಾಂತ್ಯ ಕರ್ಫ್ಯೂವನ್ನು ಹಿಂಪಡೆಯುವ ಬಗ್ಗೆ ದೆಹಲಿ ಸರ್ಕಾರ ಸಲ್ಲಿಸಿರುವ ಪ್ರಸ್ತಾವವನ್ನು ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ತಿರಸ್ಕರಿಸಿದ್ದಾರೆ.

ಆದರೆ ಶೇ 50 ರಷ್ಟು ಸಿಬ್ಬಂದಿ ಸಾಮರ್ಥ್ಯದೊಂದಿಗೆ ಖಾಸಗಿ ಕಚೇರಿಗಳು ಕಾರ್ಯನಿರ್ವಹಿಸಲು ಅವಕಾಶ ನೀಡುವ ಸರ್ಕಾರದ ಪ್ರಸ್ತಾವನೆಯನ್ನು ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ಶುಕ್ರವಾರ ಅನುಮೋದಿಸಿದ್ದಾರೆ ಎಂದು ಅಧಿಕೃತ ಮೂಲಗಳು ಹೇಳಿವೆ.

ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಾರಾಂತ್ಯ ಕರ್ಫ್ಯೂ ತೆರವುಗೊಳಿಸುವುದು ಮತ್ತು ಅಂಗಡಿ ಮುಂಗಟ್ಟು ತೆರೆಯಲು ಸಮ–ಬೆಸ ಯೋಜನೆಯನ್ನು ಅಂತ್ಯಗೊಳಿಸುವ ಸಂಬಂಧ ದೆಹಲಿ ಸರ್ಕಾರ ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಿತ್ತು.

ರಾಜ್ಯಪಾಲ ಬೈಜಾಲ್ ಅವರು, ರಾಷ್ಟ್ರ ರಾಜಧಾನಿಯಲ್ಲಿ ಪರಿಸ್ಥಿತಿ ಸುಸ್ಥಿತಿಗೆ ಬರುವವರೆಗೆ ನಿರ್ಬಂಧಗಳನ್ನು ಮುಂದುವರೆಸುವಂತೆ ನಿರ್ದೇಶನ ನೀಡಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚಿದ್ದರಿಂದ ದೆಹಲಿಯಲ್ಲಿ ವಾರಾಂತ್ಯ ಕರ್ಫ್ಯೂ ಹೇರಲಾಗಿತ್ತು. ಶುಕ್ರವಾರ ರಾತ್ರಿ 10 ರಿಂದ ಸೋಮವಾರ ಬೆಳಿಗ್ಗೆ 5ರ ವರೆಗೆ ಕರ್ಫ್ಯೂ ಜಾರಿಯಲ್ಲಿದೆ. ದೆಹಲಿಯಲ್ಲಿ ಗುರುವಾರ 12,306 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, 43 ಮಂದಿ ಸೋಂಕಿತರು ಮೃತಪಟ್ಟಿದ್ದರು.

ಕ್ಲಬ್‌ಹೌಸ್ ಪ್ರಕರಣ: ಮೂವರು ಆರೋಪಿಗಳ ಬಂಧನ



ಮುಂಬೈ (ಪಿಟಿಐ): ಕ್ಲಬ್‌ಹೌಸ್‌ನಲ್ಲಿ ಮುಸ್ಲಿಂ ಮಹಿಳೆಯರ ವಿರುದ್ಧ ಅವಹೇಳನಕಾರಿಯಾಗಿ ಚರ್ಚೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಯಾಣದ ಮೂವರು ಆರೋಪಿಗಳನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ಹೇಳಿದ್ದಾರೆ.

ಮುಂಬೈ ಅಪರಾಧ ವಿಭಾಗದ ಸೈಬರ್ ಪೊಲೀಸ್ ಠಾಣೆಯ ಸಿಬ್ಬಂದಿ ಗುರುವಾರ ತಡರಾತ್ರಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದೂ ಅವರು ಹೇಳಿದರು.

ಇಬ್ಬರು ಆರೋಪಿಗಳನ್ನು ಸ್ಥಳೀಯ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುವುದು ಎಂದು ಅಧಿಕಾರಿ ತಿಳಿಸಿದರು. ಈ ಸಂಬಂಧ ಶಿವಸೇನಾಯ ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ ಬೆಳಗಿನ ಜಾವ ಟ್ವೀಟ್ ಮಾಡಿದ್ದು ನಗರ ಪೊಲೀಸರ ಕಾರ್ಯವನ್ನು ಪ್ರಶಂಸಿದ್ದಾರೆ.

'ಮುಂಬೈ ಪೊಲೀಸರಿಗೆ ಅಭಿನಂದನೆಗಳು. ಕ್ಲಬ್‌ಹೌಸ್ ಸಂವಾದ ಪ್ರಕರಣದ ಜಾಡನ್ನು ಭೇದಿಸಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಕ್ಲಬ್‌ಹೌಸ್ ಮತ್ತು ಗೂಗಲ್‌ಗೆ ಬುಧವಾರ ಪತ್ರ ಬರೆದಿದ್ದ ದೆಹಲಿ ಪೊಲೀಸರು ಚರ್ಚಾ ಕೂಟದ ಆಯೋಜಕರ ಬಗ್ಗೆ ಮಾಹಿತಿ ಕೇಳಿದ್ದರು. ಅದೇ ದಿನ ಸಂವಾದ ನಡೆಸಿದ ಆರೋಪಿಗಳನ್ನು ಪತ್ತೆ ಹಚ್ಚುವಂತೆ ಮುಂಬೈ ಮೂಲದ ಸಂಸ್ಥೆಯೊಂದು ನಗರ ಪೊಲೀಸರಿಗೆ ದೂರು ನೀಡಿತ್ತು. ನಂತರ ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿದರು.

ಲಸಿಕೆ: ಒಂದು ಮೊಬೈಲ್ ಸಂಖ್ಯೆ ಬಳಸಿ 6 ಮಂದಿ ನೋಂದಣಿ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಕೋ-ವಿನ್ ವೆಬ್‌ಸೈಟ್‌ನಲ್ಲಿ ಒಂದು ಮೊಬೈಲ್ ಸಂಖ್ಯೆ ಬಳಸಿ ಆರು ಮಂದಿಯ ಹೆಸರನ್ನು ನೋಂದಾಯಿಸಬಹುದಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆಯು ಶುಕ್ರವಾರ ತಿಳಿಸಿದೆ.ಈ ಕುರಿತು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿದೆ.ಈ ಹಿಂದೆ ಒಂದು ಮೊಬೈಲ್ ಸಂಖ್ಯೆ ಬಳಸಿ ಗರಿಷ್ಠ ನಾಲ್ಕು ಮಂದಿಗೆ ಮಾತ್ರ ಹೆಸರು ನೋಂದಾಯಿಸಲು ಅವಕಾಶ ನೀಡಲಾಗಿದೆ.

ಬ್ಯಾಡ್ಮಿಂಟನ್: ಪ್ರಣಯ್ ಅಭಿಯಾನ ಅಂತ್ಯ
ಸೆಮಿಗೆ ಸಿಂಧು, ಮಿಥುನ್


ಮಿಥುನ್ ಮಂಜುನಾಥ್– ಟ್ವಿಟರ್ ಚಿತ್ರ

ಲಖನೌ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ. ಸಿಂಧು ಮತ್ತು ಮಿಥುನ್ ಮಂಜುನಾಥ್ ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಎಚ್.ಎಸ್. ಪ್ರಣಯ್ ಅವರು ಸೋತು ಹೊರನಡೆದಿದ್ದಾರೆ.

ಶುಕ್ರವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಅಗ್ರಶ್ರೇಯಾಂಕದ ಸಿಂಧು 11-21, 21-12, 21-17ರಿಂದ ಥಾಯ್ಲೆಂಡ್‌ನ ಸುಪನಿದಾ ಕೇಟ್‌ಥಾಂಗ್ ಎದುರು ಜಯಿಸಿದರು. ಒಂದು ತಾಸು ಐದು ನಿಮಿಷಗಳ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಸುಪನಿದಾ ಸೋಲೊಪ್ಪಿಕೊಂಡರು.

ನಾಲ್ಕರಘಟ್ಟದ ಪಂದ್ಯದಲ್ಲಿ ಸಿಂಧು ಅವರಿಗೆ ರಷ್ಯಾದ ಇವ್‌ಜೆನಿಯಾ ಕೊಸೆತ್ಸಕಯಾ ಸವಾಲು ಎದುರಾಗಿದೆ.

ಪುರುಷರ ಸಿಂಗಲ್ಸ್ ವಿಭಾಗದ ಮತ್ತೊಂದು ರೋಚಕ ಪಂದ್ಯದಲ್ಲಿ ಭಾಗಿಯಾದ ಮಿಥುನ್, ರಷ್ಯಾದ ಸೆರ್ಜಿ ಸಿರಾಂತ್ ಎದುರು 11-21, 21-12, 21-18ರಿಂದ ಜಯಿಸಿ ನಾಲ್ಕರ ಘಟ್ಟಕ್ಕೆ ಕಾಲಿಟ್ಟರು. ಒಂದು ತಾಸು ಒಂದು ನಿಮಿಷ ನಡೆದ ಪಂದ್ಯದಲ್ಲಿ ಮೊದಲ ಗೇಮ್ ಕಳೆದುಕೊಂಡಿದ್ದ ಮಿಥುನ್ ಪುಟಿದೆದ್ದು ಗೆಲುವು ತಮ್ಮದಾಗಿಸಿಕೊಂಡರು. ಮಿಥುನ್ ಅವರಿಗೆ ಸೆಮಿಫೈನಲ್‌ನಲ್ಲಿ ಮರ್ಕಲ್ ಸವಾಲು ಎದುರಾಗಿದೆ. ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪ್ರಣಯ್ 19-21, 16-21ರಿಂದ ಫ್ರಾನ್ಸ್‌ನ ಅರ್ನಾಡ್ ಮರ್ಕಲ್ ಎದುರು ಎಡವಿದರು. 59 ನಿಮಿಷಗಳಲ್ಲಿ ಈ ಹಣಾಹಣಿ ಅಂತ್ಯವಾಯಿತು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಎಂ.ಆರ್. ಅರ್ಜುನ್– ತ್ರೀಶಾ ಜೋಲಿ ಜೋಡಿಯೂ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿತು. ಈ ಜೋಡಿಯು ಫ್ರಾನ್ಸ್‌ನ ವಿಲಿಯಮ್ ವಿಲೇಜರ್– ಅನ್ನೆ ಟ್ರಾನ್ ಎದುರು 24-22, 21-17ರಿಂದ ಗೆದ್ದರು. ಮುಂದಿನ ಪಂದ್ಯದಲ್ಲಿ ಈ ಜೋಡಿಯು ಭಾರತದವರೇ ಆದ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ರಾಸ್ಟೊ ಅವರನ್ನು ಎದುರಿಸುವರು. ಮಹಿಳಾ ಡಬಲ್ಸ್‌ನಲ್ಲಿ ಭಾರತದ ರಮ್ಯಾ ವೆಂಕಟೇಶ್ ಚಿಕ್ಕಮೇನಹಳ್ಳಿ- ಅಪೇಕ್ಷಾ ನಾಯಕ್ ಅವರು ಮಲೇಷ್ಯಾದ ಅನ್ನಾ ಚಿಂಗ್ ಯಿಕ್ ಚಿಯೊಂಗ್– ತೊಹ್ ಮೆ ಷಿಂಗ್ ಅವರಿಗೆ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವಾಕ್‌ಓವರ್ ನೀಡಿದರು.

ಏಷ್ಯಾಕಪ್ ಮಹಿಳಾ ಹಾಕಿ: ಭಾರತಕ್ಕೆ ಭರ್ಜರಿ ಜಯ


ವಂದನಾ ಕಟಾರಿಯಾ ಸಂಗ್ರಹ ಚಿತ್ರ

ಮಸ್ಕತ್ (ಪಿಟಿಐ): ವಂದನಾ ಕಟಾರಿಯಾ, ನವನೀತ್ ಕೌರ್ ಹಾಗೂ ಶರ್ಮಿಳಾ ಗಳಿಸಿದ ತಲಾ ಎರಡು ಗೋಲುಗಳ ನೆರವಿನಿಂದ ಭಾರತ ತಂಡವು ಏಷ್ಯಾಕಪ್ ಮಹಿಳಾ ಹಾಕಿ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿತು.

ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ 9–0ಯಿಂದ ಮಲೇಷ್ಯಾ ತಂಡವನ್ನು ಪರಾಭವಗೊಳಿಸಿತು. ಸವಿತಾ ಪೂನಿಯಾ ನಾಯಕತ್ವದ ಭಾರತ ತಂಡವು ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ನಾಲ್ಕು ಗೋಲು ದಾಖಲಿಸಿದರೆ, ಎರಡನೇ ಕ್ವಾರ್ಟರ್‌ನಲ್ಲಿ ಐದು ಗೋಲುಗಳನ್ನು ಗಳಿಸಿತು. ವಂದನಾ (8 ಮತ್ತು 34ನೇ ನಿಮಿಷ), ನವನೀತ್ ಕೌರ್ (15 ಮತ್ತು 27ನೇ ನಿಮಿಷ), ಶರ್ಮಿಳಾ (46 ಮತ್ತು 59ನೇ ನಿಮಿಷ),ಉಪನಾಯಕಿ ದೀಪ್ ಗ್ರೇಸ್ ಎಕ್ಕಾ (10ನೇ ನಿ.), ಲಾಲ್‌ರೆಮ್ಸಿಯಾಮಿ (38ನೇ ನಿ.) ಮತ್ತು ಮೋನಿಕಾ (40ನೇ ನಿ.) ತಲಾ ಒಂದು ಗೋಲು ದಾಖಲಿಸಿ ಗೆಲುವಿಗೆ ಕಾಣಿಕೆ ನೀಡಿದರು.

ಸಿಎಫ್‌ಸಿ–ಎನ್‌ಇಯು ಹಣಾಹಣಿ

ಫತೋರ್ಡ, ಗೋವಾ (ಪಿಟಿಐ): ಲಯ ಕಳೆದುಕೊಂಡಿರುವ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಶನಿವಾರ ಸೆಣಸಲಿರುವ ಚೆನ್ನೈಯಿನ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಅಗ್ರ ನಾಲ್ಕು ಸ್ಥಾನಗಳ ಮೇಲೆ ಕಣ್ಣಿಟ್ಟಿದೆ. ಎರಡು ಪಂದ್ಯಗಳಲ್ಲಿ ಜಯ ಕಾಣದೇ ಇರುವ ತಂಡಕ್ಕೆ ಲಯಕ್ಕೆ ಮರಳುವುದಕ್ಕೂ ಇದು ಉತ್ತಮ ಅವಕಾಶವಾಗಲಿದೆ.

11 ಪಂದ್ಯಗಳನ್ನು ಆಡಿರುವ ಚೆನ್ನೈಯಿನ್ ಒಟ್ಟು 15 ಪಾಯಿಂಟ್‌ಗಳನ್ನು ಕಲೆ ಹಾಕಿದ್ದು ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಎಟಿಕೆ ಮೋಹನ್ ಬಾಗನ್ ಕೂಡ 15 ಪಾಯಿಂಟ್ ಗಳಿಸಿದೆ. ಕೋವಿಡ್ ಕಾರಣದಿಂದ ತಂಡಕ್ಕೆ ಹಿಂದಿನ ಮೂರು ಪಂದ್ಯಗಳನ್ನು ಆಡಲು ಸಾಧ್ಯವಾಗಲಿಲ್ಲ.

ಶನಿವಾರ ಜಯ ಗಳಿಸಿದರೆ ಚೆನ್ನೈಯಿನ್ ಮೂರನೇ ಸ್ಥಾನಕ್ಕೆ ಜಿಗಿಯಲಿದೆ.

ಪಂದ್ಯ ಆರಂಭ: ರಾತ್ರಿ 7.30

ಪ್ರೀಕ್ವಾರ್ಟರ್‌ಗೆ ಜ್ವೆರೆವ್
ಆಸ್ಟ್ರೇಲಿಯಾ ಓಪನ್: ನಡಾಲ್‌ಗೆ ಪ್ರಯಾಸದ ಗೆಲುವು


ಅಲೆಕ್ಸಾಂಡರ್ ಜ್ವೆರೆವ್ ಆಟದ ವೈಖರಿ– ರಾಯಿಟರ್ಸ್ ಚಿತ್ರ

ಮೆಲ್ಬರ್ನ್ (ಎಎಫ್‌ಪಿ/ರಾಯಿಟರ್ಸ್): ಅಮೋಘ ಆಟವಾಡಿದ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಆಟಗಾರ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ 16ರ ಘಟ್ಟಕ್ಕೆ ಪ್ರವೇಶಿಸಿದರು. ಸ್ಪೇನ್‌ನ ರಫೆಲ್ ನಡಾಲ್ ಮತ್ತು ಇಟಲಿಯ ಮಟಿಯೊ ಬೆರೆಟಿನಿ ಪ್ರಯಾಸದ ಜಯ ಸಾಧಿಸಿ ಮುನ್ನಡೆದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಜ್ವೆರೆವ್, ಜಾನ್ ಕೇನ್ ಅರೆನಾದಲ್ಲಿ ನಡೆದ ಪುರುಷರ ಸಿಂಗಲ್ಸ್ ಮೂರನೇ ಸುತ್ತಿನ ಹಣಾಹಣಿಯಲ್ಲಿ 6-3, 6-4, 6-4ರಿಂದ ಮೊಲ್ಡೊವಾದ ರಾಡು ಅಲ್ಬೊಟ್ ಅವರನ್ನು ಪರಾಭವಗೊಳಿಸಿದರು. ಬಿರುಬಿಸಿಲಿನ ನಡುವೆ ಈ ಪಂದ್ಯವು ಒಂದು ತಾಸು 57 ನಿಮಿಷಗಳ ಕಾಲ ನಡೆಯಿತು.

ವಿಶ್ವ ಕ್ರಮಾಂಕದಲ್ಲಿ 124ನೇ ಸ್ಥಾನದಲ್ಲಿರುವ ಅಲ್ಬೊಟ್ ಅವರ ಸರ್ವ್‌ಅನ್ನು ಜ್ವೆರೆವ್ ಮೂರು ಬಾರಿ ಮುರಿದರು. ತಮ್ಮದೇ ಸರ್ವ್‌ನಲ್ಲಿ ಮೂರು ಬ್ರೇಕ್ ಪಾಯಿಂಟ್ಸ್ ಉಳಿಸಿಕೊಂಡರು. ಮೊಲ್ಡೊವಾ ಆಟಗಾರ 30 ಸ್ವಯಂ ತಪ್ಪುಗಳನ್ನು ಎಸಗಿದರು.

ಜ್ವೆರೆವ್ ಅವರಿಗೆ ಮುಂದಿನ ಪಂದ್ಯದಲ್ಲಿ 14ನೇ ಶ್ರೇಯಾಂಕದ ಆಟಗಾರ, ಕೆನಡಾದ ಡೆನಿಸ್ ಶಪೊವಲೊವ್ ಎದುರಾಗುವರು. ಇಲ್ಲಿ ಗೆದ್ದರೆ ಜರ್ಮನಿ ಆಟಗಾರನಿಗೆ ಕ್ವಾರ್ಟರ್‌ಫೈನಲ್‌ನಲ್ಲಿ 20 ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ರಫೆಲ್ ನಡಾಲ್ ಸವಾಲು ಎದುರಾಗುವ ಸಾಧ್ಯತೆಯಿದೆ.

ಕಚನೊವ್ ಸವಾಲು ಮೀರಿದ ನಡಾಲ್: ಆರನೇ ಶ್ರೇಯಾಂಕದ ನಡಾಲ್ ಈ ವರ್ಷದ ಟೂರ್ನಿಯಲ್ಲಿ ಮೊದಲ ಬಾರಿ ಸೆಟ್‌ವೊಂದನ್ನು ಕೈಚೆಲ್ಲಿದರೂ ರಷ್ಯಾದ ಕರೆನ್ ಕಚನೊವ್ ಎದುರು 6-3, 6-2, 3-6, 6-1ರಿಂದ ಜಯ ಒಲಿಸಿಕೊಂಡರು.

21ನೇ ಗ್ರ್ಯಾನ್‌ಸ್ಲಾಮ್ ಜಯದ ಹಾದಿಯಲ್ಲಿರುವ ನಡಾಲ್ ಮೊದಲ ಎರಡು ಸೆಟ್‌ಗಳನ್ನು ಸುಲಭವಾಗಿ ಗೆದ್ದುಕೊಂಡರು. ಆದರೆ 28ನೇ ಶ್ರೇಯಾಂಕದ ಕಚನೊವ್ ಮೂರನೇ ಸೆಟ್‌ನಲ್ಲಿ ತಿರುಗೇಟು ನೀಡಿದರು. ಬಿರುಸಿನ ಹೊಡೆತಗಳ ಮೂಲಕ ರಂಜಿಸಿದ ಅವರು ಸ್ಪೇನ್ ಆಟಗಾರನಿಗೆ ನಡುಕ ಹುಟ್ಟಿಸಿದರು. ಆದರೆ ಒತ್ತಡವನ್ನು ಮೀರಿನಿಂತ ನಡಾಲ್ ನಿರ್ಣಾಯಕ ಸೆಟ್‌ನೊಂದಿಗೆ ಪಂದ್ಯ ಗೆದ್ದು ಬೀಗಿದರು.

ಮೂರನೇ ಸುತ್ತಿನ ಇನ್ನೊಂದು ಹಣಾಹಣಿಯಲ್ಲಿ ಏಳನೇ ಶ್ರೇಯಾಂಕದ ಇಟಲಿಯ ಮಟಿಯೊ ಬೆರೆಟಿನಿ 6-2, 7-6 (7/3), 4-6, 2-6, 7-6 (10/5)ರಿಂದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಸವಾಲು ಮೀರಿದರು. ಸ್ಪೇನ್‌ನ 18 ವರ್ಷದ ಆಟಗಾರನನ್ನು ಮಣಿಸಲು ಬೆರೆಟಿನಿ ಭಾರಿ ಬೆವರು ಸುರಿಸಬೇಕಾಯಿತು.

ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ, ಫ್ರಾನ್ಸ್‌ನ ಗೇಲ್ ಮೊಂಫಿಲ್ಸ್ 7-6 (7/4), 6-1, 6-3ರಿಂದ ಚಿಲಿಯ ಕ್ರಿಸ್ಟಿಯನ್ ಗರಿನ್ ಎದುರು, ಸರ್ಬಿಯಾದ ಮಿಯೊಮಿರ್ ಕೆಸ್ಮೊನೊವಿಚ್ 6-4, 6-7 (8/10), 6-2, 7-5ರಿಂದ ಇಟಲಿಯ ಲೊರೆಂಜೊ ಸೊನೆಗೊ ಎದುರು, ಸ್ಪೇನ್‌ನ ಪ್ಯಾಬ್ಲೊ ಕರೆನೊ ಬುಸ್ಟಾ 6-4, 7-5, 6-7 (6/8), 6-3ರಿಂದ ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ವಿರುದ್ಧ, ಕೆನಡಾದ ಡೆನಿಸ್ ಶಪವಲೊವ್ 7-6 (7/4), 4-6, 6-3, 6-4ರಿಂದ ಅಮೆರಿಕದ ರೇಲಿ ಒಪೆಲ್ಕಾ ವಿರುದ್ಧ ಗೆಲುವು ಸಾಧಿಸಿದರು.

ಸ್ವಿಟೊಲಿನಾಗೆ ಆಘಾತ ನೀಡಿದ ಅಜರೆಂಕಾ: ಎರಡು ಬಾರಿಯ ಚಾಂಪಿಯನ್, ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ 6-0, 6-2ರಿಂದ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ ಅವರನ್ನು ಮಣಿಸಿ ಪ್ರೀಕ್ವಾರ್ಟರ್ ತಲುಪಿದರು. ಮುಂದಿನ ಸುತ್ತಿನಲ್ಲಿ ಅವರಿಗೆ ಫ್ರೆಂಚ್ ಓಪನ್ ಚಾಂಪಿಯನ್ ಬಾರ್ಬೊರಾ ಕ್ರೇಸಿಕೊವಾ ಸವಾಲು ಎದುರಾಗಿದೆ.

ಮಹಿಳಾ ಸಿಂಗಲ್ಸ್‌ನ ಮೂರನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೇಸಿಕೊವಾ 2-6, 6-4, 6-4ರಿಂದ ಲಾತ್ವಿಯಾದ ಎಲೆನಾ ಒಸ್ತಾಪೆಂಕೊ ಎದುರು, ಗ್ರೀಸ್‌ನ ಮರಿಯಾ ಸಕರಿ 6-4, 6-1ರಿಂದ ರಷ್ಯಾದ ವೆರೋನಿಕಾ ಕುದರ್ಮೆಟೊವಾ ಎದುರು, ಅಮೆರಿಕದ ಮ್ಯಾಡಿಸನ್ ಕೀಸ್ 4-6, 6-3, 7-6ರಿಂದ ಚೀನಾದ ಕಿಯಾಂಗ್ ವಾಂಗ್ ಎದುರು ಜಯಿಸಿ 16ರ ಘಟ್ಟ ಪ್ರವೇಶಿಸಿದರು.

ಚಾಂಪಿಯನ್ ಒಸಾಕಗೆ ಆಘಾತ

ಮಹಿಳಾ ಸಿಂಗಲ್ಸ್ ಹಾಲಿ ಚಾಂಪಿಯನ್, ಜಪಾನ್ ನವೊಮಿ ಒಸಾಕ ಅವರು ಮೂರನೇ ಸುತ್ತಿನಲ್ಲೇ ಟೂರ್ನಿಯಿಂದ ಹೊರಬಿದ್ದರು. 60ನೇ ಕ್ರಮಾಂಕದ ಆಟಗಾರ್ತಿ ಅಮೆರಿಕದ ಅಮಂಡಾ ಅನಿಸಿಮೊವಾ ಅವರು 4-6, 6-3, 7-6 (10-5)ರಿಂದ ಒಸಾಕ ಅವರಿಗೆ ಸೋಲುಣಿಸಿದರು.

ಅಮೋಘ ಆಟವಾಡಿದ ಅನಿಸಿಮೊವಾ ಎರಡು ಮ್ಯಾಚ್ ಪಾಯಿಂಟ್ಸ್ ಉಳಿಸಿಕೊಂಡರು. ಮೊದಲ ಸೆಟ್ ಗೆದ್ದಿದ್ದ ಜಪಾನ್ ಆಟಗಾರ್ತಿಗೆ ನಂತರದ ಎರಡು ಸೆಟ್‌ಗಳಲ್ಲಿ ಜಿದ್ದಾಜಿದ್ದಿ ಪೈಪೋಟಿ ನೀಡಿ ಗೆಲುವು ಒಲಿಸಿಕೊಂಡರು. ಮುಂದಿನ ಪಂದ್ಯದಲ್ಲಿ ಅನಿಸಿಮೊವಾ ಅವರಿಗೆ ಆಸ್ಟ್ರೇಲಿಯಾದ ಆಟಗಾರ್ತಿ, ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಆ್ಯಶ್ಲಿ ಬಾರ್ಟಿ ಸವಾಲು ಎದುರಾಗಿದೆ.

ಮತ್ತೊಂದು ಪಂದ್ಯದಲ್ಲಿ ಬಾರ್ಟಿ ಸುಲಭ ಜಯ ಸಾಧಿಸಿ 16ರ ಘಟ್ಟಕ್ಕೆ ಮುನ್ನಡೆದರು. 30ನೇ ಕ್ರಮಾಂಕದ, ಇಟಲಿಯ ಕ್ಯಾಮಿಲಾ ಗಿಯೊರ್ಗಿ ಎದುರು 6-2, 6-3ರಿಂದ ಗೆಲುವು ಸಾಧಿಸಿದರು.

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿ
ಭಾರತಕ್ಕೆ ಉಗಾಂಡ ಸವಾಲು

ತರೌಬಾ, ಟ್ರಿನಿಡಾಡ್ (ಪಿಟಿಐ): ತಂಡದ ಕೆಲವು ಆಟಗಾರರು ಕೋವಿಡ್ ಸೋಂಕಿತರಾಗಿದ್ದರೂ, ಉತ್ತಮ ಆಟದೊಂದಿಗೆ ಕ್ವಾರ್ಟರ್‌ಫೈನಲ್ ತಲುಪಿರುವ ಭಾರತ ಕಿರಿಯರ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಕೊನೆಯ ಪಂದ್ಯದಲ್ಲಿ ಶನಿವಾರ ಉಗಾಂಡವನ್ನು ಎದುರಿಸಲಿದೆ.

ಬುಧವಾರದ ಐರ್ಲೆಂಡ್ ಎದುರಿನ ಪಂದ್ಯಕ್ಕೂ ಮೊದಲು, ಭಾರತದ 17 ಆಟಗಾರರ ಪೈಕಿ ಆರು ಮಂದಿ ಸೋಂಕಿನಿಂದಾಗಿ ಪ್ರತ್ಯೇಕವಾಸಕ್ಕೆ ತೆರಳಬೇಕಾಗಿತ್ತು. ಇದರ ಮಧ್ಯೆಯೂ ಎದೆಗುಂದದ ಆಟಗಾರರು ತಂಡವನ್ನು 174 ರನ್‌ಗಳಿಂದ ಗೆಲ್ಲಿಸಿ ಎಂಟರಘಟ್ಟಕ್ಕೆ ತಲುಪಿಸಿದ್ದರು.

ನಾಕೌಟ್ ಪಂದ್ಯಗಳು ಆರಂಭವಾಗುವ ಹೊತ್ತಿಗೆ ನಾಯಕ ಯಶ್ ಧುಳ್ ಮತ್ತು ಉಪನಾಯಕ ಶೇಖ್ ರಶೀದ್ ಅವರು ತಂಡಕ್ಕೆ ಮರಳಲಿ ಎಂದು ಭಾರತ ಬಯಸುತ್ತಿದೆ.

ಉಗಾಂಡ ಎದುರಿನ ಪಂದ್ಯವು ಭಾರತಕ್ಕೆ ಅಷ್ಟೇನೂ ಮಹತ್ವದಲ್ಲ. ಆದರೂ ಆಟಗಾರರು ಕೋವಿಡ್‌ನಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿರಬಹುದು. ಅವರು ಚೇತರಿಸಿಕೊಂಡು ಅಭ್ಯಾಸ ನಡೆಸಿದರೆ ನಿರಾಳ ಎನಿಸ ಬಹುದು.

ಭಾರತದ ಆರಂಭಿಕ ಬ್ಯಾಟರ್‌ಗಳಾದ ಹರ್ನೂರ್ ಸಿಂಗ್ ಮತ್ತು ಅಂಗ್‌ರಿಕ್ಷ್ ರಘುವಂಶಿ ಉತ್ತಮ ಲಯದಲ್ಲಿದ್ದಾರೆ. ಮಧ್ಯಮ ಕ್ರಮಾಂಕದ ಆಟಗಾರರಿಂದ ರನ್‌ಗಳು ಹರಿದುಬರಬೇಕಿದೆ. ಹಂಗಾಮಿ ನಾಯಕನಾಗಿರುವ ನಿಶಾಂತ್ ಸಿಂಧು ಕೂಡ ಉತ್ತಮ ಸಾಮರ್ಥ್ಯ ತೋರುತ್ತಿದ್ದಾರೆ.

ಉಗಾಂಡ ತಂಡವು ಟೂರ್ನಿಯಲ್ಲಿ ಒಂದೂ ಪಂದ್ಯ ಗೆದ್ದಿಲ್ಲ. ದಕ್ಷಿಣ ಆಫ್ರಿಕಾ ಎದುರು ಮಂಗಳವಾರ 121 ರನ್‌ಗಳಿಂದ ಸೋತಿದ್ದ ತಂಡವು, ಮೊದಲ ಪಂದ್ಯದಲ್ಲಿ ಐರ್ಲೆಂಡ್ ಎದುರು 39 ರನ್‌ಗಳಿಂದ ಮಣಿದಿತ್ತು.

ಆರು ಆಟಗಾರರು ಅಲಭ್ಯ: ಕೋವಿಡ್‌ಗೆ ಸಂಬಂಧಿಸಿದ ಆರ್‌ಟಿ– ಪಿಸಿಆರ್ ಪರೀಕ್ಷೆಯಲ್ಲಿ ಮತ್ತೆ ಸೋಂಕು ಖಚಿತಪಟ್ಟ ಕಾರಣ ಭಾರತ ತಂಡದ ನಾಯಕ ಯಶ್ ಧುಳ್ ಸೇರಿ ಆರು ಆಟಗಾರರು ಕಣಕ್ಕಿಳಿಯುತ್ತಿಲ್ಲ.

ಪಂದ್ಯ ಆರಂಭ: ಸಂಜೆ 6.30

ಕ್ವಾರ್ಟರ್‌ಫೈನಲ್‌ಗೆ ಇಂಗ್ಲೆಂಡ್, ಪಾಕಿಸ್ತಾನ

ನಾಯಕ ಟಾಮ್ ಪ್ರೆಸ್ಟ್ ಗಳಿಸಿದ ಭರ್ಜರಿ ಶತಕದ (154) ಬಲದಿಂದ ಇಂಗ್ಲೆಂಡ್ ತಂಡವು 189 ರನ್‌ಗಳಿಂದ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತಂಡವನ್ನು ಮಣಿಸಿ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿತು.

ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಆರು ವಿಕೆಟ್‌ಗೆ 362 ರನ್ ಗಳಿಸಿತು. ಯುಎಇಯನ್ನು 38.2 ಓವರ್‌ಗಳಲ್ಲಿ 173 ರನ್‌ಗಳಿಗೆ ಕಟ್ಟಿ ಹಾಕಿತು.

ಮತ್ತೊಂದು ಪಂದ್ಯದಲ್ಲಿ ಪಾಕಿಸ್ತಾನ ತಂಡವು ಅಫ್ಗಾನಿಸ್ತಾನವನ್ನು 24 ರನ್‌ಗಳಿಂದ ಮಣಿಸಿ ಎಂಟರಘಟ್ಟ ತಲುಪಿತು.


ಗೋಲು ಗಳಿಸಿದ ಲಾಲ್‌ರಿನ್‌ಮುವಾನಿ (ಎಡದಿಂದ ಎರಡನೆಯವರು) ಅವರನ್ನು ಮಿಸಾಕ ತಂಡ ಸಹ ಆಟಗಾರ್ತಿಯರು ಅಭಿನಂದಿಸಿದರು –ಪ್ರಜಾವಾಣಿ ವಾರ್ತೆ


ಫುಟ್‌ಬಾಲ್: ಮಿಸಾಕ ಜಯಭೇರಿ

ಬೆಂಗಳೂರು: ಲಾಲ್‌ರಿನ್‌ಮುವಾನಿ ಗಳಿಸಿದ ಎರಡು ಗೋಲುಗಳ ಬಲದಿಂದ ಮಿಸಾಕ ಯುನೈಟೆಡ್ ಎಫ್‌ಸಿ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಮಹಿಳಾ ಲೀಗ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಈ ತಂಡ 2–1ರಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿಯನ್ನು ಮಣಿಸಿತು. 19ನೇ ನಿಮಿಷದಲ್ಲಿ ಕಾವ್ಯ ಗಳಿಸಿದ ಗೋಲಿನೊಂದಿಗೆ ಕಿಕ್‌ಸ್ಟಾರ್ಟ್ ಮುನ್ನಡೆ ಸಾಧಿಸಿತು. ಮೊದಲಾರ್ಧದ ಮುಕ್ತಾಯದ ವರೆಗೂ ಈ ಮುನ್ನಡೆಯನ್ನು ಉಳಿಸಿಕೊಳ್ಳಲು ತಂಡ ಯಶಸ್ವಿಯಾಯಿತು. ಆದರೆ ಲಾಲ್‌ರಿನ್‌ಮುವಾನಿ 47 ಮತ್ತು 74ನೇ ನಿಮಿಷಗಳಲ್ಲಿ ಗೋಲು ಗಳಿಸಿ ಮಿಸಾಕ ತಂಡದ ಗೆಲುವಿಗೆ ಕಾರಣರಾದರು.

ಕಿಕ್ ಸ್ಟಾರ್ಟ್ ಎಫ್‌ಸಿ ಈಗಾಗಲೇ ಲೀಗ್‌ನ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಮಿಸಾಕ ರನ್ನರ್ ಅಪ್ ಆಗಿದೆ. ಟ್ರೋಫಿಗಾಗಿ ಎರಡು ಲೆಗ್‌ಗಳ ಪಂದ್ಯವನ್ನು ಏರ್ಪಡಿಸಲಾಗಿದೆ. ಎರಡನೇ ಲೆಗ್ ಪಂದ್ಯ ಇದೇ 24ರಂದು ನಡೆಯಲಿದೆ.

ಷೇರುಪೇಟೆ ವಹಿವಾಟು 427



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,757
ಇಂದಿನ ಅಂತ್ಯ	17,617
▼	140
ದಿನದ ಕನಿಷ್ಠ	17,485

ವಿನಿಮಯ ದರ

$ ಡಾಲರ್	74.43
£ ಪೌಂಡ್	101.28
€ ಯುರೊ	84.39
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1230 (1225)
ಸೂರ್ಯಕಾಂತಿ (ರಿಫೈನ್ಡ್)	₹1255 (1250)
ಪಾಮೋಲಿನ್	₹1175 (1175)

ಕರ್ಫ್ಯೂ ಸಡಿಲಿಕೆ: ಅಡಿಕೆ ಧಾರಣೆ ದಿಢೀರ್ ಏರಿಕೆ

ಪ್ರಜಾವಾಣಿ ವಾರ್ತೆ

ಪುತ್ತೂರು: ವಾರಾಂತ್ಯ ಕರ್ಫ್ಯೂ ತೆರವುಗೊಂಡ ಬೆನ್ನಲ್ಲೇ ಇಲ್ಲಿನ ಮಾರುಕಟ್ಟೆಯಲ್ಲಿ ಶುಕ್ರವಾರ ಅಡಿಕೆ ಧಾರಣೆಯಲ್ಲಿ ದಿಢೀರ್ ಏರಿಕೆ ಕಂಡುಬಂದಿದೆ.

ಶುಕ್ರವಾರ ಬೆಳಿಗ್ಗೆ ಹೊಸ ಅಡಿಕೆಗೆ ಕೆ.ಜಿ.ಗೆ ₹453 ಇದ್ದ ದರ, ಮಧ್ಯಾಹ್ನದ ನಂತರ ₹460ಕ್ಕೆ ಏರಿಕೆಯಾಗಿದೆ. ಹಳೆ ಅಡಿಕೆ ಸಿಂಗಲ್ ಚೋಲ್ ₹532 ಹಾಗೂ ಡಬಲ್ ಚೋಲ್ ₹544ಕ್ಕೆ ಖರೀದಿಯಾಗಿದೆ.

ವಾರಾಂತ್ಯ ಕರ್ಫ್ಯೂ ಜಾರಿಗೊಳಿಸಿದ ನಂತರ ಮುಕ್ತ ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆಯಲ್ಲಿ ತುಸು ಇಳಿಕೆಯಾಗಿತ್ತು. ಆದರೆ, ಪುತ್ತೂರು, ವಿಟ್ಲ ಕ್ಯಾಂಪ್ಕೊ ಮಾರುಕಟ್ಟೆಯಲ್ಲಿ ಕಳೆದ 1 ತಿಂಗಳಿನಿಂದ ಧಾರಣೆ ಸ್ಥಿರವಾಗಿದೆ. ಶುಕ್ರವಾರ ಕಾಂಪ್ಕೊದಲ್ಲಿ ಹೊಸ ಅಡಿಕೆ ಕೆ.ಜಿ.ಗೆ ₹450, ಹಳೆ ಅಡಿಕೆ ಸಿಂಗಲ್ ಚೋಲ್ ₹530, ಡಬಲ್ ಚೋಲ್ ₹535ಕ್ಕೆ ಖರೀದಿಯಾಗಿದೆ.

'ನಿರ್ಬಂಧಗಳು ಇನ್ನಷ್ಟು ಸಡಿಲಗೊಂಡರೆ ಮುಂದಿನ ದಿನಗಳಲ್ಲಿ ಅಡಿಕೆ ಧಾರಣೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ' ಎನ್ನುತ್ತಾರೆ ಇಲ್ಲಿನ ಅಡಿಕೆ ವ್ಯಾಪಾರಿಗಳು.

ರತ್ನ, ಆಭರಣ ರಫ್ತು ಹೆಚ್ಚಳ

ನವದೆಹಲಿ (ಪಿಟಿಐ): ರತ್ನ ಮತ್ತು ಆಭರಣಗಳ ರಫ್ತು 2021ರ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಶೇ 5.76ರಷ್ಟು ಹೆಚ್ಚಾಗಿದ್ದು, ₹ 2.15 ಲಕ್ಷ ಕೋಟಿಗಳಿಗೆ ತಲುಪಿದೆ.

ಅಮೆರಿಕ, ಹಾಂಗ್‌ಕಾಂಗ್ ಮತ್ತು ಥಾಯ್ಲೆಂಡ್‌ನಿಂದ ಉತ್ತಮ ಬೇಡಿಕೆ ಬಂದಿದ್ದರಿಂದ ರಫ್ತು ಪ್ರಮಾಣ ಹೆಚ್ಚಾಗಿದೆ ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

ಅಮೆರಿಕ, ಹಾಂಗ್‌ಕಾಂಗ್, ಥಾಯ್ಲೆಂಡ್ ಮತ್ತು ಇಸ್ರೇಲ್‌ನಲ್ಲಿ ರಜಾದಿನ ಮತ್ತು ಹಬ್ಬದ ಬೇಡಿಕೆಯು ಹೆಚ್ಚಾಗಿದೆ. ಈ ಬೇಡಿಕೆಯು ಪ್ರಸಕ್ತ ಹಣಕಾಸು ವರ್ಷದ ಅಂತ್ಯದವರೆಗೂ ಮುಂದುವರಿಯುವ ನಿರೀಕ್ಷೆ ಇದ್ದು, ರಫ್ತು ಮೌಲ್ಯವು ₹ 3.08 ಲಕ್ಷ ಕೋಟಿ ಗುರಿಯ ಸಮೀಪಕ್ಕೆ ಬರಲಿದೆ ಎಂದು ಮಂಡಳಿಯ ಅಧ್ಯಕ್ಷ ಕೋಲಿನ್ ಶಾ ಹೇಳಿದ್ದಾರೆ.

ಬೆಳ್ಳಿ ಆಭರಣಗಳ ರಫ್ತು ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಶೇ 94ರಷ್ಟು ಹೆಚ್ಚಾಗಿ ₹ 14,504 ಕೋಟಿಗಳಿಗೆ ತಲುಪಿದೆ ಎಂದು ಮಂಡಳಿಯು ಮಾಹಿತಿ ನೀಡಿದೆ.

'ನವೋದ್ಯಮ: 2, 3ನೇ ಶ್ರೇಣಿ ನಗರಗಳಲ್ಲಿ ಹೆಚ್ಚಿನ ಅವಕಾಶ'

ನವದೆಹಲಿ (ಪಿಟಿಐ): ದೇಶದ ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಲ್ಲಿ ನವೋದ್ಯಮ ಸ್ಥಾಪನೆಗೆ ಹೆಚ್ಚಿನ ಅವಕಾಶಗಳಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಜಾಹೀರಾತು, ಮಾರುಕಟ್ಟೆ, ವೃತ್ತಿಪರ ಸೇವೆಗಳು, ಗೇಮಿಂಗ್, ಕ್ರೀಡೆ ಮತ್ತು ಆಡಿಯೊ–ವಿಡಿಯೊ ಸೇವೆಗಳ ಕ್ಷೇತ್ರಗಳಲ್ಲಿ ನವೋದ್ಯಮಗಳನ್ನು ಸ್ಥಾಪಿಸಬಹುದು ಎಂದೂ ಹೇಳಿದ್ದಾರೆ.

ನಾಸ್ಕಾಂನ ತಂತ್ರಜ್ಞಾನ ನವೋದ್ಯಮದ ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ದೇಶದಲ್ಲಿ ನವೋದ್ಯಮಗಳಿಗೆ ಪೂರಕ ವಾತಾವರಣ ನಿರ್ಮಿಸುವ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮುಂಬರುವ ಬಜೆಟ್‌ನಲ್ಲಿ ಉದ್ಯಮ ವಲಯವು ಮಾಡಿರುವ ಶಿಫಾರಸುಗಳಲ್ಲಿ ಯಾವುದೆಲ್ಲಾ ಈಡೇರಲಿದೆ ಎನ್ನುವುದನ್ನು ನೋಡಲು ಎಲ್ಲರೂ ಕಾತುರರಾಗಿದ್ದೇವೆ ಎಂದಿದ್ದಾರೆ.

ವಿದೇಶಿ ಮಾರುಕಟ್ಟೆಗಳಲ್ಲಿ ಮಾರಾಟದ ಒತ್ತಡ
ಪೇಟೆಯಲ್ಲಿ ನಿಲ್ಲದ ಕರಡಿ ಕುಣಿತ



ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸತತ ನಾಲ್ಕನೇ ದಿನವೂ ವಹಿವಾಟು ಇಳಿಕೆ ಕಂಡಿತು. ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವುದು ಸಹ ಶುಕ್ರವಾರದ ವಹಿವಾಟಿನ ಮೇಲೆ ಪರಿಣಾಮ ಬೀರಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 427 ಅಂಶ ಇಳಿಕೆ ಆಗಿ 59,037 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 140 ಅಂಶ ಇಳಿಕೆ ಕಂಡು 17,617 ಅಂಶಗಳಿಗೆ ತಲುಪಿತು. ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,186 ಅಂಶ ಮತ್ತು ನಿಫ್ಟಿ 638 ಅಂಶ ಇಳಿಕೆ ಆಗಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 10.36 ಲಕ್ಷ ಕೋಟಿಗಳಷ್ಟು ಕರಗಿದೆ. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯವು ₹ 269.65 ಲಕ್ಷ ಕೋಟಿಗಳಿಗೆ ಇಳಿಕೆ ಕಂಡಿದೆ. ಸೆನ್ಸೆಕ್ಸ್‌ನಲ್ಲಿ ಬಜಾಜ್ ಫಿನ್‌ಸರ್ವ್ ಷೇರು ಶೇ 5.37ರಷ್ಟು ಗರಿಷ್ಠ ನಷ್ಟ ಕಂಡಿತು.

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು ಮತ್ತು ರೂಪಾಯಿ ಮೌಲ್ಯ ಇಳಿಕೆ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳ ಇಳಿಮುಖ ಹಾದಿ ಮುಂದುವರಿಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ವಿದ್ಯಮಾನಗಳ ಜೊತೆಗೆ ಮುಂಬರುವ ಬಜೆಟ್ ಕುರಿತಾದ ಅನಿಶ್ಚಿತತೆಯು ಷೇರುಪೇಟೆಗಳಲ್ಲಿ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಲಿವೆ ಎಂದೂ ಅವರು ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಹಣದುಬ್ಬರ ನಿಯಂತ್ರಿಸಲು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಿಸುವ ಸಾಧ್ಯತೆ ವ್ಯಕ್ತವಾಗಿದೆ. ಇದರ ಜೊತೆಗೆ ಕಾರ್ಪೊರೇಟ್ ಕಂಪನಿಗಳ ಫಲಿತಾಂಶವು ನಿರೀಕ್ಷಿತ ಮಟ್ಟದಲ್ಲಿ ಇಲ್ಲದೇ ಇರುವುದು ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆಗೆ ಕಾರಣವಾಯಿತು.

ರೂಪಾಯಿ ಮೌಲ್ಯ ವೃದ್ಧಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 8 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.43ರಂತೆ ವಿನಿಮಯಗೊಂಡಿತು. ವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 28 ಪೈಸೆ ಇಳಿಕೆ ಕಂಡಿದೆ.

ಸ್ಕೋಡಾ ಸ್ಲಾವಿಯಾ ತಯಾರಿಕೆ ಆರಂಭ

ನವದೆಹಲಿ (ಪಿಟಿಐ): ಪುಣೆಯ ಚಾಕನ್ ಘಟಕದಲ್ಲಿ ತನ್ನ ಪ್ರೀಮಿಯಂ ಸೆಡಾನ್ 'ಸ್ಲಾವಿಯಾ' ತಯಾರಿಕೆ ಆರಂಭಿಸಿರುವುದಾಗಿ ಸ್ಕೋಡಾ ಆಟೊ ಇಂಡಿಯಾ ಕಂಪನಿಯು ಶುಕ್ರವಾರ ತಿಳಿಸಿದೆ.

2022ರ ಮೊದಲ ತ್ರೈಮಾಸಿಕದಲ್ಲಿ ಈ ಕಾರು ಮಾರುಕಟ್ಟೆ ಪ್ರವೇಶಿಸಲಿದ್ದು, 3 ಸಿಲಿಂಡರ್ 1 ಲೀಟರ್ ಹಾಗೂ 4 ಸಿಲಿಂಡರ್ 1.5 ಲೀಟರಿನ ಎರಡು ರೀತಿಯ ಪೆಟ್ರೋಲ್ ಎಂಜಿನ್ ಆಯ್ಕೆಗಳನ್ನು ಈ ಸೆಡಾನ್ ಹೊಂದಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

2021ರ ನವೆಂಬರ್‌ನಲ್ಲಿ ಕಂಪನಿಯು ಈ ಮಾದರಿಯನ್ನು ಅನಾವರಣ ಮಾಡಿದ್ದು, ಈ ಮೂಲಕ ತನ್ನ ಜಾಗತಿಕ ಮಾರಾಟವನ್ನು ಒಂದು ವರ್ಷದಲ್ಲಿ 15 ಲಕ್ಷಕ್ಕೆ ತಲುಪಿಸುವ ಗುರಿಯನ್ನು ಇಟ್ಟುಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಪುತ್ತೂರು	
ಕೋಕ	11000-26000
ಹಳತು	27500-45000
ಕುಮಟ	
ಚಿಪ್ಪು	24609-33569
ಕೋಕ	21209-27779
ಫ್ಯಾಕ್ಟರಿ	13169-18399
ಹೊಸಚಾಲಿ	37869-41500
ಹಳೆಚಾಲಿ	47999-50149
ಸಿದ್ದಾಪುರ	
ಬಿಳಿಗೋಟು	23399-33699
ಚಾಲಿ	44099-49639
ಕೋಕ	22699-33689
ಹೊಸಚಾಲಿ	32199-40919
ಕೆಂಪುಗೋಟು	26689-33889
ರಾಶಿ	44589-47709
ತಟ್ಟಿಬೆಟ್ಟೆ	38489-44099
ಶಿರಸಿ	
ಬೆಟ್ಟೆ	28696-46689
ಬಿಳಿಗೋಟು	23602-42103
ಚಾಲಿ	34899-49612
ರಾಶಿ	45108-48109
ರಾಮನಗರ ರೇಷ್ಮೆ	
ಮಿಶ್ರತಳಿ	333-705
ದ್ವಿತಳಿ	444-855

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15700	15900	243.65ಸೆಂಟ್ಸ್
ಎಸಿ	---	7000	7150	
ಆರ್‌ಪಿ	---	7000	7200	ಲಂಡನ್
ಆರ್‌ಸಿ	---	3900	3950	2227 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

21-1-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1177 (1167)
ಪಾಮ್ ವಾರದ ಡೆಲಿವರಿ	1173 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,500 (48,600)
ಬೆಳ್ಳಿ ಕೆ.ಜಿ	65,000 (64,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈಶಾನ್ಯದ ಮೂರು ರಾಜ್ಯಗಳಲ್ಲಿ ತ್ವರಿತಗತಿಯ ಪ್ರಗತಿ: ಪ್ರಧಾನಿ

ಅಗರ್ತಲಾ/ಶಿಲ್ಲಾಂಗ್/ನವದೆಹಲಿ (ಪಿಟಿಐ): ಈಶಾನ್ಯದ ಮೂರು ರಾಜ್ಯಗಳ ಸಂಸ್ಥಾಪನಾ ದಿನದ ನಿಮಿತ್ತ ಶುಭಾಶಯ ಕೋರಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಂಪರ್ಕ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಯಿಂದಾಗಿ ಈ ರಾಜ್ಯಗಳು ಈಗ ತ್ವರಿತಗತಿಯಲ್ಲಿ ಪ್ರಗತಿ ಕಾಣುತ್ತಿವೆ ಎಂದು ಹೇಳಿದ್ದಾರೆ.

ಈಶಾನ್ಯದ ರಾಜ್ಯಗಳಾದ ತ್ರಿಪುರಾ, ಮಣಿಪುರ, ಮೇಘಾಲಯ 50ನೇ ಸ್ಥಾಪನಾ ದಿನದ ಸಂಭ್ರಮದಲ್ಲಿವೆ. ಪ್ರಧಾನಿ ಈ ಸಂಬಂಧ ಪ್ರತ್ಯೇಕವಾಗಿ ಸಂದೇಶ ನೀಡಿದ್ದಾರೆ. ಈ ರಾಜ್ಯಗಳನ್ನು 'ಅವಕಾಶಗಳ ತವರು, ವಾಣಿಜ್ಯ ವಹಿವಾಟಿನ ಕೇಂದ್ರ' ಎಂದು ಬಣ್ಣಿಸಿರುವ ಮೋದಿ, ಸಂಪರ್ಕ ಮತ್ತು ಅಭಿವೃದ್ಧಿ ಈ ರಾಜ್ಯಗಳ ಪ್ರಮುಖ ಲಕ್ಷಣವಾಗಿದೆ ಎಂದಿದ್ದಾರೆ.

ಡಬಲ್ ಎಂಜಿನ್ ಸರ್ಕಾರ (ಕೇಂದ್ರ, ರಾಜ್ಯದಲ್ಲಿ ಒಂದೇ ಪಕ್ಷದ ಆಡಳಿತ) ಈ ರಾಜ್ಯಗಳಲ್ಲಿ ಅಭಿವೃದ್ಧಿಗೆ ವೇಗ ನೀಡಿದೆ. ಅಭಿವೃದ್ಧಿಯ ಹಾದಿಯಲ್ಲಿದ್ದ ತೊಡಕುಗಳನ್ನು ನಿವಾರಿಸಲಾಗಿದೆ. ಎಲ್ಲ ಮೂರು ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಅಥವಾ ಬಿಜೆಪಿ ಬೆಂಬಲಿತ ಸರ್ಕಾರಗಳೇ ಇವೆ ಎಂದು ಉಲ್ಲೇಖಿಸಿದ್ದಾರೆ.

ಸ್ವಾತಂತ್ರ್ಯಾನಂತರ ಮಣಿಪುರ ಮತ್ತು ತ್ರಿಪುರ ಕೇಂದ್ರಾಡಳಿತ ಪ್ರದೇಶವಾಗಿ ಗುರುತಿಸಿಕೊಂಡರೆ, ಅಸ್ಸಾಂನಿಂದ 1969ರಲ್ಲಿ ವಿಭಜನೆಗೊಂಡು ಎರಡು ಜಿಲ್ಲೆಗಳಿಂದ ಮೇಘಾಲಯ ಅಸ್ತಿತ್ವಕ್ಕೆ ಬಂದಿದೆ. ಮೂರು ರಾಜ್ಯಗಳಿಗೂ ಈಶಾನ್ಯ ಪ್ರದೇಶಗಳ (ಪುನರ್ರಚನೆ) ಕಾಯ್ದೆ 1971ರ ಅನ್ವಯ ಪೂರ್ಣವಾಗಿ ರಾಜ್ಯ ಸ್ಥಾನಮಾನ ನೀಡಲಾಗಿದೆ.

ಕೋವಿಡ್: ಕಠ್ಮಂಡುವಿನಲ್ಲಿ ಕಠಿಣ ನಿಯಮ

ಕಠ್ಮಂಡು (ಎಪಿ): ಕೋವಿಡ್ ವ್ಯಾಪಕವಾಗುತ್ತಿರುವುದರಿಂದ ನೇಪಾಳ ಸರ್ಕಾರವು ರಾಜಧಾನಿ ಕಠ್ಮಂಡುವಿನಲ್ಲಿ ಶಾಲೆಗಳನ್ನು ಮುಚ್ಚಲು ಆದೇಶಿಸಿದೆ. ಅಲ್ಲದೆ ಧಾರ್ಮಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಿರುವ ಸರ್ಕಾರ, ತನ್ನ ನಾಗರಿಕರು ಹೊರಗೆ ಸಂಚರಿಸುವಾಗ ಲಸಿಕೆ ಆಗಿರುವ ಕುರಿತ ಕಾರ್ಡ್‌ಗಳನ್ನು ಜೊತೆಯಲ್ಲಿ ಇಟ್ಟುಕೊಂಡಿರಬೇಕು ಎಂದು ಸೂಚಿಸಿದೆ.

ಹೋಟೆಲ್‌ಗಳಲ್ಲಿ ತಂಗುವ ಅತಿಥಿಗಳು ಪ್ರತಿ 3 ದಿನಗಳಿಗೊಮ್ಮೆ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದೂ ಸರ್ಕಾರ ಆದೇಶ ಹೊರಡಿಸಿದೆ. ನೇಪಾಳದ ಜನಸಂಖ್ಯೆಯ ಶೇ 41ರಷ್ಟು ಜನರಿಗೆ ಮಾತ್ರ ಎರಡೂ ಡೋಸ್ ನೀಡಲಾಗಿದೆ.

ನೂತನ ಸಂಸತ್ ಭವನ: ವೆಚ್ಚ ₹200 ಕೋಟಿ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಉಕ್ಕು, ಎಲೆಕ್ಟ್ರಾನಿಕ್ಸ್ ವಸ್ತು ಮತ್ತು ಸಿಮೆಂಟ್ ಸಹಿತ ಕಚ್ಚಾ ಸರಕು ಬೆಲೆ ಹೆಚ್ಚಳದಿಂದಾಗಿ ನೂತನ ಸಂಸತ್ ಭವನ ಕಟ್ಟಡ ನಿರ್ಮಾಣದ ವೆಚ್ಚದಲ್ಲಿ ₹200 ಕೋಟಿ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ.

ಕೇಂದ್ರ ಲೋಕೋಪಯೋಗಿ ಇಲಾಖೆ ಈ ಕುರಿತಂತೆ ಲೋಕಸಭೆಯ ಕಾರ್ಯಾಲಯದಿಂದ ಅನುಮತಿ ಪಡೆದುಕೊಳ್ಳಲು ಮುಂದಾಗಿದೆ.

ಈ ಮೊದಲು ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆದುಕೊಳ್ಳುವ ಸಂದರ್ಭದಲ್ಲಿ ಇದ್ದ ವೆಚ್ಚಕ್ಕೆ ಹೋಲಿಸಿದರೆ ಈಗ ಹೆಚ್ಚಳವಾಗಿದೆ. ಹೀಗಾಗಿ ಹೊಸ ದರಕ್ಕೆ ಸಮಿತಿ ಅನುಮೋದನೆ ಪಡೆದುಕೊಳ್ಳಬೇಕಿದೆ.

2020ರಲ್ಲಿ ಟಾಟಾ ಪ್ರಾಜೆಕ್ಟ್ಸ್‌ಗೆ ನೂತನ ಸಂಸತ್ ಭವನ ನಿರ್ಮಾಣದ ಹೊಣೆಯನ್ನು ವಹಿಸಲಾಗಿತ್ತು. ಅಲ್ಲದೆ, ಆ ಸಂದರ್ಭದಲ್ಲಿ ₹971 ಕೋಟಿ ವೆಚ್ಚಕ್ಕೆ ಅನುಮೋದನೆ ದೊರೆತಿತ್ತು.

ಆದರೆ ಕಚ್ಚಾ ಸಾಮಾಗ್ರಿ ದರ ಹೆಚ್ಚಳದಿಂದಾಗಿ, ಪ್ರಸ್ತುತ ಯೋಜನಾ ವೆಚ್ಚ ಅಂದಾಜು ₹1,200 ಕೋಟಿಗೆ ಏರಿಕೆಯಾಗಲಿದೆ.

ಸರ್ಕಾರ, ನೂತನ ಕಟ್ಟಡ ನಿರ್ಮಾಣಕ್ಕೆ 2022ರ ಅಕ್ಟೋಬರ್ ಗಡುವನ್ನು ವಿಧಿಸಿದ್ದು, ಸಂಸತ್‌ನ ಚಳಿಗಾಲದ ಅಧಿವೇಶನವನ್ನು ಹೊಸ ಸಂಸತ್ ಭವನದಲ್ಲೇ ನಡೆಸುವ ಉದ್ದೇಶ ಹೊಂದಿದೆ.

ಸಂಕ್ಷಿಪ್ತ ಸುದ್ದಿ

ಅತಿಯಾದ ಶೀತ: ನಾಲ್ವರು ಭಾರತೀಯರ ಸಾವು

ಟೊರೊಂಟೊ/ನ್ಯೂಯಾರ್ಕ್ (ಪಿಟಿಐ): ಅಮೆರಿಕ– ಕೆನಡಾ ಗಡಿಭಾಗದಲ್ಲಿ ಅತಿಯಾದ ಶೀತದಿಂದ ಒಂದು ಮಗು ಸೇರಿದಂತೆ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವ ಘಟನೆ ನಡೆದಿದೆ. ಈ ನಾಲ್ವರೂ ಭಾರತೀಯರೆಂದು ಹೇಳಲಾಗುತ್ತಿದೆ.

ಮ್ಯಾನಿಟೋಬಾ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸರು (ಆರ್‌ಸಿಎಂಪಿ) ಗುರುವಾರ ಎಮರ್ಸನ್ ಬಳಿಯ ಯುಎಸ್– ಕೆನಡಾ ಗಡಿಯ ಕೆನಡಾದ ಭಾಗದಲ್ಲಿ ನಾಲ್ಕು ಶವಗಳನ್ನು ಗುರುತಿಸಿದ್ದಾರೆ. ಅದರಲ್ಲಿ ಇಬ್ಬರು ವಯಸ್ಕರು, ಒಬ್ಬರು ಹದಿಹರೆಯದವರ ಮತ್ತು ಒಂದು ಶಿಶುವಿನ ಶವವಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ತೇಜ್‌ಪಾಲ್: ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಪತ್ರಕರ್ತ ತರುಣ್ ತೇಜ್‌ಪಾಲ್ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯಿಂದ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಶುಕ್ರವಾರ ಹಿಂದೆ ಸರಿದಿದ್ದಾರೆ.

'2016 ರಲ್ಲಿ ಕೆಲವು ಹಂತದಲ್ಲಿ ನಾನು ಪ್ರಕರಣಕ್ಕೆ ಸಂಬಂಧಿಸಿ ಗೋವಾ ರಾಜ್ಯದ ಪರವಾಗಿ ಹಾಜರಾಗಿದ್ದರಿಂದ ವಿಚಾರಣೆಯಿಂದ ಈಗ ಹಿಂದೆ ಸರಿಯುತ್ತಿದ್ದೇನೆ. ಮುಂದಿನ ವಾರ ಬೇರೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಿ ಎಂದು ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರೊಂದಿಗಿನ ಪೀಠದಲ್ಲಿ ನ್ಯಾಯಮೂರ್ತಿ ರಾವ್ ಹೇಳಿದರು.

ಜೈಲಿನ ಮೇಲೆ ವೈಮಾನಿಕ ದಾಳಿ: ನೂರಾರು ಸಾವು

ದುಬೈ(ಎಪಿ): ಯೆಮೆನ್‌ನ ಹೌತಿ ಬಂಡುಕೋರರು ನಡೆಸುತ್ತಿದ್ದ ಜೈಲನ್ನು ಗುರಿಯಾಗಿಸಿ ಶುಕ್ರವಾರ ಸೌದಿ ನಡೆಸಿದ ವೈಮಾನಿಕ ದಾಳಿಯಲ್ಲಿ 100ಕ್ಕೂ ಹೆಚ್ಚು ಬಂಧಿತರು ಮೃತಪಟ್ಟಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಎಂದು ಯೆಮೆನ್‌ನಲ್ಲಿನ ಇಂಟರ್‌ನ್ಯಾಷನಲ್ ಕಮಿಟಿ ಆಫ್ ರೆಡ್‌ಕ್ರಾಸ್‌ನ ವಕ್ತಾರ ಬಷೀರ್ ಒಮರ್ ತಿಳಿಸಿದ್ದಾರೆ.

ಕೆಲ ಗಾಯಾಳುಗಳನ್ನು ಬೇರೆಡೆಗೆ ರೆಡ್‌ಕ್ರಾಸ್ ಸ್ಥಳಾಂತರಿಸಿದೆ. ಸಾವು ನೋವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಹೇಳಿದ್ದಾರೆ.

ವೈಮಾನಿಕ ದಾಳಿಯಿಂದ ಯೆಮೆನ್‌ನಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿದೆ.

ರಿಷಭ್ ಪಂತ್, ಕೆ.ಎಲ್. ರಾಹುಲ್ ಅರ್ಧಶತಕ ವ್ಯರ್ಥ: ಸರಣಿ ಕೈವಶಪಡಿಸಿಕೊಂಡ ದಕ್ಷಿಣ ಆಫ್ರಿಕಾ

ಮಲಾನ್, ಕ್ವಿಂಟನ್ ಮಿಂಚು

ಪರ್ಲ್(ಪಿಟಿಐ/ಎಪಿ): ಜಾನೆಮನ್ ಮಲಾನ್ ಮತ್ತು ಕ್ವಿಂಟನ್ ಡಿ ಕಾಕ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಭಾರತ ಎದುರಿನ ಏಕದಿನ ಕ್ರಿಕೆಟ್ ಸರಣಿಯನ್ನು ಕೈವಶ ಮಾಡಿಕೊಂಡಿತು.

ಬೊಲ್ಯಾಂಡ್ ಪಾರ್ಕ್‌ನಲ್ಲಿ ಶುಕ್ರವಾರ ನಡೆದ ಎರಡನೇ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಜಯಿಸಿದ ಆತಿಥೇಯ ಬಳಗವು 2–0ಯಿಂದ ಜಯಿಸಿತು.

ಭಾರತ ತಂಡವು ನಾಯಕ ಕೆ.ಎಲ್. ರಾಹುಲ್ (55; 79ಎ) ಮತ್ತು ರಿಷಭ್ ಪಂತ್ (85; 71ಎ) ಅವರ ಅರ್ಧಶತಕಗಳ ಬಲದಿಂದ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 287 ರನ್ ಗಳಿಸಿತು. ಆದರೆ,

ಹೋರಾಟದ ಮೊತ್ತ ಗಳಿಸಿದರೂ ಭಾರತಕ್ಕೆ ಜಯಿಸಲು ಸಾಧ್ಯವಾಗಲಿಲ್ಲ. ದುರ್ಬಲ ಬೌಲಿಂಗ್‌ನ ಲಾಭ ಪಡೆದ ಆತಿಥೇಯ ತಂಡದ ಆರಂಭಿಕ ಜೋಡಿ ಮಲಾನ್ (91; 108ಎ) ಮತ್ತು ಕ್ವಿಂಟನ್ (78; 66ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 132 ರನ್ ಗಳಿಸಿ ಭದ್ರ ಅಡಿಪಾಯ ಹಾಕಿದರು.

ತಂಡವು 48.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 288 ರನ್ ಗಳಿಸಿತು. ಜಸ್‌ಪ್ರೀತ್ ಬೂಮ್ರಾ ಮತ್ತು ಯಜುವೇಂದ್ರ ಚಾಹಲ್ ಬಿಟ್ಟರೆ ಉಳಿದ ಬೌಲರ್‌ಗಳಿಂದ ಉತ್ತಮ ದಾಳಿ ಕಂಡು ಬರಲಿಲ್ಲ.

ರೋಹಿತ್ ಶರ್ಮಾ ಗಾಯಗೊಂಡು ಹೊರಗುಳಿದ ಕಾರಣ ನಾಯಕತ್ವ ವಹಿಸಿರುವ ರಾಹುಲ್ ಪ್ರಥಮ ಸರಣಿಯಲ್ಲಿಯೇ ನಿರಾಶೆ ಅನುಭವಿಸಿದರು. ಆದರೆ, ಅವರು ಬ್ಯಾಟಿಂಗ್‌ನಲ್ಲಿ ಮಿಂಚಿದರು. ಶಿಖರ್ ಧವನ್ ಜೊತೆ ಮೊದಲ ವಿಕೆಟ್ ಜೊತೆಯಾಟದಲ್ಲಿ63 ರನ್ ಸೇರಿಸಲು ಕಾರಣರಾದರು. ಆದರೆ 12ನೇ ಓವರ್‌ನಲ್ಲಿ ಏಡನ್ ಮಾರ್ಕರಂ ಬೌಲಿಂಗ್‌ನಲ್ಲಿ ಧವನ್ ಔಟಾಗುವುದರೊಂದಿಗೆ ಈ ಜೊತೆಯಾಟವೂ ಮುರಿದುಬಿತ್ತು.

ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಐದು ಎಸೆತಗಳನ್ನು ಆಡಿ ಸೊನ್ನೆ ಸುತ್ತಿದರು. ಅವರು ಮೊದಲ ಪಂದ್ಯದಲ್ಲಿ ಆಕರ್ಷಕ ಅರ್ಧಶತಕ ದಾಖಲಿಸಿದ್ದರು. ಆದರೆ ಇಲ್ಲಿ ಅವರು ಖಾತೆಯನ್ನು ತೆರೆಯಲಿಲ್ಲ.

ದಕ್ಷಿಣ ಆಫ್ರಿಕಾ ವಿರುದ್ಧದ ಕೊನೆಯ ಟೆಸ್ಟ್‌ನಲ್ಲಿ ಮಿಂಚಿದ್ದ ರಿಷಭ್ ಪಂತ್ ಇಲ್ಲಿಯೂ ತಮ್ಮ ಬ್ಯಾಟಿಂಗ್ ಪ್ರತಿಭೆ ಮೆರೆದರು. ರಾಹುಲ್ ಜೊತೆಗೂಡಿದ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 115 ಸೇರಿಸಿದರು. ಪಂತ್ ಏಕದಿನ ಕ್ರಿಕೆಟ್‌ನಲ್ಲಿ ವೈಯಕ್ತಿಕ ಉತ್ತಮ ಮೊತ್ತ ಕಲೆಹಾಕಿದ ಸಾಧನೆ ಮಾಡಿದರು.

ಆದರೆ ತಂಡದ ಮೊತ್ತವು ಇನ್ನೂರರ ಗಡಿ ದಾಟುವ ಮುನ್ನವೇ ಇಬ್ಬರೂ ಔಟಾದರು. ಮತ್ತೊಮ್ಮೆ ಬ್ಯಾಟಿಂಗ್‌ನಲ್ಲಿ ಮಿಂಚಿದ ಶಾರ್ದೂಲ್ ಠಾಕೂರ್ (ಔಟಾಗದೆ 40) ಮತ್ತು ಅಶ್ವಿನ್ (ಔಟಾಗದೆ 25) ತಂಡದ ಮೊತ್ತ ಹೆಚ್ಚಿಸಿದರು.

ಆದರೆ ಇವರ ಶ್ರಮಕ್ಕೆ ದಕ್ಷಿಣ ಆಫ್ರಿಕಾದ ಆತ್ಮವಿಶ್ವಾಸ ಭರಿತ ಬ್ಯಾಟಿಂಗ್ ಪಡೆಯು ನೀರು ಸುರಿಯಿತು. ಆರಂಭಿಕ ಜೋಡಿಯು ಹಾಕಿದ ಉತ್ತಮ ಅಡಿಪಾಯದ ಮೇಲೆ ನಾಯಕ ತೆಂಬಾ ಬವುಮಾ, ಏಡನ್ ಮಾರ್ಕರಮ್ ಮತ್ತು ರಸಿ ವ್ಯಾನ್ ಡರ್ ಡಸೆನ್ ಗೆಲುವಿನ ಸೌಧ ಕಟ್ಟಿದರು.



ರಿಷಭ್ ಪಂತ್ ಬ್ಯಾಟಿಂಗ್ ವೈಖರಿ

ಸ್ಕೋರ್ ಕಾರ್ಡ್

ಭಾರತ 6ಕ್ಕೆ 287 (50 ಓವರ್)

ರಾಹುಲ್ ಸಿ ಡಸೆನ್ ಬಿ ಮಗಾಲ 55 (79ಎ, 4X4), ಶಿಖರ್ ಸಿ ಮಗಾಲ ಬಿ ಮರ್ಕರಂ 29 (38ಎ, 4X5), ವಿರಾಟ್ ಸಿ ಬವುಮಾ ಬಿ ಮಹಾರಾಜ್ 0 (5ಎ), ರಿಷಭ್ ಸಿ ಮರ್ಕರಂ ಬಿ ಶಂಸಿ 85 (71ಎ, 4X10, 6X2), ಶ್ರೇಯಸ್ ಎಲ್‌ಬಿಡಬ್ಲ್ಯು ಶಂಸಿ 11 (14ಎ), ವೆಂಕಟೇಶ್ ಸ್ಟಂಪ್ಡ್ ಡಿಕಾಕ್ ಬಿ ಪಿಶುವಾಯೊ 22 (33ಎ, 6X1), ಶಾರ್ದೂಲ್ ಔಟಾಗದೆ 40 (38ಎ, 4X3, 6X1), ಅಶ್ವಿನ್ ಔಟಾಗದೆ 25 (24ಎ, 4X1, 6X1)

ಇತರೆ (ಲೆಗ್‌ಬೈ 1, ನೋಬಾಲ್ 2, ವೈಡ್ 17) 20

ವಿಕೆಟ್ ಪತನ: 1-63 (ಶಿಖರ್ ಧವನ್, 11.4), 2-64 (ವಿರಾಟ್ ಕೊಹ್ಲಿ, 12.4), 3-179 (ಕೆ.ಎಲ್.ರಾಹುಲ್, 31.1), 4-183 (ರಿಷಭ್ ಪಂತ್, 32.3), 5-207 (ಶ್ರೇಯಸ್ ಅಯ್ಯರ್, 36.5), 6-239 (ವೆಂಕಟೇಶ್ ಅಯ್ಯರ್, 43.5)

ಬೌಲಿಂಗ್: ಲುಂಗಿ ಗಿಡಿ 8-0-35-0, ಸಿಸಂದ ಮಗಾಲ 8-0-64-1, ಏಡನ್ ಮರ್ಕರಂ 8-0-34-1, ಕೇಶವ್ ಮಹಾರಾಜ್ 9-0-52-1, ಆ್ಯಂಡಿಲೆ ಪಿಶುವಾಯೊ 8-0-44-1, ತಬ್ರೇಜ್ ಶಂಸಿ 9-0-57-2

ದಕ್ಷಿಣ ಆಫ್ರಿಕಾ 3ಕ್ಕೆ 288 (48.1 ಓವರ್)

ಜೇನ್‌ಮನ್ ಬಿ ಬೂಮ್ರಾ 91 (108ಎ, 4X8, 6X1), ಡಿಕಾಕ್ ಎಲ್‌ಬಿಡಬ್ಲ್ಯು ಶಾರ್ದೂಲ್ 78 (66ಎ, 4X7, 6X3), ಬವುಮಾ ಸಿ ಮತ್ತು ಬಿ ಚಾಹಲ್ 35 (36ಎ, 4X3), ಮರ್ಕರಂ ಔಟಾಗದೆ 37 (41ಎ, 4X4), ಡಸೆನ್ ಔಟಾಗದೆ 37 (38ಎ, 4X2)

ಇತರೆ (ಬೈ 4, ಲೆಗ್‌ಬೈ 1, ವೈಡ್ 5) 10

ವಿಕೆಟ್ ಪತನ: 1-132 (ಕ್ವಿಂಟನ್ ಡಿಕಾಕ್, 21.6), 2-112 (ಜಾನೆಮನ್ ಮಲಾನ್, 34.4), 3-214 (ತೆಂಬಾ ಬವುಮಾ, 35.4)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10-0-37-1, ಭುವನೇಶ್ವರ ಕುಮಾರ್ 8-0-67-0, ರವಿಚಂದ್ರನ್ ಅಶ್ವಿನ್ 10-1-68-0, ಯಜುವೇಂದ್ರ ಚಾಹಲ್ 10-0-47-1, ಶಾರ್ದೂಲ್ ಠಾಕೂರ್ 5-0-35-1, ವೆಂಕಟೇಶ್ ಅಯ್ಯರ್ 5-0-28-0, ಶ್ರೇಯಸ್ ಅಯ್ಯರ್ 0.1-0-1-0

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 7 ವಿಕೆಟ್‌ಗಳ ಜಯ


ಐಪಿಎಲ್: ಬಿಸಿಸಿಐ–ಫ್ರಾಂಚೈಸ್ ಸಭೆ ಇಂದು

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಆಯೋಜನೆ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಐಪಿಎಲ್ ಫ್ರಾಂಚೈಸ್ ಮಾಲೀಕರು ಶನಿವಾರ ವರ್ಚುವಲ್ ಸಭೆಯಲ್ಲಿ ಚರ್ಚಿಸಲಿದ್ದಾರೆ.

ಮುಂದಿನ ತಿಂಗಳ 12 ಮತ್ತು 13ರಂದು ಬೆಂಗಳೂರಿನಲ್ಲಿ ಆಟಗಾರರ ಹರಾಜು ನಡೆಯಲಿದ್ದು ಅದರ ಬಗ್ಗೆ ಪ್ರಮುಖವಾಗಿ ಚರ್ಚೆ ನಡೆಯಲಿದೆ.

ಭಾರತದಲ್ಲಿ ಟೂರ್ನಿಯನ್ನು ಆಯೋಜಿಸುವುದು ಬಿಸಿಸಿಐನ ಮೊದಲ ಆದ್ಯತೆ. ಆದರೆ ಕೋವಿಡ್ ಇನ್ನಷ್ಟು ಹೆಚ್ಚಳವಾದರೆ ಬದಲಿ ವ್ಯವಸ್ಥೆ ಮಾಡಿಕೊಳ್ಳುವುದರ ಕುರಿತು ಮಾತುಕತೆ ನಡೆಯಲಿದೆ. 2020ರ ಆವೃತ್ತಿಯ ಪಂದ್ಯಗಳು ಯುಎಇಯಲ್ಲಿ ನಡೆದಿದ್ದವು. ಕಳೆದ ವರ್ಷ ಭಾರತದಲ್ಲಿ ಪಂದ್ಯಗಳು ನಡೆದಿದ್ದರೂ ಮಧ್ಯದಲ್ಲಿ ಆಟಗಾರರಲ್ಲಿ ಕೋವಿಡ್ ಕಾಣಿಸಿಕೊಂಡಿತ್ತು.

ಕೆ.ಎಲ್.ರಾಹುಲ್‌ಗೆ ಗರಿಷ್ಠ ಮೊತ್ತ



ಕೆ.ಎಲ್.ರಾಹುಲ್ ಅವರನ್ನು ₹ 17 ಕೋಟಿ ಮೊತ್ತಕ್ಕೆ ಲಖನೌ ಫ್ರಾಂಚೈಸ್ ಖರೀದಿಸಿದ್ದು ಈ ಮೂಲಕ ಲೀಗ್‌ನಲ್ಲಿ ಗರಿಷ್ಠ ಮೊತ್ತ ಗಳಿಸಿದ ಆಟಗಾರ ಎಂಬ ದಾಖಲೆಯನ್ನು ವಿರಾಟ್ ಕೊಹ್ಲಿ ಜೊತೆ ಅವರು ಹಂಚಿಕೊಂಡಿದ್ದಾರೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಮಾರ್ಕಸ್ ಸ್ಟೋಯಿನಿಸ್ ಅವರನ್ನು ₹ 9.2 ಕೋಟಿ ಮೊತ್ತಕ್ಕೆ ಮತ್ತು ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಅವರನ್ನು ₹ 4 ಕೋಟಿ ಮೊತ್ತಕ್ಕೆ ಖರೀದಿಸಿರುವುದಾಗಿ ಲಖನೌ ಫ್ರಾಂಚೈಸ್ ಮಾಲೀಕ ಆರ್.ಪಿ.ಸಂಜೀವ್ ಗೋಯೆಂಕಾ ಶುಕ್ರವಾರ ರಾತ್ರಿ ತಿಳಿಸಿದ್ದಾರೆ.

ಅಹಮದಾಬಾದ್‌ಗೆ ಹಾರ್ದಿಕ್ ನಾಯಕ?



ಅಹಮದಾಬಾದ್ ಫ್ರಾಂಚೈಸ್ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕನನ್ನಾಗಿ ನೇಮಕ ಮಾಡಿದೆ ಎಂದು ತಂಡದ ಆಡಳಿತ ತಿಳಿಸಿದೆ. ರಶೀದ್ ಖಾನ್ ಮತ್ತು ಶುಭಮನ್ ಗಿಲ್ ಅವರನ್ನು ಕೂಡ ಈ ಫ್ರಾಂಚೈಸ್ ಖರೀದಿಸಿದೆ. ಹಾರ್ದಿಕ್ ಮತ್ತು ರಶೀದ್ ಅವರನ್ನು ತಲಾ ₹ 15 ಕೋಟಿ ಮೊತ್ತಕ್ಕೆ ಖರೀದಿ ಮಾಡಲಾಗಿದೆ.

ಸಾಯ್: 33 ಮಂದಿಗೆ ಕೋವಿಡ್ ಸೋಂಕು

ಬೆಂಗಳೂರು(ಪಿಟಿಐ): ರಾಷ್ಟ್ರೀಯ ಹಾಕಿ ತಂಡದ ಆಟಗಾರರು ಸೇರಿದಂತೆ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಬೆಂಗಳೂರು ಕೇಂದ್ರದ ಒಟ್ಟು 33 ಕ್ರೀಡಾಪಟುಗಳಿಗೆ ಕೋವಿಡ್–19 ಸೋಂಕು ತಗುಲಿದೆ. 128 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು ಸೋಂಕಿತರ ಪೈಕಿ ಬಹುತೇಕರಲ್ಲಿ ಲಕ್ಷಣಗಳು ಕಾಣಿಸಿಕೊಂಡಿಲ್ಲ ಎಂದು ಕೇಂದ್ರ ತಿಳಿಸಿದೆ.

‘ಹಾಕಿ ತಂಡದ 16 ಆಟಗಾರರು ಮತ್ತು ಒಬ್ಬರು ಕೋಚ್‌ಗೆ ಸೋಂಕು ತಗುಲಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಪಾಲ್ಗೊಳ್ಳಲಿರುವ ತಂಡ ಇಲ್ಲಿ ಅಭ್ಯಾಸದಲ್ಲಿ ತೊಡಗಿದೆ’ ಎಂದು ತಿಳಿಸಲಾಗಿದೆ.

ಏಪ್ರಿಲ್‌ನಲ್ಲಿ ನಡೆಯಲಿರುವ ಜೂನಿಯರ್ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಆಟಗಾರ್ತಿಯರ ಪೈಕಿ 15 ಮಂದಿಗೆ ಸೋಂಕು ಆಗಿದ್ದು ಸೀನಿಯರ್ ಮಹಿಳಾ ತಂಡದ ಒಬ್ಬರಿಗೂ ಸೋಂಕಾಗಿದೆ. ಸಾಯ್ ಪಟಿಯಾಲ ಕೇಂದ್ರದಲ್ಲಿ ಬಾಕ್ಸರ್‌ಗಳು ಸೇರಿದಂತೆ 25 ಮಂದಿಗೆ ಸೋಂಕು ಕಾಣಿಸಿಕೊಂಡಿದೆ.

ಹರಭಜನ್ ಸಿಂಗ್‌ಗೆ ಸೋಂಕು ದೃಢ

ನವದೆಹಲಿ: ಭಾರತದ ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್ ಅವರಿಗೆ ಕೋವಿಡ್ ದೃಢಪಟ್ಟಿದೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ನನಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸೌಮ್ಯ ಲಕ್ಷಣಗಳನ್ನು ಹೊಂದಿದ್ದು, ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿದ್ದೇನೆ. ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದೇನೆ. ನನ್ನೊಂದಿಗೆ ಸಂಪರ್ಕ ಹೊಂದಿದ್ದ ಎಲ್ಲರೂ ದಯವಿಟ್ಟು ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ಸುರಕ್ಷಿತವಾಗಿರಿ’ ಎಂದು ಬರೆದುಕೊಂಡಿದ್ದಾರೆ.



ಹರಭಜನ್– ಎಎಫ್‌ಪಿ ಚಿತ್ರ

ಆಫ್ ಸ್ಪಿನ್ನರ್ ಹರಭಜನ್ ಕಳೆದ ವರ್ಷ ಡಿಸೆಂಬರ್‌ನಲ್ಲಿ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ಭಾರತದ ಪರ ಹರಭಜನ್ 1998ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಬಳಿಕ ಭಾರತ ಏಕದಿನ ಮತ್ತು ಟಿ–20 ವಿಶ್ವಕಪ್ ಜಯಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ. 103 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 417 ವಿಕೆಟ್‌ಗಳನ್ನು ಪಡೆದಿದ್ದಾರೆ.

ಪ್ರೊ ಕಬಡ್ಡಿ ಲೀಗ್: ಹರಿಯಾಣ ಸ್ಟೀಲರ್ಸ್ ಜಯಭೇರಿ

ಡೆಲ್ಲಿಗೆ ವಿಕಾಸ್ ಆಘಾತ

ಬೆಂಗಳೂರು: ನಾಯಕ ವಿಕಾಸ್ ಖಂಡೋಲ ಅವರ ಭರ್ಜರಿ ಆಟದ ಬಲದಿಂದ ಹರಿಯಾಣ ಸ್ಟೀಲರ್ಸ್ ತಂಡವು ಬಲಿಷ್ಠ ದಬಂಗ್ ಡೆಲ್ಲಿಗೆ ಆಘಾತ ನೀಡಿತು.

ಇಲ್ಲಿಯ ಹೋಟೆಲ್ ಶೆರಟನ್ ಗ್ರ್ಯಾಂಡ್ ಆವರಣದಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಪಂದ್ಯದಲ್ಲಿ ಹರಿಯಾಣ 36–33ರಿಂದ ಡೆಲ್ಲಿ ತಂಡಕ್ಕೆ ಸೋಲುಣಿಸಿತು.

ಹರಿಯಾಣ ಪರ ವಿಕಾಸ್ ಒಂಬತ್ತು ಟಚ್ ಪಾಯಿಂಟ್ಸ್ ಮತ್ತು ನಾಲ್ಕು ಬೋನಸ್ ಸೇರಿ ಒಟ್ಟು 13 ರೇಡಿಂಗ್ ಪಾಯಿಂಟ್ಸ್ ಕಲೆಹಾಕಿದರು. ವಿನಯ್ (7) ಮತ್ತು ಆಶಿಶ್ (4) ಕೂಡ ಮಿಂಚಿದರು.


ಪಂದ್ಯದ ಮೊದಲಾರ್ಧದಲ್ಲೇ ಹರಿಯಾಣ 19–11ರಿಂದ ಮುಂದಿತ್ತು. ಅದೇ ಲಯವನ್ನು ಮುಂದುವರಿಸಿಕೊಂಡು ಸಾಗಿತು.

ಡೆಲ್ಲಿ ತಂಡದ ಆಲ್‌ರೌಂಡರ್ ಸಂದೀಪ್ ನರ್ವಾಲ್ ಒಂಬತ್ತು ಪಾಯಿಂಟ್ಸ್ ಗಳಿಸಿದರು. ವಿಜಯ್ ಮತ್ತು ಅಶು ಮಲಿಕ್ ಕ್ರಮವಾಗಿ ಐದು ಮತ್ತು ಮೂರು ಪಾಯಿಂಟ್ಸ್ ಗಳಿಸಿದರು.

ಸ್ಟಾರ್ ರೇಡರ್ ನವೀನ್ ಕುಮಾರ್ ಇಲ್ಲದ ಡೆಲ್ಲಿ ಪೇಲವವಾಯಿತು.

ಹರಿಯಾಣ ಸ್ಟೀಲರ್ಸ್‌ಗೆ ಇದು ಐದನೇ ಜಯವಾಗಿದೆ. ಈ ಪಂದ್ಯದ ಅಂತ್ಯದಲ್ಲಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿತು.

ಯುಪಿ ಯೋಧಾ ಜಯಭೇರಿ: ಮತ್ತೊಂದು ಹಣಾಹಣಿಯಲ್ಲಿ ಯುಪಿ ಯೋಧಾ ಸಂಘಟಿತ ಆಟವಾಡಿ 40–36ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಹಣಿಯಿತು. ಬೆಂಗಾಲ್ ಪರ ನಾಯಕ, ತಾರಾ ರೇಡರ್ ಮಣಿಂದರ್ ಸಿಂಗ್ 19 ಪಾಯಿಂಟ್ಸ್ ಗಳಿಸಿದ್ದು ವ್ಯರ್ಥವಾಯಿತು. ಸುಖೇಶ್ ಹೆಗ್ಡೆ (9) ಕೂಡ ಉತ್ತಮ ಆಟವಾಡಿದರು. ಯೋಧಾ ತಂಡದ ಜಯದಲ್ಲಿ ಪ್ರದೀಪ್ ನರ್ವಾಲ್ (9) ಮತ್ತು ಸುರೇಂದರ್ ಗಿಲ್ (9) ಪ್ರಮುಖ ಪಾತ್ರ ವಹಿಸಿದರು.



ಹರಿಯಾಣ ತಂಡದ ವಿಕಾಸ್ ಖಂಡೋಲ ರೇಡಿಂಗ್ ಪರಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	12	7	3	2	43
ಬೆಂಗಳೂರು ಬುಲ್ಸ್	12	7	4	1	40
ಪಟ್ನಾ ಪೈರೇಟ್ಸ್	11	7	3	1	40
ಯುಪಿ ಯೋಧಾ	12	5	4	3	38
ಬೆಂಗಾಲ್ ವಾರಿಯರ್ಸ್	13	6	6	1	36
ಹರಿಯಾಣ ಸ್ಟೀಲರ್ಸ್	12	5	5	2	34
ಜೈಪುರ್ ಪಿಂಕ್ ಪ್ಯಾಂಥರ್ಸ್	11	5	5	1	32
ತಮಿಳ್ ತಲೈವಾಸ್	11	3	3	5	31
ಯು ಮುಂಬಾ	11	3	3	5	31
ಗುಜರಾತ್ ಜೈಂಟ್ಸ್	11	3	5	3	28
ಪುಣೇರಿ ಪಲ್ಟನ್	11	4	7	-	22
ತೆಲುಗು ಟೈಟನ್ಸ್	11	1	8	2	17

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಇಂದಿನ ಪಂದ್ಯ (ರಾತ್ರಿ)

ಬೆಂಗಳೂರು ಬುಲ್ಸ್ Vs ಪುಣೇರಿ ಪಲ್ಟನ್ 7.30

ಯು ಮುಂಬಾ – ತೆಲುಗು ಟೈಟನ್ಸ್ 8.30

ಜೈಪುರ್ ಪಿಂಕ್ ಪ್ಯಾಂಥರ್ಸ್ – ತಮಿಳ್ ತಲೈವಾಸ್ 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮಹಿಳಾ ಏಷ್ಯಾಕಪ್: ಜಪಾನ್‌ಗೆ ಜಯ

ಪುಣೆ (ಪಿಟಿಐ): ಹಾಲಿ ಚಾಂಪಿಯನ್ ತಂಡವು ಎಎಫ್‌ಸಿ ಏಷ್ಯಾಕಪ್ ಮಹಿಳಾ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಆ ತಂಡವು 5–0ಯಿಂದ ಮ್ಯಾನ್ಮಾರ್ ತಂಡವನ್ನು ಸೋಲಿಸಿತು.

ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ನಡೆದ ‘ಸಿ’ ಗುಂಪಿನ ಈ ಹಣಾಹಣಿಯಲ್ಲಿ ಜಪಾನ್ ಆರಂಭದಿಂದಲೇ ಪಾರಮ್ಯ ಮೆರೆಯಿತು. ವಿಜೇತ ತಂಡದ ಪರ ಯುಯಿ ಹಸೆಗವಾ (47 ಮತ್ತು 90+2ನೇ ನಿಮಿಷ), ರಿಕೊ ಯುಕಿ (22ನೇ ನಿಮಿಷ), ಹಿಕಾರು ನಮೊಟೊ (52ನೇ ನಿಮಿಷ) ಮತ್ತು ಯುಯಿ ನರುಮಿಯಾ (70) ಕಾಲ್ಚಳಕ ತೋರಿದರು. ಮುಂದಿನ ಪಂದ್ಯದಲ್ಲಿ ಜಪಾನ್ ತಂಡವು ಸೋಮವಾರ ವಿಯೆಟ್ನಾಂ ತಂಡವನ್ನೂ, ಮ್ಯಾನ್ಮಾರ್, ಕೊರಿಯಾ ತಂಡವನ್ನೂ ಎದುರಿಸಲಿವೆ.

ಆಸ್ಟ್ರೇಲಿಯಾಗೆ ಭರ್ಜರಿ ಜಯ: ‘ಬಿ’ ಗುಂಪಿನ ಪಂದ್ಯದಲ್ಲಿ ಸಮಂತಾ ಕೆರ್ (9, 11, 26, 36, 54ನೇ ನಿ.) ಮತ್ತು ಎಮಿಲಿ ವಾನ್ ಎಗ್‌ಮಂಡ್ (39, 57, 59, 69ನೇ ನಿ.) ಗಳಿಸಿದ ಗೋಲುಗಳ ನೆರವಿನಿಂದ ಆಸ್ಟ್ರೇಲಿಯಾ ಇಂಡೊನೇಷ್ಯಾ ಎದುರು 18–0 ಗೋಲುಗಳಿಂದ ಗೆದ್ದಿತು.

ಅ.23: ಭಾರತ–ಪಾಕ್ ಹಣಾಹಣಿ

ಆಸ್ಟ್ರೇಲಿಯಾದಲ್ಲಿ ಟಿ20 ವಿಶ್ವಕಪ್: ವೇಳಾಪಟ್ಟಿ ಬಿಡುಗಡೆ

ದುಬೈ (ಪಿಟಿಐ): ಈ ವರ್ಷದ ಅಕ್ಟೋಬರ್–ನವೆಂಬರ್‌ನಲ್ಲಿ ಆಯೋಜಿಸಲಾಗಿರುವ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಆಸ್ಟ್ರೇಲಿಯಾದ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಅಕ್ಟೋಬರ್ 23ರಂದು ಈ ಪಂದ್ಯ ನಡೆಯಲಿದೆ.

ಸೂಪರ್ 12 ಹಂತದಲ್ಲಿ ಎರಡನೇ ಗುಂಪಿನಲ್ಲಿ ಭಾರತ ಸ್ಥಾನ ಪಡೆದಿದೆ. ಎ ಗುಂಪಿನ ಕ್ವಾಲಿಫೈಯರ್‌ನಲ್ಲಿ ಗೆದ್ದ ತಂಡವನ್ನು ಅಕ್ಟೋಬರ್ 27ರಂದು ಸಿಡ್ನಿಯಲ್ಲಿ ನಡೆಯುವ ಪಂದ್ಯದಲ್ಲಿ ಭಾರತವು ಎದುರಿಸಲಿದೆ.



ಮೂರನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ (ಅ. 30; ಪರ್ತ್), ನಾಲ್ಕನೇ ಪಂದ್ಯದಲ್ಲಿ ಬಾಂಗ್ಲಾದೇಶ (ಅಡಿಲೇಡ್; ನ.2) ಮತ್ತು ಬಿ ಗುಂಪಿನಲ್ಲಿ ಅರ್ಹತೆ ಗಳಿಸಿದ ತಂಡದ ಎದುರು ನ.6ರಂದು ಭಾರತ ಆಡಲಿದೆ.

ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತವು ಅ.22ರಂದು ಆರಂಭವಾಗಲಿದ್ದು, ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾವು ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ಟೂರ್ನಿಯ ಸೆಮಿಫೈನಲ್ ಪಂದ್ಯಗಳು ನ. 9 ಮತ್ತು 10ರಂದು ಕ್ರಮವಾಗಿ ಸಿಡ್ನಿ ಮತ್ತು ಅಡಿಲೇಡ್‌ನಲ್ಲಿ ನಡೆಯಲಿವೆ. ನ. 13ರಂದು ಎಂಸಿಜಿಯಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಅಕ್ಟೋಬರ್ 16ರಿಂದ ಅರ್ಹತಾ ಸುತ್ತಿನ ಪಂದ್ಯಗಳು ಆರಂಭವಾಗುತ್ತವೆ.

‘ಟಿ20 ಕ್ರಿಕೆಟ್ ಮಾದರಿಯು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿದೆ. ಈ ವರ್ಷ ನಡೆಯಲಿರುವ ವಿಶ್ವಕಪ್ ಟೂರ್ನಿಯು ಮುಂದಿನ ಪೀಳಿಗೆಯ ಆಟಗಾರರಿಗೆ ಸ್ಫೂರ್ತಿಯಾಗಲಿದೆ. ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ವಿಶ್ವಶ್ರೇಷ್ಠ ಆಟಗಾರರು ಸೇರಲಿದ್ದಾರೆ. ಶ್ರೇಷ್ಠ ದರ್ಜೆಯ ಆಟ ನೋಡಲು ಲಭಿಸಲಿದೆ’ ಎಂದು ಐಸಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡೈಸ್ ಹೇಳಿದ್ದಾರೆ.